ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 8
ಸಂಚಿಕೆ 2
ಏಪ್ರಿಲ್-ಜೂನ್ - 1979

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 8. No. 2, April-June 1979

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪರಿವಿಡಿ

ಕಾಲಜ್ಞಾನ

ಜಿ. ಎಸ್. ಸಿದ್ಧಲಿಂಗಯ್ಯ

೧

ಶಕುನದ ಹಕ್ಕಿ ನುಡಿಯುತ್ತೈತೆ
ಕಾಲಜ್ಞಾನ ಕೇಳೀ ಸ್ವಾಮೀ—
ನೆಲಜಲಗಳ ಮೇಲೆಲ್ಲಾ
ವ್ಯೂಹ ಕಟ್ಟುತಿವೆ
ತಂತೀ ಮೇಲಾಡೋರು ಬರುತ್ತೈಧಾರೆ.
ತಿರುಗಾ ಮುರುಗಾಸ್ವಾಮಿ
ಬೆಂಕಿ ನುಂಗೋರು ಬರುತ್ತೈಧಾರೆ
ಶಕುನದ ಹಕ್ಕಿ ನುಡಿಯುತ್ತೈತೆ
ಹೊಸಕಾಲ ಬರುತ್ತೈತೆ–ಬಂದೈತೆ–
ಕಾಲಜ್ಞಾನ ಕೇಳೀ ಸ್ವಾಮೀ.

೨

ಬೆಟ್ಟದ ಮೇಲಿಂದುರುಳಿಸುತಾರೆ
ಕಾಲಕೆಳಗಿಕ್ಕಿ ಹೊಸಕಿಸುತಾರೆ
ಕವಚಕುಂಡಲಗಳ ಸುಲಿಯತೊಡಗವರೆ !
ಎಚ್ಚರಸ್ವಾಮೀ—ಎಚ್ಚರ !

೩

ನಿಜ ಅನ್ನೋದು ಬಲು ಸಪ್ಪೇ ಮಾಲು !
ಸುಳ್ಳಿಗುಪ್ಪು ಹುಳಿಖಾರ ಸೇರಿಸಿ
ಭೋ ಮಜವಾಗಿರತ್ತೈತೆ !
ಶಾಖಾಯಚ ಲವಣಾಯ ಮಾಡಿ
ದೊಡ್ಡ ದೊಡ್ಡ ಮಾತಾಡಿ ಸ್ವಾಮಿ
ಗುಟ್ಟು ಬಿಚ್ಚುತವೆ,
ಗುಟ್ಟು ಕಟ್ಟುತ್ತವೆ !

ಮಂತ್ರದುಂಗುರ ಕೈಮೇಲಿಳಿತಧೆ
ತೇರಿತದೆ ಸೇಸಮ್ಮನ ಬಾಗಿಲು
ಬರುತಾಳೆ ರಾಜಕುಮಾರಿ
ಮಾಲೆ ಹಾಕಿ ವರಿಸುತಾಳೆ
ಜನ ನಜರೊಪ್ಪಿಸುತಾರೆ
ನೀವೇ ಧೊರೆಗಳು ಸ್ವಾಮಿ !
ಶಕುನದ ಹಕ್ಕಿ ನುಡಿಯುತ್ತೈತೆ
ಕಾಲಜ್ಞಾನ ಕೇಳೀ ಸ್ವಾಮಿ.
ಗುಟ್ಟು ಬಿಟ್ಟೀರಿ ಜೋಕೆ
ಸಾವಿರ ಹೋಳಾದೀತು ತಲೆ
ಶಕುನದ ಹಕ್ಕಿ ನುಡಿಯುತ್ತೈತೆ
ಕಾಲಜ್ಞಾನ ಕೇಳೀ ಸ್ವಾಮಿ !

ಮೂಕಜ್ಜಿಯ ಕನಸುಗಳು: ಕಾರಂತರ ಜೀವನ ದರ್ಶನ

ಡಿ. ಎಸ್. ನಾಗಭೂಷಣ

1961 ರಿಂದ 1970ರ ಅವಧಿಯ, ಎಲ್ಲ ಭಾರತೀಯ ಭಾಷೆಗಳಲ್ಲಿನ ಅತ್ಯುತ್ತಮ ಸೃಷ್ಟ್ಯಾತ್ಮಕ ಸಾಹಿತ್ಯಕೃತಿ ಎಂದು ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಡಾ॥ ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಬಹುಶಃ ಈ ಅವಧಿಯ ಅತ್ಯುತ್ತಮ ಕನ್ನಡ ಸಾಹಿತ್ಯಕೃತಿ ಕೂಡಾ ಅಲ್ಲವೆಂದು ಕಾಣುತ್ತದೆ. ಸ್ವತಃ ಡಾ॥ ಕಾರಂತರ ಕೃತಿಗಳ ಪೈಕಿ ಕೂಡಾ ಇದು ಅತ್ಯುತ್ತಮ ಎನಿಸಲಾರದೇನೋ. ನಮ್ಮ ಪ್ರಶಸ್ತಿಗಳೆಲ್ಲವೂ ಹೀಗೇ ಯಾವುದೋ ಒಂದು ತಾಂತ್ರಿಕ ರಗಳೆಯ ಮೂಲಕ ಅಸಮರ್ಪಕವೆನಿಸಿಬಿಡುತ್ತವೆ. ಆದರೆ ಈ ತಾಂತ್ರಿಕ ರಗಳೆಯನ್ನು ಮರೆತು, ಪ್ರಶಸ್ತಿಬಂದಿರುವುದು "ಮೂಕಜ್ಜಿಯ ಕನಸುಗಳು" ಪುಸ್ತಕಕ್ಕಿಂತ ಹೆಚ್ಚಾಗಿ ಡಾ॥ ಶಿವರಾಮಕಾರಂತರಿಗೆ ಎಂದು ಭಾವಿಸಿದರೆ (ಈ 'ರೆ' ರಗಳೆಗೆ ಪರಿಹಾರವೇ ಇಲ್ಲವೇ ?) ಭಾರತೀಯ ಜ್ಞಾನಪೀಠ ಈ ವರ್ಷದ ಪ್ರಶಸ್ತಿಯ ಮೂಲಕ ತನ್ನ ಪ್ರತಿಷ್ಠೆಗೆ ಹೊಸದೊಂದು ಪರಿಮಾಣವನ್ನು ಪಡೆದುಕೊಂಡಿದೆ ಎಂತಲೇ ಹೇಳಬೇಕು. ಕಾರಣ : ಈವರೆಗೆ ಪ್ರಶಸ್ತಿ ಪಡೆದ ಸಾಹಿತಿಗಳಿಗಿಂತ ಪ್ರಾಯಶಃ ಬೇಂದ್ರೆಯವರ ಜತೆ ಪ್ರಶಸ್ತಿ ಹಂಚಿಕೊಂಡ ಉಡಿಯಾದ ಮೊಹಂತಿ ಅವರ ಹೊರತಾಗಿ) ಡಾ॥ ಕಾರಂತರು ಬದುಕು ಮತ್ತು ಬರಹಗಳೆರಡರಲ್ಲೂ ಭಿನ್ನವಾಗಿದ್ದಾರೆ. ಅವರ ಬರಹ, ಅವರು ಬದುಕಿನಲ್ಲಿ ಇಡಿಯಾಗಿ ಸಕ್ರಿಯವಾಗಿ (ಬರೀ ಮಾನಸಿಕವಾಗಿ ಅಲ್ಲ) ತೊಡಗಿಸಿಕೊಂಡಿದ್ದರ ಫಲ. ಅವರು ಬದುಕನ್ನು ಸಿದ್ಧಾಂತಗೊಳಿಸದೇ ಅದು ಎರಗಿದಂತೆ ಅದನ್ನು ಎದುರಿಸಿದ ಧೀಮಂತ. ಅದಕ್ಕೇ ಅವರ ಸಾಹಿತ್ಯ ಕೂಡಾ ಎಲ್ಲ ಸಿದ್ಧಾಂತಗಳನ್ನು ವಿರೋಧಿಸುವ ಮತ್ತು ವಾಸ್ತವ ಬದುಕಿನ ಆದರ್ಶ ಸ್ಥಿತಿಗೆ ಮುಟ್ಟುವಂತಹದ್ದು ; ಈ ವಾಸ್ತವವನ್ನು ಮೀರಿ ಬೆಳೆಯುತ್ತೇನೆ ಎನ್ನುವ ಗತ್ತು ಇಲ್ಲದಂತಹದ್ದು.

ಮೇಲಿನ ನನ್ನ ಮೊದಲ ಮಾತುಗಳು 'ಮೂಕಜ್ಜಿಯ ಕನಸುಗಳು' ಅಷ್ಟೇನೂ ಒಳ್ಳೆಯ ಕಾದಂಬರಿ ಅಲ್ಲ ಎಂಬ ಅರ್ಥ ಕೊಡುವುದಿಲ್ಲ ಎಂದು ನಾನು ನಂಬಿರುವೆ. ಕಾರಂತರ ಅತ್ಯುತ್ತಮ ಎಂದು ನಾವು ಗುರುತಿಸುವ 'ಮರಳಿ ಮಣ್ಣಿಗೆ', 'ಅಳಿದ ಮೇಲೆ', 'ಆಳನಿರಾಳ', 'ಬೆಟ್ಟದಜೀವ', 'ಮೈಮನಗಳ ಸುಳಿಯಲ್ಲಿ' ಮತ್ತು 'ಕೇವಲ ಮನುಷ್ಯರು'–ಈ ಕಾದಂಬರಿಗಳ ಮಧ್ಯೆ 'ಮೂಕಜ್ಜಿಯ ಕನಸುಗಳು'

ವಿಚಿತ್ರವಾಗಿ ನಿಲ್ಲುತ್ತದೆ. ಕಾರಂತರೇನೋ ಇತ್ತೀಚಿನ ಒಂದು ಸಂದರ್ಶನದಲ್ಲಿ ಜ್ಞಾನಪೀಠದ ಆಯ್ಕೆ 'ಸಮಂಜಸ'ವಾಗಿದೆ ಎಂದು ತಿಳಿಸಿದ್ದಾರೆ ; ಇತರ ಕಾದಂಬರಿಗಳು 'ಮಾಮೂಲಿ' ಎಂದೂ ಈ ಪುಸ್ತಕದ ವಸ್ತು ಮತ್ತು ವಸ್ತುಪೋಷಣೆ ವಿಶಿಷ್ಟವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ವಸ್ತು ಮತ್ತು ವಸ್ತುಪೋಷಣೆಯನ್ನು ಬೇರೆ ಬೇರೆಯಾಗಿ ನೋಡುವ ಕಾರಂತರ ಈ ಮಾತೇ ಅವರ ಅಭಿಪ್ರಾಯ ಸರಿಯಾಗಿಲ್ಲದಿರುವ ಸಂಭವವನ್ನು ಸೂಚಿಸುತ್ತದೆ ಎಂದು ನಾನು ತಿಳಿದಿರುವೆ. ಯಾವುದೇ ಕಲಾಕೃತಿ ಅತ್ಯುತ್ತಮವೆನಿಸಿಕೊಳ್ಳುವುದು ಅದರ ವಸ್ತು ಮತ್ತು ರೂಪ ಭಿನ್ನವಾಗಿ ಕಾಣದಂತೆ ಮಿಳಿತಗೊಂಡಾಗ. ಕಲೆಯ ತಟ್ಟು ಶಕ್ತಿ ಇರುವುದೇ ವಸ್ತು ರೂಪವಾಗಿ ಮಾತಾಡುವಂತೆ ಮಾಡುವ ಅದರ ಸೂಕ್ಷ್ಮಜ್ಞತೆಯಲ್ಲಿ ; ಶಬ್ದದೊಳಗಿಂದ ಅರ್ಥ ಮಾತಾಡುವಂತೆ. ಈ ದೃಷ್ಟಿಯಿಂದ 'ಮೂಕಜ್ಜಿಯ ಕನಸುಗಳು'ಲ್ಲಿನ ವಸ್ತು ಮತ್ತು ರೂಪಗಳ ನಡುವಣ ಸಂಬಂಧ ತೀರಾ ದುರ್ಬಲವಾಗಿದೆ. (ಕಲಾಕೃತಿಯೊಂದರ ಗ್ರಹಿಕೆ - appreciation - ಯಲ್ಲಿ, ಕೃತಿ 'ಏನು' ಹೇಳುತ್ತದೆ ಎಂಬ ಅಂಶದಷ್ಟೇ 'ಹೇಗೆ' ಹೇಳುತ್ತದೆ ಎಂಬ ಅಂಶವೂ ಮುಖ್ಯ ಎಂದು ನಂಬಿ ನಾನು ಈ ಎಲ್ಲ ಮಾತುಗಳನ್ನಾಡುವ ಧೈರ್ಯ ಮಾಡಿರುವೆ) ಹಾಗೆ ನೋಡಿದರೆ ಕಾರಂತರ ಹಲವಾರು ಕಾದಂಬರಿಗಳು – ಸ್ವಲ್ಪಮಟ್ಟಿಗೆ ನಾವು ಅವರ ಅತ್ಯುತ್ತಮ ಎಂದು ಗುರುತಿಸುವ ಒಂದೆರಡು ಕೃತಿಗಳೂ ಸೇರಿದಂತೆ–ಈ ದೌರ್ಬಲ್ಯವನ್ನು ಹೊಂದಿವೆ. ಹಾಗಾದರೆ ಕಾರಂತರು ಕಾದಂಬರಿಗಳಲ್ಲಿ ಕಲಾಕಾರರಾಗಿ ಯಶಸ್ವಿಯಾಗಿಲ್ಲವೇ ? ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಏಕೆಂದರೆ ಯಾವ ಸಾಹಿತಿ ತಾನೇ (ಅದೂ ಕಾದಂಬರಿಗಳಲ್ಲಿ) ಇದುವರೆಗೆ ಈ ಕಲಾ ಪರಿಪೂರ್ಣತೆಯನ್ನು ಸಾಧಿಸಿದ್ದಾನೆ ಎಂಬ ವಾಸ್ತವದ ಪ್ರಶ್ನೆಗೆ ಮೊದಲು ಉತ್ತರ ಕೊಡಬೇಕಾಗುತ್ತದೆ. ಎಲ್ಲ ಕಲಾಕಾರರೂ ಈ ಆದರ್ಶವನ್ನು ಮುಟ್ಟುವುದಕ್ಕೆ ಎದುರಾಗುವ ಅಡ್ಡಿಗಳನ್ನು ನಿವಾರಿಸಿಕೊಳ್ಳುವುದಕ್ಕೆ ತಮ್ಮ ಕ್ರಿಯಾಶಕ್ತಿಯ ಒಂದು ಪಾಲನ್ನು ವ್ಯಯಿಸಿ ಆ ಮಟ್ಟಿಗೆ ಬರಿದಾಗುತ್ತಾರೆ ಅಲ್ಲವೇ ? ಮೊದಲಾಗಿ, ಕಾರಂತರ ಇತರ ಉತ್ತಮ ಕಾದಂಬರಿಗಳ ಮಧ್ಯೆ 'ಮೂಕಜ್ಜಿಯ ಕನಸುಗಳು' ಪುಸ್ತಕದ ಸ್ಥಾನ ಹುಡುಕುವ ಪ್ರಯತ್ನ ಮಾಡಿದ್ದರಿಂದ ಮಾತ್ರ, ನಮಗೆ ಇಂತಹ ಪ್ರಶ್ನೆಗಳು ಎದುರಾಗಿವೆ ಎಂಬುದನ್ನು ಮರೆಯಲಾಗದು. ಅಲ್ಲದೆ, ಕಾರಂತರು ಬರೆಯುತ್ತಿರುವುದು, ಕಲಾಕೃತಿಯೊಂದರ ವಸ್ತು, ರೂಪದಲ್ಲಿ ಅಭಿವ್ಯಕ್ತಿಗೊಳ್ಳುವ ಕ್ರಿಯೆಯು ಶುದ್ಧವಾಗಿ ಕಲೆಗೇ ಸಂಬಂಧಿಸಿದ ವಿಷಯವಾಗಿ ಉಳಿಯಬಲ್ಲಂತಹ ಸಂದರ್ಭದಲ್ಲಿ ಅಲ್ಲ ಎಂಬುದೂ ಬಹಳಷ್ಟು ಮುಖ್ಯ. ಇಂತಹ ಸಂದರ್ಭದಲ್ಲಿ ಅಭಿವ್ಯಕ್ತಿರೂಪವನ್ನು ಕುರಿತ ಬರಹಗಾರನ ಎಚ್ಚರ, ತಾನು ಸಮಾಜದಲ್ಲಿ ಸಕ್ರಿಯವಾಗಿ ಒಳಗೊಂಡಿದ್ದರಿಂದ ವಹಿಸಬೇಕಾದ ಸಾಮಾಜಿಕ ಎಚ್ಚರಗಳಿಂದಾಗಿ ಅಪಮೌಲ್ಯವಾಗುವುದು ಸಾಮಾನ್ಯ. ಆದರೆ 'ಮೂಕಜ್ಜಿಯ ಕನಸುಗಳು'ಲ್ಲಿ ಈ

ಅಪಮೌಲ್ಯ ಅವರ ಇತರ ಕಾದಂಬರಿಗಳಲ್ಲಿರುವುದಕ್ಕಿಂತ ಸ್ವಲ್ಪ ಜಾಸ್ತಿಯಾಗಿದೆ ಎಂದಷ್ಟೇ ನಾನು ಹೇಳುವುದು.

1

ಇಷ್ಟಾದರೂ, ಇಲ್ಲಿನ ವಸ್ತು ಪೋಷಣೆ(ಯ ತಂತ್ರ) ಕನ್ನಡಕ್ಕೇ ಹೊಸದು ಎಂಬುದು ಈ ಪುಸ್ತಕದ ಹೆಗ್ಗಳಿಕೆಗಳಲ್ಲಿ ಒಂದಾಗಿದೆ. ವಸ್ತು ಪೋಷಣೆಯನ್ನಷ್ಟೇ (ವಸ್ತುವಿನಿಂದ) ಬೇರೆಯಾಗಿ ನೋಡುವುದು ಬಹಳ ಸುಲಭವಾಗುವ ಇಂತಹ ಕಾದಂಬರಿಗಳಲ್ಲಿ ಅದು ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚು ಹೊಸತನದೊಂದಿಗೆ ಕಾಣಿಸಿಕೊಳ್ಳುವುದು ಸಹಜ ಎಂಬ ಮಾತನ್ನೂ ಇಲ್ಲಿ ಸೇರಿಸಬಯಸುವೆ. ತಾವು ಇಲ್ಲಿ ಪ್ರಾಯೋಗಿಕವಾಗಿ ಬಳಸಿರುವ ಈ ವಸ್ತು ಪೋಷಣೆಯ ಹೊಸತನದ ಮೂಲವನ್ನೂ ಕಾರಂತರು, ತಮ್ಮ 'ಸ್ಮೃತಿಪಟಲ'ದ ಎರಡನೇ ಸಂಪುಟದಲ್ಲಿ ಸೂಚಿಸಿದ್ದಾರೆ. ಅವರು ಬಹಳ ಹಿಂದೆ ಓದಿದ 'A Place in Camdeboo' ಎಂಬ ಒಂದು ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದ್ದ ಅತೀಂದ್ರಿಯ ಜ್ಞಾನವುಳ್ಳ ಮುದುಕಿಯೊಬ್ಬಳಿಗೆ ಸಂಬಂಧಿಸಿದ ಸಂಗತಿಯೊಂದು ಇಲ್ಲಿಯ ಹೊಸ ರೀತಿಯ ವಸ್ತು ಪೋಷಣೆಗೆ ಪ್ರೇರಣೆ ಒದಗಿಸಿದೆ. ಆ ಮುದುಕಿ ಮರದ ಚಕ್ಕೆಯೊಂದನ್ನು ಕೈಯಲ್ಲಿ ಹಿಡಿದು ಮನಸ್ಸನ್ನು ಕೇಂದ್ರೀಕರಿಸಿದರೆ, ಆ ಚಕ್ಕೆ ಸಿಕ್ಕಿದ ತಾವಿನಲ್ಲಿ ನಡೆದ ಹಿಂದಿನ ಘಟನೆಗಳನ್ನೆಲ್ಲಾ ಹೇಳಬಲ್ಲಳು. ಕಾರಂತರ ಈ ಕಾದಂಬರಿಯ ಮುದುಕಿ (ಮೂಕಜ್ಜಿ), ಚರಿತ್ರೆಯಲ್ಲಿ ಆಸಕ್ತಿಯುಳ್ಳ ತನ್ನ ಮೊಮ್ಮಗ ಸುಬ್ರಾಯ ಹುಡುಕಿತರುವ ಅವಶೇಷಗಳನ್ನು ಕೈಯಲ್ಲಿ ಹಿಡಿದು ಕೆಲ ಕಾಲ ಕಣ್ಮುಚ್ಚಿ, ನಂತರ ಅವಶೇಷದ ಚರಿತ್ರೆಯನ್ನು ಹೇಳಬಲ್ಲಳು. ಆದರೆ ಕಾರಂತರು ಈ ಮೂಲಕ ಚರಿತ್ರೆಯ ಪರಾಮರ್ಶೆ ನಡೆಸುವ ವಿಶ್ವವಿದ್ಯಾಲಯದ ಪ್ರೊಫೆಸರರಾಗಿ ಇಲ್ಲಿ ನಮಗೆ ಕಾಣುವುದಿಲ್ಲ. ಕಾದಂಬರಿಯ ಎಲ್ಲ ಯಶಸ್ಸು ಅಡಗಿರುವುದೂ—ಕಾದಂಬರಿಯು ಕಲಾತ್ಮಕ ಪರಿಮಾಣ ಪಡೆದುಕೊಂಡಿರುವುದೂ—ಈ ಹಂತದಲ್ಲೇ, ಚರಿತ್ರೆ ಇಲ್ಲಿ, ಚರಿತ್ರೆಯ ಪುಸ್ತಕದ ಅಥವಾ ಸಂಶೋಧನಾ ಪ್ರಬಂಧದ ಪುಟಗಳಂತೆ ಬಿಚ್ಚಿಕೊಳ್ಳುವುದಿಲ್ಲ. ಬದುಕು ಚರಿತ್ರೆಯಾಗಿ, ನಂತರ ಪರಂಪರೆಯಾಗಿ ರೂಪು ಬದಲಾಯಿಸಿಕೊಳ್ಳುವ ವೈಚಿತ್ರ್ಯವನ್ನು; ತನ್ನ ಹಾದಿಯಲ್ಲಿ ಬಂದುದೆಲ್ಲವನ್ನೂ ದೂಡಿಕೊಂಡೇ ಮುನ್ನುಗ್ಗುವಂಥ ಕಾಲವು ತುಂಬಿಕೊಡುವ ವಾಸ್ತವ, ಅವಾಸ್ತವ ಮತ್ತು ಅತಿವಾಸ್ತವ ಗುಣಗಳಿಂದಾಗಿ ವರ್ತಮಾನವನ್ನು ಬರೀ ವರ್ತಮಾನವನ್ನಾಗಿ ಬಿಡಲೊಲ್ಲದ ಪರಂಪರೆಯದ್ದೇ ಭಾಗವಾದ ಅನುಭಾವೀ ಮನಸ್ಸೊಂದು ಕಾಣುವ ಪರಿಯನ್ನು ಮತ್ತು ಈ ವೈಚಿತ್ರ್ಯವನ್ನು ಅವಿಚಿತ್ರ್ಯವನ್ನಾಗಿಸುವ ಪ್ರಯತ್ನವೊಂದನ್ನು ನಾವು ಈ ಕಾದಂಬರಿಯಲ್ಲಿ ಕಾಣಬಹುದು.

ಕಾರಂತರು ತಮ್ಮ ಇತರ ಎಲ್ಲ ಕಾದಂಬರಿಗಳಲ್ಲೂ ನೇರವಾಗಿ ಮತ್ತು ಸರಳವಾಗಿ ಕಥೆ ಹೇಳುತ್ತಾ ಹೋಗುವವರಾದರೆ, ಈ ಕಾದಂಬರಿಯಲ್ಲಿ ಅವರು ತಾವು

ಹೇಳಬೇಕೆಂದಿರುವ ಅಮೂರ್ತ ವಿಷಯಗಳನ್ನು (ವಾಸ್ತವ ಪ್ರಪಂಚದೊಡನೆ ನೇರ ಸಂಬಂಧ ಪಡೆದ ವಿಷಯಗಳೇ) ಓದುಗರಿಗೆ ತಲುಪಿಸುವ ಸಾಧನವಾಗಿ ಒಂದು ಅತಿ ವಾಸ್ತವ ಪ್ರಪಂಚವನ್ನು ಸೃಷ್ಟಿಸುತ್ತಾರೆ. ಬಹುಶಃ ಮೊದಲಬಾರಿಗೆ ಕಾರಂತರು ಕಾದಂಬರಿ ಪ್ರಪಂಚದಲ್ಲಿ ಸಾಂಕೇತಿಕತೆಯ ಬಳಕೆಗೆ ಇಲ್ಲಿ ಕೈ ಹಾಕಿದ್ದಾರೆ. ('ಸರಸಮ್ಮನ ಸಮಾಧಿ'ಯಲ್ಲಿ ದೆವ್ವ ಸಾಂಕೇತಿಕವಾಗಿರದೆ, ವಾಸ್ತವದ ಉಳಿಕೆಯಾಗಿದೆ) ಮೂಕಜ್ಜಿ ಈ ಅತಿವಾಸ್ತವ ಪ್ರಪಂಚದ ಕೇಂದ್ರ ಶಕ್ತಿ. ಈ ಪ್ರಪಂಚ ಭೂತ-ವರ್ತಮಾನ-ಭವಿಷ್ಯತ್ತುಗಳನ್ನು ಒಳಗೊಂಡಿದೆ; ಈ ಕಾದಂಬರಿಯಲ್ಲಿ ಪ್ರಸ್ತಾಪಕ್ಕೆ ಬರುವ ಮೂಡೂರು, ನಡೂರು ಮತ್ತು ಪಡೂರು ಈ ಮೂರು ಕಾಲಗಳನ್ನು ಪ್ರತಿನಿಧಿಸುತ್ತವೆ. ಹಾಗೇ ಮೂಡೂರಿನ ಬಸರಿಕಟ್ಟೆ, ನಡೂರಿನ ಅಶ್ವತ್ಥಕಟ್ಟೆ (ಮೂಕಜ್ಜಿಯ ನೆಲೆ) ಮತ್ತು ಪಡೂರಿನ ಬೂದಿಕಟ್ಟೆ ಬದುಕಿನ (ಅಥವಾ ಮನುಷ್ಯನ) ಆರಂಭ, ನಡೆ ಹಾಗೂ ಮುಕ್ತಾಯದ ಸಂಕೇತಗಳಾಗಿ ನಿಲ್ಲುತ್ತವೆ. ಈ ಮೂರೂ ಊರುಗಳ ಮಧ್ಯೆ ಇರುವ ಕಾಡು ಮೇಡು, ಅವುಗಳೊಳಗಿನ ಅನನ್ವೇಷಿತ ಪ್ರಾಚೀನ ಗುಹೆಗಳು, ಮುರಿದು ಬಿದ್ದ ಮಂಟಪಗಳು, ಹಾಳುಬಿದ್ದ ಬಾವಿಗಳು, 'ಮಣ್ಣೊಳಗೆ ಮಣ್ಣಾಗಿ ಹೋದ' ಆಯುಧಗಳು, ದೇವತಾ ವಿಗ್ರಹಗಳು, ತಲೆಯೋಡುಗಳು, ಮರದ ತೇರು ಮತ್ತು ಈ ಎಲ್ಲ ಪಾಳುಗಳ ಮಧ್ಯೆಯೂ ಜೀವಂತವಾಗಿ ಉಳಿದು ಕೊಂಡು ಬಂದು ಬರಿ ನೆನಪಿಗೇ ಬೆಚ್ಚಿಸುವ ಹಾವುಗಳ ಸಂತತಿ - ಈ ಮೂಲಕ ಕಾರಂತರು ನಮ್ಮ ಮುಂದೆ ಬಿಚ್ಚಿಡುವ ಕಾಲ ಸಮಷ್ಟಿ ನಮ್ಮನ್ನು ವರ್ತಮಾನದಿಂದ ಭೂತಕ್ಕೆ ದೂಕುತ್ತದೆ ಮತ್ತು ಅದರ ಹಿಂದೂಕಿನ ರಭಸದ ಪರಿಣಾಮವು, ನಮ್ಮನ್ನು ಮತ್ತೆ ವರ್ತಮಾನವನ್ನು ದಾಟಿಸಿ ಭವಿಷ್ಯತ್ತಿನ ಎಲ್ಲೆಯವರೆಗೆ ತಲುಪಿಸುತ್ತದೆ.

ಇಲ್ಲಿ ನಾವು ಹೀಗೆ ವರ್ತಮಾನದಿಂದ ಭೂತಕ್ಕೆ ಮತ್ತು ಮತ್ತೆ ಭೂತದಿಂದ ವರ್ತಮಾನದ ಮೂಲಕ ಭವಿಷ್ಯತ್ತಿನ ಕಡೆ ಹಾಯುವಾಗ ಕಾಣುವ ನೋಟ ನಮ್ಮೊಳಕ್ಕೆ ಇಳಿದು ನಮ್ಮನ್ನು ಬೆಚ್ಚಿಸುವ, ನಾಚಿಕೆಗೇಡು ಮಾಡುವ, ನಮ್ಮ ಮಿತಿಗಳನ್ನು ಅರಿವು ಮಾಡಿಕೊಡುವ, ಬದುಕಿನ ಬಗ್ಗೆ ವಿಶ್ವಾಸ ತುಂಬುವ, ಸಾವನ್ನು ಕುರಿತ ಭಯವನ್ನು ಬಡಿದೋಡಿಸುವ ಮತ್ತು ಇದೆಲ್ಲದರ ಮೊತ್ತವಾಗಿ ನಮ್ಮನ್ನು ಬರೀ 'ಮನುಷ್ಯ'ರನ್ನಾಗಿ ಬತ್ತಲು ಮಾಡುವ ಪಾತ್ರ ಮೂಕಜ್ಜಿಯದು. ಕಾರಂತರ ಬಹಳಷ್ಟು ಕಾದಂಬರಿಗಳಲ್ಲಿ ನಾವು ಕಾಣುವ ಸಮಸ್ತ ಅನುಭವಗಳ ಪರಿಪಾಕದಂತಿರುವ ಹಣ್ಣು ಹಣ್ಣಾದ ಮುದುಕಿಯರಂತೆಯೇ ಇಲ್ಲಿಯ ಮೂಕಜ್ಜಿಯೂ ಬೆಳೆಯುವಳಾದರೂ, ಈ ಪಾತ್ರ ವಾಸ್ತವ ಪ್ರಪಂಚವನ್ನೂ ಬೆಳೆದು ದಾಟಿ ಅತಿವಾಸ್ತವ ಪ್ರಪಂಚ ಪ್ರವೇಶಿಸಿ, ಇಂದ್ರಿಯಗಮ್ಯ ಅನುಭವಗಳ ಅರ್ಥವನ್ನು ಮೀರಿದ ಸಾಂಕೇತಿಕ ಅರ್ಥವನ್ನು ಪಡೆದುಕೊಳ್ಳುತ್ತದೆ.

2

ಎಂಟನೇ ವಯಸ್ಸಿಗೇ ಮದುವೆಯಾಗಿ ಸ್ವಲ್ಪಕಾಲದಲ್ಲೇ 'ಗಂಡ'ನನ್ನು ಕಳೆದುಕೊಂಡು ಮೂಕಾಂಬಿಕೆ, ಬದುಕಿನ ಎಲ್ಲ ಕ್ರಮಗಳನ್ನೂ ಪ್ರಶ್ನಿಸುತ್ತಾ ಹೋಗುತ್ತಾಳೆ. ಗಂಡ ಸತ್ತ ಎಷ್ಟೋ ವರ್ಷಗಳ ಮೇಲೆ ಮುಟ್ಟಾಗುವ ಈ ಹುಡುಗಿ ಪ್ರಾಯದಲ್ಲಿ ತನ್ನ ಒಳಗಿನ ಪ್ರಶ್ನೆಗಳಿಗೆ ಬಾಯಿಕೊಡುವ ಪ್ರಯತ್ನ ಮಾಡುತ್ತಾಳೆ. ಆದರೆ ಅವಳು ಬದುಕುವ ಪ್ರಪಂಚಕ್ಕೆ ಈ ಪ್ರಶ್ನೆಗಳು ಅಸಹನೀಯ. ಉಪನಯನವಾಗದೇ ಸತ್ತವನೊಬ್ಬನ ದೆವ್ವವೇ ಅವಳ ಮೈಮೇಲೆ ಬಂದು, ಈ ಕ್ರಮವಿರೋಧೀ ಮಾತುಗಳನ್ನಾಡಿಸುತ್ತಿವೆ ಎಂದು, ಆಕೆಯ ಕುಟುಂಬ 'ದೆವ್ವ ಬಿಡಿಸುವ' ಪ್ರಯತ್ನವಾಗಿ ಹುಣಿಸೆಬರಲಿನ ಹೊಡೆತಗಳ ಮೂಲಕ ಆಕೆಯ ಮೇಲೆ ದೈಹಿಕ ಕ್ರೌರ್ಯ ನಡೆಸುತ್ತದೆ. ಮೂಕಾಂಬಿಕೆ ಈ ಕಾರ್ಯಕ್ಕೆ ಬೆದರಿ 'ಮಾತು ನಿಲ್ಲಿಸುತ್ತಾಳೆ'. ಆದರೆ ಒಳಗೆ ಮಾತ್ರ ಪ್ರಶ್ನೆಗಳು ಮೊಳೆಯುತ್ತಾ ಬೆಳೆಯುತ್ತಾ ಹೋಗುತ್ತವೆ. ದೀರ್ಘ ಬದುಕಿನಲ್ಲಿ ಮೂಕ ಪ್ರೇಕ್ಷಕಿಯಾಗಿ ಅನುಭವಗಳನ್ನು ಒಳಕ್ಕೆ ತೆಗೆದುಕೊಳ್ಳುತ್ತಾ ಮುದಿತನಕ್ಕೆ ಕಾಲಿರಿಸುವ ಮೂಕಾಂಬಿಕೆಯಲ್ಲಿ, ಒಳಗೇಳುವ ಪ್ರಶ್ನೆಗಳು ಮತ್ತು ಒಳವನ್ನು ಆವರಿಸುವ ಅನುಭವಗಳ ನಡುವೆ ಘರ್ಷಣೆಯಾಗಿ ಹೊಸ ಒಳರಿವೊಂದು ಉತ್ಪತ್ತಿಯಾದಂತೆ ಮೂಕಜ್ಜಿ ಸೃಷ್ಟಿಯಾಗುತ್ತಾಳೆ. ಈ ಸೃಷ್ಟಿ, ಇಂದ್ರಿಯಗಮ್ಯ ಪ್ರಪಂಚದಲ್ಲಿ ಅವಾಸ್ತವವೆನಿಸಬಹುದು. ಆದರೆ, 'ನಮ್ಮ ಸಂಸ್ಕೃತಿಯ ನಂಬಿಕೆಗಳನೇಕವನ್ನು ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು' (ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು) ತಿಳಿಯುವುದು ಅಸಹಜವೆನಿಸಲಾರದು. ಯಾಕೆಂದರೆ, 'ಅವಳು ನಮ್ಮೆಲ್ಲನೇಕರಲ್ಲಿ ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹದ ರೂಪದಲ್ಲಿ ಬದುಕಿಕೊಂಡು ಉಳಿದಿದ್ದಾಳೆ' (ಮುನ್ನುಡಿ). ಇಂತಹ ಪಾತ್ರವೊಂದರ ತಿರುಗಣೆಯ ಮೂಲಕ ಬದುಕಿನ ಒಳಕ್ಕೆ ಪೂರೆಪೂರೆಯಾಗಿ ಪ್ರವೇಶಿಸುವ ಈ ಕಾದಂಬರಿಯ ನಿರೂಪಕ ಪಾತ್ರ (ಸುಬ್ರಾಯ) ಮೊದಲಲ್ಲಿ ಆಡುವ ಮಾತೂ ಮೂಕಜ್ಜಿಯ ಕನಸುಗಳ, ವಾಸ್ತವ ಮುಗಿದು ಅವಾಸ್ತವ ಆರಂಭವಾಗುವ ನಡುವೆ ಎಲ್ಲೋ ಇರುವ ಅತಿವಾಸ್ತವದ ಲಕ್ಷಣಗಳನ್ನು ಪರಿಚಯಿಸುತ್ತದೆ : 'ನನಗೆ ವಾಸ್ತವಿಕ ಜೀವನ ಅವಾಸ್ತವಿಕವಾಗಿ ಕಾಣಿಸುತ್ತದೆ. ಅವಾಸ್ತವಿಕತೆ ವಾಸ್ತವಿಕವಾಗಿಯೂ ಕಾಣಿಸುತ್ತದೆ. ಇವೆರಡರೊಳಗಣ ಮೇರೆ ಅಂತರ ಬಹಳ ಕಡಿಮೆ ಎನಿಸುತ್ತದೆ. ಸತ್ಯ, ಅಸತ್ಯಗಳ ಮೇರೆಯಷ್ಟೇ ಕಡಿಮೆ ಅಂತರ ಅವುಗಳಲ್ಲಿ. ಒಂದು ಇನ್ನೊಂದರ ಹಾಗೆಯೇ ಇರುತ್ತದೆ. ಒಂದು ಇನ್ನೊಂದಕ್ಕೆ ಸಮೀಪವಾಗಿರುತ್ತದೆ. ಈ ಸಮೀಪಸ್ಥ ವಸ್ತುಗಳ ನಡುವೆ ಎಷ್ಟೊಂದು ದೂರವಿದೆಯಲ್ಲ—ಎಂಬ ಬೆರಗು ನನಗೆ ಉಂಟಾಗುತ್ತದೆ. ನನ್ನಲ್ಲಿ ಅನೇಕ ಸಮಸ್ಯೆಗಳನ್ನು ಕುರಿತಾದ ಬೆರಗು, ಅಂದಿನಿಂದ ಇಂದಿನ ತನಕವೂ ಚೆನ್ನಾಗಿ ಬಲಿತು ಬಂದಿದೆಯಾದರೆ ಅದಕ್ಕೆ ಕಾರಣ ನನ್ನಜ್ಜಿ.

ಅವರ ಹಲವಾರು ಕನಸುಗಳು, ಅವಾವುವೂ ರಾತ್ರಿ ಕನಸುಗಳಲ್ಲ, ಯಾವುದೇ ಅಪೇಕ್ಷೆ ಯಿಂದ ಬೆಳಸಿಕೊಂಡ ಹಗಲುಗನಸುಗಳೂ ಅಲ್ಲ. ನನಗೂ ನಿಮಗೂ ಕಾಣಿಸದ, ಅವರಿಗಷ್ಟೇ ಕಾಣಿಸುತ್ತಿರುವ ವಿಚಿತ್ರ ತೆರನ ಕನಸುಗಳು'.

ಕಾರಂತರು 1945ರಲ್ಲೇ ಬರೆದ ತಮ್ಮ ಜೀವನ ದೃಷ್ಟಿಯನ್ನು ವಿವರಿಸುವ 'ಬಾಳ್ವೆಯೇ ಬೆಳಕು' ಪುಸ್ತಕ ಓದಿದವರಿಗೆ ಮೂಕಜ್ಜಿ ಮತ್ತಾರೂ ಆಗಿರದೇ ಕಾರಂತರ ಮಾನಸ ಪುತ್ರಿಯೇ ಆಗಿದ್ದಾಳೆ ಎಂಬುದು ಗೊತ್ತಾಗುತ್ತದೆ. ಕಾರಂತರು ಮೂಲಭೂತವಾಗಿ ನೈತಿಕವಾದಿ (moralist). ಆದರೆ ಇವರ ನೈತಿಕತೆ ಪರಂಪರೆ ಯಿಂದ ಬಂದದ್ದಲ್ಲ. ವರ್ತಮಾನ ಬದುಕಿನ ನಿಷ್ಠುರತೆಯ ಓರ್‍ಸಲಿಯಲ್ಲೂ ಮಾನ ವೀಯತೆಯ ಮೂಲಾರ್ಥವನ್ನು ಉಳಿಸಿಕೊಳ್ಳಬಲ್ಲ ನೈತಿಕತೆಯನ್ನು ಮಾತ್ರ ಅವರು ಗೌರವಿಸುತ್ತಾರೆ. ಪ್ರತಿಯೊಂದೂ, ಸಾಮಾಜಿಕ ಎಚ್ಚರಗಳು ಮಿಡಿಯುವ ವೈಯಕ್ತಿಕ ಚಿಂತನೆಯ ಮೂಸೆಯಲ್ಲಿ–ಅಂದರೆ ಕಾಲಾನುಗುಣವಾದ ಮೌಲ್ಯಗಳ ಆಧಾರವಿರುವ ವಿಚಾರಪರತೆಯ ನಿಕಷದಲ್ಲಿ-ಬೆಂದು ಉಳಿಯಬೇಕು, ಸ್ವೀಕಾರಾರ್ಹತೆ ಪಡೆಯಲು. ಇದು ಒಂದು ರೀತಿಯ ಬಂಡಾಯವೇ; ವರ್ತಮಾನದ ಮೇಲೆ ಭೂತ ಇಡುವ ದಾಳಿಯ ವಿರುದ್ಧದ ಬಂಡಾಯ. 'ತಂತಮ್ಮ ಅಪಕ್ವನಂಬುಗೆ ಗಳನ್ನು ಪರರ ಮೇಲೆ ಹೊರಿಸಿದ ಜನರ ಕತೆಯೂ ಇಲ್ಲಿದೆ; ಅದರಿಂದಾಗಿ ಇಂದಿನ ನಮಗೆ ಕೇಳಿಸದೇ ಹೋದ ಕೆಲವು ಯಾತನೆಯ ಧ್ವನಿಗಳನ್ನು ಕೇಳುವಿರಂತೆ' ಎಂದು ಕಾರಂತರು ಪ್ರಸಕ್ತ ಕಾದಂಬರಿಯ ಮುನ್ನುಡಿಯಲ್ಲಿ ಬರೆದ ಮಾತು ವಸ್ತುತಃ ಈ ಬಂಡಾಯದ ಸೂಚನೆಯೇ ಆಗಿದೆ. ತಂತಮ್ಮ ಬದುಕು ಬಾಳಲು ಬದುಕನ್ನೇ ಬಂಡಾಯವನ್ನಾಗಿ ಮಾಡಿಕೊಳ್ಳಬೇಕಾದ್ದು, ಬದುಕನ್ನು ತನ್ನದಾಗಿಸಿಕೊಳ್ಳುವುದರ ಅರಿವೇ ಇಲ್ಲದ ಮನಸ್ಸಿಗೆ ಒಂದು ದುರಂತವಾಗಿ ಕಾಣುವುದಾದರೂ, ಅದು ಆ ಬದುಕು ನಡೆಸುವವನಿಗೆ ವಾಸ್ತವ ಮಾತ್ರ. ಇಂತಹ ಬದುಕನ್ನು ನಂಬುವ ಕಾರಂತರು ಈ ನಂಬುಗೆಯ ಒಳಶೋಧನೆಗಾಗಿ, ಈ ನಂಬುಗೆಗೆ ಕಾರಣವಾದ ಅನುಭವಗಳನ್ನು ಪ್ರತಿನಿಧಿಸುವ, ಸಿಕ್ಕುಸಿಕ್ಕಾದ ಜನಜೀವನದ ಒಳಪದರುಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಹಲವಾರು ಪಾತ್ರಗಳನ್ನು ಕಾದಂಬರಿಯಲ್ಲಿ ತರುತ್ತಾರೆ. ತಪ್ಪು ತಿಳುವಳಿಕೆಯಿಂದಾಗಿ ಗಂಡ ರಾಮಣ್ಣನಿಂದ ಓಡಿಹೋಗಿ ಹಣ ಇಟ್ಟುಕೊಂಡ ಕಾಮುಕನೊಬ್ಬನಿಗೆ ಸಿಕ್ಕಿ ಬೀಳುವ ನಾಗಿ, ಇದನ್ನು ನಿಸ್ಸಹಾಯಕನಾಗಿ ನೋಡುವ ಆದರ್ಶ ಪ್ರೇಮಿ ಬಡಪಾಯಿ ರಾಮಣ್ಣ, ಕಂಡ ಕಂಡ ಹುಡುಗಿಯರಲ್ಲೆಲ್ಲಾ ಮದುವೆಯಾಗುವ ಆಸೆ ಹುಟ್ಟಿಸಿ ಕೊನೆಗೆ ಮರೆಯಾಗುವ ಜನಾರ್ದನ, ಆಧ್ಯಾತ್ಮ ಹೇಳುತ್ತಾ ಹೆಣ್ಣಿನೊಡನೆ ಸಂಬಂಧ ವನ್ನು ತಿರಸ್ಕರಿಸುತ್ತಾ ಸ್ವಲಿಂಗರತಿ ಮಗ್ನನಾದ ಅನಂತರಾಮ, ತಾನು ನಂಬಿದ 'ಅಮ್ಮ'ಳನ್ನು ಮೆಚ್ಚಿಸಲು ಠೀವಿಯಿಂದ ವೈಭವದ ಚಂಡೀ ಹೋಮ-ಸಂತರ್ಪಣೆ ನಡೆಸಿ ಮೂರನೇ ದಿನವೇ ನಿಸರ್ಗದ ಆರ್ಭಟಕ್ಕೆ ಝರ್ಝರಿತವಾಗುವ ಮಂಜುನಾಥ,

ಯಾವುದರಲ್ಲೂ ಅನುಮಾನವನ್ನೇ ಕಾಣದೇ ಬದುಕು ಎಳೆದತ್ತ ಎಳೆಸಿಕೊಂಡು ಹೋಗುವ ಸೀತೆ, ಮುಗ್ಧ ಪ್ರಶ್ನೆಗಳನ್ನು ಹಾಕಿ ವಿಚಾರದ ತೆರೆ ಎಬ್ಬಿಸುವ ಮಗು ಕಿಟ್ಟಣ್ಣ–ಹೀಗೆ ಹಲವಾರು ಪಾತ್ರಗಳು ಮೂಕಜ್ಜಿಯ ಜೀವನ ವಿಶ್ಲೇಷಣೆಗೆ ಜೀವಂತ ಸಲಕರಣೆಯಾಗುತ್ತಾರೆ. ಹಾಗೆಯೇ ಗುಹೆಯೊಳಗಿನ ಬೂದಿಯಲ್ಲಿ ಸಿಕ್ಕ ಎಲುಬು, ಕೊಂಬು, ಗಡಿಗೆ ಚೂರು, ಕಲ್ಲುತುಂಡು, ಹಿಂಡುಗಾನಿನಲ್ಲಿ ಕುಸಿದು ಬಿದ್ದ ಕಲ್ಲು ಮಂಟಪ, ಅಲ್ಲಿಯ ಬಾವಿಯಲ್ಲಿ ಸಿಕ್ಕ ತಲೆಯೋಡು, ಚಿನ್ನದ ಸರ, ನಾಣ್ಯ, ಕಂಚಿನ ತೀರ್ಥಂಕರ ಪ್ರತಿಮೆ - ಈ ಎಲ್ಲ ಜಡಗಳೂ ಮೂಕಜ್ಜಿಯ ಕೈಯಲ್ಲಿ ಜೀವಂತ ವಾಗಿ ಆಕೆಯ ವರ್ತಮಾನ ಜೀವನ ವಿಶ್ಲೇಷಣೆಗೆ, ಭೂತಕಾಲದಿಂದಲೂ ಅಂತರ್ವಾ ಹಿನಿಯಾಗಿ ಹರಿದು ಬಂದಿರುವ (ಮತ್ತು ಭವಿಷ್ಯತ್ತಿನೆಡೆಗೂ ಹರಿದುಹೋಗುವ), ವೈಚಾರಿಕತೆಯೊಳಗಿನ ಸಾರ್ವಕಾಲಿಕ ಸಾಂಗತ್ಯದ ಗುಣವನ್ನು ನೀಡುತ್ತದೆ.

3

ಕಾದಂಬರಿಯ ಎಲ್ಲ ಸಾರ ಇರುವುದು ಮೂಕಜ್ಜಿ ಹಾಗೂ ಆಕೆಯ ಕುತೂಹಲ ಭರಿತ ಮನಸ್ಸಿನ ಮೊಮ್ಮಗ ಸುಬ್ರಾಯನ ನಡುವಣ ದೀರ್ಘ ಸಂಭಾಷಣೆಗಳಲ್ಲಿ. ಈ ಸಂಭಾಷಣೆಗಳನ್ನಷ್ಟೇ ಪಟ್ಟಿಮಾಡಿಕೊಂಡು ಓದಿದರೆ, ಅದು ಕಾರಂತರ ಜೀವನ ದೃಷ್ಟಿಯ ಬಗ್ಗೆ ಅವರೊಡನೆ ನಡೆಸಿದ ಪ್ರಶ್ನೋತ್ತರದಂತೆ ಕಾಣುತ್ತದೆ ಎಂಬ ಅನುಮಾನ ನನಗಿದೆ. ಅಂದರೆ, ಈ ಸಂಭಾಷಣೆಗಳನ್ನು ಮೊದಲು ಸಿದ್ಧ ಮಾಡಿಟ್ಟು ಕೊಂಡು ನಂತರ ಈ ಸಂಭಾಷಣೆಗಳಿಗೆ ಸಂದರ್ಭಗಳನ್ನು ಸೃಷ್ಟಿಸಲಾಗಿದೆ ಎಂಬ ಅನು ಮಾನ ಬರುವಷ್ಟರಮಟ್ಟಿಗೆ ಕಾರಂತರು ಈ ಕಾದಂಬರಿಯಲ್ಲಿ ನೇರ ಮಾತಾಡತೊಡಗು ತ್ತಾರೆ. ಇದು ಈ ಕಾದಂಬರಿಯ ದೊಡ್ಡ ಅವಗುಣವಾಗಿದೆ ಎಂದು ಈ ಮೊದಲೇ ತಿಳಿಸಿದ್ದೇನೆ. ಆರಂಭದಲ್ಲೇ ಪ್ರಸ್ತಾಪಿಸಿದ ಕಾರಂತರ ಜೀವನ ದೃಷ್ಟಿಯನ್ನು ಒಳಗೊಂಡ ''ಬಾಳ್ವೆಯೇ ಬೆಳಕು'' ಪುಸ್ತಕದ ಸಾರವನ್ನು ಹಿಡಿದಿಡುವ 'ನಮ್ಮ ಪಾಲಿನ ಪ್ರಪಂಚದಲ್ಲಿ ಬಾಳಿ, ಅದು ಕೊಡುವ ಅನುಭವಗಳಿಂದ ನಾವು ಅರಳುವು ದಾದರೆ ನಮ್ಮ ಕೆಲಸ ಮುಗಿಯಿತು' ಎಂಬ ಆ ಪುಸ್ತಕದ ವಾಕ್ಯವೇ ಈ ಕಾದಂಬರಿಯ ಬೀಜವಾಕ್ಯವೂ ಆಗಿದೆ. ಒಂದೆಡೆ ಮೂಕಜ್ಜಿ, ''ನಾವಿರುವುದು ಸೃಷ್ಟಿಯ ಚಂದ ನೋಡಲಿಕ್ಕಾಗಿಯೇ; ಅವನೇ ಹುಟ್ಟಿಸಿದ ಸೃಷ್ಟಿಯದು–ಎಂದು ಇದ್ದದ್ದನ್ನು ನಂಬಿದರೇನಾಗುತ್ತದೆ? ಇರುವ ನಾಲ್ಕುದಿನ ಚಂದವಾಗಿ ಇರುವುದಪ್ಪ; ಹೋಗುವ ಕಾಲ ಬಂದರೆ ಹೋಗುವುದು. ಉಳಿದೆಲ್ಲ ಮಾತುಕತೆ ನಮ್ಮ ಬುದ್ಧಿಗೆ ಹಿಡಿದ ಅಧಿಕಪ್ರಸಂಗವಾಗಿ ಕಾಣಿಸುತ್ತದೆ ನನಗೆ" ಎಂದೆನ್ನುವುದು ಮೇಲಿನ ಮಾತಿನ ವಿಸ್ತರಣೆ ಮಾತ್ರ ಆಗಿದೆ. ಇಡೀ ಕಾದಂಬರಿಯುದ್ದಕ್ಕೂ ಕಾರಂತರು ಪರಮಾವಧಿ ಜೀವನದ ಸಂಕೇತವೆಂದು ತಿಳಿದಿರುವ (ಸಂದರ್ಶನ, ಕಾರಂತ ಪ್ರಪಂಚ) ಮುದುಕಿ

ಯೊಬ್ಬಳ ಮೂಲಕ ಅಪ್ರತಿಮ ಜೀವನೋತ್ಸಾಹದ ಈ ಚೆಲವು-ಚಂದಗಳನ್ನು ಚಿತ್ರಿಸಿದ್ದಾರೆ.

ಬದುಕು ಹೀಗೆ ಚೆಲುವಾಗಬೇಕಾದರೆ ನಮ್ಮೆಲ್ಲಾ ಪರಂಪರಾಗತ ಆದರ್ಶ-ನಂಬಿಕೆಗಳೆಲ್ಲವೂ ಇವತ್ತಿನ ಬದುಕಿನ ಚೌಕಟ್ಟಿನಲ್ಲಿ ಪರಾಮರ್ಶೆಗೆ ಒಳಪಡಿಸಬೇಕು ಎಂಬುದು ಕಾರಂತರ ನಿಲುವಾದರೂ, ಕಾರಂತರ ಮೊದಲ ಕಳಕಳಿ ಬದುಕಿನ ಚೆಲುವು. ಆದಕ್ಕೇ ಅವರ ಈ ಪರಾಮರ್ಶೆ, ಸಂಪೂರ್ಣ ನಿರಾಕರಣೆಯು ಇಲ್ಲವೇ ಸಿನಿಕತನಕ್ಕೆ ಒಯ್ಯುವ, ಒಣ ವೈಜ್ಞಾನಿಕತೆಯ ಆರ್ಭಟ ಇಲ್ಲವೇ ನಿರ್ಜೀವ ತರ್ಕವಾಗಿಲ್ಲ. ಮೊದಲೇ ಹೇಳಿದಂತೆ, ಕಾದಂಬರಿಯ ಈ ಗುಣವೇ ಇದನ್ನು ''ಬಾಳ್ವೆಯೇ ಬೆಳಕು'' ಗಿಂತ ಭಿನ್ನವಾಗಿಸಿರುವುದು ; ಕಲಾತ್ಮಕಗೊಳಿಸಿರುವುದು. ಮೊದಲ ನೋಟಕ್ಕೆ ಅರ್ಥಹೀನವೆಂದು ಕಾಣುವ ಬದುಕಿನ ಕೆಲವು ಕ್ರಮಗಳನ್ನು ಥಟಕ್ಕನೆ ತಿರಸ್ಕರಿಸದೇ ಅವನ್ನು rationalise ಮಾಡುವ ಪ್ರಯತ್ನ (ಅಂದರೆ, ಕ್ರಮದ ಮೂಲದಲ್ಲಿ ಇವತ್ತಿಗೂ ಪ್ರಸ್ತುತವಾಗಬಹುದಾದ ಸಾಂಕೇತಿಕ ಅರ್ಥವೇನಾದರೂ ಇದೆಯೇ ಎಂಬುದರ ಪರಿಶೀಲನ) ಇಲ್ಲಿದೆ. ನಿನ್ನೆಯಿಂದ ಇಂದು ಹುಟ್ಟಿದೆ ಮತ್ತು ಇಂದಿನಿಂದ ನಾಳೆ ಹುಟ್ಟುತ್ತದೆ ಎಂಬ ನಿಜದ ಒಳರಿವು ಈ ಪ್ರಯತ್ನದ ಹಿಂದೆ ಕೆಲಸ ಮಾಡಿದೆ. ಈ ಪಾತಳಿಯಲ್ಲೇ, ಶಿಲಾಯುಗ, ಮಧ್ಯಯುಗ, ವೈದಿಕಯುಗ, ಬೌದ್ಧ-ಜೈನಯುಗ –ಇವೇ ಮುಂತಾದ ಕಾಲಾವಧಿಗಳ ಮೂಲಕ ಭಾರತೀಯ ಬದುಕು ಹಾದು ಬಂದ ಮತ್ತು ಈ ಹಾದಿಯಲ್ಲಿ ಪ್ರಕೃತಿ, ದೇವರು, ವಿಗ್ರಹಪೂಜೆ, ಲೈಂಗಿಕ ಸಂಬಂಧಗಳ ವಿಕಾಸ, ಧರ್ಮಗಳ ಹುಟ್ಟು ಮತ್ತು ತಿಕ್ಕಾಟ–ಇವೇ ಮುಂತಾದ ಪರಿಘಟನೆಗಳು ಸಂಭವಿಸಿದ ಹಾಗೂ ಈ ಮೂಲಕ ಬದುಕು ಪಡೆದುಕೊಂಡ ಹಲವಾರು ವಿಕೃತಿ-ಸುಕೃತಿಗಳ ವಿಶ್ಲೇಷಣೆ ನಡೆದಿದೆ.

4

ಕಾದಂಬರಿ ಆರಂಭವಾಗುವುದು ನಾಗಿ–ರಾಮಣ್ಣರ ಸಂಬಂಧದ ಪ್ರಸ್ತಾಪ ದೊಡನೆ. ಈ ಗಂಡು ಹೆಣ್ಣಿನ ಸಂಬಂಧ ಇಡೀ ಕಾದಂಬರಿಯುದ್ದಕ್ಕೂ ಹರಡಿ ಕೊಂಡು, ವಿವಿಧ ಸಂದರ್ಭಗಳಿಗೆ ಆ ಸಂದರ್ಭಗಳಿಗೂ ಮೀರಿದ ಅರ್ಥ ಸೃಷ್ಟಿಸು ತ್ತದೆ. ಬಿಟ್ಟುಹೋದ ಹೆಂಡತಿ ನಾಗಿ ಮಾಡಿಕೊಟ್ಟಿದ್ದ ಚಂಚಿಪೆಟ್ಟಿಯನ್ನು ರಾಮಣ್ಣ ಪ್ರೀತಿಯಿಂದ ಕಾಪಾಡಿಕೊಂಡು ಬಂದಿರುತ್ತಾನೆ. ಒಮ್ಮೆ ಅವನು ಅದನ್ನು ಮೂಕಜ್ಜಿಯ ಮನೆಯಲ್ಲಿ ಮರೆತು ಹೋಗುತ್ತಾನೆ. ಅದು ಮೂಕಜ್ಜಿಯ ಕೈಗೆ ದೊರೆತು, ಮೂಕಜ್ಜಿಗೆ ಅದರಲ್ಲಿ ಗಂಡು–ಹೆಣ್ಣಿನ ಸಂಬಂಧದ ಇಡೀ ಸಿಕ್ಕು ಕಾಣುತ್ತದೆ. ಇದೇ ಹಿನ್ನಲೆಯಲ್ಲಿ, ಮೊಮ್ಮಗ ಸುಬ್ರಾಯನ ಒಂದು ಪ್ರಶ್ನೆಗೆ ಆಕೆ ಹೇಳುತ್ತಾಳೆ: ''ಕನಸು, ಭ್ರಮೆ ಅನ್ನುತ್ತಾರಲ್ಲ ಮಗು, ಅದು ಇದು. ತಾವೇ ಮೋಹಪಾಶ ಕಡಿದುಕೊಳ್ಳಲಾರದ ದೇವರುಗಳು, ಇವರ ಮೋಹಪಾಶ

ಕಡಿದು ಉದ್ಧಾರಮಾಡುತ್ತಾರೆ—ಎಂಬುದು. ಆ ದೇವರಿಗೆ ಹೆಂಡಿರಿರುವುದು ಮೋಹ ಅನಿಸುವುದಿಲ್ಲವಾದರೆ, ಯಾತಕ್ಕೆ ಬೇಕವರು? ಯಾವ ದೇವರೂ ಮದುವೆ, ಗಿದುವೆ ಮಾಡಿಕೊಳ್ಳದೆ, ತಮ್ಮಷ್ಟಕ್ಕೆ ಲೋಕದ ಸೃಷ್ಟಿ, ಸ್ಥಿತಿ ಲಯ ಮಾಡುತ್ತಾ ಇರಬಹುದು. ಬಸರಿ ಕಟ್ಟೆಯ ದೇವರು ಸೃಷ್ಟಿಯನ್ನು ಮಾಡಿದ. ಬಾಳೆಕಟ್ಟೆಯ ದೇವರು ಅನ್ನವನ್ನು ಬೇಯಿಸಿ ಹಾಕಿದ. ಬೂದಿಕಟ್ಟೆ ದೇವರು ಸುಟ್ಟುಲ ಗಾಡಿ ತೆಗೆದ. ಮೂರು ಕೆಲಸಕ್ಕೆ ಮೂರು ದೇವರು. ಹಾಗೆ ಸುಡುವುದಕ್ಕೂ, ಇಡುವುದಕ್ಕೂ, ಮೊದಲು ಹೆಣ್ಣು ಗಂಡು ಬೇಕು. ಅದನ್ನು ಒಟ್ಟಿಗೆ ತರುವುದಕ್ಕು ಇಡುವುದಕ್ಕು ಬೇಕು. ಅದು ಇಲ್ಲವಾದರೆ ಸೃಷ್ಟಿಯೇ ಇಲ್ಲ. ದೇವರು ದೇವರು ಅನ್ನುವವರೂ ಉಳಿಯುವುದಿಲ್ಲ". ಕಾದಂಬರಿಯ ಮುಂದಿನ ಎಲ್ಲ ಘಟನೆಗಳ ಹಿಂದಿನಿಂದಲೂ ಈ ಮಾತು ಅನುರಣಿಸುವುದನ್ನು ನಾವು ಕೇಳಬಹುದಾಗಿದೆ.

ನಾಗಿ-ರಾಮಣ್ಣರ ಸಂಬಂಧವನ್ನು ಮುಂದಿಟ್ಟುಕೊಂಡು ಗಂಡು-ಹೆಣ್ಣಿನ ಸಂಬಂಧವನ್ನು ಪ್ರಾಥಮಿಕ ಹಂತದಿಂದ ಗುರುತಿಸಲು ಕಾರಂತರು ಪ್ರಾಚೀನ ಅವಶೇಷಗಳೊಳಗೆ ಹುದುಗಿರುವ ಚರಿತ್ರೆಯನ್ನು ಮೂಕಜ್ಜಿಯ ಒಳರಿವಿನ ಮೂಲಕ, ಅದ್ಭುತ ಕಲಾತ್ಮಕತೆಯೊಂದಿಗೆ ನಮ್ಮ ಮುಂದೆ ಹರಹುತ್ತಾ ಹೋಗುತ್ತಾರೆ. ಘಟ್ಟದ ಬರೆಯ,ವಿಶ್ವಾಮಿತ್ರ ತಪಸ್ಸು ಮಾಡಿದ್ದೆಂಬ ಪ್ರತೀತಿ ಇರುವ ಗುಹೆಯೊಂದರಿಂದ ತಂದ ಮಿಗದ ಎಲುಬು, ಕವಡೆಗಳು, ಕಲ್ಲಿನ ಚೂರು, ಜಿಂಕೆಯಂತಹ ಯಾವುದೋ ಪ್ರಾಣಿಯ ಕೊಂಬು ಮುಂತಾದವು ಮೂಕಜ್ಜಿಯ ಕೈಯಲ್ಲಿ ಆದಿಮಾನವನ ಮುಗ್ಧ ಹಾಗೂ ಮೂಕ ಬದುಕಿನ ರಕ್ತಸಿಕ್ತ ಚರಿತ್ರೆಯನ್ನು ಹೇಳುತ್ತವೆ. ಈ ಗುಹೆಯೇ ಕಾದಂಬರಿಯ ವಿಚಾರಗಳಿಗೆ ಮೂಲ ಪ್ರೇರಣೆಯಾಗುತ್ತದೆ. ವಾಸ್ತವವಾಗಿ, ಈ ಗುಹೆ ಮನುಷ್ಯ ಜೀವನದ ತೊಟ್ಟಿಲು ಎಂಬ ಸೂಚನೆ ನಮಗೆ ಈ ಗುಹೆಯಿಂದ ಅವಶೇಷಗಳನ್ನು ತಂದ ಸುಬ್ರಾಯ ಆ ರಾತ್ರಿ ಕಾಣುವ ಕನಸಿನಲ್ಲಿ ದೊರೆಯುತ್ತದೆ. ರಾಶಿ ರಾಶಿಯಾಗಿ ಒಟ್ಟಿರುವ ಬೂದಿಯು ಈವರೆಗೆ ನಡೆದು ಹೋಗಿರುವ ಬದುಕಿನ ಮತ್ತು ಆ ಬೂದಿಯಲ್ಲಿನ ಎಲುಬು, ಕಲ್ಲುತುಂಡು ಮುಂತಾದ ಅವಶೇಷಗಳು ಈ ಬದುಕು ಬಿಟ್ಟು ಹೋಗಿರುವ ತನ್ನ ಮೂಲ ಲಕ್ಷಣಗಳ ಗುರುತಿನ ಸಂಕೇತವಾಗುತ್ತವೆ. ಹಾರಿ ಬರುವ ಹುಲಿ ಅನಾಥ ಬದುಕಿನ ಭೀತಿಯ ಸಂಕೇತವಾದರೆ, ಅಲ್ಲಿ ಕಾಣ ಬರುವ ಬುದ್ಧ ಮತ್ತು ಕೇಳಿಬರುವ ಬುದ್ಧ ಘೋಷಗಳು ಬದುಕು ತೊಟ್ಟ ತಾತ್ವಿಕ ವೇಷಗಳ ಸಂಕೇತವಾಗುತ್ತವೆ. ರಕ್ತ ತೊಟ್ಟಿಕ್ಕುವ ಹುಲಿ ಚರ್ಮ ಉಟ್ಟ ಆದಿಮಾನವರ ನಾಯಕ ಸುಬ್ರಾಯನಿಗೆ 'No fear ; these are my people' ಎಂದು ಮಂತ್ರಹಾಕಿದ ಎಲುಬಿನ ಚೂರೊಂದನ್ನು ಕೊಟ್ಟು ಅಭಯ ನೀಡುವ ಇಂಗ್ಲಿಷ್‌ಮಾತು (ಬರಿದಾಗಿ ನೋಡಿದಾಗ ತಮಾಷೆಯಾಗಿ ಕಾಣಬಹುದಾದರೂ) ಆದಿಮಾನವನಿಂದ ಆಧುನಿಕ ಮನುಷ್ಯನವರೆಗೆ ಹರಿದುಬಂದಿರುವ ಅತಿ ಆಳದಲ್ಲಿನ (ಮಾನವೀಯ) ಸಂಬಂಧವನ್ನು ಗುರುತಿಸುತ್ತದೆ.

ಮೂಕಜ್ಜಿಯ ಕೈಯಲ್ಲಿ ಎಲುಬು, ಮೃಗದ ವಿರುದ್ಧ ಜಯಗಳಿಸಿದ (ಹುಲಿಯನ್ನು ಕೊಂದ) ಮನುಷ್ಯನ ನಾಯಕತ್ವ, ಅವನಲ್ಲೇ ಸರ್ವಶಕ್ತಿಯನ್ನು ಕಾಣುವ ಸಮುದಾಯ, ಅಂತಹ ನಾಯಕನ ಪ್ರೇರಣೆಯಲ್ಲಿ ಬಹಿರಂಗವಾಗಿ ಆರಂಭವಾದ ಕಾಮ 'ವೈಭವ' –ಹೀಗೆ ಬದುಕಿನ ಮೊದಲ ಭೀಕರ ಹಂತಗಳನ್ನು ನುಡಿಯುತ್ತದೆ. ನಂತರ ಕಲ್ಲಿನ ಜೂರೊಂದು, ಬೇಟೆ, ಆಯುಧಗಳು, ಒಡಹುಟ್ಟಿದವರ ಸಂಬಂಧದ ವಿಕಾಸ ('ರಾಮ–ಲಕ್ಷ್ಮಣ') ಮತ್ತು ಗಂಡು ಹೆಣ್ಣಿನ ನಡುವೆ ಕಾಮವನ್ನೂ ಮೀರಿದ ಪ್ರೇಮ ಸಂಬಂಧಗಳ ಆರಂಭದ ಕಥೆ ಹೇಳುತ್ತದೆ: ಬದುಕು ಸ್ವಲ್ಪ ಪರಿಷ್ಕೃತಗೊಂಡು, ಮೃಗೀಯ ಕಾಮವು ಪ್ರೇಮದ ಹಂತ ತಲುಪಿದಾಗ ಆರಂಭವಾಗುವ ಕಾವ್ಯಾತ್ಮಕ ಕಲ್ಪನೆ–ಸೃಷ್ಟಿ 'ಪೂಜೆ'ಯ ಪರಿಚಯವಾಗುತ್ತದೆ. ಸುಬ್ರಾಯ ಕೊಟ್ಟ ನುಣುಪಾದ ಕಲ್ಲು ತುಂಡೊಂದನ್ನು ಹಿಡಿದು ಅಜ್ಜಿ ಹೀಗೆ ನುಡಿಯುತ್ತಾಳೆ: "ಶಿವನೂ ಅಲ್ಲ, ಮಣ್ಣೂ ಅಲ್ಲ. ಲಿಂಗ, ಯೋನಿ-ಅಂತಲೇ ನಗಬೇಕು ಅಂತ ಕಾಣಿಸುತ್ತದೆ. ಒಂದೊಂದು ಸಾರಿ ನಗಲಿಕ್ಕೇನುಂಟು ಎಂತ ಕಾಣಿಸುತ್ತದೆ. ಇನ್ನೊಂದು ಸಾರಿ, ಹೆಣ್ಣು ಗಂಡು ಕೂಡಿಯೇ ಸೃಷ್ಟಿ; ದೇವರ ಸೃಷ್ಟಿಯಲ್ಲಿಯೂ ಹಾಗೆಯೇ ಅಂತ ಈ ಜನರ ಯೋಚನೆ.........ನನಗೆ ಯಾವ ಶಿವ ದೇವಾಲಯಕ್ಕೆ ಹೋದರೂ ಅಲ್ಲಿನ ಲಿಂಗ ಪಾಣಿಪೀಠಗಳನ್ನು ಕಂಡಾಗ ಅನಿಸುತ್ತಿದ್ದುದು ಇದೇ. ಆಶ್ಚರ್ಯವಾಗುತ್ತಿತ್ತು ಮನಸ್ಸಿಗೆ. ನಮಸ್ಕಾರ ಮಾಡಬೇಕು ಅಂತ ಅನಿಸುತ್ತಿರಲಿಲ್ಲ. ಭಕ್ತಿಯೇ ಬರುವುದಿಲ್ಲ, ದೇವಸ್ಥಾನಕ್ಕೆ ಹೋದರೂ...ಭಕ್ತಿ ಗಿಕ್ತಿ ಬಾರದೆ ಹೋದರೂ ಆಶ್ಚರ್ಯ ಬೆರಗು ತಪ್ಪಿದ್ದಲ್ಲ. ಏನು, ಗಂಡು ಹೆಣ್ಣಿನ ಚಮತ್ಕಾರ, ಎಷ್ಟು ಅವೆರಡರೊಳಗಿನ ಮೋಹ! ಎಷ್ಟೆಲ್ಲ ಸಂಸಾರದಲ್ಲಿ ಮಮತೆ!"

ಕಾಮ ಪ್ರೇಮವಾಗಿ, ಭಕ್ತಿಯ ಭಾವ ಉದಯವಾಗುವ ಪರಿಯನ್ನು ಮೂಕಜ್ಜಿ ಹೀಗೆ ಕಾಣುತ್ತಾಳೆ:"......ಅದರ ಸುತ್ತಲೂ ಹತ್ತಾರು ಮಂದಿ ನಿಂತುಕೊಂಡಿದ್ದಾರೆ. ಒಂದು ಲೆಕ್ಕಕ್ಕೆ ಅಸಹ್ಯ. ಮಕ್ಕಳು ಮರಿ ಯಾರೂ ಇಲ್ಲ ಏನ್ನು. ಎಲ್ಲರೂ–ಹರೆಯದ ಹೆಣ್ಣುಗಳು, ಗಂಡುಗಳು ಜೋಡಿಯಾಗುತ್ತಾ ಇದ್ದಾವೆ. ನಿನ್ನೆ (ಎಲುಬಿನಲ್ಲಿ) ಅದೇ ಕಾಣಿಸಿದಾಗ ಒಂದು ಬಾರಿಗೆ ಅಸಹ್ಯವೆನಿಸಿತು. ಮನುಷ್ಯರಲ್ಲಿ ನಾಚಿಕೆ ತುಂಬಿಕೊಂಡಿದ್ದರೆ ಅದು ಸ್ವಾಭಾವಿಕ. ಇವರಲ್ಲಿ ಅಂಥ ಸುಳ್ಳು ನಾಚಿಕೆ ಯಾವುದೂ ಇಲ್ಲ. ದೇವರು ಹೂಡು ಎಂದ ಆಟವನ್ನು, ಇವರು ನಾಚಿಕೆ ಬಿಟ್ಟು ಹೂಡುತ್ತಿರುವ ಹಾಗೆ ಕಾಣಿಸುತ್ತದೆ. ಆದರೆ ಅವರ ಮುಖದಲ್ಲಿ ನನಗೆ ಒಂದು ವಿಧದ ಭಕ್ತಿ ಕಾಣಿಸುತ್ತದೆ......ಇನ್ನೊಬ್ಬರಿಗೆ ಅಸಹ್ಯ ಕಾಣಿಸಿತು. ನನಗೆ ಅದೂ ಕಾಣಿಸುವುದಿಲ್ಲ. ಹೆರುವುದು ಅಸಹ್ಯವಲ್ಲ; ಇರುವುದು ಅಸಹ್ಯವಲ್ಲ; ಸಾಯುವುದೂ ಅಲ್ಲ. ಹುಟ್ಟಿಸುವುದು ಅಸಹ್ಯವೇ?"

ಮೂಕಜ್ಜಿ ಚಿಪ್ಪಿನ ಸರವೊಂದರಲ್ಲಿ ಕಾಣುವುದು : ಗಂಡು ಹೆಣ್ಣಿನ ಸಂಬಂಧ ಕೌಟುಂಬಿಕ ಸ್ವರೂಪ ಪಡೆಯುವುದರೊಡನೆ ಸಂಭವಿಸುವ ಸರಳ ವ್ಯವಸ್ಥೆ. ನಂತರ (ಕ್ರೂರ ಪ್ರಾಣಿಗಳೇ ದೈವವಾಗಿರುವ) ಕುಲಗಳ ನಿರ್ಮಾಣ.

ನಂತರ ಕಾದಂಬರಿ ಪ್ರಾಚೀನದಿಂದ ಅತಿ ಹತ್ತಿರದ ಭೂತಕ್ಕೆ ಬರುತ್ತದೆ. ಇನ್ನೂ ಉಳಿದುಕೊಂಡಿರುವ ಗುಡಿಗಳಲ್ಲಿನ ಮಾತೃ ಸ್ವರೂಪಿಯಾದ 'ಅಮ್ಮ'ಗಳ ಕಲ್ಪನೆ. ಕೊಲ್ಲೂರಿನ ಮೂಕಮ್ಮನು ಮೂಕಜ್ಜಿಗೆ ಕಾಣುವುದು ಹೀಗೆ: "...... ನನಗೆ ಸಾವಿರಾರು ಮಕ್ಕಳಿವೆ. ನೀನೂ ಅದರಲ್ಲಿ ಒಬ್ಬ(ಳು). ನಿನ್ನನ್ನು ಹಡೆದೆ, ಮೊಲೆಯುಣಿಸಿ ಬೆಳಸಿದೆ. ಸಾಕು, ಹೋಗು, ನಡೆ, ಆಡು, ಓಡು, ಸಂತೋಷ ವಾಗಿ ಇರು. ಗಳಿಗೆಗೆ ನೂರು ಸಾರಿ ಹತ್ತಿರ ಬಂದು, 'ಅಮ್ಮ ಅಮ್ಮ' ಅಂತ ಪೀಡಿಸಬೇಡ, ಎಂದು ತುಟಿಕಚ್ಚಿ ಹೇಳುತ್ತಿದ್ದಾಳೆ."

ವೈದಿಕ ಧರ್ಮದ ವಿಕಾಸದೊಡನೆ ಆರಂಭವಾದ ಇಂದ್ರಾಗ್ನಿ ವರುಣರ ಕಲ್ಪನೆ ಕೂಡಾ ಮೂಕಜ್ಜಿಗೆ ಠಕ್ಕುಗಳಾಗಿಯೇ ಕಾಣುತ್ತವೆ. ಪಾರೇಕಲ್ಲೊಂದರ ಬಳಿ ಈ ದೇವತೆಗಳನ್ನುದ್ದೇಶಿಸಿದ ಮಂತ್ರಗಳು ಕೇಳಿಸಿದಂತಾಗಿ ಮೂಕಜ್ಜಿ ಹಂಗಿಸುತ್ತಾಳೆ : "ಅಯ್ಯೋ ನಿಮ್ಮ ಪಾಡೇ, ಯಾರು ಈ ಕಾಲದಲ್ಲಿ ನಿಮ್ಮನ್ನು ಮೂಸುವವರು ? ಆ ಕಾಲ ಹೊರಟು ಹೋಯಿತೇ. ಮೆರೆದಿರಿ–ನಾಲ್ಕುದಿನ ; ಬ್ರಾಹ್ಮಣರು ಮೆರೆಯಿಸಿದರು ನಿಮ್ಮನ್ನು. ಅವರಿಂದ ನೀವು ಬದುಕಿಕೊಂಡಿರಿ ; ನಿಮ್ಮಿಂದ ಅವರು ಬದುಕಿಕೊಂಡರು......". ಅಗ್ನಿಯನ್ನು ಠಕ್ಕರಲ್ಲಿ ಠಕ್ಕರೆಂದು ಕರೆಯುವ ಮೂಕಜ್ಜಿ ಅಗ್ನಿಯನ್ನೇ 'ಅಗ್ನಿಪರೀಕ್ಷೆ'ಗೆ ಒಳಪಡಿಸುತ್ತಾಳೆ : "ಆ ದಿನ, ನೆನಪುಂಟೇ ನಿನಗೆ ? ನಿನಗೆ ಸುತ್ತು ಬಂದೆ ನಾನು. ಅವರ ಕೈಹಿಡಿದು ಏಳು ಹೆಜ್ಜೆ ಇರಿಸಿದೆ. ನನ್ನ ಮದುವೆಗೆ ನಿನ್ನದೇ ಸಾಕ್ಷಿ. ಕೊನೆಗೂ ನೀನು ಮಾಡಿದ್ದೇನು ಹೇಳು ? ಅವರ ಜೀವವನ್ನು, ಜೀವವೇನಲ್ಲ, ಅದೆಲ್ಲಿ ಸಿಗುತ್ತದೆ ನಿನಗೆ, ದೇಹವನ್ನು ಮಾತ್ರ ನುಂಗಿದೆ. ಸುಟ್ಟು ಬೂದಿಯಾದರು. ನೀನು ಅವರನ್ನು ಸಂಪೂರ್ಣ ವಾಗಿ ತಿನ್ನಲೂ ಇಲ್ಲ. ತಿನ್ನುತ್ತಿದ್ದರೆ–ಅದು ನಿನಗೆ ಜೀರ್ಣವಾಗುತ್ತಲೂ ಇರ ಲಿಲ್ಲ. ಅವರ ಒಂದಿಷ್ಟು ಅಸ್ಥಿಯನ್ನು ಬಿಟ್ಟು ಹೋದೆ."

ದೈವಾವತಾರಗಳನ್ನು ಕೂಡಾ ಮೂಕಜ್ಜಿ ತಿರಸ್ಕರಿಸುತ್ತಾಳೆ. "ಒಂದು ಎಲೆ ಉದುರಿಸಿಕೊಳ್ಳಲಿಕ್ಕೆ ಮರವೇ ಕುಣಿದಾಡುವುದನ್ನು ಕಂಡಿದ್ದೀಯಾ ?" ಎಂದವಳು ಪ್ರಶ್ನಿಸುತ್ತಾಳೆ. ಮೂಕಜ್ಜಿಗೆ ಎಲ್ಲ ಅರ್ಥ ಕಾಣುವುದು 'ಅಮ್ಮ'ನಲ್ಲಿ ಮಾತ್ರ. ಏಕೆಂದರೆ, "......ಅವಳು ಜೀವಗಳನ್ನು ಹಡೆದವಳು, ಕಾಯುವವಳು ......ಅವಳಿಗೆ ಯಾವತ್ತೂ ಕಾಲಕ್ಕೂ ಮರ್ಯಾದೆ ಉಂಟು. ಅವಳಿಂದ–ಅವನು- ಎಂಬುವವನಿಗೂ ಉಂಟು. ......ಅವನಿಗೆ ಅಂದರೆ ಅವನಿಗೆ. ಹೆಣ್ಣು ಬಾಯಿಂದ

ಹೇಳುವ ಮಾತಲ್ಲ ಅನ್ನುತ್ತಾರೆ. ಹೇಳದೆ ಏನು? ನಾನು ಎಷ್ಟು ಹೆಣ್ಣೋ ಅಷ್ಟೇ ಗಂಡು. ಲಿಂಗಕ್ಕೆ! ಅವರಿಬ್ಬರೂ ಕೂಡಿಕೊಂಡೇ ಸೃಷ್ಟಿಯಲ್ಲವೇ? ವಾಣಿ, ಅವೆರಡನ್ನು ಬಿಟ್ಟರೆ ಏನುಂಟಂತೆ? ದೇವರ ಲೀಲೆ, ಮಾಯೆ, ಮಣ್ಣು ಎಂಬುದೇ ಅದು. ಅಷ್ಟು ಗೊತ್ತಿದ್ದರೂ ನಮಗೆ ಸತ್ಯವನ್ನು ಕಂಡರೆ ನಾಚಿಕೆ.''

ಹೀಗೆ ಮೂಕಜ್ಜಿ ಬದುಕಿನ ಮೇಲೆ ಕವಿಚಿಕೊಂಡಿರುವ ಬಟ್ಟೆಗಳನ್ನು ಒಂದೊಂದಾಗಿ ಎಳೆದು ಹಾಕುತ್ತಾ ಹೋಗುತ್ತಾಳೆ. ಮತ್ತು ಬದುಕಿನ ಪ್ರಚ್ಛನ್ನವಾದ ವೈಭವವನ್ನು ಗುರುತಿಸುವತ್ತ ಧಾವಿಸುತ್ತಾಳೆ. ಇದು ಆಕೆಯನ್ನು ಮನುಷ್ಯ ಮಾತ್ರ ಬದುಕಿನ ಕೇಂದ್ರ ಬಿಂದು ಎಂಬ ತೀರ್ಮಾನಕ್ಕೆ ತಲುಪಿಸುತ್ತದೆ. ಮನುಷ್ಯ ಮತ್ತು ದೇವರ ನಡುವಣ ಸಂಬಂಧ ಈ ವೈಭವಕ್ಕೆ (ಚೆಲುವಿಗೆ) ಅಡ್ಡಿಯಾದರೆ ಅದನ್ನು ತಿರಸ್ಕರಿಸುತ್ತಾಳೆ. ಆಕೆಗೆ ಮನುಷ್ಯ–ದೈವದ ಸಂಬಂಧ, ಗಂಡು–ಹೆಣ್ಣಿನ ಸಂಬಂಧದ ವಿಸ್ತೃತ ಮತ್ತು ವಿಲಕ್ಷಣಿತ ರೂಪು ಮಾತ್ರ. ಮನುಷ್ಯ-ಮನುಷ್ಯ ಸಂಬಂಧ ಬದುಕಿನ ಎಲ್ಲ ಚೆಲುವಿಗೆ ಮೂಲ ಪ್ರೇರಣೆಯಾಗಬಲ್ಲದು ಎಂಬ ನಿಜವನ್ನು ಮೂಕಜ್ಜಿ ಕಂಡು ಕೊಂಡಿದ್ದಾಳೆ. ಅದಕ್ಕೇ, ಸುಬ್ರಾಯ "ಅಲ್ಲ ಅಷ್ಟು ಹೊತ್ತಿನ ತನಕವೂ ಯಾರಪ್ಪ ನಿಮ್ಮನ್ನು ಮಾತಾಡಿಸುತ್ತಾ ಕುಳಿತದ್ದು?'' ಎಂದು ಕೇಳಿದಾಗ ಮೂಕಜ್ಜಿ ''ಭೂತಗೀತವಲ್ಲ; ಮನುಷ್ಯರು. ಮನುಷ್ಯರು ಮನುಷ್ಯರನ್ನು ಮಾತನಾಡಿಸಬೇಕಲ್ಲ, ಸುಖಕ್ಕಾಗಲೀ, ದುಃಖಕ್ಕಾಗಲೀ'' ಎಂದು ಛೇಡಿಸುತ್ತಾಳೆ.

ಬಾವಿಯಲ್ಲಿ ಸಿಕ್ಕ ತಾಮ್ರದ ತುಂಡು, ತೀರ್ಥಂಕರ ಪ್ರತಿಮೆ ಹಾಗೂ ತಲೆಯೋಡು ಧಾರ್ಮಿಕ ಹೋರಾಟಗಳ ಚರಿತ್ರೆಯನ್ನು ನಮ್ಮ ಮುಂದೆ ಮಂಡಿಸುತ್ತವೆ. ಜಿನ, ಕಾಪಾಲಿಕ, ಬೌದ್ಧ ಮುಂತಾದ ಪಂಥಗಳೆಲ್ಲಾ ವ್ಯಾಪಕವಾಗಿ ಮನುಷ್ಯ ಸಂಬಂಧಗಳನ್ನು ಮುಟ್ಟದೇ ಹೇಗೆ, ''ಅಂಗಿ ಕಳಚಿದಷ್ಟು ಸುಲಭ; ಜನಕ್ಕೆ ಮತ ಕಳಚಿಕೊಳ್ಳುವ ಚಟ'' ಗಳಾಗಿ ಪರಿಣಮಿಸಿದವು ಎಂಬುದನ್ನು ಮೂಕಜ್ಜಿ ತನ್ನ ಕಲ್ಪನಾ ವಿಲಾಸದ ಮೂಲಕ ಸಾದರ ಪಡಿಸುತ್ತಾಳೆ. ತಲೆಯೋಡನ್ನು ಹಿಡಿದು ಅವಳು ಹೇಳುತ್ತಾಳೆ:"......ಈ ಊರಿನ ಅರಸನಿಗೆ, ಹಳೆಯ ಅರಿವೆಯ ಮೇಲೆ ಬೇಸರ ಬಂದು ಹೊಸ ಪಟ್ಟೆ ಖರೀದಿಮಾಡಿದ. ಇದ್ದಕ್ಕಿದ್ದ ಹಾಗೇ ಅವನು ಯಜ್ಞ, ಯಾಗ ಮಾಡುವುದನ್ನು ಬಿಟ್ಟು ಊರಿನ ಬ್ರಾಹ್ಮಣರನ್ನು ಬಯ್ಯಲಿಕ್ಕೆ ಶುರುಮಾಡಿದ; ಅವರ ಬದಲಿಗೆ ಹೊಸ ಸನ್ಯಾಸಿಗಳನ್ನು ಸಾಕಿದ. ಊರಿನ ನೂರು ಮಂದಿ ಸಹ ಅರಸನದ್ದೇ ದಾರಿ ಹಿಡಿದರು. ಹಿಡಿಯಲಿ, ನನಗೆ ಅದರಲ್ಲೇನೂ ಬೇಸರವಿಲ್ಲ. ದೇವರು ಹೇಗಿದ್ದಾನೆ—ಅಂತ ಯಾರಿಗೆ ಗೊತ್ತಂತೆ? ಒಂದು ದೇವರನ್ನು ಬಿಟ್ಟರು; ಇನ್ನೊಂದು ದೇವರನ್ನು ಹಿಡಿದರು! ಅಂತೂ ದೇವರನ್ನೇ ಬಿಟ್ಟ ಹಾಗೆ ಕಂಡರೂ, ಬಿಡಲಿಲ್ಲ. ಅದರಿಂದ ಬಂದ ಒಂದು ಮೋಸ

ಏನು ಗೊತ್ತೇ ? ಅದನ್ನು ನೆನೆದರೆ ಮಾತ್ರ ತುಂಬ ಸಂಕಟವಾಗುತ್ತದೆ. ಈ ಕಪಾಲವ ಓಡನ್ನು ತೊಟ್ಟ ಹೆಣ್ಣು ಮರ್ಯಾದವಂತ ಅಗ್ನಿಹೋತ್ರಿಯ ಮಗಳು ; ತುಂಬ ಲಕ್ಷಣವಂತ ಹೆಣ್ಣು. ಅವಳಿಗೆ ಪ್ರಾಯ ಇಪ್ಪತ್ತಿತ್ತೊ ಇಲ್ಲವೋ ! ಅವಳನ್ನು ಕುಲವಂತನೊಬ್ಬನಿಗೆ ಕೊಟ್ಟು ಮದುವೆಯನ್ನು ಮಾಡಿದ್ದರು. ಅವನು ಮಾತ್ರ ಈ ಹೊಸ ಬೈರಾಗಿಗಳ ಹಿಂದೆ ತಿರುಗಾಡಲಿಕ್ಕೆ ಶುರು ಮಾಡಿದ. ಹೆಣ್ಣು ಕೊಟ್ಟ ಮಾವನನ್ನು ಬಯ್ಯಲಿಕ್ಕೆ ತೊಡಗಿದ. ಕೊನೆಗೆ ಒಂದು ದಿವಸ ಅವನೂ ತಲೆಬೋಳಿಸಿ ಸನ್ಯಾಸಿಯಾದ. ಈ ಹೆಣ್ಣು ಮಗಳು ಬದುಕು ಸಹಿಸಲಾರದೆ, ಬಾವಿಗೆ ಹಾರಿಕೊಂಡಳು. ಅವಳೇನು ಮಾಡಿಯಾಳು ? ತಾನು ನಂಬಿದ್ದನ್ನು ಮರೆಯ ಲಾರಳು ; ಹೊಸ ಸೀರೆ ಬಂತೆಂದು ಹಳೆಯದನ್ನು ಎಸೆಯಲಾರಳು. ಗಂಡನೇನೋ ಅವಳಿಗೆ ಬೋಧಿಸಿದ್ದ : ನಾವಿಬ್ಬರೂ ಸನ್ಯಾಸಿಗಳಾಗುವ ಎಂದಿದ್ದ. ಅವಳಿಗೆ ಇದ್ದ ಮತ ಬಿಡಲು ಹೇಗೆ ಮನಸ್ಸು ಬಂದೀತು ?...... ಅದೊಂದು ಮಾತ್ರ ಮಗು, ನನಗೇನೇನೂ ಪಸಂದವಾಗಿ ಕಾಣುವುದಿಲ್ಲ. ಹೆಣ್ಣು ಸನ್ಯಾಸ ತೆಕ್ಕೊಳ್ಳ ಬಾರದು ಎಂದು ನಾನೆಂಬವಳಲ್ಲ, ವೈರಾಗ್ಯ ಬರುತ್ತದೆ ; ಕೆಲವರಿಗೆ ತಾನಾಗಿಯೇ ಬರುತ್ತದೆ. ನನಗೆ ನಾನು ಬಯಸದೆಯೂ ಅದು ಬರಲಿಲ್ಲವೇ ? ಹಾಗೆ ಅದು ಬರ ಬಾರದು ಅಂತಿಲ್ಲ. ಆದರೆ, ಇವರ ಲೆಕ್ಕಾಚಾರದ ಸನ್ಯಾಸ ಏನು ? ಹೆಣ್ಣಿಂದ ದೂರವಾಗಬೇಕು, ಅದೇ ಒಂದು ಬಂಧನ ಎಂಬ ಭಾವನೆಯಲ್ಲವೇ ? ಹೆಣ್ಣು, ಗಂಡು ಎರಡೂ ಸನ್ಯಾಸಹಿಡಿದ ಮೇಲೆ ಹತ್ತಿರ, ಹತ್ತಿರ ಬದುಕಿಕೊಂಡಿದ್ದರೆ ಏನು ಕತೆಯಾದೀತು—ಅಂತ ನೀನೇ ಯೋಚಿಸು. ಅವಳು ಬಾವಿಗೆ ಹಾರಿ ಪ್ರಾಣ ಕಳ ಕೊಳ್ಳುವ ಬದಲು, ಕಾವಿ ಬಟ್ಟೆ ತೊಟ್ಟು ಸನ್ಯಾಸಿನಿಯಾಗಿದ್ದರೆ, ಠಕ್ಕು ಸನ್ಯಾಸಿನಿ ಯಾಗಿರುತ್ತಿದ್ದಳು. ಅಷ್ಟೇ !...... ಅದಕ್ಕಿಂತ ಸಾಯುವುದೊಳ್ಳೆಯ ದಲ್ಲವೇ ?''

ಹೀಗೆ ಮೂಕಜ್ಜಿ, ಗಂಡು–ಹೆಣ್ಣಿನ ಸಂಬಂಧದ ಸಮರಸವನ್ನು ಹದಗೆಡಿಸುವ ಎಲ್ಲವನ್ನೂ ವಿರೋಧಿಸುತ್ತಾಳೆ ; ಪ್ರತಿಯೊಂದು ಕ್ರಮವೂ ನಂಬಿಕೆಯೂ ಮನುಷ್ಯನ ವಿವೇಚನಾಶಕ್ತಿಯಿಂದ ಮನ್ನಣೆ ಪಡೆದಾಗ ಮಾತ್ರ ಊರ್ಜಿತವಾಗಬಲ್ಲದು ಎಂದು ನಂಬಿದ್ದಾಳೆ. ''ಹಾಗಾದರೆ ನೀವು ರಾಮಾಯಣ, ಭಾರತ, ರಾಮ, ಕೃಷ್ಣ– ಇದನ್ನೆಲ್ಲಾ ನಂಬುವುದಿಲ್ಲವೇ ?'' ಎಂಬ ಸುಬ್ರಾಯನ ಪ್ರಶ್ನೆಗೆ ಮೂಕಜ್ಜಿಯ ಉತ್ತರ : ''ನಾನು ನಂಬುವುದು ಅದರಲ್ಲಿರುವ ನಾಲ್ಕು ಒಳ್ಳೆಯ ಮಾತನ್ನು. ರಾಮ ಕೃಷ್ಣರ ಹಾಗೆ ಎಷ್ಟೆಲ್ಲ ದೇವರುಗಳನ್ನು ಹುಟ್ಟಿಸಿದರು......ಇವೆಲ್ಲ ನಾನು ಹೇಳುವ ಹಾಗೆ, ಮಕ್ಕಳಿಗೆ ಗುಮ್ಮನನ್ನು ತೋರಿಸಿ ಹೆದರಿಸುವ ಪುರಾಣ. ಒಂದು ದಿನ ಆ ಮಕ್ಕಳೂ ದೊಡ್ಡವರನ್ನು ಕೇಳುತ್ತವೆ : 'ಎಲ್ಲಿ ಆ ಗುಮ್ಮನನ್ನು ತೋರಿಸು ; ಮಾತಾಡಿಸುತ್ತೇನೆ ನಾನು' ಅಂತಾವೆ. ತೋರಿಸದೆ ಹೋದರೆ 'ನಿನಗೇ ಹೆದರಿಕೆ'

ಅನ್ನುತ್ತವೆ. ನಾವು ಅಲ್ಲಿಯ ತನಕ ಅಂದದ್ದು ಠಕ್ಕು ಎಂಬುದು ಅದಕ್ಕೂ ಗೊತ್ತಾಗುತ್ತದೆ.''

ಜೀವನ್ಮುಖಿಯಾದ ಧೋರಣೆ ಮಾತ್ರ ಚೆಲುವನ್ನು ಸೃಷ್ಟಿಸಬಲ್ಲುದು; ದೇವರ ಸಾನ್ನಿಧ್ಯದ ಅನುಭವ ತರಬಲ್ಲದು. ಆದ್ದರಿಂದಲೇ ಮೂಕಜ್ಜಿ ತಪಸ್ಸಿಗೆಂದು ಗುಹೆ ಹುಡುಕಿಕೊಂಡು ಹೋಗುವ ಋಷಿಗಳನ್ನು ಮಾನಸಿಕ ರೋಗಿಗಳೆಂದು ಗುರುತಿಸುತ್ತಾಳೆ : ''......ಅವರಿಗೆ ಹುಲಿ ಸಿಂಹಗಳ ಭಯವಿಲ್ಲ. ಅವರಿಗಿರುವುದು ಸಂಸಾರದ ಭಯ. ಅವರನ್ನು ಹುಟ್ಟಿಸಿದ ದೇವರೇ, ಸಂಸಾರದ ಒಳಕ್ಕೆ ಹುಟ್ಟಿಸಿ 'ಇರುವಾಗುವೇ ಎಲ್ಲರೊಂದಿಗೆ ನೀನೂ' ಎಂದು ಬಿಟ್ಟ. ಇಲ್ಲವಾದರೆ ಯಾಕೆ ಹುಟ್ಟಿಸಬೇಕಿತ್ತು ? ಆತ ಸಂಸಾರದಲ್ಲಿ ಹುಟ್ಟಿಸಿದ್ದಿದ್ದರೆ ಅಲ್ಲಿ ಇರುವುದಕ್ಕಾಗಿಯೇ ಹುಟ್ಟಿಸಿದ. ಅವರಿಗೆ ಸಂಸಾರದಲ್ಲಿ ಇರುವುದಕ್ಕೇನೇ ಭಯ.

ನೋವು ಬೇಡ, ದುಃಖ ಬೇಡ, ಸಾವು ಬೇಡ, ಆದರೆ ಸುಖ ಮಾತ್ರ ಬೇಕು. ಆದರೆ ಅದು ಎಂಥ ಸುಖ ? ಶಾಶ್ವತ ಸುಖ. ಅಂಥ ಸುಖ ಆ ಪರಮಾತ್ಮನಿಗೆ ಉಂಟೋ ಇಲ್ಲವೋ ?......ತಪ್ಪಿಸಿಕೊಳ್ಳುವ ದಾರಿ ಯಾವುದು ?......ಹುಟ್ಟದೆಯೇ ಇರುವುದು. ಆದರೆ ಈಗ ಹುಟ್ಟಿಯಾಯಿತು. ಏನು ಮಾಡಬೇಕು ? ಹಡೆದ ತಾಯಿಯ ಹೊಟ್ಟೆಯನ್ನು ತಿರುಗಿ ಸೇರುವ ಆಸೆ ಅಸಾಧ್ಯವಾದುದಕ್ಕೆ, ಗುಹೆ ಹುಡುಕಿ ಹೋಗುತ್ತಾರೆ. ಅಲ್ಲಿ ಅಡಗಿ ಕುಳಿತರೆ ಭದ್ರತೆ ಎಂತ. ಮುಂದಕ್ಕೆ ನಡೆಯಲು ಧೈರ್ಯವಿಲ್ಲದಾಗ ಹಿಂದಕ್ಕೆ ಹೆಜ್ಜೆ ಹಾಕುವುದಪ್ಪ......''

ಬಹುಶಃ, ಭಾರತೀಯ ಜನ ಜೀವನವನ್ನು, ಲೌಕಿಕ–ಪಾರಮಾರ್ಥಿಕ ಎಂಬೆರಡು ಪ್ರತ್ಯೇಕ ಧೋರಣೆಗಳಿಂದ ಇಬ್ಭಾಗಮಾಡಿರುವ ತಾತ್ವಿಕತೆಯ ವಿರುದ್ಧ ಇಷ್ಟೊಂದು ಸಮರ್ಥವಾಗಿ ದಾಳಿ ಇಡುವ ಕಾದಂಬರಿ ಕನ್ನಡದಲ್ಲಂತೂ ಮತ್ತೊಂದಿಲ್ಲ. ಪಾರಮಾರ್ಥಿಕವೂ ಲೌಕಿಕದ ವಿಸ್ತರಣೆ ಮಾತ್ರ ಕಾರಂತರಿಗೆ. ಗಂಡು–ಹೆಣ್ಣಿನ ಸಂಬಂಧವೇ ಲೌಕಿಕದ ಪರಮ ಮೂಲ. ಹಾಗೇ ಪಾರಮಾರ್ಥಿಕ ಕೂಡಾ ಇದರ ಎಲ್ಲೆಯನ್ನು ದಾಟಲಾರದು. ಒಮ್ಮೆ ದಾಟಿತು ಎಂದರೆ ಅದು ಹುಸಿ ಪಾರಮಾರ್ಥಿಕವಷ್ಟೆ ; ನಿಸರ್ಗ ಸೃಷ್ಟಿಸಿದ ಬದುಕಿನಾಚೆ ಏನೂ ಇಲ್ಲ. ''ಈ ಬದುಕನ್ನು ಹಸನು ಮಾಡಬಲ್ಲ ಮತ್ತು ಅದೇರೀತಿ ಹದಗೆಡಿಸಲೂ ಬಲ್ಲ ನಿಸರ್ಗದ ವರವಾಗಿರುವ ಕಾಮ'' (ಕಾರಂತ, 'ಇಂಡಿಯಾ ಟುಡೇ'ಯಲ್ಲಿ ಉದ್ಧೃತ)ವನ್ನು ಸಹಜವೆಂಬಂತೆ ಸ್ವೀಕರಿಸುವ ಮನಸ್ಸು ಮಾತ್ರ ಬದುಕನ್ನೂ ಸಹಜವೆಂಬಂತೆ ಸ್ವೀಕರಿಸಬಲ್ಲದು ಮತ್ತು ಬದುಕನ್ನು ಹೆಣೆಯುವ, ಕಾಮದಾಚೆಯ ಮನುಷ್ಯ–ಮನುಷ್ಯ ಸಂಬಂಧಗಳನ್ನೂ ಅರ್ಥ ಮಾಡಿಕೊಳ್ಳಬಲ್ಲದು. ಇದಕ್ಕೆ ನಾಗಿ–ರಾಮಣ್ಣರ ಪ್ರಕರಣವೇ ಒಂದು ಉದಾಹರಣೆ. ಇವರಿಬ್ಬರು ಬೇರೆಯಾದ ಇಪ್ಪತ್ತು ವರ್ಷಗಳನಂತರವೂ ಮೂಕಜ್ಜಿ ಇವರಿಬ್ಬರ

ನಡುವೆ ಸಂಬಂಧ ಸಾಧ್ಯ ಎಂಬ ವಿಶ್ವಾಸ ಹೊಂದಿದ್ದಾಳೆ. ರಾಮಣ್ಣನನ್ನು ಬಿಟ್ಟ ನಂತರ ನಾಗಿ "ತಾನು ಎಂಜಲಾದೆ" ಎಂದು ಹೇಳಿ ರಾಮಣ್ಣನನ್ನು ಮತ್ತೆ ಸೇರಲು ನಿರಾಕರಿಸುವುದು, ಮೂಕಜ್ಜಿಯ ಪ್ರಕಾರ, "ಅವಳ ದೊಡ್ಡಸ್ತಿಕೆ!". ಮೂಕಜ್ಜಿ ಯೋಚಿಸುವುದೇ ಬೇರೆ ರೀತಿ. "ಆದರೆ ನೋಡು–ಗಂಡು ಹೆಣ್ಣಿಗೂ–ಎಂಜಲು ಮುಸುರೆಗೂ ಜೋಡಿಯಲ್ಲ. ಇಲ್ಲಿ ಇಬ್ಬರೊಳಗೂ ಒಂದೊಂದು ಜೀವ ಕುದಿಯು ತ್ತಿರುತ್ತದೆ. ಅದರ ಸಂಕಟ ಏನು, ಎಂಥದು ಅಂತ ನಿನಗೇನು ಗೊತ್ತಾಗುತ್ತದೆ ? ಈ ಊರಿನಲ್ಲಿ ಹತ್ತಾರು ಸಂಸಾರಗಳನ್ನು ನಾನೂ ಕಂಡವಳು. ಆಡುವ ನಾಲಿಗೆ ಏನೇನೋ ಆಡುತ್ತಾ ಇರುತ್ತದೆ. ಒಳಗಿನ ಅಂತರಂಗ ಇನ್ನೇನೋ ಹೇಳುತ್ತಿರು ತ್ತದೆ. ಎಲ್ಲ ಕಪಟನಾಟಕ..."

5

ಹೀಗೆ, ಮೂಕಜ್ಜಿ ಕಾಣುವುದು ಇಡಿಯಾಗಿ ಬದುಕನ್ನು, ಅದರೊಳಗೆ ಕಾಮ ವನ್ನು. ಬದುಕಿನಿಂದ ಹೊರಚಾಚಿದ ಕಾಮ ವಿಕೃತವಾಗುತ್ತದೆ. ಬದುಕು ಎಂದರೆ ಸಂಬಂಧಗಳು ಮತ್ತು ಇವುಗಳ ಮೇಲೆ ನಿಂತ ನಂಬಿಕೆ—ಆದರ್ಶಗಳು. ಈ ನಂಬಿಕೆ ಆದರ್ಶಗಳಲ್ಲಿನ ಪ್ರಾಮಾಣಿಕತೆಯೇ ಬದುಕಿನ ಪ್ರಾಮಾಣಿಕತೆಯೂ ಆಗಿರುತ್ತದೆ; ಮತ್ತು ಅದರ ಕಿಮ್ಮತ್ತನ್ನೂ ನಿರ್ಧರಿಸುತ್ತದೆ. ಲೌಕಿಕವನ್ನು ಶ್ರೀಮದ್ ಗಾಂಭೀರ್ಯದಿಂದ ತಿರಸ್ಕರಿಸುತ್ತಾ ಸಲಿಂಗರತಿಗೆ ಬಿದ್ದಿರುವ ಅನಂತರಾಯನನ್ನು ಮೂಕಜ್ಜಿ ತಿವಿಯುತ್ತಾಳೆ : "ಈ ಸಂಸಾರ ಹಾಗೆ, ಹೀಗೆ, ಹೆಣ್ಣು ಗಂಡು ಅಸಹ್ಯ ಅಂತ ನೀನೇ ತಿಳಿದುಕೊಂಡಿದ್ದೀಯ. ಹಾಗೆ ತಿಳಿದುಕೊಂಡವರು ಹಲವರುಂಟು. ಹಿಂದಿನವರೂ ತಿಳಿದುಕೊಂಡು, ಅದರಂತೆ ಬಾಳುವ ಬುದ್ಧಿ ಇರಬೇಕು. ಆ ಬುದ್ಧಿಯೇ ಇಲ್ಲದೆ, ಬರಿದೆ ಮಾತಾಡಿದರೆ ಏನು ಚಂದ ? ನಿನಗೆ 'ಹೆಣ್ಣು ಅಸಹ್ಯ' ಎಂತ ಕಾಣಿಸಬಹುದು. ಅದು ಬೇಡವಾದರೆ ಬಿಡು. ಆದರೆ ಹೆಣ್ಣಿನೊಡನೆ ಆಡುವ ಆಟವನ್ನು, ಗಂಡಿನೊಡನೆ ಆಡುವವರಿಗೆ ಅಷ್ಟೆಲ್ಲ ಅಧಿಕ ಪ್ರಸಂಗ ಯಾತಕ್ಕೆ ಅಂತ ಕಾಣಿಸುತ್ತದೆ ನನಗೆ. ಈ ಅಜ್ಜಿ ಕುರುಡಿಯೇನಲ್ಲ......ಹೆಣ್ಣು ಗಂಡು–ಕಾಮ–ಮತ್ತೊಂದು ಅಸಹ್ಯ ಕೆಲಸಗಳಾದರೆ, ಕೊಟ್ಟವನಿಗೆ ಅದನ್ನು ತಾನೇಕೆ ಕೊಟ್ಟೆ, ತನ್ನ ಯಾವ ಇಚ್ಛೆಯನ್ನು ಪೂರೈಸುವುದಕ್ಕೆ ಕೊಟ್ಟೆ–ಅಂತ ಗೊತ್ತಿದ್ದೀತು. ಅದು ಅಷ್ಟು ಅಸಹ್ಯವಾಗಿದ್ದರೆ ಹೆಣ್ಣು, ಗಂಡು, ಹೂವನ್ನು ಸಹ ಅವನು ಸೃಷ್ಟಿಮಾಡು ತ್ತಿರಲಿಲ್ಲ, ಅವನೇ ಸೃಷ್ಟಿಮಾಡಿದ್ದು ನಿಜವಾಗಿದ್ದರೆ. ಸಾಕು ಬಿಡು, ನನ್ನನ್ನು ನೀನು ಪರೀಕ್ಷೆ ಮಾಡುವುದು ಬೇಡ. ನಿನ್ನ ನಡತೆಯನ್ನು ಮೊದಲು ಸರಿ ಮಾಡಿಕೊಂಡರೆ ಮತ್ತೆಲ್ಲ ಮಾತು......"

ಕಾದಂಬರಿ ಮುಗಿಯುವುದೂ ಮೂಕಜ್ಜಿಯ ಈ ತಿಪಿತದೊಂದಿಗೆ. ಅನಂತರಾಯನ ಹಿಪೋಕ್ರಸಿಯ ವಿರುದ್ಧದ ಈ ತಿಪಿತ ಇಡೀ ಕಾದಂಬರಿಯುದ್ದಕ್ಕೂ ಪ್ರಸ್ತಾಪಕ್ಕೆಬರುವ ವಿವಿಧ ಹಂತಗಳ ಹಿಪೋಕ್ರಸಿಗಳ ವಿರುದ್ಧದ ತಿವಿತಕೂಡಾ ಆಗಬಲ್ಲಷ್ಟು ಹರಿತ ಹಾಗೂ ಆಳವಾಗಿದ್ದು, ಕಾದಂಬರಿಯ ಮುಕ್ತಾಯ ಅರ್ಥಪೂರ್ಣವಾಗಿದೆ. ಸುಬ್ರಾಯ ಅವಶೇಷಗಳನ್ನು ಹುಡುಕುವ ಸಮಯದಲ್ಲೆಲ್ಲಾ ಹಾವಿನ ನೆನಪು ಬರುವುದು ಕೂಡಾ ಅರ್ಥಪೂರ್ಣ : ಹುಡುಗಿ, ಹುಡುಗಿಯ ತಂದೆ ತಾಯಿಗಳಿಗೂ ಮಾತುಕೊಟ್ಟು ಮದುವೆ ಎನ್ನುವಷ್ಟರಲ್ಲಿ ಮರೆಯಾಗುವ, ಕೊನೆಗೆ ಒಲ್ಲದ ಹುಡುಗಿಗೇ ಸಿಕ್ಕಿಬೀಳಬೇಕಾಗಿ ಬರುವ ಜನಾರ್ಧನ ಘಟ್ಟದ ಬರೆಯಲ್ಲಿ ಹೆಜ್ಜೆ ಹೆಜ್ಜೆಗೂ ಕಾಳಿಂಗಸರ್ಪವನ್ನು ನೆನೆಸಿಕೊಂಡು ನಡುಗುವುದು ಮತ್ತು ಸುಬ್ರಾಯ ಆ ತಲೆಯೋಡು ಸಿಕ್ಕಿದ ಬಾವಿಯ ಶೋಧನೆಯಲ್ಲಿದ್ದಾಗ ಗೋಧಿಬಣ್ಣದ ಮಾರುದ್ದದ ನಾಗರಹಾವೊಂದು ಕಂಡು ಮರೆಯಾಗುವುದು, ಕಾದಂಬರಿಯ ವಸ್ತುವಿಗೆ ಅಗತ್ಯವಾದ ಧ್ವನಿಯನ್ನು ಒದಗಿಸುತ್ತದೆ.

ಇಷ್ಟೆಲ್ಲಾ ಆದರೂ, ಕಾದಂಬರಿಯನ್ನು ಓದಿ ಮುಗಿಸಿದಾಗ, ಓದುಗನಿಗೆ ಕಾದಂಬರಿಯೊಂದನ್ನು ಓದಿದ ಅನುಭವಕ್ಕಿಂತ ಹೆಚ್ಚಾಗಿ ಉನ್ನತಮಟ್ಟದ ಚರ್ಚಾಗೋಷ್ಠಿಯೊಂದರಲ್ಲಿ ಭಾಗವಹಿಸಿದ ಅನುಭವವಾಗುತ್ತದೆ. ಕಾದಂಬರಿಯ ಪ್ರತಿ ಅಧ್ಯಾಯದಲ್ಲೂ ಕಾಣಬರುವ ಉದ್ದುದ್ದನೆಯ ಸಂಭಾಷಣೆಗಳು ಕಾದಂಬರಿಯೊಳಗಿನ ‘ನಾಟಕ’ ದಿಂದ ಹುಟ್ಟದೇ ಹಲವೆಡೆ ನೇರವಾಗಿ ಕಾದಂಬರಿಕಾರರ ಮಾತುಗಳಂತೆ ಕೇಳಿಬರುತ್ತವೆ. ವಸ್ತು ವೈಚಾರಿಕವಾದದ್ದಾಗಿರುವುದು ಇದಕ್ಕೆ ಕಾರಣವಾದರೂ, ಈ ದೌರ್ಬಲ್ಯದಲ್ಲಿ ತಂತ್ರದ ಪಾಲೂ ಕಡಿಮೆಯೇನಲ್ಲ. ಈ ದೃಷ್ಟಿಯಿಂದ, ಕಾದಂಬರಿಯ ಹೆಗ್ಗಳಿಕೆಯೆನಿಸಿರುವ ತಂತ್ರವು ಕಾದಂಬರಿಯ ಕಾದಂಬರಿ ಗುಣವನ್ನೇ ಅನುಮಾನಕ್ಕೀಡುಮಾಡುವಷ್ಟು ಮೇಲುಗೈ ಪಡೆಯುವಷ್ಟು ಕಾರಂತರ ಹತೋಟಿ ತಪ್ಪಿರುವುದು ಆಶ್ಚರ್ಯ. ಆದ್ದರಿಂದಲೇ, ಇಷ್ಟೊಂದು ವಿಚಾರಸಾಂದ್ರತೆ ತುಂಬಿಕೊಂಡಿದ್ದರೂ ‘ಮೂಕಜ್ಜಿಯ ಕನಸುಗಳು’, ಕಾರಂತರ ಇತರ ಅತ್ಯುತ್ತಮ ಕಾದಂಬರಿಗಳಷ್ಟು ನಮ್ಮ ಆಳಕ್ಕೆ ತಲುಪುವುದಿಲ್ಲ. ಇದು ಕಾರಂತರ ‘ಕಾದಂಬರಿ’ ಎನ್ನುವುದಕ್ಕಿಂತ ಕಾರಾತರ ‘ಜೀವನದರ್ಶನ’ದ ಪುಸ್ತಕವೆಂದೇ ಮಾನ್ಯತೆ ಪಡೆಯುವ ಸಾಧ್ಯತೆ ಇದೆ.

ಕುಷಾಣ ಅರಸರ ನಾಣ್ಯಗಳು
(ಕ್ಯಾಡ್‌ಫಿಸೆಸ್ ಅರಸರ ಭಾಗ)

ಎಸ್. ಎನ್. ಶಿವರುದ್ರಸ್ವಾಮಿ

ಮೌರ್ಯೋತ್ತರ ಕಾಲದಲ್ಲಿ ರಾಜಕೀಯದಲ್ಲಿ ಗಣನೀಯವಾದ ಪಾತ್ರವಹಿಸಿದ ಕುಷಾಣರು ಮಧ್ಯ ಏಷ್ಯದಿಂದ ಭಾರತಕ್ಕೆ ವಲಸೆಬಂದ ಯೂ-ಚಿ ಬಣದ ಒಂದು ಗುಂಪು. ಮಗಧಸಾಮ್ರಾಜ್ಯದ ಸಾವಿನೊಂದಿಗೆ ಚಿಗುರಿದ ಶುಂಗರು, ಕಣ್ವರು ಅಳಿದಮೇಲೆ, ಕುಷಾಣರು ಭಾರತದಲ್ಲಿ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದರು. ಅವರ ಆಳ್ವಿಕೆಯ ಕಾಲದಲ್ಲಿ ಅವರನ್ನಿದಿರಿಸುವ ಯಾವೊಂದು ದೇಶೀಯ ರಾಜವಂಶ ವಾಗಲಿ, ರಾಜಕೀಯ ಶಕ್ತಿಯಾಗಲಿ ಇರಲಿಲ್ಲ. ಆದ್ದರಿಂದ ಅವರ ಪ್ರಭಾವ ಅವ್ಯಾಹತವಾಗಿ ಬೆಳೆಯಿತು. ಇದೇ ಕಾಲದಲ್ಲಿ ಭಾರತೀಯ ಸಂಸ್ಕೃತಿ ವಿದೇಶೀಯರ ಪ್ರಭಾವವನ್ನು ಮೈಗೂಡಿಸಿಕೊಂಡು ಸಮೃದ್ಧವಾಗಿ ಬೆಳೆಯಿತು. ಪೆಷಾವರ್ ನಗರ ಕುಷಾಣರ ರಾಜಕೀಯ ಕೇಂದ್ರವಾಯಿತು. ಧಾರ್ಮಿಕ, ಸಾಹಿತ್ಯಿಕ ಮತ್ತು ಕಲಾಕ್ಷೇತ್ರಗಳಲ್ಲಿ ಹೊಸ ಪರಂಪರೆಯನ್ನು ಸ್ಥಾಪಿಸಿದ ಕೀರ್ತಿ ಕುಷಾಣರಿಗೆ ಸಲ್ಲುತ್ತದೆ. ಬೌದ್ಧಧರ್ಮದ ಬೆಳವಣಿಗೆ ಮತ್ತು ಗಾಂಧಾರ ಕಲೆ–ಇವರ ಚಿರಂತನ ಕಾಣಿಕೆಗಳಾಗಿವೆ.

ಚೀನೀ ತುರ್ಕಿಸ್ಥಾನದಲ್ಲಿ ಯೂ-ಚಿ ಬಣ ಒಂದು ಅಲೆಮಾರಿ ಗುಂಪು. ಕ್ರಿ.ಪೂ. ಒಂದನೇ ಶತಮಾನದಲ್ಲಿ ಇವರು ತಮ್ಮ ಅಸ್ತಿತ್ವಕ್ಕಾಗಿ ಹ್ಯೂಂಗ್-ನು ಎಂಬೊಂದು ಅನಾಗರಿಕ ಗುಂಪಿನೊಂದಿಗೆ ಹೋರಾಡಬೇಕಾಯಿತು. ಈ ಹೋರಾಟದಲ್ಲಿ ಸೋತ ಯೂ-ಚಿ ಬಣ, ಅಲ್ಲಿಂದ ವಲಸೆ ಹೊರಟು ಜಕ್ಸಾರ್ಟ ಎಂಬಲ್ಲಿ ತಳವೂರಿತು. ಅಲ್ಲಿದ್ದ ಶಕರೊಂದಿಗೆ ಹೋರಾಟ ನಡೆಸಿ, ಅವನ್ನು ಓಡಿಸಿತು. ಅಲ್ಲೂ ಯೂ-ಚಿ ಬಣ ನೆಮ್ಮದಿಯಿಂದ ನೆಲೆಸಲಿಲ್ಲ. ಹೊರಗಣ ದಾಳಿಯಿಂದಾಗಿ ಜಕ್ಸಾರ್ಟನಿಂದ ಹೊರಟು, ಅಕ್ಸಸ್ ನದಿಯ ದಕ್ಷಿಣ ಭಾಗದಲ್ಲಿ ನೆಲೆಸಿತು. ಇಲ್ಲಿ ಅಲೆಮಾರಿ ಜೀವನವನ್ನು ತ್ಯಜಿಸಿ, ರಾಜ್ಯವೊಂದನ್ನು ಕಟ್ಟಿಕೊಂಡಿತು. ಯೂ-ಚಿ ಬಣ ಐದು ಗುಂಪುಗಳಾಗಿ ಒಡೆಯಿತು. ಅವುಗಳಲ್ಲೊಂದು ಕ್ಯುಷುಂಗ್ (Kuei-shung) ಅಥವಾ ಕುಷಾಣರು.

ಯೂ-ಚಿ ಬಣ ಐದು ಗುಂಪುಗಳಾಗಿ ಒಡೆದ ನೂರುವರುಷಗಳನಂತರ ಕುಷಾಣರ ನಾಯಕನೊಬ್ಬ ಹಿಂದುಕುಷ್ ಪರ್ವತದ ಉತ್ತರದಲ್ಲಿ ರಾಜ್ಯವೊಂದನ್ನು

ಕಟ್ಟಿದ. ಅವನೇ ಒಂದನೆಯ ಕ್ಯಾಡ್‌ಫಿಸೆಸ್ ಅಥವಾ ಕುಜುಲ ಕ್ಯಾಡ್‌ಫಿಸೆಸ್. ಇವನು ರಾಜ್ಯವನ್ನು ವಿಸ್ತರಿಸಿದಂತೆ ಕಾಬೂಲ್ ಮತ್ತು ಗಾಂಧಾರ ಪ್ರದೇಶಗಳು ಅವನ ರಾಜ್ಯದಲ್ಲಿ ಸೇರ್ಪಡೆಯಾದವು. ಇವನು ಮೊದಲಿಗೆ ಸ್ವತಂತ್ರ ಅರಸನಲ್ಲ. ಕಾಬೂಲಿನ ಕೊನೆಯ ಗ್ರೀಕ್ ಅರಸ ಹರ್ಮೇಯಸ್ (Hermaeus) ನೊಂದಿಗೆ ಸಹಕರಿಸಿದ. ಅನಂತರ ಕ್ಯಾಡ್‌ಫಿಸೆಸ್ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡು ಸ್ವತಂತ್ರನಾದ. ಮುಂದೆ ಹರ್ಮೇಯಸ್ ಮತ್ತು ಕ್ಯಾಡ್‌ಫಿಸೆಸ್ ಕೂಡಿಯೇ ನಾಣ್ಯಗಳನ್ನು ಚಲಾವಣೆಗೆ ತಂದರು. ಆಡಳಿತದಲ್ಲಿ ಅವನದು ಎರಡನೆಯ ಸ್ಥಾನವಾಗಿತ್ತು. ನಾಣ್ಯಗಳ ಮೇಲಿನ ಲೇಖನದಲ್ಲಿ ಅವನ ಉನ್ನತಸ್ಥಾನದ ಸೂಚನೆಗಳನ್ನು ಆರಂಭಿಕ ಕಾಲದಲ್ಲಿ ಕಾಣಲಾಗುವುದಿಲ್ಲ. ಪಾರ್ಥಿಯನ್ನರ ಆಕ್ರಮಣದಿಂದ ಹರ್ಮೇಯಸ್‌ನ ಆಳ್ವಿಕೆ ಕಾಬೂಲಿನಲ್ಲಿ ಕೊನೆಗೊಂಡಿತು. ಇದಾದ ಕೆಲಕಾಲದಲ್ಲಿಯೇ ಒಂದನೆಯ ಕ್ಯಾಡ್‌ಫಿಸೆಸ್‌ನು ಪಾರ್ಥಿಯನ್ನರನ್ನು ಸೋಲಿಸಿ ಕಾಬೂಲ್ ಮತ್ತು ಕಂದಹಾರ್ ಪ್ರದೇಶಗಳಿಗೆ ಒಡೆಯನಾದನು.

ಒಂದನೇ ಕ್ಯಾಡ್‌ಫಿಸೆಸ್‌ನು ಕುಷಾಣರ ಆಳ್ವಿಕೆಗೆ ಭದ್ರ ಬುನಾದಿಯನ್ನು ಹಾಕಿದ. ಅವನ ರಾಜ್ಯ ಪರ್ಶಿಯಾದಿಂದ ಝೀಲಂ ನದಿಯುವರೆವಿಗೂ ಪ್ರಸರಿಸಿತ್ತು. ಅವನು ದೀರ್ಘಕಾಲದವರೆಗೆ ಆಳ್ವಿಕೆ ನಡೆಸಿ ತೀರಿಕೊಂಡ. ಅವನು ಪ್ರಾಯಶಃ ಕ್ರಿ.ಶ. 15ರಿಂದ 65ರವರೆಗೆ ಆಳಿರಬಹುದು.

ಒಂದನೇ ಕ್ಯಾಡ್‌ಫಿಸೆಸ್‌ನಂತರ ಅವನ ಮಗನಾದ ಎರಡನೆಯ ಕ್ಯಾಡ್‌ಫಿಸೆಸ್ ಅಥವಾ ವಿಮ ಕ್ಯಾಡ್‌ಫಿಸೆಸ್ ಅಧಿಕಾರಕ್ಕೆ ಬಂದ. ಇವನ ಕಾಲದಲ್ಲಿ ಕುಷಾಣರ ಸಾಮ್ರಾಜ್ಯ ಮತ್ತಷ್ಟು ಪ್ರಬಲವಾಗಿ ಬೆಳೆಯಿತು. ಇಂಡಿಯಾದ ವಾಯುವ್ಯ ಭಾಗಗಳಾದ ಪಂಜಾಬ್ ಮೊದಲಾದ ಪ್ರದೇಶಗಳು ನೇರವಾಗಿ ಅವನ ಆಳ್ವಿಕೆಗೆ ಗುರಿಯಾದವು. ಇವನು ರೋಮನ್ ಆರಸ್ (aurous 124 ಗ್ರೈನ್ ಅಥವಾ 8.035 ಗ್ರಾಂ ತೂಗುತ್ತದೆ) ಮಾದರಿಯಲ್ಲಿ ಚಿನ್ನದ ನಾಣ್ಯಗಳನ್ನು ಅತ್ಯಧಿಕವಾಗಿ ಚಲಾವಣೆಗೆ ತಂದ. ಅಷ್ಟೇ ಪ್ರಮಾಣದಲ್ಲಿ ತಾಮ್ರ ಮತ್ತು ಕಂಚಿನ ನಾಣ್ಯಗಳನ್ನೂ ಹೊರಡಿಸಿದ. ವಿಮ ಕ್ಯಾಡ್‌ಫಿಸೆಸ್ ಆರಂಭಿಸಿದ ಚಿನ್ನದ ನಾಣ್ಯ ಪದ್ಧತಿಯನ್ನು ಅನಂತರದ ಕುಷಾಣ ಅರಸರು ಹಾಗೂ ಗುಪ್ತ ಚಕ್ರವರ್ತಿಗಳು ಅನುಸರಿಸಿದರು. ಕುಶಾಣರ ಕಾಲದಲ್ಲಿ ವ್ಯಾಪಕವಾಗಿ ಚಲಾವಣೆಗೆ ಬಂದ ಚಿನ್ನದ ನಾಣ್ಯಗಳಿಗಾಗಿ ರೋಮನ್ ಚಿನ್ನವು ಭಾರತಕ್ಕೆ ಹೊಳೆಯಾಗಿ ಹರಿಯಿತೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅದೇನೇ ಇರಲಿ, ಅವನಿಂದ ಪ್ರಾರಂಭವಾದ ಚಿನ್ನದ ನಾಣ್ಯಪದ್ಧತಿ ಮುಂದಣ ಕಾಲದಲ್ಲಿ ಅಪಾರ ಪ್ರಭಾವ ಬೀರಿತು. ಇವನೂ ಕೂಡ ತನ್ನ ತಂದೆಯಂತೆ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿದ. ಇವನ ರಾಜ್ಯ ಬೆನಾರೆಸ್‌ವರೆಗೂ ಹರಡಿತ್ತು.

ಕುಜುಲ ಹಾಗು ವಿಮ ಕ್ಯಾಡ್‌ಫಿಸೆಸ್‌ರ ಇತಿಹಾಸವನ್ನು ತಿಳಿಯಲು ಅವರ ನಾಣ್ಯಗಳು ಬಹಳಷ್ಟು ಸಹಕಾರಿಯಾಗುತ್ತವೆ. ಅವರು ವಿವಿಧ ಲೋಹದ ನಾಣ್ಯಗಳನ್ನು ಉತ್ತರ ಭಾರತದಲ್ಲಿ ವ್ಯಾಪಕವಾಗಿ ಚಲಾವಣೆಗೆ ತಂದರು. ಅವರ ನಾಣ್ಯಗಳು ಅಫ್ಘಾನಿಸ್ಥಾನ, ತಕ್ಷಶಿಲಾ, ಬೆಗರಾಮ್ ಪೆಷಾವರ್, ಕಲ್ಕ–ಕಸೌಲಿ ರಸ್ತೆ, ಮಥುರ, ಗೋಪಾಲಪುರ ಸ್ತೂಪ (ಗೊರಬಪುರ್), ಭೀಟ, ವಾರಾಣಸಿ, ಇಂದೂರ್, ಘಜಿಪ್ಪುರ, ಸೌರಾಷ್ಟ್ರ ಮುಂತಾದ ಕಡೆಗಳಲ್ಲಿ ಹೆಚ್ಚಾಗಿ ದೊರೆತಿವೆ. ದೊರೆತ ನಾಣ್ಯಗಳ ಬಗ್ಗೆ ವಿಪುಲವಾಗಿ ಸಂಶೋಧನೆ ನಡೆಸಿದ ವಿದ್ವಾಂಸರು, ಕುಷಾಣರ ಸಮಗ್ರ ಇತಿಹಾಸವನ್ನು ರೂಪಿಸಿದ್ದಾರೆ, ಮತ್ತು ಕುತೂಹಲಕಾರಿ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಅಂತಹವರಲ್ಲಿ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಂ, ಇ. ಹೆರ್ಜಫೆಲ್ಡ್, ಎ. ಎನ್. ಲಾಹಿರಿ, ಡೆವಿಡ್ ಮ್ಯಾಕ್‌ಡೊವೆಲ್, ಇ. ಜೆ. ರ್‍ಯಾಪ್‌ಸನ್ ಮುಖ್ಯರು.

೨

ಕ್ಯಾಡ್‌ಫಿಸೆಸ್ ಅರಸರ ಕಾಲದಲ್ಲಿ ಚಲಾವಣೆಗೆ ಬಂದ ನಾಣ್ಯಗಳ ಲೋಹ, ಆಕೃತಿ, ತೂಕ ಮತ್ತು ಅವುಗಳ ಮೇಲಿನ ಆಲೇಖ (legend)ಗಳನ್ನಿಲ್ಲಿ ವಿಮರ್ಶಿಸೋಣ :—

ಈ ಅರಸರು ಅತ್ಯಧಿಕವಾಗಿ ತಾಮ್ರದ ನಾಣ್ಯಗಳನ್ನು ಅನಂತರ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದರು. ಕುಷಾಣ ಅರಸರಲ್ಲಿ ಚಿನ್ನದ ನಾಣ್ಯಗಳನ್ನು ಹೊರಡಿಸಿದನು ವಿಮಕ್ಯಾಡ್‌ಫಿಸೆಸ್. ಅವರ ತಾಮ್ರದ ನಾಣ್ಯಗಳನ್ನು ಮೂರು ವಿಭಿನ್ನ ಆಕೃತಿ ಮತ್ತು ಅಳತೆ (denomination)ಗಳಲ್ಲಿ ಚಲಾವಣೆಗೆ ತರಲಾಯಿತು.

1. ದೊಡ್ಡಳತೆ (The large size)ಯ ನಾಣ್ಯವು 260 ಗ್ರೈನ್ ತೂಗುತ್ತದೆ.
2. ಮಧ್ಯಳತೆ (The middle size)ಯ ನಾಣ್ಯವು 130 ಗ್ರೈನ್ ತೂಗುತ್ತದೆ.
3. ಸಣ್ಣಳತೆ (The small size)ಯ ನಾಣ್ಯವು 65 ಗ್ರೈನ್ ತೂಗುತ್ತದೆ.

ಮೇಲೆ ಕೊಟ್ಟಿರುವ ತೂಕದ ಅಳತೆ ಎಲ್ಲ ನಾಣ್ಯಗಳಿಗೂ ಸರಿಯಾಗಿ ಹೊಂದದು. ಅದರಲ್ಲೂ ಹಲವು ಬದಲಾವಣೆಗಳುಂಟು : ''ಹೆರಕ್ಲೆಸ್'' ಮಾದರಿಯ ಕುಜುಲನ ನಾಣ್ಯವು 42 ರಿಂದ 130 ಗ್ರೈನ್ ತೂಗುತ್ತದೆ.

''ಅಗಸ್ಟಸ್ ತಲೆ'' ಮಾದರಿಯ ನಾಣ್ಯವು 46 ಗ್ರೈನ್ ಇದ್ದರೆ, ಅವನ ''ನಂದಿ-ಮತ್ತು-ಒಂಟೆ''ಯು ಮಾದರಿಯು 67 ರಿಂದ 167 ಗ್ರೈನ್ ತೂಗುತ್ತದೆ. ''ಯಜ್ಞ ವೇದಿಕೆಯ ಹತ್ತಿರ ನಿಂತಿರುವ'' ಹಾಗೂ ''ಶಿವ'' ಮಾದರಿಯ ವಿಮ ಕ್ಯಾಡ್‌ಫಿಸೆಸ್‌ನ ನಾಣ್ಯಗಳು 59 ರಿಂದ 260 ಗ್ರೈನ್ ತೂಗುತ್ತವೆ. ಈ ತಾಮ್ರದ ನಾಣ್ಯಗಳನ್ನು ಪಣಗಳೆಂದು ಕರೆಯುತ್ತಾರೆ.

ಕ್ಯಾಡ್‌ಫಿಸೆಸ್ ಅರಸರ ಚಿನ್ನದ ನಾಣ್ಯಗಳನ್ನು ದೀನಾರ-ಎಂದು ಕರೆಯುತ್ತಾರೆ. ದೀನಾರ-ಎಂಬುದು ರೋಮನ್ ನಾಣ್ಯವಾದ ''ಡಿನೆರಿಯಸ್'' ಎಂಬುದರ ಸಂಸ್ಕೃತ ರೂಪಾಂತರ. ದ್ವಿದೀನಾರ, ದೀನಾರ, ಕಾಲುದೀನಾರ-ಇವು ದೀನಾರದ ವಿವಿಧ ಭೇದಕಾಂಶಗಳು. ವಿಮ ಕ್ಯಾಡ್‌ಫಿಸೆಸನು ಚಿನ್ನದ ನಾಣ್ಯಗಳ ತಯಾರಿಕೆಯಲ್ಲಿ ರೋಮನ್ ನಾಣ್ಯಗಳ ತಂತ್ರ ತೂಕ ಎರಡನ್ನೂ ಅನುಸರಿಸಿದನು.

ಈ ಅರಸರ ದ್ವೈಭಾಷಿಕ ಮತ್ತು ದ್ವೈಲಿಪಿಕ ನಾಣ್ಯಗಳನ್ನು ಟಂಕಿಸಿದರು. ಅವರು ನಾಣ್ಯಗಳ ಮುಮ್ಮುಖದಲ್ಲಿ ಗ್ರೀಕ್ ಲಿಪಿಯನ್ನು, ಹಿಮ್ಮುಖದಲ್ಲಿ ಖರೋಷ್ಠಿ ಲಿಪಿಯನ್ನು ಉಪಯೋಗಿಸಿದರು. ಪ್ರಾಕೃತ ಹಾಗೂ ಗ್ರೀಕ್ ಭಾಷೆಗಳು ಕುಷಾಣರ ಕಾಲದಲ್ಲಿ ಸಾಕಷ್ಟು ವಿಕೃತ ರೂಪ ಪಡೆಯಿತು. ದ್ವೈಭಾಷಿಕ ಮತ್ತು ದ್ವೈಲಿಪಿಕ ನಾಣ್ಯಗಳನ್ನು ಟಂಕಿಸಿದವರಲ್ಲಿ ವಿಮ ಕ್ಯಾಡ್‌ಫಿಸೆಸನೇ ಕೊನೆಯವನೆಂಬುದು ಮತ್ತೊಂದು ಪ್ರಮುಖವಾದ ಅಂಶ.

ನಾಣ್ಯಗಳ ಮೇಲೆ ಅರಸನ ಚಿತ್ರವನ್ನು ವಿವಿಧ ಭಾವ-ಭಂಗಿಗಳಲ್ಲಿ ಚಿತ್ರಿಸಲಾಗಿದೆ. ಕೆಲ ನಮೂನೆಗಳಲ್ಲಿ ರಾಜನೊಂದಿಗೆ ಕೆಲವು ವಸ್ತುಗಳನ್ನೂ ಸೇರಿಸಿದೆ. ಅರಸನನ್ನು ಯಜ್ಞ ವೇದಿಕೆಯ ಪಕ್ಕದಲ್ಲಿ ನಿಂತಿರುವಂತೆ ತೋರಿಸಲಾಗಿದೆ. ಆನೆ ಅಥವಾ ಹುಲಿಯನ್ನೇರಿರುವಂತೆ, ಅಥವಾ ರಥಾರೂಢನಾಗಿರುವಂತೆ ಚಿತ್ರಿಸಲಾಗಿದೆ. ಕೆಲವು ನಾಣ್ಯಗಳ ಮೇಲೆ ಅರಸನು ಶಿರಸ್ತ್ರಾಣವನ್ನು ಧರಿಸಿರುವ ಚಿತ್ರವಿದೆ. ಭರ್ಜಿ, ಕತ್ತಿ, ಗದೆ, ತ್ರಿಶೂಲ ಮುಂತಾದ ಅಸ್ತ್ರಗಳನ್ನು ಅರಸನು ಹಿಡಿದಿರುವುದುಂಟು. ಅರಸನನ್ನು ಮೋಡಗಳ ಮೇಲೆ ಕುಳಿತಿರುವಂತೆ, ಹೆಗಲಮೇಲೆ ಜ್ವಾಲೆ ಹೊರ ಹೊಮ್ಮುತ್ತಿರುವಂತೆ ದೈವತ್ವವನ್ನು ಆರೋಪಿಸಿ ಚಿತ್ರಿಸಲಾಗಿದೆ. ವಿವಿಧ ಪಂಥಕ್ಕೆ ಸೇರಿದ ವಿವಿಧ ದೇವತೆಗಳ ಚಿತ್ರಣವೇ ಕುಷಾಣರ ನಾಣ್ಯಗಳ ವಿಶೇಷವಾದ ಒಂದಂಶ. ಕುಜುಲ ಕ್ಯಾಡ್‌ಫಿಸೆಸನ ನಾಣ್ಯಗಳ ಹಿಮ್ಮುಖದಲ್ಲಿ ಗ್ರೀಕರ ದೇವತೆಗಳಾದ ಹೆರಕ್ಲಿಸ್, ಜ್ಯೂಸ್-ಮುಂತಾದ ಚಿತ್ರಗಳು ಕಾಣದೊರೆತರೆ, ವಿಮಕ್ಯಾಡ್‌-ಫಿಸೆಸ್‌ನ ನಾಣ್ಯಗಳ ಮೇಲೆ ಶಿವ ಮತ್ತು ಅವನ ಚಿಹ್ನೆಗಳನ್ನು ನೋಡಬಹುದು. ನಾಣ್ಯಗಳ ಮೇಲಿನ ಆಲೇಖಗಳ ಆಧಾರದಿಂದ ಕುಜುಲ ಕ್ಯಾಡ್‌ಫಿಸೆಸನು ಬೌದ್ಧ ಧರ್ಮಕ್ಕೂ, ವಿಮಕ್ಯಾಡ್‌ಫಿಸೆಸನು ಶೈವಧರ್ಮಕ್ಕೂ ಸೇರಿದ್ದವರೆಂದು ತಿಳಿಯಬಹುದು.

ಬ್ಯಾಕ್ಟ್ರಿಯ ಪ್ರದೇಶದಲ್ಲಿ ದೊರೆತ ಕೆಲವು ನಾಣ್ಯಗಳ ಮೇಲೆ ನೀಳವಾದ ಮೂಗು, ಬಲಯುತವಾದ ಮೀಸೆ ಮತ್ತು ದವಡೆಗಳು, ಕಪೋಲ ಕೇಶಗಳನ್ನು ಹೊಂದಿದ, ಶಿರಸ್ತ್ರಾಣವನ್ನು ಧರಿಸಿದ ಆಕೃತಿಯನ್ನು ಕಾಣಬಹುದು. ಈ ನಾಣ್ಯಗಳು "ಕೊಷಾಣೊಸ್" ಎಂಬ ಆಲೇಖವನ್ನು ಹೊಂದಿವೆ. ಈ ನಾಣ್ಯಗಳನ್ನು ಸ್ಥಳೀಯ ಕುಷಾಣರ ನಾಯಕನೊಬ್ಬನು ಚಲಾವಣೆಗೆ ತಂದಿರಬಹುದು. ಇದು ಪ್ರಾಯಶಃ ಕುಜುಲನ ತಂದೆ ಅಥವಾ ಪೂರ್ವಿಕರ ನಾಣ್ಯಗಳಿರಬೇಕು. ಇವನು ತನ್ನೆಲ್ಲ ನಾಣ್ಯಗಳನ್ನು ತಾಮ್ರದ ಲೋಹದಲ್ಲಿ ಟಂಕಿಸಿದನು. "ಹರ್ಮೇಯಸ್-ಕುಜುಲ ಕ್ಯಾಡ್‌ಫಿಸೆಸ್ ಮಾದರಿ"ಯು ಅವನು ಮೊದಲಿಗೆ ಚಲಾವಣೆಗೆ ತಂದ ನಾಣ್ಯಗಳ ನಮೂನೆ. ಕುಜುಲನು ಮೊದಲಿಗೆ ರಾಜನಾಗಿರದೆ, ಕೇವಲ ಒಂದು ಗುಂಪಿನ ನಾಯಕನಾಗಿದ್ದನೆಂಬುದು ಈ ಮಾದರಿಯಿಂದ ವ್ಯಕ್ತವಾಗುವ ಸಂಗತಿ. ಗ್ರೀಕ್ ಅರಸ ಹರ್ಮೇಯಸ್‌ನು ತನ್ನ ಆಳ್ವಿಕೆಯ ಅಂತ್ಯಕಾಲದಲ್ಲಿ ಕುಜುಲ ಕ್ಯಾಡ್‌ಫಿಸೆಸನೊಂದಿಗೆ ಸೇರಿಕೊಳ್ಳಬೇಕಾಯಿತು. ಆಡಳಿತದ ಈ ಹೊಸ ಪಾಲುದಾರ ಮುಂದೊಂದು ದಿನ ಪ್ರಬಲನಾಗಿ, ಗ್ರೀಕ್ ಆಳ್ವಿಕೆಯ ಅಂತ್ಯಕ್ಕೆ ಕಾರಣನಾದ. "ಹರ್ಮೇಯಸ್-ಕುಜುಲ ಕ್ಯಾಡ್‌ಫಿಸೆಸ್ ಮಾದರಿ"ಯನ್ನು ಎರಡು ಸರಣಿ (series) ಗಳಾಗಿ ವಿಂಗಡಿಸಬಹುದು. (ಅ) ಮೊದಲನೆಯ ಸರಣಿಯಲ್ಲಿ ಹರ್ಮೇಯಸ್‌ನ ಹೆಸರು ಮತ್ತು ಆಕೃತಿಯನ್ನು ಮುಮ್ಮುಖದಲ್ಲೂ ಕುಜುಲನ ಹೆಸರನ್ನು ಹಿಮ್ಮುಖದಲ್ಲೂ ಕಾಣಬಹುದು. ಅಂತಹ ನಮೂನೆಯ ವಿವರಣೆಯನ್ನಿಲ್ಲಿ ನೀಡಿದೆ. ಈ ನಾಣ್ಯಗಳು ಸಾಕಷ್ಟು ಒರಟುತನ (barbarious)ದಿಂದ ಕೂಡಿದೆ.

ಮುಮ್ಮುಖ : ಬಲಪಾರ್ಶ್ವದಲ್ಲಿ, ಕಿರೀಟ ಧರಿಸಿರುವ ಹರ್ಮೇಯಸ್‌ನ ಎದೆವರೆವಿಗಿರುವ ಚಿತ್ರ.

ಗ್ರೀಕ್ ಆಲೇಖ : "ಬೆಸೆಲಿಯೊಸ್, ಸೊಟರೊಸ್ ಎರ್‌ಮಿಯನೌ"
(ಅನುವಾದ : ರಕ್ಷಕ, ಅರಸ ಹರ್ಮೇಯಸ್).

ಹಿಮ್ಮುಖ : ಎಡದೋಳಿನ ಮೇಲೆ ಸಿಂಹದ ಚರ್ಮವಿದ್ದು, ನೋಡುತ್ತಿರುವ ಹೆರಕ್ಲಿಸ್ ಮತ್ತು ಭೂಮಿಯ ಮೇಲೆ ಗದೆ ನಿಂತಿದೆ. ಖರೋಷ್ಠಿ ಆಲೇಖ : "ಕುಜುಲ ಕಸಸ ಕುಷಾಣ ಯೌಗಸ ಧರ್ಮಥದಸ".

(ಆ) ಎರಡನೆಯ ಸರಣಿಯ ನಾಣ್ಯಗಳಮೇಲೆ ಹರ್ಮೇಯಸ್‌ನ ಆಕೃತಿಯನ್ನು ಕಾಣಬಹುದಾದರೂ, ಕ್ಯಾಡ್‌ಫಿಸಿಸ್‌ನ ಹೆಸರನ್ನು ಗ್ರೀಕ್ ಭಾಷೆಯಲ್ಲಿ ಬರೆಯಲಾಗಿದೆ. ಹಿಮ್ಮುಖದಲ್ಲಿ ಅವನ ಹೆಸರನ್ನು ಎಂದಿನಂತೆ ಖರೋಷ್ಠಿ ಭಾಷೆಯಲ್ಲಿ ಬರೆದಿದೆ. ಈ ನಮೂನೆಯ ವರ್ಣನೆಯನ್ನು ಇಲ್ಲಿ ಕೊಡಲಾಗಿದೆ :

ಮುಮ್ಮುಖ : ಕಿರೀಟ ಧಾರಿಯಾದ ಹರ್ಮೇಯಸ್ ; ಬಲ ಪಾರ್ಶ್ವದಲ್ಲಿ ಗ್ರೀಕ್
ಆಲೇಖ : "ಕೊಜಲೌ ಕ್ಯಾಡ್ ಫಿಜೌ ಕುಷಾಣೌ"
(ಅನು : "ಕುಷಾಣನಾದ ಕುಜುಲ ಕ್ಯಾಡ್‌ಫಿಸೆಸ್")

ಹಿಮ್ಮುಖ : ಮೊದಲಿನ ಸರಣಿಯಲ್ಲಿ ವಿವರಿಸಿದಂತೆಯೇ ಇದೆ.

ಮೊದಲನೆಯ ಸರಣಿಯ ನಾಣ್ಯಗಳಲ್ಲಿ ಗ್ರೀಕ್ ಅರಸನಾದ ಹರ್ಮೇಯಸ್‌ನ ಪ್ರಭಾವ ಸಾಕಷ್ಟಿದೆ. ಎರಡನೆಯದರಲ್ಲಿ ಅವನ ಪ್ರಭಾವ ಮಸುಕಾಗಿದೆ. ಅಂದರೆ-ಕುಜಲ ಪ್ರಬಲವಾದುದನ್ನು ಇದು ಸೂಚಿಸುತ್ತದೆ.

ಕುಜುಲನ "ಎದೆವರೆಗಿನ ರಾಜನ ಚಿತ್ರ ಮತ್ತು ನಿಕೆ ಮಾದರಿ"ಯ ನಾಣ್ಯಗಳ ಮೇಲೆ "ಯೌಗ"—ಎಂಬ ಬಿರುದನ್ನು, ಅದರೆಡೆಯಲ್ಲಿ "ಮಹಾರಾಜ", "ರಾಜಾಧಿರಾಜ"—ಮುಂತಾದ ಪ್ರಭುತ್ವದ ಪರಮಾಧಿಕಾರದ ಬಿರುದು ಬಾವಲಿಗಳನ್ನು ಕಾಣಬಹುದು. "ಯೌಗ" (ನಾಯಕ)ನಾಗಿ ಬದುಕನ್ನಾರಂಭಿಸಿದ ಕುಜಲ, ರಾಜಪದವಿಯನ್ನು ಸ್ವಸಾಮರ್ಥ್ಯದಿಂದ ಗಳಿಸಿರಬೇಕು. ಗ್ರೀಕ್ ದೇವತೆಯಾದ ನಿಕೆಯನ್ನು ಚಿತ್ರಿಸಿದೆ.

"ಕಿರೀಟಧಾರಿಯಾಗಿ ಸಿಂಹಾಸನವನ್ನೇರಿದ ಅರಸನ ಮಾದರಿ"ಯ ನಾಣ್ಯಗಳು ರೋಮನ್ ಸಾಮ್ರಾಜ್ಯದ ನಾಣ್ಯಗಳ ಅನುಕರಣೆಯನ್ನು ಸೂಚಿಸುತ್ತವೆ. ಈ ಮಾದರಿಯ ವಿವರಣೆಯನ್ನು ನೀಡಿದೆ.

ಮುಮ್ಮುಖ : ರೋಮನ್ ಶೈಲಿಯಲ್ಲಿ ಬಲಭಾಗಕ್ಕೆ ತಿರುಗಿರುವ, ಕಿರೀಟ ಧರಿಸಿದ ಶಿರ. ಗ್ರೀಕ್ ಆಲೇಖ :
"ಕೊಷಣಸು ರ್ಥೊವ್ ಕೊಜೂಲ ಕಡ್ ಫಿಸೆಸ."
[ಅನು : ಕುಷಾಣನಾದ ಕುಜುಲ ಕ್ಯಾಡ್ ಫಿಸೆಸನ (ನಾಣ್ಯಗಳು)]

ಹಿಮ್ಮುಖ : ಅರಸ ಬಲಭಾಗಕ್ಕೆ ವೃತ್ತಾಕಾರದ ಚಕ್ರದ ಮೇಲೆ ಕುಳಿತಿದ್ದಾನೆ. ಅವನ ಬಲಗೈ ಮುಂಚಾಚಿದೆ. ಪ್ರಾಕೃತ ಆಲೇಖ :
"ಕುಷಾಣಸ ಯುೌಗಸ ಕಜಲ ಕಪ್ಸಸ ಸಚ್ ಧರ್ಮಥಿದಸ".
(ಅನು : ಕುಷಾಣರ ನಾಯಕನಾದ ಸತ್ಯಧರ್ಮ ಪರಾಯಣನಾದ ಕುಜುಲ ಕ್ಯಾಡ್‌ಫಿಸೆಸ್).

ಇಲ್ಲಿ ಬರುವ "ಸತ್ಯಧರ್ಮ"—ಬೌದ್ಧಧರ್ಮದ ಬಗ್ಗೆ ಅವನಿಗಿರುವ ಒಲವನ್ನು ಸೂಚಿಸುತ್ತದೆ ಎಂದು ಕೆಲ ವಿದ್ವಾಂಸರ ತರ್ಕ(?). ಕುಜುಲ ನಾಣ್ಯಗಳು ರೋಮನ್ ಚಕ್ರವರ್ತಿ ಅಗಸ್ಟಸನ ನಾಣ್ಯಗಳ ತದ್ರೂಪವಾಗಿದ್ದು, ಅವನ ಚಿತ್ರವು ಅಗಸ್ಟಸ್

ನನ್ನೇ ಹೋಲುತ್ತದೆ. ಇದು ಗಮನಾರ್ಹವಾದ ಅಂಶಗಳಲ್ಲೊಂದು. ಕುಜುಲ ಅಗಸ್ಟಸ್‌ನ ಸಮಕಾಲೀನ ಅಥವಾ ಸಮೀಪದ ಸಮಕಾಲೀನನಾಗಿರಬೇಕು.

ಕುಜುಲನ "ನಂದಿ ಮತ್ತು ಬ್ಯಾಕ್ಟ್ರಿಯ ಒಂಟೆಯ ಮಾದರಿ"ಯು ಬ್ಯಾಕ್ಟ್ರಿಯಾ ದೊಂದಿಗೆ ಅವನ ಸಂಬಂಧವನ್ನು ಮತ್ತು ಕುಷಾಣರ ಅಲೆಮಾರಿ ಪ್ರವೃತ್ತಿಯನ್ನು ಸೂಚಿಸುತ್ತದೆ.

ಮುಮ್ಮುಖ : ಬಲ ಭಾಗಕ್ಕೆ ನಿಂತಿರುವ ನಂದಿ, ಮೇಲೆ ನಂದಿಪಾದ ಚಿಹ್ನೆ. ಓದ ಲಾಗದಿರುವ ಕೀಳ್ಮಾಡಿದ (debased) ಗ್ರೀಕ್ ಆಲೇಖ.

ಹಿಮ್ಮುಖ : ಬಲಭಾಗದಲ್ಲಿ ಎರಡು ಒಂಟೆಗಳು ನಿಂತಿವೆ. ಪ್ರಾಕೃತ ಆಲೇಖ: "ಮಹಾರಾಜಸ ರಾಯ ರಾಯಸ ದೇವ ಪುತ್ರಸ ಕುಜುಲ ಕಫ್ಸಸ" (ಅನು : "ಮಹಾರಾಜ, ರಾಜರಾಜ, ದೇವ ಪುತ್ರನಾದ ಕುಜುಲ ಕ್ಯಾಡ್‌ಫಿಸೆಸ್"

ನಂದಿ ಪಾದ ಚಿಹ್ನೆಯು ಅವನು ಶೈವ ಧರ್ಮದತ್ತ ವಾಲುತ್ತಿರುವುದನ್ನು ಸೂಚಿಸುತ್ತದೆ. "ದೇವ ಪುತ್ರ"–ಎಂಬ ಬಿರುದನ್ನು ಚೀನಿ ಚಕ್ರವರ್ತಿಗಳು ಉಪಯೋಗಿಸುತ್ತಿದ್ದುದರಿಂದ, ಚೀನಕ್ಕೂ ಕುಜುಲನಿಗೂ ಸರಿಬಂಧವನ್ನು ಕಲ್ಪಿಸುತ್ತಾರೆ, ಕೆಲ ವಿದ್ವಾಂಸರು. ಇನ್ನೂ ಅನೇಕರ ಪ್ರಕಾರ, ಅರಸರನೇಕರು ತಮ್ಮಲ್ಲಿ ದೈವತ್ವವನ್ನು ಆರೋಪಿಸಲು ಅಂತಹ ಬಿರುದುಗಳನ್ನು ಧರಿಸುತ್ತಿದ್ದುದುಂಟು. ಕುಜುಲ ಕ್ಯಾಡ್ ಫಿಸೆಸನ ನಾಣ್ಯಗಳನ್ನು ವಿಶ್ಲೇಷಿಸಿದಂತೆ ಅವನು ಕ್ರಮಬದ್ಧವಾಗಿ ಪರಮಾಧಿಕಾರವನ್ನು ಪಡೆದಂತೆ ಕಾಣುತ್ತದೆ. ಕಿರಿಯ ನಾಯಕನಾಗಿ ಜೀವನವನ್ನಾರಂಭಿಸಿದ ಅವನು ರಾಜನಾದುದು ಸ್ವಸಾಮರ್ಥ್ಯದಿಂದ ಮತ್ತು ನಿರಂತರ ಹೋರಾಟದಿಂದ. ಗ್ರೀಕ್ ಭಾಷೆ ವಿಕೃತ ರೂಪ ಪಡೆಯಲಾರಂಭಿಸಿದ್ದು, ಈ ಕಾಲದಿಂದಲೇ.

ಭಾರತೀಯ ನಾಣ್ಯಶಾಸ್ತ್ರದ ಇತಿಹಾಸದಲ್ಲಿ ವಿಮಕ್ಯಾಡ್‌ಫಿಸೆಸ್‌ನ ಆಳ್ವಿಕೆ ಅತ್ಯಂತ ಗಣನೀಯವಾದುದು. ಚಿನ್ನದ ನಾಣ್ಯಗಳನ್ನು, ಅದರೊಂದಿಗೆ ರೋಮನ್ ನಾಣ್ಯಗಳ ತೂಕ ಪದ್ಧತಿಯನ್ನೂ ಇವನು ಬಳಕೆಗೆ ತಂದನು. ದ್ವೈಭಾಷಿಕ ಮತ್ತು ದ್ವೈಲಿಪಿಕ ನಾಣ್ಯಗಳನ್ನು ಟಂಕಿಸಿದವರಲ್ಲಿ ಇವನು ಕೊನೆಯವನು. ಇವನ ನಂತರ ಕುಷಾಣರ ವಂಶದಲ್ಲಿ ಈ ಪದ್ಧತಿ ನಿಂತುಹೋಯಿತು. ವಿಮಕ್ಯಾಡ್‌ಫಿಸೆಸನು ಅತ್ಯಧಿಕ ಪ್ರಮಾಣದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಜಾರಿಗೆ ತಂದನು. ಇವನ ಚಿನ್ನದ ನಾಣ್ಯಪದ್ಧತಿಯನ್ನು ಅನಂತರದ ಕುಷಾಣ ಅರಸರು ಗುಪ್ತ ಸಾಮ್ರಾಟರು ಅನುಸರಿಸಿದರು. ಅಂತರ ರಾಷ್ಟ್ರೀಯ ವಾಣಿಜ್ಯದ ಅವಶ್ಯಕತೆ ಯಿಂದಾಗಿ ಇವನು ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದಿರಬೇಕು. ರೋಮ್, ಭಾರತ ಮತ್ತು ಚೀನಾಗಳ ನಡುವೆ ಅಂತರರಾಷ್ಟ್ರೀಯ ವ್ಯಾಪಾರ ಅತ್ಯುನ್ನತ

ವಾಗಿ ನಡೆಯುತ್ತಿತ್ತೆಂದು ಪ್ರಾಚೀನ ಬರಹಗಾರ ಪ್ಲಿನಿ ಇದರ ಬಗ್ಗೆ ಒಂದಷ್ಟು ಮಾಹಿತಿಯನ್ನು ನೀಡುತ್ತಾನೆ. ವ್ಯಾಪಾರದ ಸಲುವಾಗಿ ರೋಮಿನ ಚಿನ್ನ ಭಾರತಕ್ಕೆ ಹರಿದು ಬಂದದ್ದುಂಟು. ವಿಮ, ಮತ್ತು ಅವನಂತರದ ಅರಸರು ಈ ನಾಣ್ಯಗಳನ್ನು ಕರಗಿಸಿ, ತಿರುಗಿ ನಾಣ್ಯಗಳನ್ನಾಗಿ ಮಾಡಿದ್ದುಂಟು. ಸಾಮಾನ್ಯವಾಗಿ ಅವನ ಎಲ್ಲ ನಾಣ್ಯಗಳ ಮೇಲೆ ಶಿವ ಮತ್ತು ಶಿವನ ಚಿಹ್ನೆಗಳನ್ನು ಚಿತ್ರಿಸಿರುವುದರಿಂದ, ಈತ ಶಿವಭಕ್ತನೆಂದು ಅರಿಯಬಹುದು. ಅವನ ನಾಣ್ಯಗಳಲ್ಲಿ ಅವನ ಮೇಲೆ ದೈವತ್ವ ವನ್ನು ಕಲ್ಪಿಸಿದಂತೆ ಚಿತ್ರಿಸಲಾಗಿದೆ.

ಎರಡನೆಯ ಕ್ಯಾಡ್‌ಫಿಸನ ನಾಣ್ಯಗಳನ್ನು ಅನೇಕ ಬಗೆಗಳಲ್ಲಿ ಟಂಕಿಸಲಾಗಿದೆ. ಅವುಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ಅನೇಕ ಮಾದರಿಗಳನ್ನಾಗಿ ವಿಂಗಡಿಸಿದೆ.

1. "ಸಿಂಹಾಸನಾರೂಢನಾದ ದೊರೆ ಮತ್ತು ಶಿವ" ಮಾದರಿ :

ಮುಮ್ಮುಖ :—ಶಿರಸ್ತ್ರಾಣವನ್ನು ಧರಿಸಿ ಮತ್ತು ಉದ್ದನಾದ ಅಂಗಿ ತೊಟ್ಟ ದೊರೆ ನಮ್ಮನ್ನು ನೋಡುತ್ತಿದ್ದಾನೆ. ಅವನ ಪಾದಗಳು ಮಣೆಯ ಮೇಲಿವೆ. ಭುಜದ ಮೇಲೆ ಜ್ವಾಲೆಗಳೇಳುತ್ತಿವೆ. ಬಲಗೈಯಲ್ಲಿ ವಜ್ರಾಯುಧವಿದೆ. ಆಲೇಖ : ಬೆಸಲಿಯೊಸ್ ಓಮೊ ಕ್ಯಾಡ್‌ಫಿಸೆಸ್

(ಅನು : ಅರಸ ವಿಮ ಕ್ಯಾಡ್‌ಫಿಸೆಸ್)

ಹಿಮ್ಮುಖ :—ಕಂಠೀಹಾರವನ್ನು ಧರಿಸಿ, ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದು ಮುಂದೆ ನೋಡುತ್ತಾ ಶಿವ ಕುಳಿತ್ತಿದ್ದಾನೆ. ಬಲ ಪಾರ್ಶ್ವದಲ್ಲಿ ನಂದಿ ನಿಂತಿದೆ. ಖರೋಷ್ಠಿ ಆಲೇಖ : "ಮಹಾ ರಾಜಸ ರಾಜಾಧಿರಾಜಸ ಸರ್ವಲೋಗ ಈಶ್ವರಸ ಮಹೇಶ್ವರಸ ಹಿಮಕಟಫಿಸಸ ತ್ರದಸ"

(ಅನು : ಮಹಾರಾಜನೂ, ರಾಜಾಧಿರಾಜನೂ, ಸರ್ವ ಲೋಕಕ್ಕೆ ಒಡೆಯನೂ ಆದ ಮಹೇಶ್ವರ ವಿಮಕ್ಯಾಡ್ ಫಿಸೆಸ್‌ನು ರಕ್ಷಕ)

2. "ಸಿಂಹಾಸನ ರೂಢನಾಗಿ ಹೂವನ್ನು ಹಿಡಿದಿರುವ ಅರಸ ಮತ್ತು ಶಿವ" ಮಾದರಿ :

ಮುಮ್ಮುಖ :—ಶಿರಸ್ತ್ರಾಣ ಧರಿಸಿ, ಉದ್ದನೆಯ ಅಂಗಿ ತೊಟ್ಟು, ಎಡಕ್ಕೆ ನೋಡುತ್ತಾ ಕುಳಿತಿರುವ ಅರಸ. ಅವನ ಹೆಗಲುಗಳ

ಮೇಲೆ ಜ್ವಾಲೆಗಳು ಏಳುತ್ತಿವೆ. ಬಲಗೈಲಿ ವಜ್ರಾಯುಧವನ್ನು ಹಿಡಿದಿದ್ದಾನೆ. ಸಣ್ಣ ಮಣೆಯ (stool) ಮೇಲೆ ಅವನ ಪಾದಗಳಿವೆ. ಅವನ ಎಡಕ್ಕೆ ಗದೆಯಿದೆ.

ಗ್ರೀಕ್ ಆಲೇಖ: "ಬೆಸಲಿಯೊಸ್ ಒಹಿಮೊ ಕ್ಯಾಡ್‌ಫಿಸೆಸ್''.

ಹಿಮ್ಮುಖ :—ಕಂಠಹಾರ ಧರಿಸಿ, ಬಲಗೈಲಿ ಉದ್ದನೆಯ ತ್ರಿಶೂಲವನ್ನು ಹಿಡಿದಿರುವ ಶಿವ ನಿಂತಿದ್ದಾನೆ. ಅವನ ಹಿಂಭಾಗದಲ್ಲಿ ಬಲಕ್ಕೆ ನಂದಿ ನಿಂತಿದೆ. ಎಡಭಾಗದಲ್ಲಿ ನಂದಿ ಪಾದ ಚಿಹ್ನೆ ಇದೆ.

ಖರೋಷ್ಠಿ ಆಲೇಖ : 'ಮಹಾರಾಜಸ ರಾಜಾತಿರಾಜಸ ಸರ್ವಲೋಗ ಈಶ್ವರಸ ಮಹೇಶ್ವರಸ ಹೆಮ ಕಟ್ ಫಿಸಸ ತ್ರದಸ".

ಈ ನಾಣ್ಯಗಳು ಅವನ ಧಾರ್ಮಿಕ ಪ್ರವೃತ್ತಿಯ ಬಗ್ಗೆ ಸ್ಥೂಲವಾದ ಚಿತ್ರಣವನ್ನು ನೀಡುತ್ತವೆ. ವಿಮಕ್ಯಾಡ್‌ಫಿಸೆಸ್‌ನು ಶೈವಧರ್ಮದ ಅನುಯಾಯಿ ಎಂಬುದನ್ನು ಅರಿಯಬಹುದು. ಭುಜಗಳ ಮೇಲೆ, ಶಿರದ ಮೇಲೆ ಹೊಮ್ಮುತ್ತಿರುವ ಜ್ವಾಲೆ, ಮೋಡಗಳ ಮೇಲೆ ವಿಹರಿಸುತ್ತಿರುವ ರೀತಿ ಅವನು ಅಮರತ್ವವನ್ನು ಪಡೆಯುತ್ತಿರುವಂತೆ ಚಿತ್ರಿಸಿದ್ದನ್ನು ಸೂಚಿಸುತ್ತದೆ.

ಕ್ಯಾಡ್‌ಫಿಸೆಸ್ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದ. ಅಂತಹದ್ದೊಂದು ಮಾದರಿಯನ್ನಿಲ್ಲಿ ಕೊಟ್ಟಿದೆ.

ಯಜ್ಞ ವೇದಿಕೆಯ ಹತ್ತಿರವಿರುವ ಅರಸ ಮತ್ತು ಶಿವ ಮಾದರಿ :—

ಮುಮ್ಮುಖ :—ಶಿರಸ್ತ್ರಾಣವನ್ನು ಧರಿಸಿ ಯಜ್ಞ ವೇದಿಕೆಯ ಬಳಿನಿಂತಿರುವ ಅರಸ. ಅವನ ಎಡಭಾಗದಲ್ಲಿ ತ್ರಿಶೂಲ ಮತ್ತು ಕೊಡಲಿ, ಬಲಭಾಗದಲ್ಲಿ ಗದೆಯಿದೆ.

ಗ್ರೀಕ್ ಆಲೇಖ : ಬೆಸಲಿಯೊಸ್, ಬೆಸಲಿಯಾನ್ ಸೊಟರ್ ಮೆಗಾಸ್ ಕ್ಯಾಡ್‌ಫಿಸೆಸ್.

(ಅನು :—ರಾಜಾಧಿರಾಜನು ಆದ ವಿಮ ಕ್ಯಾಡ್ ಫಿಸೆಸನು ಮಹಾರಕ್ಷಕನು.)

ಹಿಮ್ಮುಖ :—ಶಿರಾಲಂಕೃತನಾದ, ಭುಜಗಳ ಮೇಲೆ ಬಟ್ಟೆಯನ್ನು ಹೊದ್ದಿರುವ ಶಿವ. ತ್ರಿಶೂಲ, ನಂದಿಪಾದ ಚಿಹ್ನೆಗಳನ್ನು ಕಾಣಬಹುದು.

56.5 ಗ್ರೈನ್ ತೂಗುವ ಈ ನಾಣ್ಯ ರೋಮನ್ ಬೆಳ್ಳಿಯ ನಾಣ್ಯವನ್ನು ಹೋಲುತ್ತದೆ.

ವಿಮ ಕ್ಯಾಡ್‌ಫಿಸೆಸನು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದ. ಇವು ಅವನ ಬೆಳ್ಳಿಯ ನಾಣ್ಯಗಳನ್ನು ಹೋಲುತ್ತವೆ. ಇವನು ಚಲಾವಣೆಗೆ ತಂದ ಯಜ್ಞ ವೇದಿಕೆ ಬಳಿ ನಿಂತಿರುವ ಅರಸನ ಮಾದರಿಯನ್ನು ಮುಂದಣ ಕುಷಾಣ ಅರಸರು ಅನುಸರಿಸಿದರು. ವಿಮಅರಸನ ನಾಣ್ಯಗಳು ಕುಜುಲನ ನಾಣ್ಯಗಳಿಂದ ಭಿನ್ನವಾಗಿವೆ. ವಿಮಕ್ಯಾಡ್‌ಫಿಸೆಸನ ಚಿತ್ರವನ್ನು ಸುಂದರವಾಗಿ, ಅಚ್ಚುಕಟ್ಟಾಗಿ ನಿರೂಪಿಸಿದ್ದರೆ, ಅವನ ತಂದೆಯ ಚಿತ್ರವು ತೀರ ಒರಟಾಗಿ ಚಿತ್ರಿತವಾಗಿದೆ.

ಕ್ಯಾಡ್‌ಫಿಸೆಸ್ ಅರಸರ ನಾಣ್ಯಗಳು ಭಾರತೀಯ ನಾಣ್ಯಶಾಸ್ತ್ರದ ಇತಿಹಾಸದಲ್ಲೆ ಮಹತ್ತರ ಸಂಗತಿಯಾಗಿವೆ. ಇವರ ಕಾಲದಲ್ಲಿ ಭಾರತ ಜಗತ್ತಿನ ಹೊರ ರಾಷ್ಟ್ರಗಳೊಂದಿಗೆ ಭೂಮಾರ್ಗವಾಗಿ ಹೆಚ್ಚಿನ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದನ್ನು ಮತ್ತು ಅದು ಅತ್ಯಧಿಕವಾಗಿ ಅಭಿವೃದ್ಧಿಗೊಂಡಿದ್ದನ್ನು ಕಾಣಬಹುದು. ಇವರ ನಾಣ್ಯಗಳು ಆ ಕಾಲದ ಕಲೆಯ ಅಧ್ಯಯನದ ಮೇಲೂ ಬೆಳಕನ್ನು ಚೆಲ್ಲದಿರದು. ವಿಮ ಅರಸನ ಕಾಲದಲ್ಲಂತೂ ಚಿನ್ನದ ನಾಣ್ಯಗಳ ಪ್ರಸಾರ ಅತ್ಯಧಿಕವಾಯಿತು. ಇದು ಮುಂದಿನ ರಾಜವಂಶಗಳ ಮೇಲೂ ಸಾಕಷ್ಟು ಪ್ರಭಾವವನ್ನೇ ಬೀರಿತು. ಸಮಕಾಲೀನ ಇತಿಹಾಸ ರಚನೆಯಲ್ಲಿ ಕ್ಯಾಡ್‌ಫಿಸೆಸರ ನಾಣ್ಯಗಳ ನೆರವು ಅವಶ್ಯಕ ಮತ್ತು ಅನಿವಾರ್ಯ.

ಗ್ರಂಥಋಣ

Chattopadhyay, Basker—The Age of the Kushanas (A Numismatic Study) 1967.

Kumar, Baldev—Early Kushanas, 1973.

Gupta. P. L.,—Coins, 1979

Majumdar, R. C.—The Age of Imperial Unity.

ಪರಂಪರೆಯ ಸ್ವರೂಪ ಮತ್ತು ಸೂತ್ರೀಕರಣ

ಎ. ಚಂದ್ರಶೇಖರ್ ನಂಗಲಿ

'ಪರಂಪರೆ' ಎಂಬ ಪದ ಸಂಸ್ಕೃತದಿಂದ ದೇಶ ಭಾಷೆಗಳಿಗೆ ಬಂದಿದ್ದು ತತ್ಸಮ ಪದಕೋಶಕ್ಕೆ ಸೇರುತ್ತದೆ. ವಿಶೇಷವಾಗಿ ಕ್ರಮಿಸಿರುವುದು ಅಥವಾ ವ್ಯಾಪಿಸಿರುವುದು—ಎಂಬುದೇ ಇದರ ಪದಶಃ ಅರ್ಥವೆಂದು ತೋರುತ್ತದೆ.* ಅಂದರೆ, ಶತ ಶತಮಾನಗಳಿಂದ ಹಿಡಿದು ಈ ಕ್ಷಣದವರೆಗೆ ಬದುಕಿನಲ್ಲಿ ವಿಶೇಷವಾಗಿ ವ್ಯಾಪಿಸಿಕೊಂಡು ಬಂದಿರುವ ಮಾನವನ ಸಮಸ್ತ 'ಅಭಿವ್ಯಕ್ತಿ' (expression) ಮತ್ತು 'ನಡವಳಿ' (performance) ಗಳನ್ನು ಪರಂಪರೆ ಎನ್ನಬಹುದು.

ಕಿಟ್ಟೆಲ್ ಸಾಹೇಬರು ತಮ್ಮ ನಿಘಂಟಿನಲ್ಲಿ 'ಪರಪ್ಪರ' ಅಥವಾ 'ಪರಮ್ಪರೆ' ಎಂಬುದಕ್ಕೆ "Uninterrupted regular series," "Proceeding from one to another," "Successive" ... ಇತ್ಯಾದಿ ಅರ್ಥಗಳನ್ನು ಕೊಟ್ಟಿದ್ದಾರೆ. ಈ ಅರ್ಥಗಳ ಪ್ರಕಾರ ಪರಂಪರೆಯನ್ನು ಹೀಗೆ ವಿವರಿಸಬಹುದು:

(i) ಪರಂಪರೆಯು ನಿರಂತರವೂ ಅವಿಚ್ಛಿನ್ನವೂ ಆದ ಸೋಪಾನ ಸರಣಿ.

(ii) ಪರಂಪರೆಯು ಕ್ರಮಾಗತವೂ ವ್ಯಕ್ತಿಂಜರವೂ ಆದ ವಿಚಾರ ಮಾಲೆ.

(iii) ಪರಂಪರೆಯು ಒಂದು ಕ್ರಮ ಪರಿಣಾಮ ಪ್ರಕ್ರಿಯೆ.

ಇಷ್ಟು ಹೇಳಿದ ಮಾತ್ರಕ್ಕೆ ಪರಂಪರೆಯ ಸ್ವರೂಪವನ್ನು ಸಂಪೂರ್ಣವಾಗಿ ವಿವರಿಸಿದ್ದಾಯಿತು ಎನ್ನುವಂತಿಲ್ಲ. ಏಕೆಂದರೆ, ಪರಂಪರೆಯು ಬಹಳ ಸಂಕೀರ್ಣವೂ ಸಮ್ಮಿಶ್ರವೂ ಆದ ರಚನೆಯನ್ನು ಹೊಂದಿದೆ. ಆದ್ದರಿಂದ ಇದನ್ನು ಕೇವಲ ಸ್ಪಷ್ಟನೆಗಾಗಿ ಮೂರು ಭಾಗ ಮಾಡಬಹುದು:

ಭಾಗ 1. ಸೃಜನಶೀಲ ಪರಂಪರೆ (Creative Tradition)

ಇದನ್ನು ಪ್ರಮುಖವಾಗಿ ಟಿ. ಎಸ್. ಎಲಿಯೆಟ್‌ನ ಸಿದ್ಧಾಂತಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಇದರ ಕಕ್ಷೆಗೆ ಭಾಷೆ, ಜನಪದ ಸಾಹಿತ್ಯ, ಕಾವ್ಯ ನಾಟಕ, ಸಂಗೀತ, ಶಿಲ್ಪ, ಲಲಿತಕಲೆ ಇವೇ ಮುಂತಾದ ಸೃಜನಾಭಿವ್ಯಕ್ತಿಗಳು ಸೇರಿಕೊಳ್ಳುತ್ತವೆ.

---

*ಗಮನಿಸಿ : ಪರಂಜ್ಯೋತಿ = ವಿಶೇಷವಾದ ಜ್ಯೋತಿ, ಪರಂಧಾಮ = ವಿಶೇಷವಾದ ನೆಲೆ, ಇಲ್ಲೆಲ್ಲ 'ಪರಂ' ಎಂಬುದು ವಿಶೇಷಣವಾಗಿ ಕಂಡುಬರುತ್ತದೆ.

ನಿರಂತರವೂ ಅವಿಚ್ಛಿನ್ನವೂ ಆದ ಒಂದು ಕ್ರಮಪರಿಣಾಮ ಪ್ರಕ್ರಿಯೆಗೆ ಬದ್ಧವಾಗಿದ್ದು ತಲೆಮಾರಿನಿಂದ ತಲೆಮಾರಿಗೆ ರೂಪುಗೊಳ್ಳುತ್ತಾ ಬರುವ ಮಾನವನ ಅರ್ಥಪೂರ್ಣ ಅಭಿವ್ಯಕ್ತಿಯನ್ನು 'ಸೃಜನಶೀಲ ಪರಂಪರೆ' ಎಂದು ನಿರ್ದೇಶಿಸ ಬಹುದು. ಇಲ್ಲಿ "ತಲೆಮಾರಿನಿಂದ ತಲೆಮಾರಿಗೆ" ಎಂಬ ಪದವನ್ನು ಬಳಸಲಾಗಿದೆ. ಅಂದಮಾತ್ರಕ್ಕೆ ಸೃಜನಶೀಲ ಪರಂಪರೆಯನ್ನು ಆನುವಂಶಿಕವೆಂದು ತಿಳಿಯಬಾರದು. ಇದನ್ನು ವ್ಯಕ್ತಿಯೊಬ್ಬ ಪಾರಂಪರಿಕವಾದ ಆಲೋಚನಾ ಕ್ರಮದ ಬೆಳವಣಿಗೆಯಲ್ಲಿ ಭಾಗವಹಿಸುವುದರ ಮೂಲಕ ಸ್ವಪ್ರಯತ್ನ ಪೂರ್ವಕವಾಗಿ ಸಾಧಿಸಿಕೊಳ್ಳಬೇಕಾದ ವಿಚಾರವಾಗಿದೆ. ಅವ್ಯಾಹತವಾಗಿ ನಡೆಯುವ ಇಂತಹ ಪ್ರಯತ್ನವೇ ಪರಂಪರೆಗೆ ಸರಣಿಯೊಂದನ್ನು ನಿರ್ಮಿಸಿಕೊಡುತ್ತದೆ. ಪ್ರಾಜ್ಞರಾದವರು ಈ ಸುವಿಚಾರ ಸೋಪಾನ ಸರಣಿಯನ್ನು ಗೌರವಿಸುತ್ತಾರೆ. ಉದಾಹರಣೆಗೆ, ಅಭಿನವಗುಪ್ತನು ಹೇಳಿ ಕೊಂಡಿರುವ "ವಿವೇಕ ಸೋಪಾನ ಪರಂಪರಾಣಾಂ" ಎಂಬ ಮಾತನ್ನು ನೆನೆಯ ಬಹುದು. ಈ ಸೃಜನಶೀಲ ಪರಂಪರೆಗೆ ವ್ಯಕ್ತಿ ಸಹಜವಾದ ಪ್ರಯೋಗ ಶೀಲತೆ (Individual Talent) ಎದುರಾಗುತ್ತಲೇ ಇರುತ್ತದೆ. ಇದನ್ನೇ ಟಿ. ಎಸ್. ಎಲಿಯಟ್... "the past should be altered by the present as much as the present is directed by the past" ... ಎಂದಿದ್ದಾನೆ. ಜೊತೆಗೆ ಚಾರಿತ್ರಿಕ ಪ್ರಜ್ಞೆ ಅಥವಾ Historical sense ಎಂಬುದು ಸೃಜನಶೀಲ ಪರಂ ಪರೆಯಲ್ಲಿ ಗಮನಾರ್ಹ ಅಂಶವಾಗಿದೆ. ಒಟ್ಟಾರೆ, ಒಂದು ನೂತನ ನಿರ್ಮಾಣವು ತನಗೆ ಹಿನ್ನೆಲೆಯಾಗಿ ನಿಂತ ಸೃಜನಶೀಲ ಪರಂಪರೆಯನ್ನು ಆಧರಿಸಿರುತ್ತದೆ.

ಭಾಗ 2. ಸಾಮೂಹಿಕ ಪರಂಪರೆ (Collective Tradition)

ಇದನ್ನು ಸಿ.ಜಿ. ಯೂಂಗ್‌ನ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಕವಿಗಳೆಂದರೆ ನರರೋಗಿಗಳು, ಸಾಹಿತ್ಯ ಸಂಸ್ಥೆಯೆಂದರೆ, ನರರೋಗ ಚಿಕಿತ್ಸಾಲಯ ಎಂದು ನಂಬಿಕೊಂಡಿದ್ದ ಫ್ರಾಯ್ಡನ ಸಿದ್ಧಾಂತಗಳನ್ನು ತಳ್ಳಿಹಾಕಿದ ಯೂಂಗ್ ತಾನು ಹೊರಡಿಸಿದ ಬರಹಗಳ ಮೂಲಕ ಪರಂಪರೆಯನ್ನು ಕುರಿತ ಭಿನ್ನ ಸಿದ್ಧಾಂತಕ್ಕೆ ಕಾರಣಕರ್ತನಾಗಿದ್ದಾನೆ.

ಈ ಸಾಮೂಹಿಕ ಪರಂಪರೆಯ ಕಕ್ಷೆಗೆ ನಿರಂತರ ಮಾನವಿಕ ಚರಿತ್ರೆಯಲ್ಲಿ ಯುಗ ಯುಗಗಳಿಂದಲೂ ಪ್ರವಹಣಗೊಳ್ಳುತ್ತಾ ಬಂದಿರುವ ಸಾಮೂಹಿಕ ಸುಪ್ತಚೇತನದ ಒಂದಂಶವಾದ ಪುರಾಣ ಪ್ರತೀಕಗಳು ಅಥವಾ archetypes ಸಹ ಸೇರಿಕೊಳ್ಳುತ್ತವೆ. ಇದಕ್ಕಾಗಿ ವ್ಯಕ್ತಿಯೊಬ್ಬ ಕಲಿತು ಶ್ರಮಪಡುವ ಅಗತ್ಯವಿಲ್ಲ. ಇವು ಆನುವಂಶಿಕ ವಾದ ಚಕ್ರೀಯ ಪ್ರಕ್ರಿಯೆಯಲ್ಲಿ (cyclic process) ಮತ್ತೆ ಮತ್ತೆ – ಪುನರಾ ವರ್ತನೆಗೊಳ್ಳುವ ಮನೋಮಯ ಗತಿಸ್ಮೃತಿಗಳು. "The forms of archaic thought provided by the collective unconscious are 'Arche–

types', which, when they manifest themselves in consciousness, as they do in dreams, fantasies, fairy tales, myths or in the delusions of the psychotic, appear as symbols....."[2] ಎಂಬುದು ಯುಂಗಿಯನ್ನರ ಅಭಿಮತ. "Archetypes" ಎಂಬ ಮಾತನ್ನು ಮೊದಲು ಬಳಸಿದವನೇ ಸಿ. ಜಿ. ಯುಂಗ್. ಇವರು ಪುರಾಣಗಳನ್ನು, ಪುರಾಣ ಪ್ರತೀಕಗಳನ್ನು ವಿಶಿಷ್ಟ ನೆಲೆಯಲ್ಲಿಟ್ಟು ನೋಡುವ ಔತ್ಸುಕ್ಯವನ್ನು ತೋರಿದ್ದಾರೆ: The Jungians, however, regarded myth not as the dream of the inhibited individual person, but as proto plastic pattern of the race which so far as the individual repeats it, bespeaks not illness but his natural participation in fhe collective unconsciousness.[3]

ಹೀಗಾಗಿ, ನಿರಂತರ ಮಾನವಿಕ ಚರಿತ್ರೆಯ ಹಿನ್ನೆಲೆಯೊಂದಿಗೆ, ಸಾಮೂಹಿಕ ಸುಪ್ತ ಚೇತನದ ಫಲವಾಗಿ ನಮ್ಮಲ್ಲಿ ಅನುವಂಶಿಕವಾಗಿ ಮನೆಮಾಡಿಕೊಂಡಿರುವ 'ಪರಂಪರೆ'ಯ ಸ್ವರೂಪವೊಂದನ್ನು ಪುರಾ-ಕಾವ್ಯ ದೃಷ್ಟಿಯ ವಿಮರ್ಶೆಯಲ್ಲಿ ಗುರುತಿಸಬಹುದು. (ಇದನ್ನು Archetypal approach ಅಥವ Mythopoeic approach ಎನ್ನುತ್ತಾರೆ.) ಯುಂಗಿಯನ್ನರ ಪ್ರಕಾರ ಈ ಸಾಮೂಹಿಕ ಪರಂಪರೆಯ ಅಂಶಗಳು ಮಾನವ ಜನಾಂಗದ ಪುರಾಸ್ಥಿತಿಯ ಪ್ರತಿಮಾವಳಿಗಳಾಗಿದ್ದು (Primordial Imagery) ಮಾನವಿಕ ಚರಿತ್ರೆಯ ನಿರಂತರ ಕಾಲ ಪ್ರವಾಹದಲ್ಲಿ ಪುನರಾವರ್ತನೆಗೊಳ್ಳುತ್ತಿರುತ್ತವೆ. ಇವನ್ನು ಕವಿಯೊಬ್ಬ ತನ್ನ ಅಪೂರ್ವ ಪ್ರತಿಭಾ ಶಕ್ತಿಯ ಮೂಲಕ ಕಾವ್ಯದಲ್ಲಿ ಹಿಡಿದಿಟ್ಟು ಸ್ಪಷ್ಟ ರೂಪೊಂದನ್ನು ಕೊಡುತ್ತಾನೆ. ಈ ಕಾರಣಕ್ಕಾಗಿಯೇ ಯುಂಗಿಯನ್ನರು ಕವಿಯನ್ನು "Shaman, a myth maker, speaking out of his unconscious a primordial truth"[4] ಎಂದು ನಂಬುತ್ತಾರೆ.

ಭಾಗ 2. ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆ


(Socio-cultural Tradition)

ಇದನ್ನು ಪ್ರೊ॥ ಎಂ. ಎನ್. ಶ್ರೀನಿವಾಸ್, ಎ. ಕೆ. ರಾಮಾನುಜನ್ ಮೊದಲಾದವರ ಬರಹಗಳಿಂದ ಕಲ್ಪಿಸಲಾಗಿದೆ. ಇದರ ಕಕ್ಷೆಗೆ ಜನತೆಯ ಸಮಸ್ತ ಜೀವನ ವಿಧಾನ, ಭಾಷೆ, ಧರ್ಮ, ಸಂಸ್ಕೃತಿ ಇವೆಲ್ಲವೂ ಅಳವಡುತ್ತವೆ. ನಮ್ಮ ಸಂದರ್ಭದಲ್ಲಿ ಪರಂಪರೆಯನ್ನು ಮೇಲೆ ವಿವರಿಸಿದ ನೆಲೆಗಳಿಂದ ಮಾತ್ರವಲ್ಲದೆ ಸಮಾಜ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗ್ರಹಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸಿರುವ ಎಂ. ಎನ್. ಶ್ರೀನಿವಾಸ್, ಎ. ಕೆ. ರಾಮಾ

ನುಜನ್ ತಮ್ಮ ಬರಹಗಳಲ್ಲಿ ಬಳಸಿರುವ Dominant caste ಮತ್ತು Sanskritization ಹಾಗೂ Great Tradition ಮತ್ತು Little Tradition ಮುಂತಾದ ವೈಜ್ಞಾನಿಕ ಪರಿಕಲ್ಪನೆಗಳು ನಮ್ಮ ಸಮಾಜ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿವೆ. ಇದು ಆನುವಂಶಿಕವಾದರೂ ಕೂಡ ರಾಮಾನುಜನ್ ಹೇಳುವಂತೆ ಒಂದು ಸಂಚಲನೆಗೆ osmosis ಕ್ರಿಯೆಗೆ ಬದ್ಧವಾಗಿರುತ್ತದೆ.[5]

ಒಟ್ಟಿನಲ್ಲಿ ಹೇಳುವುದಾದರೆ, ಪರಂಪರೆಯ ಸ್ವರೂಪವನ್ನು ವಿಶ್ಲೇಷಿಸುವಾಗ ನಾವು ಪ್ರಮುಖವಾಗಿ ಈ ಮೂರು ವಿಭಾಗಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಜೊತೆಗೆ ಈ ಮೂರು ನೆಲೆಗಳು ತನಗೆ ತಾನೆ ಸ್ವಾಯತ್ತವಲ್ಲ; ಏಕೆಂದರೆ, ಸೃಜನಶೀಲ ಪರಂಪರೆಯು ಅರ್ಥಾತ್, ಸಾಹಿತ್ಯಪರಂಪರೆಯು ಸಾಮೂಹಿಕ ಪರಂಪರೆಯ ಅಂಶಗಳನ್ನು (ಕಾವ್ಯಗಳಲ್ಲಿ ಕಂಡುಬರುವ Archetypes ಮುಂತಾದುವು) ಮತ್ತು ಸಾಂಸ್ಕೃತಿಕ ಪರಂಪರೆಯ ಮೂಲದ್ರವ್ಯವನ್ನು (ಕಲಾಕೃತಿಗಳಲ್ಲಿ ಕಂಡುಬರುವ ಬದುಕಿನ ವೈವಿಧ್ಯಮಯ ಅನುಭವಗಳು) ತನ್ನಲ್ಲಿ ಒಳಗೊಂಡು ಸಂಕೀರ್ಣವೂ ಸಮ್ಮಿಶ್ರವೂ ಆದ ಸ್ಥಿತಿಯೊಂದನ್ನು ತಲುಪುತ್ತದೆ. ಆದ್ದರಿಂದಲೇ ನಾವು ಸಾಹಿತ್ಯ ಪರಂಪರೆಯನ್ನು most complicated and celluloid structure ಎಂದು ಭಾವಿಸಬೇಕಾಗುತ್ತದೆ. ಹೀಗಾಗಿ ಈ ಲೇಖನದಲ್ಲಿ ವಿವರಿಸಿರುವ ಮೂರು ಪರಂಪರೆಗಳ ನಡುವಣ ಗೆರೆ ಬಲು ತೆಳುವು ಎಬುದನ್ನು ನೆನಪಿನಲ್ಲಿಡುತ್ತಾ ಪರಂಪರೆಯ ಸ್ವರೂಪವನ್ನು ಒಂದು ಮಾತಿನಲ್ಲಿ ಹೇಳುವುದಕ್ಕೆ "continuous and connected process" ಎಂದು ಸೂತ್ರೀಕರಿಸಬೇಕಾಗುತ್ತದೆ.[6]

ಇದೇಸಂದರ್ಭದಲ್ಲಿ ಕವಿ ಮತ್ತು ಪರಂಪರೆಗೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಹೇಳಬಹುದು. ಮೇಲೆ ವಿವರಿಸಿದ ಮೂರುಬಗೆಯ ಪರಂಪರೆಗಳು ಕವಿಯೊಬ್ಬನ ಸಮಾಹಿತವಾದ ಮನಸ್ಸಿನ ಅಭಿವ್ಯಕ್ತಿಯ ತುಡಿತಕ್ಕೆ ಪ್ರೇರಣೆಯನ್ನೊದಗಿಸುವ ಮೂಲ ನೆಲೆಗಳಾಗಿವೆ. ಅಂದರೆ, ಕವಿಯೊಬ್ಬನ ಸೃಜನಶೀಲತೆಯು ಸಾಹಿತ್ಯ ಪರಂಪರೆ, ಸಾಮೂಹಿಕ ಪರಂಪರೆ, ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆ ಈ ಮೂರರ ನಡುವೆ ನಿಂತಿರುತ್ತದೆ. ಈ ಅಂಶವನ್ನು ಕೆಳಗಿನ ರೇಖಾಕೃತಿಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.



ಸೃಜನಶೀಲತೆಗೆ ಸಂಬಂಧಿಸಿದಂತೆ ಕಂಡುಬರುವ ಇಂತಹ 'ತ್ರಿಮುಖ ಸಂಬಂಧ' (Threefold Structure) ವನ್ನು ಸಾಹಿತ್ಯದ ಸಿದ್ಧಾಂತಕಾರರು, ವಿಮರ್ಶಕರು ಗಮನಿಸಬೇಕಾದ ಅಂಶವಾಗಿದೆ.

ಗ್ರಂಥ ಸೂಚಿ :

1. Selected prose - T. S. Eliot, P. 23. 1963
2. Contemporary Schools of Psychology - Robert S. Wood worth, Mary, R. Sheehan, P. 308, 1931
3. Five approaches of literary criticism - Willbur Scott
4. Quoted in 'Five approaches of literary criticism' -Wilber Scott
5. 'Speaking of Shiva' - A. K. Ramanujan, P. 36, 1973
6. 'Keywords' - Raymond Williams, P. 119, 1976

ಸಾವು ಹೇಳಿದ್ದು

ಎಚ್. ಎಚ್. ಗಂಗಾಧರಾಚಾರ್

ಓ ನನ್ನ ಸೆರೆಯಾಳುಗಳೇ, ನಿಮಗಿಲ್ಲ ಬಿಡುಗಡೆ,
ಗಲ್ಲುಕಂಬದ ಹಾದಿ ಹಿಡಿದು ನಡೆಯುತ್ತಿರುವ ಓ ನತದೃಷ್ಟರೇ
ಸ್ವಲ್ಪ 'ಬೇಡಿ' ಸಡಲಿಸುತ್ತೇನೆ; ವಿಶ್ರಮಿಸಿಕೊಳ್ಳಿ.
ನಾಳೆ ಬೆಳಗ ನೀವು ಕಾಣುತ್ತೀರೋ...ಇಲ್ಲವೋ ?
ಆದಾಗ್ಯೂ ನೀವು ಲಕ್ಷ್ಮಿಯ ಒಲಿಸಿಕೊಳ್ಳುವುದಕ್ಕೆ,
ಸರಸ್ವತಿಯ ಆರಾಧಿಸುವುದಕ್ಕೆ
ಯೌವನ ಜೋಪಾನವಾಗಿರಿಸಿಕೊಳ್ಳುವುದಕ್ಕೆ
ಎಷ್ಟು ಹೆಣಗುತ್ತೀರಿ!

ಓ ನನ್ನ ಸೆರೆಯಾಳುಗಳೇ...
ನಿಮ್ಮ ಆಸೆಬುರುಕತನ ಕಂಡು ನನಗೆ ನಗೆ ಬರುತ್ತದೆ.
ನಿಮ್ಮ ಅಸಹಾಯಕತೆ ಕಂಡು ಮರುಕವಾಗುತ್ತದೆ.
ಜೀವಮಾನವಿಡೀ ಚಟ್ಟತಯಾರಿಸುವ ನಿಮ್ಮ ಚಟುವಟಿಕೆ,
ಗೋರಿ ತೋಡುವ ನಿಮ್ಮ ಶ್ರಮ
ಕಂಡು, ನಗದಿರುವುದು ತಾನೆ ಹೇಗೆ ಹೇಳಿ ?
ಹೊಟ್ಟೆ ಪಾಡಿಗೆ ನೀವು ಪಡುವ ಯಾತನೆ,
ಮಕ್ಕಳ ಅಭಿವೃದ್ಧಿ, ಭವಿಷ್ಯಗಳ ಬಗ್ಗೆ–ನಿಮ್ಮ ಕಾಳಜಿ–
ಕಂಡು, ಕೆಲವೊಮ್ಮೆ ನಾನು ಮಾತು ಮರೆಯುತ್ತೇನೆ.
ಕಷ್ಟವಾದರೂ ಬದುಕಿನ ಬಂಡಿಯು ನೊಗಕ್ಕೆ ಹೆಗಲು ಕೊಡುವ ನೀವು,
ಗುಲಾಮರಾಗುವ ನೀವು, ಪ್ರಲಾಪಿಸುವ ನೀವು
ನಿಜಕ್ಕೂ ವೀರರೇ ಸೈ!

ಬನ್ನಿ, ಬನ್ನಿ, ಗುಳ್ಳೆ ಬದುಕಿನಲ್ಲಿ ಸಂಪೂರ್ಣ ಲೀನರಾಗದೆ
ಇನ್ನಾದರೂ ಕೊಂಚ ವಿಶ್ರಮಿಸಿಕೊಳ್ಳಿ,
ಅಪ್ಪಳಿಸುವ ಅಲೆಗಳ ಮೇಲೆ ನಿಮ್ಮ ಸೆಣಸಾಟ,
ಈಜಿ ದಡ ಸೇರಬೇಕೆಂಬ ನಿಮ್ಮ ಛಲ
ಕಂಡು, ನನಗೂ ಕೆಲವೊಮ್ಮೆ ಅಂಜಿಕೆಯಾಗುತ್ತದೆ.

ಆದರೂ, ಓ ನನ್ನ ಸೆರೆಯಾಳುಗಳೇ
ಕಡೆ ಪರದೆ ಬೀಳುವ ಮೊದಲು
ಏನಾದರೂ ಒಂದು ಆಕಾರ ಕೊಡಿ ನಿರರ್ಥಕ ಬದುಕಿಗೆ ;
ಏನಾದರೂ ಒಂದು ಕೆಲಸಕೊಡಿ ನಿಮ್ಮ ಮೈ ಮನಸ್ಸುಗಳಿಗೆ.

ಹವ್ಯಕರ ಮೂಲ

ಶಾಲಿನಿ ರಘುನಾಥ

ಅಡಿಕೆ ತೋಟಕ್ಕೂ ಹವ್ಯಕರಿಗೂ ಇರುವ ನಂಟು ನಿಜಕ್ಕೂ ಬಿಡಿಸಲಾಗದ್ದು. ಅಡಿಕೆಕೃಷಿ ಇವರಿಗೆ ಒಗ್ಗಿದಷ್ಟು ಈ ನಾಡಿನಲ್ಲಿ ಬಹುಶಃ ಮತ್ತಾರಿಗೂ ಒಗ್ಗಿಲ್ಲ. ಕೃಷಿಯೇ ಮುಖ್ಯ ಉದ್ಯೋಗವಾಗಿರುವ, ಅವಿಭಕ್ತ ಕುಟುಂಬಗಳಲ್ಲಿಯೇ ಇನ್ನೂ ವಿಶೇಷವಾಗಿ ವಾಸವಾಗಿರುವ, ಜಾನಪದ ಅಂಶಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರುವ ಹವ್ಯಕರು ಕರ್ನಾಟಕದಲ್ಲಿ ಇತರ ಬ್ರಾಹ್ಮಣರಿಗಿಂತ ಭಿನ್ನವಾಗಿ ತೋರಿ ಬರುತ್ತಾರೆ. ಇವರು ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ, ಕೇರಳದ ಕಾಸರಗೋಡು ತಾಲ್ಲೂಕಿನಲ್ಲಿ ವಿಶೇಷ ಪ್ರಮಾಣದಲ್ಲಿಯೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿಯೂ ವಸತಿಗೊಂಡಿದ್ದಾರೆ. "ಹೈವೆ ಐನೂರಿ"ನ 'ಹೈಗುಂದ'[1] ಪ್ರದೇಶದಿಂದ ಇತರತ್ರ ಪಸರಿಸಿದ್ದಿರಬಹುದಾದ ಈ ಹವ್ಯಕರ ಮೂಲದ ಬಗ್ಗೆ ಅನೇಕ ವಾದಗಳಿವೆ. ದಕ್ಷಿಣ ಭಾರತದ ಬ್ರಾಹ್ಮಣರೆಲ್ಲ ಉತ್ತರದಿಂದಲೇ ವಲಸೆ ಬಂದವರೆಂಬ ಹೇಳಿಕೆ ಇವರ ವಿಷಯಕ್ಕೆ ಹೇಳಲು ಈಗ ದೊರೆತಿರುವ ಆಧಾರಗಳು ಏನೇನೂ ಸಾಲದು. ಅನೇಕ ಮೂಲಗಳು 'ಅಹಿಚ್ಛತ್ರ'ಕ್ಕೂ 'ಹವ್ಯಕ'ರಿಗೂ ನಂಟು ಹಾಕುತ್ತವೆ. ಆದರೆ 'ಅಹಿಚ್ಛತ್ರ' ಎನ್ನುವ ಹೆಸರು ಇತಿಹಾಸ ಪ್ರಸಿದ್ಧವಾದ ಉತ್ತರದ ರಾಯ್‌ಬರೇಲಿ ಸಮೀಪದ ಅಹಿಚ್ಛತ್ರ[2]ವೊಂದನ್ನಲ್ಲದೇ ದಕ್ಷಿಣ ಭಾರತದ ಇನ್ನೂ ಅನೇಕ ಊರುಗಳನ್ನು ನಿರ್ದೇಶಿಸುತ್ತದೆ. ಗೋದಾವರಿ ತೀರದಲ್ಲೂ, (ತೆಲಂಗಾಣ ಪ್ರದೇಶದಲ್ಲಿಯೂ) ಒಂದು ಅಹಿಚ್ಛತ್ರವಿದೆಯಂತೆ.[3] ಕಾಠೇವಾಡದ ಅನಹಿಲವಾಡವು ಹಿಂದೆ ಅಹಿಚ್ಛತ್ರವೆಂಬ ಹೆಸರನ್ನು ಪಡೆದಿತ್ತೆಂದು ವಿಲ್ಸನ್ ಹೇಳುತ್ತಾರೆ[4]. ದಕ್ಷಿಣ ಕನ್ನಡದ ಸುಬ್ರಹ್ಮಣ್ಯವನ್ನೂ 'ಅಹಿಚ್ಛತ್ರ'ವೆಂದು ಕರೆಯುತ್ತಾರೆ[5]. ತಾಳಗುಂದದ ಸುತ್ತಮುತ್ತಲಿನ ನಾಗರಖಂಡ ಪ್ರದೇಶವೂ ಕೂಡ 'ಅಹಿಚ್ಛತ್ರ'ವೆಂದು ಕರೆಯಲ್ಪಟ್ಟಿದೆಯಂತೆ. ಸಮುದ್ರತೀರದ ಗೋಕರ್ಣದಲ್ಲಿ ಹಾವುಗಳು ವಿಶೇಷವಾಗಿದ್ದುದರಿಂದ ಆ ಪ್ರದೇಶವನ್ನೂ 'ಅಹಿಚ್ಛತ್ರ'ವೆಂದು ಕರೆಯುತ್ತಿದ್ದರಂತೆ. ವಸ್ತುಸ್ಥಿತಿ ಹೀಗಿರುವಾಗ ಹವ್ಯಕರಿಗೆ ಸಂಬಂಧಿಸಿದ 'ಅಹಿಚ್ಛತ್ರ' ಯಾವುದು ಎಂಬುದನ್ನು ಮೊದಲು ನಿರ್ಧರಿಸಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ನಾವು ಅಹಿಚ್ಛತ್ರ ಮೂಲವನ್ನು ಕುರಿತು ಇರುವ ವಾದಗಳೇನು ಎಂಬುದನ್ನು ಕೂಲಂಕಷವಾಗಿ ನೋಡಿದರೊಳಿತು.

ಸ್ಕಾಂಧ ಪುರಾಣದ ಉತ್ತರಸಹ್ಯಾದ್ರಿ ಖಂಡದಲ್ಲಿ[6] ಹವ್ಯಕರನ್ನು ಕುರಿತ ಕಥೆ ಹೀಗಿದೆ:—“ಕದಂಬಮಯೂರವರ್ಮನು ತನ್ನ ದೇಶದಲ್ಲಿ ಹೆಚ್ಚಿನ ಯಜ್ಞಯಾಗಾದಿಗಳನ್ನು ನಡೆಸುವುದಕ್ಕೋಸ್ಕರ ಕಶ್ಯಪನೆಂಬ ಬ್ರಾಹ್ಮಣನ ಸಲಹೆಯಂತೆ ಉತ್ತರದ ಅಹಿಚ್ಛತ್ರದಿಂದ ಮೂವತ್ತೆರಡು ಬ್ರಾಹ್ಮಣ ಕುಟುಂಬಗಳನ್ನು ತನ್ನ ರಾಜ್ಯಕ್ಕೆ ಕರೆತಂದನು. ಮುಂದೆ ಅವನ ಮಗ ತ್ರಿಣೇತ್ರ ಕದಂಬನ (ಕಂಗುವರ್ಮ) ಕಾಲದಲ್ಲಿ ಅವನ ಮಿತ್ರ ಚಂಡಸೇನರಾಜ ಬ್ರಾಹ್ಮಣರ ಕೆಲವು ಕುಟುಂಬಗಳನ್ನು ತನ್ನ ದೇಶಕ್ಕೆ ಕರೆದೊಯ್ದನು. ಆದರೆ ಅವನ ಮಗ ಲೋಕಾದಿತ್ಯನ ಕಾಲದಲ್ಲಿ ‘ಹುಬ್ಬಾಸಿಕ’ನೆಂಬ ಚಾಂಡಾಲ ದ್ರವ್ಯಲೋಭದಿಂದ ಬ್ರಾಹ್ಮಣರನ್ನು ಹಿಂಸಿಸಿ ಕೊಲೆಗೈಯ್ಯತೊಡಗಿದನು. ಇದರಿಂದ ಹೆದರಿದ ಉಳಿದ ಬ್ರಾಹ್ಮಣರು ಸ್ವದೇಶಕ್ಕೆ ತಿರುಗಿ ಓಡಿಹೋದರು. ತದನಂತರದಲ್ಲಿ ಪರಾಶರನೆಂಬ ಬ್ರಾಹ್ಮಣನಿಂದ ಪ್ರೇರಿತನಾದ ಲೋಕಾದಿತ್ಯನು ಮತ್ತೆ ಅಹಿಚ್ಛತ್ರಕ್ಕೆ ಹೋಗಿ, ಅವರಿಗೆ ಧೈರ್ಯ–ಭರವಸೆಗಳನ್ನು ನೀಡಿ ಕೆಲವು ಬ್ರಾಹ್ಮಣರನ್ನು ಕರೆತಂದು ಗೋಕರ್ಣ ಮತ್ತು ಕುಂದಾಪುರಗಳ ಮಧ್ಯದ ಪ್ರದೇಶದಲ್ಲಿ (ಗಂಗಾವಳಿಯಿಂದ ಸೀತಾನದಿಯವರೆಗೆ) ನೆಲೆಗೊಳಿಸಿದನು. ಹುಬ್ಬಾಸಿಕನನ್ನು ಅವನ ಸೈನ್ಯಸಮೇತ ನಾಶಗೊಳಿಸಿದನು. ಈ ಬ್ರಾಹ್ಮಣರು ಗೋಕರ್ಣದ ದಕ್ಷಿಣ ಭಾಗದಲ್ಲಿ ಯಜ್ಞಗಳನ್ನು ಮಾಡಿ ಹವ್ಯ-ಕವ್ಯಾದಿಗಳಿಂದ ಪ್ರಸಿದ್ಧಿಯನ್ನು ಪಡೆದ ಕಾರಣ ಇವರಿಗೆ ‘ಹವ್ಯಕ’ರೆಂಬ ಅನ್ವರ್ಥನಾಮವುಂಟಾಯಿತು. ಇವರಿರುವ ದೇಶವೂ ‘ಹವ್ಯದೇಶ’ವೆಂದು ಪ್ರಸಿದ್ಧಿಯನ್ನು ಪಡೆಯಿತು.”

ಸ್ಕಾಂಧಪುರಾಣದ ಈ ಭಾಗ ರಚಿತವಾದ ಕಾಲ ತಿಳಿಯದು. (16–17ನೇ ಶತಮಾನ?) ಆದರೆ ಹವ್ಯಕರನೇಕರು ನಂಬಿಕೊಂಡಿರುವ ಮೂಲವಿದು. ಈ ಪುರಾಣ ಕಥೆಯಲ್ಲಿ ಸತ್ಯಾಂಶ ಸ್ವಲ್ಪವಾದರೂ ಇದ್ದೀತು. ಆದರೆ ಇಂಥ ಪೌರಾಣಿಕ ವರ್ಣನೆಗಳನ್ನೂ ಐತಿಹ್ಯಗಳನ್ನೂ ಪುರಾತಾತ್ವಿಕ ದೃಷ್ಟಿಯಿಂದ ಮತ್ತು ಮಾನವಶಾಸ್ತ್ರೀಯ ದೃಷ್ಟಿಯಿಂದ ಕೂಲಂಕಷವಾಗಿ ಅಧ್ಯಯನ ಮಾಡದ ಹೊರತು ಇದಮಿತ್ಥಂ ಎಂದು ಹೇಳುವುದು ಕಷ್ಟವಾದೀತು.

ಆದರೆ ಮೇಲಿನ ಪುರಾಣದಲ್ಲಿ ಬರುವ ‘ಅಹಿಚ್ಛತ್ರ’ವನ್ನು ಮತ್ತು ಬ್ರಾಹ್ಮಣರನ್ನು ಉಲ್ಲೇಖಿಸುವ ಕೆಲವು ಶಾಸನಗಳು ನಮಗೆ ದೊರೆಯುತ್ತವೆ. (ಸದ್ಯಕ್ಕೆ ದೊರೆತುದು ಎರಡು ಶಾಸನಗಳು). ಒಂದು ತಾಳಗುಂದದ ಶಾಸನ.[7] ಮತ್ತೊಂದು ನಂಜನಗೂಡು ಶಾಸನ.[8] ತಾಳಗುಂದದ ಶಾಸನದಲ್ಲಿ ‘ಮುಕ್ಕಣ್ಣ ಕದಂಬನು ದಕ್ಷಿಣಾಪಥದಲ್ಲಿ ಬ್ರಾಹ್ಮಣಕುಲದ ಅಜಿಕೆಯನೆಳಸಿ’ ಅಹಿಚ್ಛತ್ರ ಅಗ್ರಹಾರದಿಂದ ಹನ್ನೆರಡು ಸಾವಿರ ಅಗ್ನಿಹೋತ್ರಗಳನ್ನು ಹೊಂದಿದ ಮೂವತ್ತೆರಡು ಪವಿತ್ರ ಬ್ರಾಹ್ಮಣ ಕುಟುಂಬಗಳನ್ನೂ ‘ಅರಾಧಿಸಿ-ಸಾಧಿಸಿ’ ತಂದನೆಂದು ವರ್ಣಿಸಲಾಗಿದೆ. ನಂಜನಗೂಡು ಶಾಸನದಲ್ಲಿ ಯತಿಗಳ ತವರಾದ ಅಹಿಚ್ಛತ್ರದಿಂದ ದಕ್ಷಿಣದೇಶವನ್ನು ‘ಪ್ರಾತಮ್

ಪ್ರಜನ ರಹಿತಮ್ ಪುಣ್ಯಬಹುಲಂ' ಗೊಳಿಸುವ ಸಲುವಾಗಿ ಕೆಲವು ಬ್ರಾಹ್ಮಣರು ಬನವಾಸಿ ವಿಷಯಕ್ಕೆ ಒಂದು ತಾಣಗುಂದೂರಿನಲ್ಲಿ (ಈಗಿನ ತಾಳಗುಂದ) ನೆಲಸಿದರು ಎಂದು ಉಕ್ತವಾಗಿದೆ. ಆದರೆ ಈ ಎರಡು ಶಾಸನಗಳೂ ಅನೇಕ ಶತಮಾನಗಳ ನಂತರ ರಚಿಸಲ್ಪಟ್ಟವು. ಆದುದರಿಂದ 6–7 ಶತಮಾನಗಳ ಹಿಂದಿನ ಸಂಗತಿಗಳನ್ನು ಯಥಾವತ್ತಾಗಿ ಇಟ್ಟಿರಬಹುದಾದ ಸಾಧ್ಯತೆ ಬಹಳ ಕಡಿಮೆ. ಅಲ್ಲದೇ ಆ ಕಾಲಕ್ಕಾಗಲೇ ಶಾಸನಗಳಲ್ಲಿ ಕೆಲಮಟ್ಟಿಗೆ ಕಾಲ್ಪನಿಕ ಅಂಶಗಳು ಸೇರಿಕೊಳ್ಳತೊಡಗಿದ್ದವು. ಅತಿಶಯೋಕ್ತಿ, ಉತ್ಪ್ರೇಕ್ಷೆ ಮುಂತಾದವುಗಳು ಸಾಮಾನ್ಯವೆನಿಸಿದ್ದವು. ಇವೆಲ್ಲಕ್ಕೂ ಹೆಚ್ಚಾಗಿ ತಾಳಗುಂದದ ಶಾಸನದಲ್ಲಿ ಉಕ್ತವಾದ ಮುಕ್ಕಣ್ಣ ಕದಂಬ ಕೇವಲ ಕಾಲ್ಪನಿಕ ವ್ಯಕ್ತಿಯಾಗಿದ್ದಾನೆ. ಅಂತೆಯೇ ಅವನ ಹೆಸರು ಕದಂಬ ಇತಿಹಾಸದಲ್ಲಿ ಬರದು. ಆದರೆ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಕದಂಬರಿಗೂ ಉತ್ತರ ಭಾರತದ ಗುಪ್ತವಾಕಾಟಕರಿಗೂ ರಾಜಕೀಯ ಹಾಗೂ ವೈವಾಹಿಕ ಸಂಬಂಧಗಳಿದ್ದುದು ನಮಗೆ ಶಾಸನೀಯವಾಗಿ ತಿಳಿದುಬರುತ್ತದೆ. ಗುಪ್ತ ಸಾಮ್ರಾಜ್ಯದೊಳಗಿನ ಭಕ್ತಿಕ್ಷೇತ್ರವಾದ ಅಹಿಚ್ಛತ್ರದಿಂದ ಕದಂಬರು ಶ್ರೇಷ್ಠ ಬ್ರಾಹ್ಮಣರನ್ನು ಕರೆತಂದಿರಲೂಬಹುದು, ಆದರೆ ಅವರೇ ಹವ್ಯಕರು ಎನ್ನುವುದಕ್ಕೆ ಮೇಲಿನ ಶಾಸನಗಳಲ್ಲಿ ಎಲ್ಲಿಯೂ ಆಧಾರವಿಲ್ಲ.

ಶಂ. ಬಾ. ಜೋಶಿಯವರು ಉತ್ತರ ಕನ್ನಡ ಜಿಲ್ಲೆಯ ಮಹತ್ವದ ಜನಾಂಗವಾದ 'ಹವಿಕರು' ಅಹಿಚ್ಛತ್ರದಿಂದ ಬಂದವರು ಎಂಬ ಐತಿಹ್ಯವನ್ನು ಈ ರೀತಿ ಅರ್ಥೈಸುತ್ತಾರೆ.[9] ಉತ್ತರದಲ್ಲಿ ಛತ್ರಪುರ ಸಂಸ್ಥಾನವುಂಟು, ಅಹಿರರ ಪ್ರಾಬಲ್ಯವಾದಾಗ ಆ ಸೀಮೆಯು 'ಅಹಿ-ಛತ್ರ' ಎನ್ನಿಸುವ ಸಂಭವವಿದೆ. ಈ ಸೀಮೆಯಿಂದಲೇ 'ಹವಿಕರು' ರಾಜಾಶ್ರಯಕ್ಕಾಗಿ ಬನವಾಸಿ ದೇಶದಲ್ಲಿ ಬಂದಿರಬೇಕು'—ಇದೂ ಕೇವಲ ಊಹೆಯಾಗಿಯೇ ಉಳಿಯುತ್ತದೆ.

ಫ್ರಾನ್ಸಿಸ್ ಬುಕನನ್‌ರವರು[10] ಹೈಗನಾಡಿನಲ್ಲಿ ವಿಶೇಷವಾಗಿ ಕಂಡುಬರುವ ರೈತವರ್ಗದವರು 'ಹವ್ಯಕ ಬ್ರಾಹ್ಮಣ'ರಾಗಿದ್ದು ಆ ನಾಡಿನಿಂದಾಗಿ ಅವರಿಗೆ ಆ ಹೆಸರು ಬಂದಿದೆ. ಅವರು ಸ್ಮಾರ್ತರು ; ಪಂಚದ್ರಾವಿಡಮೂಲದವರು ಎಂದು ಹೇಳಿರುವರಲ್ಲದೆ ಧಾರೇಶ್ವರ ದೇವಸ್ಥಾನದಲ್ಲಿ (ಉತ್ತರ ಕನ್ನಡ) ದೊರೆತ 'ಬಹುದುಂಡ'ವನ್ನು ಉಲ್ಲೇಖಿಸುತ್ತಾರೆ. ಸಭಾಹಿತನೊಬ್ಬನಿಂದ ರಚಿತವಾದ ಆ ಗ್ರಂಥ ಬಹುಶಃ ಪ್ರಥಮಬಾರಿಗೆ ಹವ್ಯಕರ 'ತೆಲಂಗಾಣ ಅಹಿಚ್ಛತ್ರ' ಮೂಲವನ್ನು ಪ್ರಸ್ತಾಪಿಸುತ್ತದೆ. ಅಲ್ಲಿ, "ಪರಶುರಾಮ ಹೈಗನಾಡನ್ನು ಸೃಷ್ಟಿಸಿದಾಗ, 'ನಗರ' ಮತ್ತು 'ಮುಬ್ಬೆ' ಜನಾಂಗದವರಿಗೆ ಆ ನಾಡನ್ನು ಆಳಲು ಕೊಟ್ಟನು. ಅವರು ಶುದ್ಧ ಬ್ರಾಹ್ಮಣರಲ್ಲ. ಕಲಿಯುಗದವರೆಗೂ ಅವರೇ ಆ ನಾಡನ್ನು ಆಳಿಕೊಂಡು ಬಂದರು. ನಂತರ ಅದು ಮೊಗೇರರ ಮತ್ತು ಹೊಲೆಯರ ಕೈವಶವಾಯಿತು. ಅಲ್ಲಿಯ ರಾಜ

ಮೀನುಗಾರರಾದ ಮೊಗೇರರ ಜಾತಿಗೆ ಸೇರಿದವನು. ಒಮ್ಮೆ ಈ ಪ್ರದೇಶಕ್ಕೆ ಬಂದಿದ್ದ ಒಬ್ಬ ಸನ್ಯಾಸಿಯು ಬನವಾಸಿ ಮತ್ತು ಗುತ್ತಿಯ ಅರಸನೂ ಬೇಡರ ಜಾತಿಯವನೂ ಆದ ಮಯೂರವರ್ಮನನ್ನು ಈ ಪ್ರದೇಶದ ಮೇಲೆ ದಾಳಿಮಾಡಲು ಪ್ರೇರೇಪಿಸಿದನು. ಮಯೂರವರ್ಮ ಹೈಗನಾಡನ್ನು ಗೆದ್ದುಕೊಂಡು ತೆಲಂಗಾಣದ ಅಹಿಚ್ಛತ್ರದಿಂದ ಐದು ಸಾವಿರ ಪರಿಶುದ್ಧ ಬ್ರಾಹ್ಮಣರನ್ನು ಕರೆದು ತಂದು ಆ ಪ್ರದೇಶದಲ್ಲಿರಿಸಿದನು. ಇದರಲ್ಲಿ ಒಂದು ಸಾವಿರ ಬ್ರಾಹ್ಮಣರು ತಮ್ಮ ಆಚಾರ ಲೋಪದಿಂದಾಗಿ ಜಾತಿಹೀನರಾದರು. ಉಳಿದ ನಾಲ್ಕು ಸಾವಿರ ಬ್ರಾಹ್ಮಣರು ಇಡೀ ಹೈಗನಾಡನ್ನು ವ್ಯಾಪಿಸಿಕೊಂಡರು. ಕಾಲಾಂತರದಲ್ಲಿ ಮಯೂರವರ್ಮನನ್ನು ಉತ್ತುಂಗನ ಮಗನಾದ ನಂದ ಸೋಲಿಸಿ ಹೈಗನಾಡನ್ನು ಪುನಃ ಪಡೆದುಕೊಂಡನು. ಅಲ್ಲದೆ ಬ್ರಾಹ್ಮಣರೆಲ್ಲರನ್ನೂ ಅಹಿಚ್ಛತ್ರಕ್ಕೆ ಓಡಿಸಿದನು. ಇವನ ನಂತರ ಬಂದ ಚಂಡಸೇನ, ತಾಯಿಯ ಕೋರಿಕೆಯ ಮೇರೆಗೆ ವರ್ಣಾಶ್ರಮ ಧರ್ಮಕ್ಕೆ ಗೌರವ ನೀಡಿ, ಆ ಬ್ರಾಹ್ಮಣರನ್ನು ಪುನಃ ಕರೆತಂದ. ಅಲ್ಲದೆ ಹವ್ಯಕ ನಾಡಿನ ಉಸ್ತುವಾರಿಯನ್ನು 'ಸಭಾಹಿತ'ನೆಂಬ ಹವ್ಯಕ ಮುಖ್ಯಸ್ಥನಿಗೇ ನೀಡಿದ. ಚಂಡಸೇನನ ಮರಣಾನಂತರ 'ಸಭಾಹಿತ'ನು ಆನೇಗುಂದಿಯ ಸಾಳ್ವಕೃಷ್ಣದೇವರಾಯ ಒಡೆಯರಲ್ಲಿ ವಿನಂತಿಸಿಕೊಂಡು ಹೈಗನಾಡನ್ನು ಆಳುವಂತೆ ಆಮಂತ್ರಿಸಿದನು. ಅನಂತರ ಈ ನಾಡು ಗೇರುಸೊಪ್ಪೆಯ ಹುಚ್ಚಪ್ಪ ವಡೆಯರ ಆಳ್ವಿಕೆಗೆ ಸೇರಿತು". ಈ "ಬಹುದಂಡ" ಗ್ರಂಥವನ್ನು ಬರೆದುದು ಯಾವಾಗ ? ಇದರಲ್ಲಿ ಐತಿಹಾಸಿಕ ಅಂಶ ಎಷ್ಟು ? ಕಾಲ್ಪನಿಕ ಭಾಗ ಎಷ್ಟು ? ಎಂಬುದು ಸದ್ಯಕ್ಕೆ ತಿಳಿಯದು. ಆದರೆ ಕರ್ನಾಟಕ ಆಂಧ್ರಸಂಬಂಧ ಬಹು ಪುರಾತನವಾದುದು, ಮುಖ್ಯವಾಗಿ ವಿಜಯನಗರ ಕಾಲದಲ್ಲಿ ರಾಜಕೀಯ-ಸಾಂಸ್ಕೃತಿಕ ಸಂಬಂಧವು ವ್ಯಾಪಕವಾಗಿತ್ತು. ಆಗ ಹೈಗನಾಡನ್ನು ಒಳಗೊಂಡ ಬನವಾಸಿ ಪ್ರಾಂತ್ಯವು ವಿಜಯನಗರದ ಹಾಗೂ ಸೋದೆಯ ಅರಸರ ಅಧೀನದಲ್ಲಿತ್ತು. ಈ ಹಿನ್ನೆಲೆಯಲ್ಲಿ ತೆಲಂಗಾಣದ ಅಹಿಚ್ಛತ್ರ ಮೂಲವನ್ನು ಕುರಿತಿರುವ ಮೇಲಿನ ಉಲ್ಲೇಖವು ನಮ್ಮ ಗಮನ ಸೆಳೆಯುವುದಾದರೂ ಅದನ್ನೇ ಒಪ್ಪಿಕೊಳ್ಳಲು ಈಗ ಸಿಕ್ಕಿರುವ ಆಧಾರ ಸಾಲದು. ಡಾ|| ಕನ್ನಿಂಗ್ ಹ್ಯಾಮ್‌ರವರು ತಯಾರಿಸಿದ ಪ್ರಾಚೀನ ಭಾರತದ ಭೂಪಟದಲ್ಲಿ ತೆಲಂಗಾಣದಲ್ಲೊಂದು ಅಹಿಚ್ಛತ್ರವಿರುವುದೇನೋ ನಿಜ. ಬುಕೆನನ್ ಪ್ರಸ್ತಾಪಿಸಿದ ಅಹಿಚ್ಛತ್ರ ಇದೇ ಇರಬಹುದೆ ?

ವಿಲ್ಸನ್‌ರವರು ಹವ್ಯಕ ಬ್ರಾಹ್ಮಣರು ವಲ್ಲಭಪುರದಿಂದ ಬಂದಿರಬೇಕೆಂದು ಊಹಿಸುತ್ತಾರೆ. ವಲ್ಲಭಪುರ, ಗುಜರಾತದ ಈಗಿನ ಅನಹಿಲವಾಡವಾಗಿದೆ. ಇದಕ್ಕೆ ಅಹಿಚ್ಛತ್ರವೆಂಬ ಹೆಸರೂ ಇತ್ತೆಂದು ಹೇಳುತ್ತಾರೆ. ಅಷ್ಟೇ ಅಲ್ಲ, ಅಲ್ಲಿಯ ಬ್ರಾಹ್ಮಣರು ಸಮುದ್ರಮಾರ್ಗವಾಗಿ ಬನವಾಸಿದೇಶಕ್ಕೆ ಬಂದರೆಂದೂ ಅವರು ಅಭಿಪ್ರಾಯ ಪಡುತ್ತಾರೆ. ತಾಳಗುಂದದ ಪ್ರಸಿದ್ಧ ಶಾಸನದ ಪ್ರಕಾರ ಕದಂಬರ

ರಾಜ್ಯ ಉತ್ತರದಲ್ಲಿ ಪ್ರೇಹಾರ (ಮಾಳವ ?)ದ ವರೆಗೂ ಹಬ್ಬಿತ್ತು ಎಂಬುದು ತಿಳಿದು ಬರುತ್ತದೆ. ವಲ್ಲಭಪುರ, ಆ ಸೀಮೆಯೊಳಗೇ ಬರುವಂತಹ ಪ್ರದೇಶ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಜನ ಪ್ರವಹಿಸುವ ಸಾಧ್ಯತೆಯನ್ನು ಊಹಿಸ ಬಹುದಾದರೂ ಹೀಗೆ ಬಂದುದಕ್ಕೆ ಬೇರೆ ಆಧಾರಗಳು ಇಲ್ಲದುದರಿಂದ ಮತ್ತು ಸಮುದ್ರ ಮಾರ್ಗವಾಗಿ ಬಂದರೆಂದು ವಿಲ್ಸನ್ ಊಹಿಸುವುದರಿಂದ ಇದೂ ಕೂಡ ಕೇವಲ ಊಹೆಯಾಗಿಯೇ ಉಳಿಯುತ್ತದೆ.

ಒಟ್ಟಿನಲ್ಲಿ ಈ ವರೆಗೆ ಸಮೀಕ್ಷಿಸಿದ ಪುರಾಣ, ಐತಿಹ್ಯ, ಶಾಸನ, ಪ್ರಾಚೀನ ಗ್ರಂಥ, ವಿದೇಶೀಬರವಣಿಗೆ–ಮುಂತಾದವುಗಳೆಲ್ಲ ಬ್ರಾಹ್ಮಣರು (ಹವ್ಯಕರಲ್ಲ) ಹೊರಗಿನಿಂದ (ಅಹಿಚ್ಛತ್ರದಿಂದ ?) ಬಂದವರೆಂಬುದಕ್ಕೇ ಹೆಚ್ಚಿನ ಪುಷ್ಟಿಯನ್ನು ನೀಡುವಂತಿವೆ. ಇಷ್ಟಾದರೂ ಹವ್ಯಕರ ಮೂಲದ ಬಗೆಗೆ ಖಚಿತವಾದ ನಿಲುವೊಂದನ್ನು ತಳೆಯಲು ಇವು ಇನ್ನೂ ಸಹಾಯಕವಾಗಿಲ್ಲ. ಆದರೆ ಹವ್ಯಕರ ಆಚಾರ–ವಿಚಾರ, ಭಾಷೆ, ಉಡಿಗೆ-ತೊಡಿಗೆ ಇವರಲ್ಲಿರುವ ಜಾನಪದ ಅಂಶಗಳು– ಮುಂತಾದವುಗಳ ಆಧಾರದ ಮೇಲೆ ನಾವು ಕೆಲವು ಊಹೆಗಳನ್ನು ಮಾಡಬಹುದು. ಮೊದಲನೆಯ ದಾಗಿ, ಇವರು ಮೂಲತಃ ಉತ್ತರ ಕನ್ನಡ ಜಿಲ್ಲೆಯದೇ ಒಂದು ಜಾತಿ-ಪಂಗಡಕ್ಕೆ ಸೇರಿದವರಾಗಿದ್ದು, ಕಾಲಾಂತರದಲ್ಲಿ ವರ್ಣವ್ಯವಸ್ಥೆ ದಕ್ಷಿಣದಲ್ಲಿ ಕಾಲಿಟ್ಟಾಗ ವೇದಾಧ್ಯಯನ ಮಾಡಿ ಹವ್ಯಕ ಬ್ರಾಹ್ಮಣರೆನಿಸಿಕೊಂಡರು. ಇನ್ನು ಎರಡನೆಯ ಊಹೆಯೆಂದರೆ, ಹೊರಗಿನಿಂದ ಬಂದ ಕೆಲವೇ ಬ್ರಾಹ್ಮಣರು ಸ್ಥಳೀಯ ಸ್ತ್ರೀಯರನ್ನು ಮದುವೆಯಾಗಿ 'ಹವ್ಯಕ'ರ ಉತ್ಪತ್ತಿಗೆ ಕಾರಣರಾದರು. 'ಕೆನರಾ ಗೆಜೆಟಿಯರ್'ನಲ್ಲಿ ಬ್ರಾಹ್ಮಣ ಮತ್ತು ಹಾಲಕ್ಕಿ ಒಕ್ಕಲು ಹೆಂಗಸರ ಅನೈತಿಕ ಸಂಬಂಧದಿಂದಲೇ ಹವ್ಯಕ ಉತ್ಪತ್ತಿಯಾಗಿದೆ ಎಂಬ ಹೇಳಿಕೆಯೂ ಇದೆ[11] ಎನ್ನಲಾಗಿದೆ. ಈ ಮೇಲಿನ ಊಹೆಗಳಿಗೆ ಮತ್ತು ಹೇಳಿಕೆಗೆ ಪುಷ್ಟಿನೀಡುವಂತೆ ಹವ್ಯಕರಿಗೂ ಸ್ಥಳೀಯ ಪ್ರಾಚೀನ ಸಮಾಜಗಳ ಜನರಿಗೂ ಕೆಲವು ಆಚಾರ-ವಿಚಾರ ಉಡಿಗೆ ತೊಡಿಗೆಗಳಲ್ಲಿ ಹೋಲಿಕೆ ಕಂಡು ಬರುತ್ತದೆ. ಸುಮಾರು 60-70 ವರ್ಷಗಳ ಹಿಂದೆ ವ್ಯವಸಾಯದಲ್ಲಿ ತೊಡಗಿದ ಹವ್ಯಕರಿಗೂ ಇತರ ನಾಮಧಾರಿ ಅಥವಾ ಹಾಲಕ್ಕಿ ಒಕ್ಕಲಿಗರನ್ನೂ ಮಾತಿನ ಹೊರತಾಗಿ ಗುರುತಿಸುವುದು ಕಷ್ಟವಾಗಿತ್ತು. ಅಷ್ಟೊಂದು ಸಾಮ್ಯವಿದೆ ಈ ನೆಲದ ಜನರಲ್ಲಿ! ಅದರಂತೆ ಹವ್ಯಕ ಸ್ತ್ರೀಯರು ಮೊದಲು ಸೀರೆ ಉಡುತ್ತಿದ್ದ ಪದ್ಧತಿಗೂ ಈಗ ಹಾಲಕ್ಕಿ ಸ್ತ್ರೀಯರುಡುವ ಪದ್ಧತಿಗೂ ಕೆಲಮಟ್ಟಿನ ಸಾಮ್ಯವಿದೆ. ಮೊಳಕಾಲಿನವರೆಗೆ ಮಾತ್ರ ಉಡುವುದು ಮೇಗಿಲ ಸೆಕ್ಕಿಸುವುದು (ಗೆಯ್ಬಿ ಕಟ್ಟುವುದು) ಒಳಗಚ್ಚೆ ಧರಿಸುವುದು ಇವೆಲ್ಲವೂ ಅವರಿಬ್ಬರಲ್ಲಿಯೂ ಗಮನಿಸುವಂತಿದೆ. ಇಷ್ಟೇ ಅಲ್ಲದೆ ಹವ್ಯಕರ ಮಂತ್ರ-ತಂತ್ರ ವಿದ್ಯೆಯ ಗ್ರಂಥಗಳಲ್ಲಿ ಹಲವು ತಿಗಳಾರಿಲಿಪಿ ಯಲ್ಲಿರುವುದು, ಇವರು ಕೇರಳದ ಕಡೆಯಿಂದ ಅವನ್ನು ಕಲಿತುಕೊಂಡು ಬಂದಿರ

ಬಹುದು ಅಥವಾ ಇವರು ಆ ಕಡೆಯಿಂದ ಬಂದಿರಬಹುದೆಂಬ ಊಹೆಗೆ ಪುಷ್ಟಿಯನ್ನು ನೀಡುವಂತಿದೆ. ಏಕೆಂದರೆ, ಇವರ ಮನೆ ಮಾತು ಹಳಗನ್ನಡಕ್ಕೆ ಸಮೀಪವರ್ತಿಯಾದುದಾದರೂ ಸ್ವರೋಚ್ಚಾರಣೆಯಲ್ಲಿ ಮಲೆಯಾಳಿ ಭಾಷೆಯನ್ನು ಹೋಲುತ್ತದೆ. ಆದುದರಿಂದ ಹವ್ಯಕರ ಮೂಲವನ್ನು ಉತ್ತರಕಡೆ ಹುಡುಕುವುದಕ್ಕಿಂತ ದಕ್ಷಿಣದ ಕಡೆ ಹುಡುಕಿದರೆ ಸತ್ಯಾಂಶ ಸ್ವಲ್ಪವಾದರೂ ದೊರಕೀತು.

ಒಟ್ಟಿನಲ್ಲಿ ಹೊರಗಿನಿಂದ ಬಂದವರೇ ಆಗಿರಲಿ ಅಥವಾ ಸ್ಥಳೀಯರೇ ಪರಿವರ್ತಿತರಾದವರಾಗಿರಲಿ ಹೈಗನಾಡಿನಲ್ಲಿ (ಪೈವ : ಪೈಗ > ಹೈಗ) ಪುರಾತನ ಕಾಲದಿಂದಲೂ ನೆಲೆಸಿದ್ದರಿಂದಲೇ ಇವರು ಹೈಗರು (< ಪೈಕರು), ಹವೀಕರು, ಹವ್ಯಕರು, ಎಂದೆನ್ನಿಸಿಕೊಂಡರು. ಮೊದಲು ಹೈಗನಾಡಿನಲ್ಲಿ ಅದರಲ್ಲೂ ಹೈಗುಂದದ ಪ್ರದೇಶದಲ್ಲಿ ಸಾಂದ್ರವಾಗಿದ್ದಿರಬಹುದಾದ ಈ ಹವ್ಯಕರು ಕಾಲಕ್ರಮದಲ್ಲಿ ಇತರೆಡೆಗಳಲ್ಲಿ ಹಬ್ಬಿರಬೇಕು. ಇವರ ಬಗೆಗೆ ಮಾನವಶಾಸ್ತ್ರೀಯ ದೃಷ್ಟಿಯಿಂದ ಇನ್ನೂ ಹೆಚ್ಚಿನ ಅಧ್ಯಯನ ಆಗಬೇಕಾಗಿದೆ.

ಅಡಿ ಟಿಪ್ಪಣಿಗಳು

1. ಹೊನ್ನಾವರ ತಾಲ್ಲೂಕಿನಲ್ಲಿ ಶರಾವತಿ ತೀರದ ಪುಟ್ಟದ್ವೀಪದಂತಿರುವ 'ಹೈಗುಂದ' ಹವ್ಯಕರ ಪ್ರಾಚೀನ ಕೇಂದ್ರವಾಗಿರಬೇಕು. ಡಾ॥ ಅ. ಸುಂದರರವರ ಇತ್ತೀಚಿನ ಪುರಾತತ್ವ ಶೋಧನೆಗಳಿಂದ ಅಲ್ಲಿ ಕೆಲವು ಪ್ರಾಚೀನ ಮೂರ್ತಿ ಶಿಲ್ಪಗಳು ದೊರಕಿವೆ. [ಇದು ಪ್ರಾಚೀನ ಕೇಕಯ ವಂಶದ ರಾಜಧಾನಿಯೂ ಆಗಿತ್ತು–ಸೂರ್ಯನಾಥ ಕಾಮತ್]
2. ಜೈನರ ವಿವಿಧ ತೀರ್ಥಯಾತ್ರ ಕಲ್ಪದ ಪ್ರಕಾರ ಅಹಿಚ್ಛತ್ರದ ಪುರಾತನ ಹೆಸರು 'ಸಂಖ್ಯಾವಲೆ' ಎಂದಿದ್ದು ಅದು ಕುರುಜಾಂಗಲದ ರಾಜಧಾನಿಯಾಗಿತ್ತು. ಕ್ರಿ ಪೂ. ೧ನೇ ಶತಮಾನದ್ದೆಂದು ಹೇಳಲಾದ ಪಭೋಸಾ ಗುಹೆಯ ಶಾಸನದಲ್ಲಿ ಇದನ್ನು 'ಅಧಿಚ್ಛತ್ರ' (?) ಎಂದು ಹೆಸರಿಸಲಾಗಿದೆ. ಟಾಲೆಮಿ ವರ್ಣಿಸಿದ 'ಅದಿಸರ' ಎಂಬುದು ಇದೇ ಆಗಿದೆ. ಪದ್ಮಪುರಾಣದಲ್ಲಿ ಈ ನಗರವನ್ನು ವಿಶೇಷವಾಗಿ ವರ್ಣಿಸಲಾಗಿದ್ದು ಅಲ್ಲಿ ಬ್ರಾಹ್ಮಣರೂ ಇತರರೂ ವಾಸಿಸುತ್ತಿದ್ದರೆಂದು ಹೇಳಲಾಗಿದೆ. ಇದನ್ನು 'ಪ್ರತ್ಯಗತ', 'ಶಿವಪುರಿ' ಎಂದು ಮುಂತಾಗಿ ಕೂಡ ಬಣ್ಣಿಸಲಾಗಿದೆ. ಹುಯೇನ್ ತ್ಸಾಂಗನೂ ಈ ನಗರಕ್ಕೆ ಬಂದಿದ್ದನಂತೆ. ಇಂದಿಗೂ ಈ ಊರು ಅಹಿಚ್ಛತ್ರವೆಂದೇ ಜನಜನಿತವಾಗಿದೆ. ಆದರೆ ಆ ಪುರಾತನ ನಗರ ಪ್ರಾಚ್ಯಾವಶೇಷವಾಗಿ ಹೋಗಿದೆ. ೧೯೪೦–೪೪ ರಲ್ಲಿ ಭಾರತದ ಪುರಾತತ್ವ ಸಮೀಕ್ಷೆಯವರು ಉತ್ಖನನ ಮಾಡಿದ್ದರೂ ತೀರ ಪ್ರಾಚೀನ ಕಾಲದ ಪ್ರಾಗೈತಿಹಾಸಿಕ ಕಾಲದ ಅಥವಾ ಮಹಾಭಾರತ ಕಾಲದ ಅವಶೇಷಗಳೇನೂ ಸಿಕ್ಕಿಲ್ಲ. (ಕ್ರಿ.ಪೂ. ೧೩೦೦ ಕ್ಕಿಂತ ಪುರಾತನ ವಸ್ತು ವಿಶೇಷಗಳು ವಿಶೇಷವಾಗಿ ಸಿಕ್ಕಿಲ್ಲ). ನೋಡಿ: M. R. Singh, *Geographical Data in the Early Puranas- A critical study*, Calcutta 1972, p. 70

೩. ನೋಡಿ : ಕಲಾದರ್ಶನ ಸಂ ೮, ಸಂ ೫ (ಪು.೯) ; ಗೋಕರ್ಣದಲ್ಲಿ ಸಭಾಹಿತರೊಬ್ಬರ ಮನೆಯಲ್ಲಿ ದೊರೆತ 'ಬಹುದುಂಡ' ದಲ್ಲಿಯೂ ಇದರ ಪ್ರಸ್ತಾಪ ಬರುತ್ತದೆ.

4. Wilson (Ed.), *Mackenzie's collection* p. 60-61.

5. ಡಾ॥ ಶಿವರಾಮಕಾರಂತ : 'ಯಕ್ಷಗಾನ ಬಯಲಾಟ'

6. ಹೊಸಬಾಳೆ ಅನಂತ ಶರ್ಮ (ಸಂ), ಉತ್ತರ ಸಹ್ಯಾದ್ರಿ ಖಂಡ, ಸಡಹಳ್ಳಿ ೧೮೭೭ ಗ.ಸು ಪಾಟೀಲ (ಬರಿಗೆ) ; ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ : ತೀರ್ಥಹಳ್ಳಿ (೧೯೫೪).

7. EC., VII SK, 186. ಪು 16–20. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಹೋಬಳಿ (ಶಿಕಾರಿಪುರ ತಾಲ್ಲೂಕು) ಮಳೇನಹಳ್ಳಿಯ ಕಲ್ಲೇಶ್ವರ ದೇಗುಲದಲ್ಲಿರುವ 58 ಸಾಲುಗಳುಳ್ಳ ಈ ಕನ್ನಡ ಶಾಸನದಲ್ಲಿ (ಸು. ಕ್ರಿ. ಶ. 1200), ಸಾಲುಗಳು 11-15

8. EC., III. (1974, ಪರಿಷ್ಕೃತ) ಸಂ 402 ; ಗಟ್ಟವಾಡಿಯಲ್ಲಿ ದೊರೆತ ಈ ತಾಮ್ರ ಶಾಸನವು ಗಂಗರ ಕಾಲದ್ದಾಗಿದ್ದು (ಕ್ರಿ ಶ. 904) ಇದನ್ನೀಗ ರಾಜ್ಯ ಪುರಾತತ್ವ ಇಲಾಖೆಯಲ್ಲಿ ಇಡಲಾಗಿದೆ.

9. ನೋಡಿ : ಶಂ.ಬಾ. ಜೋಶಿ, ಕಣ್ಮರೆಯಾದ ಕನ್ನಡ, ಧಾರವಾಡ, 1933, ಪು 37.

10. Francis Buchanan, A Journey, London, 1807, p. 131-39

11. ನೋಡಿ : Kanara Gazetteer, (Bombay), 1883, ಪು. 116-128.

ಪ್ರೌಢಶಾಲೆಯ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ ಬರವಣಿಗೆ

ಪಿ. ಜಿ. ಮಳೀಮಠ
ಬಿ. ಎಸ್. ಸತ್ಯನಾರಾಯಣ

ಶಿಕ್ಷಣತಜ್ಞರಲ್ಲಿ ಮತ್ತು ಮನೋವಿಜ್ಞಾನ ತಜ್ಞರಲ್ಲಿ ಈಚೆಗೆ ಸೃಜನಾತ್ಮಕತೆ, ಮತ್ತು ಮಕ್ಕಳಲ್ಲಿ ಅದರ ಬೆಳವಣಿಗೆ ಮತ್ತು ಪೋಷಣೆಯ ಬಗ್ಗೆ ಅತ್ಯಂತ ಆಸಕ್ತಿ ಮೂಡುತ್ತಿದೆ. ಮಕ್ಕಳ ಬೌದ್ಧಿಕ ಬೆಳವಣಿಗೆಯ ಬಗ್ಗೆ ಚಿಂತಿಸುತ್ತಿರುವ ಅವರು ಈ ಸಮಸ್ಯೆಯ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸುವುದು ಸಹಜ. ಆದರಿಂದಾಗಿ, ಇದರ ಬಗ್ಗೆ ಅನೇಕ ಸಂಶೋಧನೆಗಳನ್ನು ಕೈಗೊಂಡು ಅದರ ಅಧ್ಯಯನ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ಸೃಜನಾತ್ಮಕತೆಯ ಸ್ವರೂಪವನ್ನು ಮನೋವೈಜ್ಞಾನಿಕ, ಭೌತಿಕ, ಬೌದ್ಧಿಕ ಹಾಗೂ ಪರಿಸರಗಳ ದೃಷ್ಟಿಯಿಂದ ಅಧ್ಯಯನ ಮಾಡಲಾಗುತ್ತಿದೆ. ಸೃಜನಾತ್ಮಕತೆಗೂ ವ್ಯಕ್ತಿತ್ವಕ್ಕೂ ಇರುವ ಸಂಬಂಧವನ್ನು ಅನೇಕ ಸಂಶೋಧನೆಗಳು ತೋರಿಸಿಕೊಟ್ಟಿವೆ (ಮೆಹದಿ, 1975; ರೈನ, 1968; ಪರಮೇಶ್, 1966; ಸ್ಟರ್ನ್, 1971). ಹಾಗೆಯೇ ವಿದ್ಯಾರ್ಥಿಗಳಲ್ಲಿನ ಸೃಜನಾತ್ಮಕತೆ ಅದರ ಶಾಲಾ ಕಲಿಕೆಯ ಮೇಲೂ ಸಹ ಸಾಕಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ಅನೇಕ ಅಧ್ಯಯನಗಳು ತಿಳಿಸಿಕೊಟ್ಟಿವೆ. (ಸ್ಯಾಂಡಿಫರ್, 1972; ಬೆಂಟ್ಲೆ, 1966; ಯುರೋಮಿರ್ಜ್, 1967). ಅದರಲ್ಲಿಯೂ ಮಕ್ಕಳಲ್ಲಿನ ಸೃಜನಾತ್ಮಕ ಬರವಣಿಗೆ, ಮತ್ತು ಅವರ ಶಾಲಾಕಲಿಕೆಯ ಮಟ್ಟಕ್ಕಿರುವ ಸಂಬಂಧವನ್ನು ಅನೇಕರು ಪರೀಕ್ಷಿಸಿದ್ದಾರೆ. (ಯಮಮೋಟೋ, 1960; 1966; ವ್ಯಾಲಸ್ ಮತ್ತು ಸ್ಟಿವನ್ ಸನ್, 1963). ನಮ್ಮ ದೇಶದಲ್ಲಿ ಸೃಜನಾತ್ಮಕ ಬರವಣಿಗೆಯ ಬಗ್ಗೆ ನಡೆದಿರುವ ಅಧ್ಯಯನ ಹಾಗೂ ಸಂಶೋಧನೆಗಳು ಬಹಳ ಕಡಿಮೆಯೆಂದೇ ಹೇಳಬೇಕು. ಅದರಲ್ಲಿಯೂ ವಿದ್ಯಾರ್ಥಿಗಳ ಕನ್ನಡ ಬರವಣಿಗೆಯಲ್ಲಿನ ಸೃಜನಾತ್ಮಕತೆಯನ್ನು ಅಧ್ಯಯನ ಮಾಡಿರುವುದು ತೀರ ಕಡಿಮೆ. ಅನಂತಕುಮಾರ್ (1970) ಮತ್ತು ಉಷಾರಾವ್ (1973) ಹಾಗೂ ಹಮೀದ್ (1976)ರವರ ಸಂಶೋಧನೆ ನಮ್ಮ ವಿಶ್ವವಿದ್ಯಾಲಯದಲ್ಲಿ ಆಗಿರುವ ಅಧ್ಯಯನಗಳು. ಇವುಗಳಲ್ಲಿ ಅನಂತಕುಮಾರ್ (1970) ರವರು ಮಾತ್ರ ಪ್ರೌಢಶಾಲಾ ಮಕ್ಕಳ ಕನ್ನಡ ಸೃಜನಾತ್ಮಕ ಬರವಣಿಗೆಯನ್ನು ಅಧ್ಯಯನ ಮಾಡಿರುತ್ತಾರೆ.

ಪ್ರೌಢಶಾಲಾ ವಿದ್ಯಾರ್ಥಿಗಳ ಸೃಜನಾತ್ಮಕ ಬರವಣಿಗೆಯನ್ನು ಅವರ ಭಾಷಾ ಜ್ಞಾನದ ಮಟ್ಟದೊಡನೆ ತುಲನೆ ಮಾಡುವ ಸಲುವಾಗಿ ಈ ಅಧ್ಯಯನವನ್ನು ನಡೆಸಲಾಯಿತು. ಹತ್ತನೆಯ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿನ ಸೃಜನಾತ್ಮಕ ಬರವಣಿಗೆಯನ್ನು ವಿಶ್ಲೇಷಣೆ ಮಾಡುವುದು ಮತ್ತು ಅವರು ಕಲಿಯುತ್ತಿರುವ ಭಾಷೆಗಳಲ್ಲಿ ಯಾವ ಮಟ್ಟದ ಪಾಂಡಿತ್ಯವನ್ನು ಪಡೆದಿದ್ದಾರೆ ಎಂಬುದನ್ನು ಪರೀಕ್ಷಿಸುವುದೇ ಈ ಅಧ್ಯಯನದ ಗುರಿ.

ಅದಕ್ಕಾಗಿ ಬೆಂಗಳೂರಿನ ಏಳು ಪ್ರೌಢಶಾಲೆಗಳಿಂದ ನೂರಹತ್ತು ಹುಡುಗರನ್ನೂ ಮತ್ತು ನೂರಹತ್ತು ಹುಡುಗಿಯರನ್ನೂ ಸಮಸಂಭಾವ್ಯ ರೀತಿಯಲ್ಲಿ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಯಿತು. ಈ ಇನ್ನೂರ ಇಪ್ಪತ್ತು ವಿದ್ಯಾರ್ಥಿಗಳು ಹತ್ತನೆಯ ತರಗತಿಯಲ್ಲಿ ಕಲಿಯುತ್ತಿದ್ದ ಮಕ್ಕಳು.

ವಿದ್ಯಾರ್ಥಿಗಳ ಸೃಜನಾತ್ಮಕ ಬರವಣಿಗೆಯನ್ನು ಕಂಡುಹಿಡಿಯುವ ಸಲುವಾಗಿ ಟೊರ್ರ್ಯಾನ್ಸ್ (1964)ರ ಕಲ್ಪಿತ ಕಥಾಪರೀಕ್ಷೆ (Imaginary Story Test) ಯನ್ನು ಪರಿಷ್ಕರಿಸಿ ಕನ್ನಡ ಭಾಷೆಗೆ ಅಳವಡಿಸಿಕೊಳ್ಳಲಾಯಿತು.

ವಿದ್ಯಾರ್ಥಿಗಳ ಸಮಾಜಾರ್ಥಿಕ ಸ್ಥಾನವನ್ನು (Socio-economic status) ಕಂಡುಹಿಡಿಯುವ ಸಲುವಾಗಿ ಕುಪ್ಪುಸ್ವಾಮಿಯವರ ಸಮಾಜಾರ್ಥಿಕ ಸ್ಥಾನಮಾಪಕ (SES–scale)ವನ್ನು ಪರಿಷ್ಕರಿಸಿ ಬಳಸಲಾಯಿತು.

ವಿದ್ಯಾರ್ಥಿಗಳ ಭಾಷಾ ಜ್ಞಾನವನ್ನು ಗೊತ್ತುಮಾಡುವ ಸಲುವಾಗಿ ಅವರು ಅರ್ಧವಾರ್ಷಿಕ ಪರೀಕ್ಷೆಯಲ್ಲಿ ತಾವು ಕಲಿಯುತ್ತಿದ್ದ ಭಾಷೆಗಳಲ್ಲಿ, ಅಂದರೆ ಕನ್ನಡ, ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಗಳಿಸಿದ್ದ ಅಂಕಗಳನ್ನು ಪಡೆಯಲಾಯಿತು.

ಕನ್ನಡ ಸೃಜನಾತ್ಮಕ ಬರವಣಿಗೆ ಎಂದರೆ ಮಕ್ಕಳು ತಮ್ಮಲ್ಲಿರುವ ವಿಚಾರಗಳು, ಮಾನಸಿಕ ಪ್ರವೃತ್ತಿಗಳು, ಭಾವನೆಗಳು ಮತ್ತು ಅಪರೂಪ ಯೋಚನಾತರಂಗಗಳು– ಇವೇ ಮೊದಲಾದುವನ್ನು ಪ್ರಕಟಪಡಿಸುವ ಸಲುವಾಗಿ ಕೈಗೊಂಡು ಬರೆಯುವ ಒಂದು ಲೇಖನ. ವಿದ್ಯಾರ್ಥಿಗಳ ಕನ್ನಡ ಸೃಜನಾತ್ಮಕ ಬರವಣಿಗೆಯ ಮಟ್ಟವನ್ನು ಅವರ ಬರವಣಿಗೆಯಲ್ಲಿ ಕಂಡು ಬಂದ ಎರಡು ಅಂಶಗಳಿಂದ ನಿರ್ಧರಿಸಲಾಯಿತು. (1) ನವೀನತೆ ಅಥವಾ ಅಪರೂಪತನ (originality) ಮತ್ತು (2) ಆಸಕ್ತಿ (Interest).

ನವೀನತೆಯೆಂದರೆ ವಿದ್ಯಾರ್ಥಿಗಳು ಅಪರೂಪದ ಹಾಗೂ ಜಾಣತನದ ವರ್ತನೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿ. ಇವರ ಬಾಬತ್ತು ಅಂಶಗಳನ್ನು ಟೊರ್ರ್ಯಾನ್ಸ್‌ರವರು ಹೇಳಿರುವ ರೀತಿಯಲ್ಲಿಯೇ ಉಪಯೋಗಿಸಿಕೊಳ್ಳಲಾಯಿತು.

ಆಸಕ್ತಿ ಎಂದರೆ ವಿದ್ಯಾರ್ಥಿಗಳು ತಮ್ಮ ಬರವಣಿಗೆಯಲ್ಲಿ ಯಾವುದಾದರೊಂದು ವಿಧವಾದ ಶೈಲಿಯ ಕಡೆ ಹೆಚ್ಚು ಒಲವನ್ನು ತೋರುವುದು. ಇದರಲ್ಲಿನ ಒಂಬತ್ತು ಅಂಶಗಳನ್ನೂ ಸಹ ಮೂಲ ಉಪಕರಣದಲ್ಲಿ ತಿಳಿಸಿರುವಂತೆಯೇ ಉಪಯೋಗಿಸಿಕೊಳ್ಳಲಾಯಿತು.

ಕಲ್ಪಿತ ಕಥಾಪರೀಕ್ಷೆ

ಈ ಪರೀಕ್ಷೆಯಲ್ಲಿ ಹತ್ತು ಸಾಮಾನ್ಯವಲ್ಲದ ವಿಷಯಗಳನ್ನು ಕೊಟ್ಟು (ಉದಾ. 'ಬೊಗಳಲಾರದ ನಾಯಿ' ಮತ್ತು 'ಅಕ್ಷರಗಳೇ ಇಲ್ಲದಿದ್ದರೆ') ಅದರಲ್ಲಿ ಯಾವುದಾದರೂ ಒಂದು ವಿಷಯದಮೇಲೆ ಹುಡುಗರಿಗೆ ತಮ್ಮ ಕಲ್ಪನಾಶಕ್ತಿಯನ್ನು ಉಪಯೋಗಿಸಿ ಒಂದು ಲೇಖನವನ್ನು ಬರೆಯುವಂತೆ ತಿಳಿಸಲಾಯಿತು. ಇದಕ್ಕೆ ಸಮಯದ ನಿಗದಿಯನ್ನೂ ಸಹ ಮಾಡಲಾಯಿತು. ಈ ಪರೀಕ್ಷೆಯ ವಸ್ತುನಿಷ್ಠಾಸೂಚಕಾಂಕ (Co–efficient of Reliability) 0.86 ಮತ್ತು ಅದರ ನಿಖರತಾಸೂಚಕಾಂಕ (Co–efficients of validity)ಗಳು ಕ್ರಮವಾಗಿ ನವೀನತೆಗೆ 0.91 ಮತ್ತು 0.97 ಬಂದಿದ್ದ ಕಾರಣ ಪರೀಕ್ಷೆಯನ್ನು ಸೂಕ್ತ ಮತ್ತು ಸಮರ್ಪಕ ಎಂದು ನಿರ್ಧರಿಸಿ ಬಳಸಲಾಯಿತು.

ಲಬ್ಧಾಂಶಗಳನ್ನು (data) ವಿಶ್ಲೇಷಿಸುವ ಸಲುವಾಗಿ ಸಹಸಂಬಂಧ ಸೂಚಿ (Co–efficient of correlation) ಮತ್ತು ಭೇದಸೂಚಕಾಂಕ (t–test) ಗಳನ್ನು ಉಪಯೋಗಿಸಲಾಯಿತು.

ಸೃಜನಾತ್ಮಕ ಬರವಣಿಗೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳಿಗೆ ಅನುಸಾರವಾಗಿ ಉತ್ತಮ ಸೃಜನಾತ್ಮಕ, ಮಧ್ಯಮ ಸೃಜನಾತ್ಮಕ ಹಾಗೂ ಅಧಮ ಸೃಜನಾತ್ಮಕ ಬರಹಗಾರರೆಂದು ಮೂರು ವರ್ಗಗಳಾಗಿ ವಿಂಗಡಿಸಿ, ಅವರು ಭಾಷಾಕೌಶಲ್ಯದಲ್ಲಿ ಪಡೆದಿರುವ ಅಂಕಗಳನ್ನು ಪರಸ್ಪರ ತುಲನೆ ಮಾಡಲಾಯಿತು. ಹಾಗೆಯೇ ಉತ್ತಮ, ಮಧ್ಯಮ ಮತ್ತು ಕೆಳಮಟ್ಟದ ಸಮಾಜಾರ್ಥಿಕ ಸ್ಥಾನದಲ್ಲಿ ಇದ್ದ ವಿದ್ಯಾರ್ಥಿಗಳ ಅಂಕಗಳನ್ನು ಪರಸ್ಪರ ತುಲನೆ ಮಾಡಲಾಯಿತು.

ಲಬ್ಧಾಂಶ ವಿಶ್ಲೇಷಣೆಯನ್ನೂ ಮತ್ತು ಅದರ ವಿವೇಚನೆಯನ್ನೂ ಈ ಮುಂದೆ ಮಾಡಲಾಗಿದೆ.

ಲಬ್ಧಾಂಕ ಪಟ್ಟಿ 1

ಬಾಲಕ ಮತ್ತು ಬಾಲಕಿಯರ ಸೃಜನಾತ್ಮಕತಾ ಸೂಚಕಾಂಕ ಹಾಗೂ ಅವರ ಭಾಷಾ ಕೌಶಲ್ಯ ಸೂಚಕಾಂಕಗಳ ಸಹಸಂಬಂಧ ಸೂಚಕಗಳು.

ಕ್ರಮ ಸಂಖ್ಯೆ	ವರ್ಗ	ಸಂಖ್ಯೆ (N)√	ಭಾಷಾಜ್ಞಾನಾಂಕಗಳು ಪೂರ್ಣ	ಕನ್ನಡ	ಇಂಗ್ಲಿಷ್	ಹಿಂದಿ	ಅಪೇಕ್ಷಿತ ಸೂಚಕಾಂಕ (0.01)
	ಸೃಜನಾತ್ಮಕ ಬರವಣಿಗೆಯ ಸೂಚಿ						
1	ಹುಡುಗರು	110	0.272*				0.256
2	ಹುಡುಗಿಯರು	110	0.507*				0.256
3	ಎಲ್ಲ ವಿದ್ಯಾರ್ಥಿಗಳು	220	0.405*	0.416	0.302	0.288	0.181
4	ನವೀನತಾಂಕ	220	0.382*				0.181
5	ಆಸಕ್ತಿಯ ಅಂಕ	220	0.379*				0.181
6	ಕೆಳ ಸಮಾಜಾರ್ಥಿಕ ಸ್ಥಾನೀಯರು	59	0.357*				0.325
7	ಮಧ್ಯಮ ಸಮಾಜಾರ್ಥಿಕ ಸ್ಥಾನೀಯರು	108	0.363*				0.254
8	ಉತ್ತಮ ಸಮಾಜಾರ್ಥಿಕ ಸ್ಥಾನೀಯರು	57	0.498*				0.325

[* ಸಂಭಾವ್ಯ ಸೂಚಿ $p < 0.01$]

ಮೇಲಿನ ಪಟ್ಟಿಯಿಂದ ಮಕ್ಕಳ ಸೃಜನಾತ್ಮಕತಾಂಕವು ಅವರ ಭಾಷಾ ಜ್ಞಾನಾಂಕಗಳೊಂದಿಗೆ ನೈಜ ಹಾಗೂ ಉತ್ತಮ ಸಹಗುಣಾಂಕಗಳನ್ನು ಪಡೆದಿರುವುದರಿಂದ ಮಕ್ಕಳ ಸೃಜನಾತ್ಮಕ ಬರವಣಿಗೆಯು ಅವರ ಭಾಷಾಜ್ಞಾನದೊಡನೆ ಬಹುಮಟ್ಟಿಗೆ ಸ್ಪಷ್ಟವಾದ ಧನರೂಪ ಸಂಬಂಧವನ್ನು ಹೊಂದಿದೆ ಎಂಬುದು ವೇದ್ಯವಾಗುತ್ತದೆ. ಕನ್ನಡ ಭಾಷಾಜ್ಞಾನಾಂಕದೊಡನೆ ಇವರ ಅತ್ಯಂತ ಹೆಚ್ಚಿನ ಸಂಬಂಧವಿದ್ದು (0.416), ಅದಕ್ಕಿಂತ ಸ್ವಲ್ಪಕಡಿಮೆ ಇಂಗ್ಲಿಷ್ ಭಾಷಾಜ್ಞಾನಾಂಕದೊಡನೆಯೂ (0.302) ಮತ್ತು ಅದಕ್ಕಿಂತಲೂ ಕಡಿಮೆ ಸಹಸಂಬಂಧ ಅವರ ಹಿಂದೀಭಾಷೆಯ

ಕಲಿಕೆಯ ಅಂಕದೊಡನೆ (0.288) ಇದೆ. ಕನ್ನಡ ಸೃಜನಾತ್ಮಕ ಸೂಚಕಾಂಕವು ಅವರ ಒಟ್ಟು ಭಾಷಾಜ್ಞಾನಾಂಕದೊಡನೆ ಅತಿ ಹೆಚ್ಚಿನ ಸಹಸಂಬಂಧವನ್ನು ಹೊಂದಿದ್ದು ಕನ್ನಡ ಜ್ಞಾನದೊಡನೆ ಇರುವ ಸಂಬಂಧದಷ್ಟೆ. ಸಾಧಾರಣವಾಗಿ ಇರುವುದರಿಂದ ಶಾಲಾ ಮಕ್ಕಳಲ್ಲಿ ಕನ್ನಡ ಸೃಜನಾತ್ಮಕ ಬರವಣಿಗೆಯ ಶಕ್ತಿಗೂ ಹಾಗೂ ಅವರಲ್ಲಿನ ಭಾಷಾಕೌಶಲ್ಯಕ್ಕೂ ಒಂದು ನಿಕಟವಾದ ಸಂಬಂಧವಿದೆ ಎಂದು ತೀರ್ಮಾನಿಸಬಹುದು.

ಬಾಲಕ ಹಾಗೂ ಬಾಲಕಿಯರ ಸೃಜನಾತ್ಮಕತೆಯನ್ನು ಅವರ ಭಾಷಾಕೌಶಲ್ಯದೊಡನೆ ಪ್ರತ್ಯೇಕವಾಗಿ ತುಲನೆ ಮಾಡಿದಾಗ ಬಾಲಕಿಯರಿಗಿರುವ ಸಹ ಸಂಬಂಧ ಸೂಚಕ (0.507) ಬಾಲಕರು ಪಡೆದಿರುವ ಸಹಸಂಬಂಧ ಸೂಚಕ (0.272)ಕ್ಕಿಂತ ಹೆಚ್ಚಾಗಿದ್ದು, ಬಾಲಕಿಯರಲ್ಲಿ ಇದು ಅತ್ಯಂತ ಹೆಚ್ಚಾಗಿದೆ ಎಂದು ವೇದ್ಯವಾಗುತ್ತದೆ ಮತ್ತು ಅವುಗಳ ವ್ಯತ್ಯಾಸವು ಸಹ ನಿಖರವಾಗಿ (ಭೇದ ಸೂಚಕಾಂಕವು 2.00) ಇರುವುದರಿಂದ ಈ ಅಂಶವು ಇನ್ನೂ ದೃಢಪಡುತ್ತದೆ.

ಉತ್ತಮ, ಮಧ್ಯಮ ಮತ್ತು ಕೆಳಗಿನ ಸಮಾಜಾರ್ಥಿಕ ವರ್ಗದ ಮಕ್ಕಳು ಪಡೆದಿರುವ ಸಹ ಸಂಬಂಧ ಸೂಚಕವನ್ನು ಗಮನಿಸಿದಾಗ ಕೆಳವರ್ಗದ ಮಕ್ಕಳಲ್ಲಿ ಕಡಿಮೆ ಇದ್ದು (0.357), ಮಧ್ಯಮ ವರ್ಗದ ಮಕ್ಕಳಲ್ಲಿ ಸ್ವಲ್ಪ ಹೆಚ್ಚಾಗಿ (0.362) ಉತ್ತಮ ವರ್ಗದ ಮಕ್ಕಳಲ್ಲಿ ಇನ್ನೂ ಹೆಚ್ಚಾಗಿ (0.498) ಪ್ರಕಟವಾಗಿದೆ. ಆದರೆ ಇವುಗಳಿಗಿರುವ ವ್ಯತ್ಯಾಸವು ಅಷ್ಟು ನಿಖರವಾಗಿಲ್ಲದಿರುವುದರಿಂದ ಮಕ್ಕಳಲ್ಲಿನ ಸೃಜನಾತ್ಮಕ ಬರವಣಿಗೆ ಮತ್ತು ಅವರ ಭಾಷಾಜ್ಞಾನಕ್ಕಿರುವ ಸಂಬಂಧವು ಅವರ ಸಮಾಜಾರ್ಥಿಕ ವರ್ಗಭೇದಕ್ಕೆ ಸಂಬಂಧಿಸದೇ ಇರಬಹುದೇನೋ ಎಂದು ತೋರುತ್ತದೆ.

ಸೃಜನಾತ್ಮಕ ಬರವಣಿಗೆಯ ಎರಡು ಮುಖ್ಯ ಅಂಶಗಳಾದ ನವೀನತೆ ಮತ್ತು ಆಸಕ್ತಿಗಳು ಅವರ ಭಾಷಾ ಕೌಶಲ್ಯದೊಂದಿಗೆ ಹೊಂದಿರುವ ಸಹಸಂಬಂಧ ಸೂಚಕಗಳು ಕ್ರಮವಾಗಿ 0.382 ಮತ್ತು 0.379 ಆಗಿದ್ದು ಇವೆರಡೂ ಸಹ ಸಮಾನ ರೀತಿಯಲ್ಲಿ ಹೊಂದಿಕೊಂಡಿವೆ ಎಂಬುದನ್ನು ಸೂಚಿಸುತ್ತವೆ.

ಇನ್ನು ವಿದ್ಯಾರ್ಥಿಗಳು ತಮ್ಮ ಸೃಜನಾತ್ಮಕ ಬರವಣಿಗೆಯಲ್ಲಿ ಪಡೆದ ಅಂಕಗಳ ಪ್ರಕಾರ ಅವರನ್ನು ಉತ್ತಮ, ಮಧ್ಯಮ ಮತ್ತು ಕೆಳಮಟ್ಟದ ಸೃಜನಾತ್ಮಕ ಬರಹಗಾರರೆಂದು ವಿಂಗಡಿಸಿ, ಅನಂತರ ಆಯಾ ವರ್ಗದ ವಿದ್ಯಾರ್ಥಿಗಳ ಭಾಷಾ ಕೌಶಲ್ಯದ ಅಂಕಗಳನ್ನು ಪರಸ್ಪರ ತುಲನೆ ಮಾಡಲಾಯಿತು. ಲಬ್ಧಾಂಶಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

ಲಬ್ಧಾಂಕ ಪಟ್ಟಿ 2

ಭಾಷಾ ಕೌಶಲ್ಯದ ಮಧ್ಯಾಂಕ, ವಿತರಣಾಂತ ಮತ್ತು ಭೇದ ಸೂಚಕಾಂಕಗಳು

ಕ್ರಮ ಸಂಖ್ಯೆ	ಸಮಾಜಾರ್ಥಿಕ ವರ್ಗ		ಸಂಖ್ಯೆ N	ಮಧ್ಯಾಂಕ M	ವಿತರಣಾಂಕ S. D.	ಭೇದ ಸೂಚಕಾಂಕ t – value	
1	ಉತ್ತಮ ವರ್ಗ—						
	ಸೃಜನಾತ್ಮಕತೆ	(i)	38	164,76	27.58	(i) & (iv)	2.79*
	ನವೀನತೆ	(ii)	40	166.25	25.97	(ii) & (v)	3.85*
	ಆಸಕ್ತಿ	(iii)	62	163.05	27.35	(iii) & (vi)	4.03*
2	ಮಧ್ಯಮವರ್ಗ—						
	ಸೃಜನಾತ್ಮಕತೆ	(iv)	124	150.98	23.19	(iv) & (vii)	3.19*
	ನವೀನತೆ	(v)	134	148.68	22.90	(v) & (viii)	2.63*
	ಆಸಕ್ತಿ	(vi)	112	147.00	20.50	(vi) & (ix)	2.24*
3	ಕೆಳವರ್ಗ—						
	ಸೃಜನಾತ್ಮಕತೆ	(vii)	58	138.10	24.07	(vii) & (i)	4.72*
	ನವೀನತೆ	(viii)	46	138.40	22.89	(viii) & (ii)	5.24*
	ಆಸಕ್ತಿ	(ix)	46	137.98	23.79	(ix) & (iii)	5.08

[*ಸಂಭಾವ್ಯ ಸೂಚಿ $p < 0.01$]

ಸಂಭಾವ್ಯ ಸೂಚಿಯು ತೋರಿಸುವಂತೆ ವಿದ್ಯಾರ್ಥಿಗಳಲ್ಲಿ ಉತ್ತಮ ಸೃಜನಾತ್ಮಕ ಬರಹಗಾರರ ಭಾಷಾಜ್ಞಾನದ ಮಟ್ಟ ಅತ್ಯಂತ ಹೆಚ್ಚಾಗಿದ್ದು (164.76) ಕೆಳಮಟ್ಟದ ಸೃಜನಾತ್ಮಕ ಬರಹಗಾರರ ಭಾಷಾ ಜ್ಞಾನದ ಮಟ್ಟ ಅತ್ಯಂತ ಕಡಿಮೆಯಾಗಿದೆ (138.10). ಹಾಗೂ ಇವರಿಬ್ಬರ ನಡುವಿನ ವ್ಯತ್ಯಾಸ ನಿಖರವಾಗಿದೆ. ಮಧ್ಯಮ ಸೃಜನಾತ್ಮಕ ಬರಹಗಾರರ ಭಾಷಾ ಕೌಶಲ್ಯ ಇವರಿಬ್ಬರ ನಡುವೆ ಇದ್ದು (150.98) ಇವರು ಉತ್ತಮ ಸೃಜನಾತ್ಮಕ ಬರಹಗಾರರಿಗಿಂತ ಕಡಿಮೆ ಮತ್ತು ಕೆಳಮಟ್ಟದ ಸೃಜನಾತ್ಮಕ ಬರಹಗಾರರಿಗಿಂತ ಹೆಚ್ಚು ಭಾಷಾ ಜ್ಞಾನವನ್ನು ಪಡೆದಿದ್ದಾರೆ. ಈ ಮೂರು ವರ್ಗಗಳ ಭಾಷಾ ಜ್ಞಾನದಲ್ಲಿನ ವ್ಯತ್ಯಾಸ ನಿಖರವಾಗಿದೆ. ಅಂದರೆ, ಶಾಲಾ ಬಾಲಕ ಬಾಲಕಿಯರಲ್ಲಿ ಸೃಜನಾತ್ಮಕ ಬರವಣಿಗೆಯ ಶಕ್ತಿ ಹೆಚ್ಚಾದಂತೆ ಅವರ ಭಾಷಾ ಕೌಶಲ್ಯವೂ ಸಹ ಹೆಚ್ಚಾಗಿರುವುದನ್ನು ಗಮನಿಸಬಹುದು.

ಇದೇ ಅಂಶವನ್ನು ವಿದ್ಯಾರ್ಥಿಗಳ ನವೀನತೆ ಹಾಗೂ ಆಸಕ್ತಿ ಅಂಕಗಳ ದೃಷ್ಟಿಯಿಂದ ನೋಡಿದಾಗಲೂ ಗಮನಿಸಬಹುದಾಗಿದೆ. ನವೀನತೆಯಲ್ಲಿ ಹೆಚ್ಚು ಶಕ್ತಿ ಪಡೆದಿರುವ ಉತ್ತಮ ವರ್ಗದ ಭಾಷಾ ಕೌಶಲ್ಯ ಅತ್ಯಂತ ಹೆಚ್ಚಾಗಿದ್ದು (166.25) ಅದಕ್ಕಿಂತ ಕಡಿಮೆ ಮಧ್ಯಮ ವರ್ಗದ ನವೀನತೆಯ ವಿದ್ಯಾರ್ಥಿಗಳಲ್ಲಿಯೂ (148.68) ಮತ್ತು ಅತ್ಯಂತ ಕಡಿಮೆ ಕೆಳಮಟ್ಟದ ನವೀನತೆಯನ್ನು ವ್ಯಕ್ತಪಡಿಸಿರುವ ವಿದ್ಯಾರ್ಥಿಗಳಲ್ಲಿ (138.40) ಕಂಡು ಬಂದಿದೆ. ಆಸಕ್ತಿ ವಿಶ್ಲೇಷಣೆಯಲ್ಲಿಯೂ ಸಹ ಇದೇ ಅಂಶವನ್ನು, ಉತ್ತಮ ವರ್ಗ (163.05), ಮಧ್ಯಮವರ್ಗ (147.00) ಮತ್ತು ಕೆಳವರ್ಗ (137.98) ನೋಡಬಹುದು. ಈ ಎಲ್ಲ ವ್ಯತ್ಯಾಸಗಳೂ, ಭೇದ ಸೂಚಿಗಳು ತೋರಿಸಿರುವಂತೆ, ನಿಖರವಾಗಿವೆ.

ಸೃಜನಾತ್ಮಕ ಬಾಲಕ ಬಾಲಕಿಯರಲ್ಲಿರಬಹುದಾದ ವಿವಿಧ ಭಾಷಾಕೌಶಲ್ಯದಲ್ಲಿ ಅಂದರೆ ಅವರು ಕನ್ನಡ, ಇಂಗ್ಲೀಷ್ ಹಾಗೂ ಹಿಂದೀ ಭಾಷೆಗಳಲ್ಲಿ ಪಡೆದಿರುವ ಅಂಕಗಳಲ್ಲಿನ ವ್ಯತ್ಯಾಸವನ್ನು ಆಯಾ ಮಟ್ಟದ ಹುಡುಗ–ಹುಡುಗಿಯರ ಕಲಿಕೆಯ ಅಂಕಗಳ ತುಲನೆಯನ್ನು ಮಾಡಿ ವಿಶ್ಲೇಷಿಸಲಾಯಿತು.

ಈ ಲಬ್ಧಾಂಶ ವಿಶ್ಲೇಷಣೆಯನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟು ವಿವರಿಸಲಾಗಿದೆ.

ಲಬ್ಧಾಂಕ ಪಟ್ಟಿ 3

ಸೃಜನಾತ್ಮಕ ಬಾಲಕ ಬಾಲಕಿಯರ ಕನ್ನಡ, ಇಂಗ್ಲೀಷ್ ಮತ್ತು ಹಿಂದೀ ಭಾಷಾಜ್ಞಾನದ ಮಧ್ಯಾಂಕ, ವಿತರಣಾಂಕ ಮತ್ತು ಭೇದ ಸೂಚಕಾಂಕಗಳು.

ಕ್ರಮ ಸಂಖ್ಯೆ	ವರ್ಗ	ಬಾಲಕರು			ಬಾಲಕಿಯರು			ಭೇದ ಸೂಚಕಾಂಕ
		ಸಂಖ್ಯೆ	ಮಧ್ಯಾಂಕ	ವಿತರಣಾಂಕ	ಸಂಖ್ಯೆ	ಮಧ್ಯಾಂಕ	ವಿತರಣಾಂಕ	
	ಕನ್ನಡ ಭಾಷೆ							
1	ಉತ್ತಮ ಸೃಜನಾತ್ಮಕ ಬರಹಗಾರರು	14	51.29	8.84	24	59.29	9.46	2.62*
2	ಮಧ್ಯಮ ಸೃಜನಾತ್ಮಕ ಬರಹಗಾರರು	54	50.14	9.44	70	49.50	9.43	0.32
3	ಕೆಳಮಟ್ಟದ ಸೃಜನಾತ್ಮಕ ಬರಹಗಾರರು	42	44.38	10.59	16	48.87	7.47	1.81
	ಇಂಗ್ಲಿಷ್ ಭಾಷೆ							
4	ಉತ್ತಮ ಸೃಜನಾತ್ಮಕ ಬರಹಗಾರರು	14	50.57	10.92	24	57.21	10,85	1.81
5	ಮಧ್ಯಮ ಸೃಜನಾತ್ಮಕ ಬರಹಗಾರರು	54	52.09	8.25	70	48.57	9.04	2.26*
6	ಕೆಳಮಟ್ಟದ ಸೃಜನಾತ್ಮಕ ಬರಹಗಾರರು	42	47.24	11.23	16	46.06	8.14	0.44
	ಹಿಂದೀ ಭಾಷೆ							
7	ಉತ್ತಮ ಸೃಜನಾತ್ಮಕ ಬರಹಗಾರರು	14	48.80	10.8	24	57.6	8.6	2.62*
8	ಮಧ್ಯಮ ಸೃಜನಾತ್ಮಕ ಬರಹಗಾರರು	54	50.5	9.4	70	50.6	8.7	0.03
9	ಕೆಳಮಟ್ಟದ ಸೃಜನಾತ್ಮಕ ಬರಹಗಾರರು	42	46.8	9.8	16	46.7	6.9	0.03

	ಎಲ್ಲ ಭಾಷೆಗಳು							
10	ಉತ್ತಮ ಸೃಜನಾತ್ಮಕ ಬರಹಗಾರರು	14	148.8	25.8	24	174.1	24.1	3.06*
11	ಮಧ್ಯಮ ಸೃಜನಾತ್ಮಕ ಬರಹಗಾರರು	54	150.4	20.6	70	148.5	21.1	0.51
12	ಕೆಳಮಟ್ಟದ ಸೃಜನಾತ್ಮಕ ಬರಹಗಾರರು	42	137.6	25.9	16	142.0	18.2	0.75

[* ಸಂಭಾವ್ಯ ಸೂಚಿ P < 0.05]

ಮೇಲಿನ ಪಟ್ಟಿಯಲ್ಲಿ ಕೊಟ್ಟಿರುವ ಹನ್ನೆರಡು ತುಲನೆಗಳಲ್ಲಿ ನಾಲ್ಕು ತುಲನೆಗಳು ಮಾತ್ರ ಸಂಭಾವ್ಯ ಸೂಚಕಾಂಕಕ್ಕಿಂತ ಕಡಿಮೆ ಇದ್ದು ಆ ವ್ಯತ್ಯಾಸಗಳಲ್ಲಿ ಮಾತ್ರ ನಿಖರತೆ ಇದೆ ಎಂಬುದನ್ನು ತೋರಿಸಿವೆ. ಉಳಿದ ತುಲನೆಗಳಲ್ಲಿ ಬಾಲಕ ಬಾಲಕಿಯರ ಭಾಷಾ ಕೌಶಲ್ಯದಲ್ಲಿ ನೈಜ ವ್ಯತ್ಯಾಸವಿರುವುದಿಲ್ಲ.

ಅಂದರೆ, ಉತ್ತಮ ಸೃಜನಾತ್ಮಕ ಬರಹಗಾರರಲ್ಲಿ ಬಾಲಕಿಯರ ಭಾಷಾ ಕೌಶಲ್ಯ, ಬಾಲಕರ ಭಾಷಾ ಕೌಶಲ್ಯಕ್ಕಿಂತ ಮಿಗಿಲಾಗಿದ್ದು, ಅವರಿಬ್ಬರಲ್ಲಿರುವ ವ್ಯತ್ಯಾಸವು (174.1–148.8) ನೈಜವಾಗಿದೆ ಎಂಬುದನ್ನು ಪಡೆದಿರುವ ಭೇದ ಸೂಚಕಾಂಕ (3.06) ಸೂಚಿಸುತ್ತದೆ. ಪುನಃ ಈ ಬಾಲಕಿಯರ ಕನ್ನಡ ಭಾಷಾ ಕೌಶಲ್ಯ ಹಾಗೂ ಹಿಂದೀ ಭಾಷಾ ಕೌಶಲ್ಯ (59.29 ಮತ್ತು 57.6 ಕ್ರಮವಾಗಿ) ಬಾಲಕರ ಆ ಕೌಶಲ್ಯಗಳಿಗಿಂತ (ಕ್ರಮವಾಗಿ 51.29 ಮತ್ತು 48.8) ಮಿಗಿಲಾಗಿದ್ದು ಅವುಗಳಿಗಿರುವ ವ್ಯತ್ಯಾಸ ನೈಜವೆಂಬುವನ್ನು ಲಬ್ಧವಾಗಿರುವ ಭೇದ ಸೂಚ್ಯಂಕಗಳು (ಕ್ರಮವಾಗಿ 2.62 ಮತ್ತು 2.62) ನಿರೂಪಿಸಿ ಪ್ರಮಾಣೀಕರಿಸಿವೆ. ಅಂದರೆ ಉತ್ತಮ ಸೃಜನಾತ್ಮಕ ಬರಹಗಾರರಲ್ಲಿ ಬಾಲಕರಿಗಿಂತ ಬಾಲಕಿಯರು ಮಿಗಿಲಾಗಿದ್ದು ಕನ್ನಡ ಭಾಷೆಯಲ್ಲಿ ಹಾಗೂ ಹಿಂದೀ ಭಾಷಾ ಕೌಶಲ್ಯದಲ್ಲಿ ಅವರನ್ನು ಮೀರಿಸಿದ್ದಾರೆ ಎಂದಾಯಿತು. ಇಂಗ್ಲೀಷ್ ಭಾಷಾ ಕೌಶಲ್ಯದಲ್ಲಿ ಈ ಎರಡು ವರ್ಗದವರಿಗೆ ಯಾವ ವ್ಯತ್ಯಾಸವೂ ಕಂಡುಬಂದಿಲ್ಲ.

ಇನ್ನು, ಮಧ್ಯಮ ಸೃಜನಾತ್ಮಕ ಬರಹಗಾರರಲ್ಲಿ ಇಂಗ್ಲೀಷ್ ಭಾಷಾ ಕೌಶಲ್ಯದಲ್ಲಿ ಮಾತ್ರ ಬಾಲಕರು ಬಾಲಕಿಯರಿಗಿಂತ (ಕ್ರಮವಾಗಿ 52.09 ಮತ್ತು 48.57) ಮೇಲಿನ ಮಟ್ಟದಲ್ಲಿದ್ದಾರೆ ಎಂಬುದು ಅವುಗಳ ವ್ಯತ್ಯಾಸದ ಭೇದ ಸೂಚ್ಯಾಂಕ (2.26) ದಿಂದ ತಿಳಿಯುತ್ತದೆ.

ಕೆಳಮಟ್ಟದ ಸೃಜನಾತ್ಮಕ ಬಾಲಕ ಬಾಲಕಿಯರಲ್ಲಿ ಯಾವ ವಿಧವಾದ ನೈಜ ವ್ಯತ್ಯಾಸವೂ ಇರುವುದಿಲ್ಲ. ಹಾಗೆಯೇ ಮಿಕ್ಕ ಯಾವ ತುಲನೆಗಳಲ್ಲಿಯೂ ಸಹ ಬಾಲಕ ಬಾಲಕಿಯರಲ್ಲಿ ವ್ಯತ್ಯಾಸವು ನಿಖರವಾಗಿ ಕಂಡುಬಂದಿಲ್ಲ.

ಇಂದಿನ ನಮ್ಮ ಶಾಲೆಗಳಲ್ಲಿ ಮಕ್ಕಳ ಸೃಜನಾತ್ಮಕ ಬೆಳವಣಿಗೆಗೆ ಹಾಗೂ ಬರವಣಿಗೆಗೆ ಅಷ್ಟು ಗಮನ ಕೊಡದಿರುವುದು ದುರದೃಷ್ಟಕರ. ಸಾಮಾನ್ಯವಾಗಿ ನಾವು ಈಗಿರುವ ಪರಿಸ್ಥಿತಿಯಲ್ಲಿ ಶಾಲೆಗಳಲ್ಲಿ ಹುಡುಗರನ್ನು ಅವರ ವಾರ್ಷಿಕ ಪರೀಕ್ಷೆಗಳಿಗೆ ತಯಾರಿಸುವುದನ್ನು ಬಿಟ್ಟು ಬೇರೆ ಏನನ್ನೂ ಸಹ ಮಾಡುತ್ತಿಲ್ಲ. ಈ ಅಧ್ಯಯನದಿಂದ ಬೆಳಕಿಗೆ ಬಂದಿರುವ ಅಂಶಗಳು, ಮಕ್ಕಳ ಸೃಜನಾತ್ಮಕ ಬರವಣಿಗೆಯೂ ಅವರ

ಭಾಷಾ ಕೌಶಲ್ಯದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿ, ಅವರ ಕೌಶಲ್ಯವು ಉತ್ತಮಗೊಳ್ಳಲು ಸಹಾಯವಾಗುತ್ತದೆ ಎಂಬುದನ್ನು ನಿರೂಪಿಸಿವೆ.

ಇಂದಿನ ಶಾಲೆಯ ಪರಿಸರದಲ್ಲಿ ವಿದ್ಯಾರ್ಥಿಗಳಿಗೆ ಸೃಜನಾತ್ಮಕ ವಾತಾವರಣ ಇಲ್ಲದಿದ್ದರೂ ಸಹ ಅವರಲ್ಲಿ ಸುಪ್ತವಾಗಿರುವ ಈ ಪ್ರತಿಭೆಯು ಪ್ರಕಟಗೊಳ್ಳಲು ಅವಕಾಶ ದೊರೆತಾಗ, ಅವರು ಹೇಗೆ ತಮ್ಮ ಈ ಶಕ್ತಿಯನ್ನು ಪ್ರದರ್ಶಿಸುತ್ತಾರೆ ಎಂಬುದನ್ನು ಇದು ತೋರಿಸುವುದೇ ಅಲ್ಲದೆ, ಅವರಿಗೆ ಶಾಲೆಗಳಲ್ಲಿ (ಹಾಗೂ ಮನೆಗಳಲ್ಲಿ) ಸರಿಯಾದ ವಾತಾವರಣವನ್ನು ಕಲ್ಪಿಸಿದ್ದೇ ಆದರೆ, ನಿಜವಾಗಿಯೂ ಅವರ ಪಠ್ಯವಸ್ತುವಿನಲ್ಲಿನ ಭಾಷಾ ಕೌಶಲ್ಯವು ವಿಕಾಸಹೊಂದುವುದೇ ಅಲ್ಲದೆ, ಅವರ ಸರ್ವತೋಮುಖ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸಿ ಅವರನ್ನು ಸೃಜನಾತ್ಮಕ ವ್ಯಕ್ತಿಗಳನ್ನಾಗಿ ಮಾಡಲು ಸಾಧ್ಯವಾಗುತ್ತದೆ.

ಈ ಅಧ್ಯಯನದಲ್ಲಿ ಪ್ರಕಟಗೊಂಡ ಅಂಶಗಳು ಈಗಾಗಲೇ ನಡೆಸಿರುವ ಅಧ್ಯಯನಗಳ ಅಂಶಗಳನ್ನು ಸಮರ್ಥಿಸಿವೆ. (ರೈನ, 1968; ಹಸನ್, 1963; ಕೌಂಟ್ಸ್, 1972; ಮತ್ತು ಮೆಹದಿ, 1966). ಬಾಲಕಿಯರಲ್ಲಿ ಸೃಜನಾತ್ಮಕತೆ ಮತ್ತು ಭಾಷಾಜ್ಞಾನ ಮಿಗಿಲಾಗಿದ್ದು ಅವರಿಗೆ ಸಾಕಷ್ಟು ಪ್ರೋತ್ಸಾಹ ದೊರೆಯ ಬೇಕಾಗಿದೆ.

ಶಾಲೆಗಳಲ್ಲಿ ಸೃಜನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ, ಮಕ್ಕಳಲ್ಲಿ ನಿಜವಾಗಿಯೂ ಸೃಜನಾತ್ಮಕ ಚಿಂತನೆ, ಹಾಗೂ ಬರವಣಿಗೆಗೆ ಹೆಚ್ಚು ಪ್ರೋತ್ಸಾಹ ದೊರೆತಾಗ ನಮ್ಮ ಶಿಕ್ಷಣ ಹೆಚ್ಚು ಅರ್ಥವತ್ತಾಗುವುದರಲ್ಲಿ ಸಂಶಯವಿಲ್ಲ. ಆದರೆ ಇದಕ್ಕೆ ಸೃಜನಾತ್ಮಕ ಶಿಕ್ಷಕರು ಅತ್ಯಗತ್ಯ ಎಂಬುದನ್ನು ಮರೆಯುವಂತಿಲ್ಲ.

ಗ್ರಂಥ ಋಣ (ಮಿತ ಮತ್ತು ಅಪೂರ್ಣ)

Selected and limited Bibliography

1. Gowan, Demos & Tarrance ; "*Creativity-Its educational Implications*" John Wiley & Sons, New York, 1967
2. Mooney, Ross L & Razik, T.A. "*Explorations in Creativity*" Harper & Row, NewYork, 1967
3. Maybur, Bary "*Creative Writing for Juniors*" Batsford, London, 1967
4. Taylor, Calvin, (Ed) '*Creativity Process and Potential*' McGraw-Hill Book Co., New York, 1964

5. Torrance, Paul, E — *"Education and Creative Potential"* University of Minnesota Press Minnepolis, 1967

6. Torrance, Paul, E — *Guiding Creative Talents"* Prentice-Hall of India, New Delhi 1969

7. Vernon, P. E. (Ed) — *"Creativity"* Penguin Book, England, 1970

Dissertation Abstracts International :

Volumes : 24, No. 6 : 1963
28, No. 1 1967
32, Nos. 2 & 8 : 1972
34, No. 1 1973
36, No. 3 1975

ಸೂರದಾಸರು

ಡಾ॥ ಭಾರತೀರಮಣಾಚಾರ್ಯ

ಈಗ್ಗೆ ಐದು ಶತಮಾನಗಳ ಹಿಂದೆ ದಿಲ್ಲಿಗೆ ಸಮೀಪದಲ್ಲಿರುವ ಸೋಹೀ ಎಂಬ ಗ್ರಾಮದಲ್ಲಿದ್ದ ಸಾರಸ್ವತ ಬ್ರಾಹ್ಮಣ ಪರಿವಾರವೊಂದರಲ್ಲಿ ಒಬ್ಬ ಬಾಲಕ ಜನಿಸಿದ. ಅವನು ಹುಟ್ಟುವಾಗಲೇ ಕುರುಡನಾಗಿದ್ದ. ಆದರೆ ತನ್ನ ಪ್ರತಿಭೆಯ ಪರಿಣಾಮವಾಗಿ ಹೆಸರಾಂತ ಕವಿಯೂ, ಕೀರ್ತನಕಾರನೂ ಮಹಾಭಕ್ತವರೇಣ್ಯನೂ ಆಗಿ ಹಿಂದೀ ಸಾಹಿತ್ಯ ಸಮೃದ್ಧಿಗೂ ಸಂಗೀತ ಮಹಾಪೂರಕ್ಕೂ ಕಾರಣನಾಗಿ ಅಮರತ್ವವನ್ನು ಸಾಧಿಸಿದ.

ಸೂರದಾಸರ ಜೀವನ ಚರಿತ್ರೆಯನ್ನು ಹೇಳ ಹೊರಟವರಿಗೆ ಮುಖ್ಯವಾದ ಆಧಾರ, ದಂತಕತೆಗಳು ಕಿಂವದಂತಿಗಳು. ಅವರು ತಮ್ಮ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ. ಸಮಕಾಲೀನರು ಐತಿಹಾಸಿಕ ದೃಷ್ಟಿಯಿಂದ ಏನೊಂದು ದಾಖಲೆಯನ್ನೂ ಬರೆದಿಟ್ಟಿಲ್ಲ. ಎಲ್ಲರೂ ಒಪ್ಪಿಕೊಂಡಿರುವಂತೆ ಸಂವತ್ 1535 (ಇಸ್ವಿ 1478) ವೈಶಾಖ ಶುಕ್ಲ ಪಂಚಮೀ ಸೂರದಾಸರ ಜನ್ಮತಿಥಿ. ಸುಶ್ರಾವ್ಯ ಕಂಠ ಮಾಧುರ್ಯವನ್ನು ಗುರುತಿಸಿ ಇವರಿಗೆ ಬಾಲ್ಯದಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿಸಿರಬೇಕು. ಇವರು ಹೊಟ್ಟೆಪಾಡಿಗಾಗಿ ಗಲೂಘಾಟಿನಲ್ಲಿ ಕುಳಿತು ಭಿಕ್ಷೆ ಬೇಡುತ್ತಿದ್ದರಂತೆ. ಆಗ ಜನಮನವನ್ನು ತಣಿಸುತ್ತಿತ್ತಂತೆ ಇವರ ಕಂಠಶ್ರೀ. ಇಸ್ವಿ 1510ರಲ್ಲಿ ಒಮ್ಮೆ ಅಲ್ಲಿಗೆ ಬಂದ ಮಹಾತ್ಮ ವಲ್ಲಭಾಚಾರ್ಯರು ಈ ಹಾಡಿ ಬೇಡುವ ಯುವಕನನ್ನು ಕಂಡು ಕನಿಕರದಿಂದ ಆತನ ಪ್ರತಿಭೆಯನ್ನು ಗುರುತಿಸಿ ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರಂತೆ. ಪುಷ್ಟಿ ಮಾರ್ಗದಲ್ಲಿ ದೀಕ್ಷೆಯನ್ನಿತ್ತು, ಶ್ರೀನಾಥನ ಮಂದಿರದಲ್ಲಿ ಅಷ್ಟಯಾಮ ಸೇವೆಯ ಸಂದರ್ಭದಲ್ಲಿ ಕೀರ್ತನೆಗಳನ್ನು ಹಾಡಲು ನೇಮಿಸಿಕೊಂಡರಂತೆ. ಹಾಗೂ ಆ ಹುಟ್ಟು ಕುರುಡನಿಗೆ ಕಣ್ಣಿಗೆ ಕಟ್ಟುವಂತೆ ಭಾಗವತದಲ್ಲಿ ವರ್ಣಿತವಾದ ಶ್ರೀ ನಂದನಂದನನ ಲೀಲೆಗಳನ್ನು ಉಪದೇಶಿಸಿ ಭಕ್ತಿಪರವಶನನ್ನಾಗಿ ಮಾಡಿದರಂತೆ. ಈ ಮಹತ್ಸಮಾಗಮದ ಮಹತ್ಫಲವೋ ಎಂಬಂತೆ ಹುಟ್ಟು ಕುರುಡನಾದವನು ಸಾರಸ್ವತ ಗಗನದಲ್ಲಿ ಸೂರ್ಯನೋಪಾದಿಯಲ್ಲಿ ದೇದೀಪ್ಯಮಾನನಾಗಲು ಸಾಧ್ಯವಾಯಿತು.

ದೀಕ್ಷೆಯನ್ನು ಸ್ವೀಕರಿಸಿದ ತರುವಾಯ ಸುಮಾರು ಎಪ್ಪತ್ತು ವರ್ಷಗಳ ಕಾಲ ಸರಸ ಸುಂದರ ಸ್ವರಲಹರಿಯನ್ನೆಬ್ಬಿಸಿ, ಸಹೃದಯರನ್ನೂ ಅದಕ್ಕೂ ಮಿಗಿಲಾಗಿ

ತನ್ನ ಇಷ್ಟ ದೇವನಾದ ಯಶೋದಾನಂದವರ್ಧನನ್ನು ತಣಿಸಿರುವ ಈ ಮಹಾನುಭಾವನು ಬರೆದಿರುವುದು–ಅಲ್ಲ ಹಾಡಿರುವುದು ಕೀರ್ತನೆಗಳನ್ನು ಮಾತ್ರ. ಇದಕ್ಕೆ ಹಿಂದಿಯಲ್ಲಿ ಪದಗಳೆಂದು ಹೆಸರು. ಇವು ಗೀತ ಮುಕ್ತಗಳು. ಗಾಯಕರಿಗೆ ಇವು ಸರ್ವಾಧಾರ. ದಾಕ್ಷಿಣಾತ್ಯ ಸಂಗೀತದಲ್ಲಿ ತ್ಯಾಗರಾಜರ ಕೀರ್ತನೆಗಳಿಗೆ ಯಾವ ಸ್ಥಾನಮಾನವುಂಟೋ ಅದೇ ಸ್ಥಾನಮಾನ ಔತ್ತರೇಯ ಸಂಗೀತ ಪದ್ಧತಿಯಲ್ಲಿ ಸೂರದಾಸರ ಕೀರ್ತನೆಗಳಿಗೆ ದೊರತಿದೆ. ಸಾಹಿತ್ಯ ಕ್ಷೇತ್ರದಲ್ಲಿ ವಾತ್ಸಲ್ಯ ಹಾಗೂ ಶೃಂಗಾರ ರಸದೌತಣವನ್ನು ಇಂದಿಗೂ ನೀಡುತ್ತಿರುವ ಸೂರದಾಸರ ಪದಗಳು ಸಹೃದಯರ ಅಕ್ಷಯ ನಿಧಿಯಾಗಿದೆ.

ಸೂರದಾಸರು ಸೂರಸಾರಾವಲೀ, ಸಾಹಿತ್ಯಲಹರೀ ಮತ್ತು ಸೂರಸಾಗರ ವೆಂಬ ಕೃತಿಗಳನ್ನು ರಚಿಸಿರುವರೆಂದು ಪ್ರಸಿದ್ಧಿ ಇದೆ. ಅಲ್ಲದೆ ಸೂರದಾಸರದೆಂದು ಹೇಳಲಾಗುವ ಇನ್ನೂ ಅನೇಕ ರಚನೆಗಳು ದೊರೆತಿದ್ದರೂ ವಿದ್ವಾಂಸರು ಹಾಗೂ ವಿಮರ್ಶಕರು ಅವುಗಳನ್ನು ಸೂರದಾಸರದೆಂದು ಒಪ್ಪಿಕೊಂಡಿಲ್ಲ.

ಸಾಹಿತ್ಯಲಹರೀ ಮತ್ತು ಸೂರಸಾರಾವಲೀ ಎಂಬುವು ಜನಾದರಣೀಯವಾದ ಕೃತಿಗಳಲ್ಲ. ಸೂರಸಾಗರವೆಂಬುದು ಜನಾದರಣೀಯವಾದ ಕೃತಿ ಮಾತ್ರವಲ್ಲ ಅದೊಂದು ಮೇರುಕೃತಿ. ಜನರು ಹೇಳುವಂತೆ,ಸೂರಸಾಗರದಲ್ಲಿ ಸಪಾದಲಕ್ಷ ಕೀರ್ತನೆ ಗಳಿದ್ದವಂತೆ. ಆದರೆ ಈಗ ದೊರೆತಿರುವುದು ಹನ್ನೆರಡು ಸಾವಿರಕ್ಕೂ ಕಡಿಮೆ ಸಂಖ್ಯೆಯಲ್ಲಿದೆ. "ವ್ಯಾಸರು ಶುಕದೇವನಿಗೆ ದ್ವಾದಶ ಸ್ಕಂಧವನ್ನು ಉಪದೇಶಿಸಿದರು. ಅದನ್ನೇ ಸೂರದಾಸ ಪದಗಳ ರೂಪದಲ್ಲಿ ಭಾಷೆಯಲ್ಲಿ ಹಾಡಿದ್ದಾನೆ" ಎಂದು ಪ್ರಥಮಸ್ಕಂಧದ ಕೊನೆಯಲ್ಲಿ ಸೂರದಾಸರು ಹೇಳಿಕೊಂಡಿದ್ದಾರೆ. ಇದೇ ಬಗೆಯ ಹೇಳಿಕೆಯು ಪ್ರತ್ಯೇಕ ಸ್ಕಂಧದ ಕೊನೆಯಲ್ಲಿದೆ.

ಇದರಿಂದ ಸೂರಸಾಗರಕ್ಕೆ ಆಧಾರ ಭಾಗವತ ಎಂಬುದು ನಿರ್ವಿವಾದ. ಆದರೆ ಇದು ಭಾಗವತದ ಭಾಷಾಂತರವಲ್ಲ. ಭಾವಾನುವಾದವೂ ಅಲ್ಲ. ಸ್ವರುಚಿಗೆ ತಕ್ಕಂತೆ ಭಾಗವತದಲ್ಲಿ ಬಂದಿರುವ ವಿಷಯಗಳಲ್ಲಿ ಕೆಲವನ್ನು ಆಯ್ದುಕೊಂಡು, ಕೆಲವೆಡೆ ಹಿಗ್ಗಿಸಿ, ಕೆಲವೆಡೆ ಸಂಗ್ರಹಿಸಿ, ಕೆಲವನ್ನು ಕೈ ಬಿಟ್ಟು, ಕೆಲವೊಂದನ್ನು ಪುನಃ ಪುನಃ ಜ್ಞಾಪಿಸಿಕೊಂಡು ಹಾಡಿರುವುದು ಸೂರಸಾಗರದಲ್ಲಿ ಎದ್ದು ಕಾಣುವ ವಿಷಯ. ಭಾಗವತ ಹಾಗೂ ಸೂರಸಾಗರವನ್ನು ಹೋಲಿಸಿ ನೋಡಿದಾಗ ಇದು ಸ್ಪಷ್ಟವಾಗುತ್ತದೆ:—

ಭಾಗವತ			ಸೂರಸಾಗರ-ನಾಗರೀಪ್ರಚಾರಿಣೀ ಸಭಾ-ಕಾಶೀ ಸಂಸ್ಕರಣ
ಸ್ಕಂಧ	ಅಧ್ಯಾಯ	ಶ್ಲೋಕ	ಪದಗಳು
ಪ್ರಥಮ	19	1662	343 ಇವುಗಳಲ್ಲಿ 223 ಪದಗಳು 'ವಿನಯ'ಕ್ಕೆ ಸಂಬಂಧಿಸಿರುವುವು.
ದ್ವಿತೀಯ	10	3925	38 ಪದಗಳು
ತೃತೀಯ	33	1502	13 ಪದಗಳು
ಚತುರ್ಥ	31	1407	13 ಪದಗಳು
ಪಂಚಮ	26	666	4 ಪದಗಳು
ಷಷ್ಠ	19	851	8 ಪದಗಳು
ಸಪ್ತಮ	15	750	8 ಪದಗಳು
ಅಷ್ಟಮ	24	931	17 ಪದಗಳು
ನವಮ	24	963	174 ಪದಗಳು
ದಶಮ			
ಪೂರ್ವಾರ್ಧ	49	1935	4160 ಪದಗಳು
ಉತ್ತರಾರ್ಧ	41	1516	149 ಪದಗಳು
ಏಕಾದಶ	31	1374	4 ಪದಗಳು
ದ್ವಾದಶ	13	553	5 ಪದಗಳು

ಈ ಹೋಲಿಕೆಯಿಂದ ಕವಿಯ ಒಲವು-ನಿಲವುಗಳು ಸ್ಪಷ್ಟವಾಗುತ್ತವೆ. ಭಾಗವತದ ವಸ್ತುವನ್ನು ಯಥಾವತ್ತಾಗಿ ನಿರೂಪಿಸುವುದು ಅವರ ನಿಲುವಲ್ಲ. ಭಕ್ತಿಗೆ ಪುಷ್ಟಿಯನ್ನು ಕೊಡುವ ಮನಃಸ್ಥಿತಿಯನ್ನು ಪಡೆಯುವ ಹಂಬಲವು ವಿನಯದ ಪದಗಳಲ್ಲಿ ಕಂಡುಬರುತ್ತಿದೆ. ಇದು ಭಾಗವತದ ಪ್ರಾರಂಭದಲ್ಲಿಲ್ಲದ ಹೊಸ ವಿಷಯ. ಭಾಗವತದ ಕತೆಗೂ ಇದಕ್ಕೂ ನೇರ ಸಂಬಂಧ ಇಲ್ಲವೇ ಇಲ್ಲ. ಆದರೆ "ಯದಿ ಹರಿಸ್ಮರಣೇ ಸುರತಂ ಮನಃ" ಎಂದು ಜಯದೇವ ಹೇಳುವಂತೆ ಮನಸ್ಸನ್ನು ಹರಿ ಸ್ಮರಣೆಗೆ ಹದಗೊಳಿಸುವ ಪ್ರಯತ್ನವೆನ್ನುವಂತಿದೆ ಈ ಪದಗಳ ರಚನೆ. ಉಳಿದ ಪ್ರಥಮ ಸ್ಕಂಧಕ್ಕೆ ಸಂಬಂಧಪಟ್ಟ ಪದಗಳಲ್ಲಿ ಶುಕ ಹಾಗೂ ವ್ಯಾಸರ ಜನ್ಮ, ಭಾಗವತದ ರಚನಾಸಂದರ್ಭ ಇವುಗಳನ್ನು ಹೇಳಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಪದಗಳು ನಾಮಮಹಿಮೆ. ವಿದುರನ ಮನೆಯಲ್ಲಿ ಪ್ರಭುವು ಆತಿಥ್ಯವನ್ನು ಸ್ವೀಕರಿಸಿದ್ದು, ದ್ರೌಪದಿಯ ಮಾನಸಂರಕ್ಷಣೆಯನ್ನು ಮಾಡಿದ್ದು ಭೀಷ್ಮಪ್ರತಿಜ್ಞೆ ಇದಕ್ಕೂ ಮುಂಚಿತ ವಾಗಿ ಪಾಂಡವರ ರಾಜ್ಯಾಭಿಷೇಕ, ಯುಧಿಷ್ಠಿರನನ್ನು ಕುರಿತು ಭೀಷ್ಮರ ಉಪದೇಶ ಮಹಾಭಾರತದಲ್ಲಿ ಬರುವ ಭಕ್ತವಾತ್ಸಲ್ಯದ ಪ್ರಸಂಗಗಳು, ಅರ್ಜುನ ಹಾಗೂ

ದುರ್ಯೋಧನರಿಬ್ಬರೂ ಶ್ರೀಕೃಷ್ಣನ ಸಹಾಯ ಪಡೆಯಲು ಹೋಗುವುದು, ದುರ್ಯೋಧನನು ಭೀಷ್ಮರಿಗೆ ತನ್ನ ಬಲಾಬಲವನ್ನು ಶತೃಗಳ ಬಲವನ್ನೂ ನಿವೇದಿಸಿ ತನ್ನ 'ಛತ್ರಪನ' ಅಂದರೆ ಕ್ಷತ್ರಿಯನ ಪ್ರತಿಜ್ಞೆಯನ್ನು ಉಳಿಸಲು ಪ್ರಾರ್ಥಿಸಿಕೊಳ್ಳುವುದು ಮುಂತಾದ ವಿಷಯವನ್ನು ಕುರಿತದ್ದಾಗಿವೆ.

"ಆಜು ಜೌಂ ಹರಿಹಿಂ ನ ಸಸ್ತ್ರ ಗಹಾಊಂ"—ಇವತ್ತಿನ ದಿನ ಹರಿಯ ಕೈಯಲ್ಲಿ ಶಸ್ತ್ರವನ್ನು ಹಿಡಿಸದಿದ್ದರೆ ತಾಯಿ ಗಂಗೆಗೆ ನಾಚಿಕೆಯಾದೀತು ಮತ್ತು ಶಂತನು ಸುತನೇ ನಾನಲ್ಲದೆ ಹೋಗಬೇಕು ಎಂದು ಪ್ರತಿಜ್ಞೆ ಮಾಡಿದ ಭೀಷ್ಮನ ಯುದ್ಧ ವರ್ಣನೆ ಒಂದು ಪದದಲ್ಲಿ ಬಂದಿದೆ.

"ಹಮುಭಕ್ತನಿಕೇ, ಭಕ್ತ ಹಮಾರೇ"—ನಾನು ಭಕ್ತರ ಅಧೀನ-ಭಕ್ತರು ನನ್ನವರು ಎಂಬ ಹರಿಯ ಅಭಯವಚನವನ್ನಿತ್ತು ಅರ್ಜುನನ ರಕ್ಷಣೆಗಾಗಿ ಗೋವಿಂದನು ಕುಪಿತನಾಗಿ ಕೈಯಲ್ಲಿ ಚಕ್ರವನ್ನೆತ್ತಿಕೊಂಡ ಪ್ರಸಂಗವನ್ನು ಸೂರದಾಸರು ವರ್ಣಿಸಿದ್ದಾರೆ. ಪ್ರಭು ಶ್ರೀಕೃಷ್ಣನಿಗೆ ತನ್ನ ಪ್ರತಿಜ್ಞೆಯನ್ನು ಮುರಿದದ್ದಕ್ಕೆ ದುಃಖವಿಲ್ಲ, ಚಕ್ರವನ್ನು ಧಾರಣಮಾಡಿ ಸಿಂಹವು ಗುಹೆಯಿಂದ ಹೊರಬಂದು ಬೇಟೆಯಮೇಲೆ ಎರಗಿ ಬರುವಂತೆ ಶ್ರೀಕೃಷ್ಣ ಭೀಷ್ಮನ ಮೇಲೆ ಎರಗಿ ಬಂದದ್ದು ಸರಿ, ಆದರೆ ಯಾರ ಮೇಲೆ ಚಕ್ರಾಯುಧವನ್ನೆಸೆಯಬೇಕು ? "ಭಕ್ತ ದೋಊದಿಸಿ, ಕಾಪರ ಚಕ್ರ ಚಲಾಊಂ"—ಎರಡೂ ಕಡೆ ಭಕ್ತರಿರುವಾಗ ಮಾಡುವುದೇನು ?

ಅನಂತರದ ಪದಗಳ ಮುಖ್ಯ ವಿಷಯ ಅರ್ಜುನ ಭೀಷ್ಮರ ಸಂವಾದ ರೂಪವಾದದ್ದು. ಇಲ್ಲಿಯೂ ಸಹ ಭೀಷ್ಮರು ಶ್ರೀಕೃಷ್ಣನ ಭಕ್ತವಾತ್ಸಲ್ಯವನ್ನು ಕೊಂಡಾಡಿದ್ದಾರೆ.

ಅನಂತರದ ಸೂರದಾಸರು ಎತ್ತಿಕೊಂಡಿರುವುದು ದ್ವಾರಕೆಗೆ ಶ್ರೀಕೃಷ್ಣನು ಹೊರಟು ನಿಂತಿರುವ ಪ್ರಸಂಗ, ಮುಖ್ಯವಾಗಿ ಇಲ್ಲಿ ಕುಂತೀದೇವಿಯು 'ಪ್ರಭುಜೂ, ವಿಪದಾಭಲೀ ವಿಚಾರೀ'-ಸ್ವಾಮಿ! ವಿಪತ್ತೇ ಒಳ್ಳೆಯದೆಂಬುದು ನನ್ನ ವಿಚಾರ ಎಂದು ಹರಿವಿಸ್ಮರಣೆಗೆ ಕಾರಣವಾಗುವ ರಾಜ್ಯಕೋಶಕ್ಕಿಂತಲೂ ಹರಿಸ್ಮರಣೆಗೆ ಇಂಬುಕೊಡುವ ವಿಪತ್ತೇ ವಾಂಛನೀಯವೆಂದು ನಿರೂಪಿಸುವುದು ಬರುತ್ತದೆ.

ಮುಂದೆ ಧೃತರಾಷ್ಟ್ರನ ವೈರಾಗ್ಯ, ಪರೀಕ್ಷಿತನ ರಕ್ಷಣೆ-ಜನ್ಮ, ಪರೀಕ್ಷಿತನ ವೃತ್ತಾಂತ, ಪರೀಕ್ಷಿತನಿಗೆ ಬಂದ ಶಾಪ, ವೈರಾಗ್ಯ, ಚಿತ್ತ ಬುದ್ಧಿಯ ಸಂಭಾಷಣೆ ಬಂದಿದೆ. ಈ ಸಂದರ್ಭಗಳಲ್ಲಿ ಸೂರದಾಸರು ತಮ್ಮ ನಿಲುವಿಗನುಸಾರವಾಗಿ ಕಥಾ ಭಾಗಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡದೆ-ಭಕ್ತಿಭಾವಕ್ಕೂ ಮಾಹಾತ್ಮ್ಯ ಕಥನಕ್ಕೂ ವೈರಾಗ್ಯ ನಿರೂಪಣೆಗೂ ಗಮನಕೊಟ್ಟಿದ್ದಾರೆ. ಭಾಗವತ ಮಾಹಾತ್ಮ್ಯ ಹಾಗೂ ಪರೀಕ್ಷಿತನ ವಿಸ್ತೃತ ಕಥಾ ಪ್ರಸಂಗವು ಮೂಲಭಾಗವತದಲ್ಲಿದ್ದರೂ ಅದನ್ನು

ಸಂಗ್ರಹಿಸಿಬಿಟ್ಟಿದ್ದಾರೆ. ದ್ವಿತೀಯ ಸ್ಕಂಧದಲ್ಲಿ 38 ಪದಗಳಿದ್ದರೂ ಮೂಲ ಭಾಗವತದಲ್ಲಿ ಬಂದಿರುವ ಅವತಾರಗಳ—ಮುಖ್ಯವಾಗಿ 24 ಅವತಾರಗಳ ಹೆಸರು, ಬ್ರಹ್ಮದೇವನ ಉತ್ಪತ್ತಿ ಮತ್ತು ಚತುಃಶ್ಲೋಕೀ ಭಾಗವತ ಛಾಯೆಯನ್ನು ಬಿಟ್ಟರೆ-ಅದೂ ಮೂರೇ ಪದಗಳಲ್ಲಿ-ಭಾಗವತಕ್ಕೂ ಮಿಕ್ಕ ಪದಗಳಿಗೂ ಏನೂ ನೇರ ಸಂಬಂಧವಿಲ್ಲ.

ಭಾಗವತ ಮೂರನೇ ಸ್ಕಂಧದಿಂದ ಒಂಬತ್ತನೇ ಸ್ಕಂಧದವರೆಗೆ ಅನೇಕ ರಾಜರ ವಂಶಾವಲಿ ಬರುತ್ತದೆ; ಸೃಷ್ಟಿವಿಸ್ತಾರ, ಅನೇಕ ಸಂದರ್ಭಗಳಲ್ಲಿ ಜ್ಞಾನ, ಭಕ್ತಿ, ವೈರಾಗ್ಯಕ್ಕೆ ಸಂಬಂಧಪಟ್ಟ ಉಪದೇಶಗಳೂ ಬರುತ್ತವೆ. ಆದರೆ ಸೂರದಾಸರಿಗೆ ಇವುಗಳಲ್ಲಿ ಸುತರಾಂ ಅಭಿರುಚಿಯಿಲ್ಲ. ಆದ್ದರಿಂದಲೇ ಮೂರನೇ ಸ್ಕಂಧದಿಂದ ಒಂಬತ್ತನೇ ಸ್ಕಂಧದವರೆಗೂ, ಭಾಗವತದ ಹತ್ತನೇ ಸ್ಕಂಧದ ಉತ್ತರಾರ್ಧ ಹಾಗೂ ಹನ್ನೊಂದು ಮತ್ತು ಹನ್ನೆರಡನೇ ಸ್ಕಂಧಗಳಲ್ಲಿ ಭಗವಾನ್ ಶ್ರೀಕೃಷ್ಣನ ಅವತಾರ ಕಥೆಗಳನ್ನು ಮಾತ್ರ ಸಂಕ್ಷೇಪವಾಗಿ ಹಾಡಿದ್ದಾರೆ. ಕೇವಲ 395 ಪದಗಳನ್ನು ಹಾಡಿ ತೃತೀಯ ಸ್ಕಂಧದಿಂದ ನವಮ ಸ್ಕಂಧಪೂರ್ತಿ 172 ಅಧ್ಯಾಯ ಹಾಗೂ 7070 ಶ್ಲೋಕಗಳಲ್ಲಿ ವರ್ಣಿತವಾಗಿರುವ ಮತ್ತು ದಶಮ ಸ್ಕಂಧದ ಉತ್ತರಾರ್ಧ, ಏಕಾದಶ ಹಾಗೂ ದ್ವಾದಶ ಸ್ಕಂಧಗಳಲ್ಲಿ 85 ಅಧ್ಯಾಯಗಳಲ್ಲಿ 3443 ಶ್ಲೋಕಗಳಲ್ಲುಕ್ತವಾದ ಮುಖ್ಯಾಂಶಗಳನ್ನು ತಮ್ಮ ನಿಲುವಿಗನುಗುಣವಾಗಿ ಸಂಗ್ರಹಿಸಿದ್ದಾರೆ. ಭಾಗವತದ ರಚನೆ 'ಹರಿಮಹಿಮೆ'ಯನ್ನು ಹೇಳುವುದಕ್ಕಲ್ಲವೆ ಆಗಿರುವುದು. ''ಹರಿಹರಿ ಹರಿಹರಿ ಸುಮಿರನ ಕರೌ। ಹರಿಚರನಾರವಿಂದ ಉರ ದರೌ'' ಇದೇ ಭಾವತದ ಮುಖ್ಯ ಸಂದೇಶ ವಲ್ಲವೆ? ಇದಕ್ಕನುಸಾರವಾಗಿ ಸೂರದಾಸರು ಪದಗಳನ್ನು ರಚಿಸಿ ಹಾಡಿದ್ದಾರೆ.

ಪರಮಾತ್ಮನ ಅನಂತ ಅವತಾರಗಳಲ್ಲಿ ಸೂರದಾಸರಿಗೆ ಪ್ರಿಯವಾಗಿರುವುದು ರಾಮ ಮತ್ತು ಕೃಷ್ಣ ರೂಪಗಳು. ಏಕೆಂದರೆ ಈ ಅವತಾರ ಲೀಲೆಗಳನ್ನು ವಿಸ್ತಾರ ವಾಗಿ ವರ್ಣಿಸಿದ್ದಾರೆ. ಭಾಗವತದಲ್ಲಿ ಇಲ್ಲದ ಕೆಲವು ಸಂದರ್ಭಗಳನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ರಾಮ ಜನ್ಮೋತ್ಸವದ ಆಚರಣೆ, ವನವಾಸಕ್ಕೆ ಹೊರಟ ರಾಮ ನಿಗೆ ಶೃಂಗಬೇರುಪುರದ ಸಮೀಪದಲ್ಲಿ ಗಂಗಾನದಿಯನ್ನು ದಾಟುವಾಗ ಕೇವಟನು ತೋರಿದ ಭಕ್ತಿ, ಕಾಡುದಾರಿಯಲ್ಲಿ ಗ್ರಾಮ ವಸಿತೆಯರು ಅನಿಂದ್ಯ ಸುಂದರಿಯಾದ ಸೀತೆಯನ್ನು ಪರಿಚಯಮಾಡಿಕೊಳ್ಳಲು ತೋರುವ ಭಯ ಭಕ್ತಿ ಭರಿತ ಕುತೂಹಲ, ಸೀತಾ ಅಗ್ನಿ ಪರೀಕ್ಷಣ ಮುಂತಾದ ಸಂದರ್ಭಗಳಲ್ಲಿ ಸೂರದಾಸರು ತೋರಿರುವ ಸ್ವಂತಿಕೆ ಮೆಚ್ಚತಕ್ಕದ್ದು. ಉದಾಹರಣೆಗೆ ಹಳ್ಳಿಯ ಹೆಂಗಸರು ಅವರಿವರ ಬಾಯಿಂದ ಸುಂದ ರರೂ, ಸುಕುಮಾರರೂ ಸೂರ್ಯನಕಿರಣಬಿದ್ದರೂ ಬಾಡಿ ಹೋಗುವಂತಹ ಸುಕೋಮಲರೂ, ಆದಾಗ್ಯೂ ಧನುರ್ಬಾಣಗಳನ್ನು ಧರಿಸಿ, ಕಾಲ್ನಡಿಗೆಯಲ್ಲಿ ಅನಿಂದ್ಯ ಸುಂದರಿಯನ್ನು ಜೊತೆಗೂಡಿ ಎಲ್ಲಿಗೋ ಹೋಗುತ್ತಿರುವ ಸಮಾಚಾರವನ್ನು ಕೇಳಿ

ನೋಡುವುದಕ್ಕೆ ಓಡೋಡಿ ಬಂದಿದ್ದಾರೆ. "ಅರೀ ಅರೀ ಸುಂದರ ನಾರಿ ಸುಹಾಗಿನಿ ಲಾಗೈಂ ತೇರೇ ಪಾಉಂ—ಓ ಸುಂದರಿ ನಾರಿ ಮುತ್ತೈದೆ ನಿನ್ನ ಕಾಲಿಗೆ ಬೀಳು ತ್ತೇವೆ." ಈ ದಾರಿಹೋಕ ವೀರರು ಯಾರು ? ನಿಮ್ಮ ಊರಾವುದು ? ಮನೆ ಮಠವನ್ನು ಬಿಟ್ಟು ಕಾಲ್ನಡಿಗೆಯಲ್ಲಿ ಎಲ್ಲಿಗೆ ಹೊರಟಿದ್ದೀರಿ ? ಕಾಡಿನಲ್ಲಿ ಪಸಿದೆ ಎಂದು ತಿಳಿದು ಹೊರಟಿದ್ದೀರಿ? ನಿಜಸಂಗತಿ ಏನು ? ಎಂದು ಪ್ರಶ್ನಿಸಿದ್ದಾರೆ. ಅದಕ್ಕೆ ಸೀತೆ ಕೊಡುವ ಉತ್ತರ—

ಸಾಸು ಕೀ ಸೌತಿ ಸುಹಾಗಿನಿ ಸೋ ಸಖಿ ಅತಿಹೀ ಪಿಯು ಕೀ ಪ್ಯಾರೀ॥
ಅಪನೇ ಸುತ ಕೌಂ ರಾಜದಿವಾಯೌ
ಹಮು ಕೌಂ ದೇಸ ನಿಕಾರೀ॥

—ನಮ್ಮ ಅತ್ತೆಯ ಸವತಿ, ಮುತ್ತೈದೆ. ಗಂಡನಿಗೆ ಅತ್ಯಂತ ಬೇಕಾದವಳು. ತನ್ನ ಮಗನಿಗೆ ರಾಜ್ಯವನ್ನು ಕೊಡಿಸಿದಳು. ನಮ್ಮನ್ನು ದೇಶದಿಂದ ಹೊರದೂಡಿ ದಳು." ಎಷ್ಟು ನೇರವಾದ ಹಾಗೂ ಸಹಜವಾದ ಉತ್ತರ!

ರಾಮಾವತಾರಕ್ಕೆ ಸಂಬಂಧಪಟ್ಟ ಪದಗಳು ವರ್ಣನಾತ್ಮಕವಾಗಿದ್ದರೂ ಸಹ ಹೇಗೆ ಅಲ್ಲಲ್ಲಿ ಭಾವವನ್ನು ಸೆರೆಹಿಡಿದು ಹೊಸ ಸಂದರ್ಭಗಳನ್ನು ಕಲ್ಪಿಸಿ ಕೊಂಡಿದ್ದಾರೆಂಬುದನ್ನು ನೋಡಬಹುದಾಗಿದೆ.

ಮಂಡೋದರಿಯು ರಾವಣನಿಗೆ ಬುದ್ಧಿ ಹೇಳುವ ಸಂದರ್ಭದಲ್ಲಿ ಶರಣಾಗತಿ ಯನ್ನು ಬೋಧಿಸಲು ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಶ್ರೀರಾಮನ ಮಹಾ ಮಹಿಮೆಗಳನ್ನೂ, ಸಾಧನೆಗಳನ್ನೂ ವರ್ಣಿಸಿ, ಅವನಿಗೆ ಶರಣು ಹೋಗದೇ ಉದ್ಧಾರವಿಲ್ಲ ಎಂಬಂಶವನ್ನು ಬಹು ಮನವರಿಕೆಯಾಗುವಂತೆ ವರ್ಣಿಸಿದ್ದಾರೆ.

ಶ್ರೀಕೃಷ್ಣನ ಅವತಾರಲೀಲೆಗೆ ಭಾಗವತದಲ್ಲೂ ಮಹತ್ವಪೂರ್ಣ ಸ್ಥಾನವಿದೆ. ಆದರೆ ಸೂರದಾಸರು ಭಾಗವತವನ್ನು ನೆಪಮಾತ್ರಕ್ಕೆ ಅವಲಂಬಿಸಿರುವುದು ಸೂರಸಾಗರದ ಅಧ್ಯಯನದಿಂದ ಸ್ವಯಂ ವೇದ್ಯವಾಗುವುದು. ಭಾಗವತದಲ್ಲಿ ಶ್ರೀಕೃಷ್ಣನ ಲೀಲೆಗಳ ಗುರಿ ದುಷ್ಟ ಹನನ ಶಿಷ್ಟ ಮನರಂಜನ. ಸೂರದಾಸರ ವರ್ಣನೆಯಲ್ಲಿ ಲೀಲೆಗೇ ಮಹತ್ವ, ದುಷ್ಟ ಸಂಹಾರವಾದರೂ ಅದಕ್ಕೆ ಗೌಣ ಸ್ಥಾನ. ಸೂರದಾಸರ ಕೃಷ್ಣನಿಗೆ ತನ್ನ ಈಶ್ವರತ್ವವನ್ನು ಮೆರೆಸುವುದರಲ್ಲಿ ರುಚಿಯಿಲ್ಲ. ಉದಾಹರಣೆಗಾಗಿ ಗೋವರ್ಧನ ಪರ್ವತವನ್ನೆತ್ತಿದ ಸಂದರ್ಭದಲ್ಲಿ ಬ್ರಜ ನಿವಾಸಿಗಳು ಅಚ್ಚರಿಯಿಂದ ಸ್ತಂಭೀಭೂತರಾಗಿ ಕೃಷ್ಣನ ಚರಣ ಕಮಲಗಳಿಗೆರಗಲು ಬಂದಾಗ ಎಡಗೈಯಲ್ಲಿ ಬೆಟ್ಟವನ್ನು ಎತ್ತಿಹಿಡಿದು ಬಲಗೈಯಿಂದ ಗೊಲ್ಲರನ್ನು ಮೇಲೆತ್ತಿ ಬೇಗ ಬೇಗ ನಿಮ್ಮ ಲಾಠಿಯನ್ನು ಸ್ವಲ್ಪ ನಿಲ್ಲಿಸಿ ಬೆಟ್ಟ ಕುಸಿಯದಿರಲಿ ಎಂದು ಹುರಿದುಂಬಿಸುತ್ತಾನೆ. ತಮ್ಮ ತಮ್ಮ ಲಾಠಿಯಿಂದ ಬೆಟ್ಟವನ್ನೆತ್ತಿ ಹಿಡಿಯುವ ಸಂಭ್ರಮದಲ್ಲಿ ಅದ್ಭುತ ಆಶ್ಚರ್ಯವು ಮಾಯವಾಗಿ ಬಿಡುತ್ತದೆ.

ವಾಮ ಕರಜ ಟೇಕ್ಯೋ ಗಿರಿರಾಜ
ಚಕೃತ ಭಯಿ ದೇಖಿ ಯುಹ ಲೀಲಾ
ತರತ ಸಬೈ ಹರಿ ಚರನನಧಾಇ ।
ಗಿರಿವರ ಟೇಕಿ ರಹೇ ಬಾಯೇಂ ಕರ
ದಚ್ಛಿನ ಕರಲಿಯೋ ಸಖಾ ಉಠಾಇ ।
ಸೂರದಾಸ ಪ್ರಭು ಕಹತ ಸಬನಿ ಸೋಂ
ತುಮಹೂಂ ಮಿಲಿ ಟೇಕೌ ಗಿರಿ ಆ ಇ ॥

ಹೀಗೆ ಭಾಗವತದ ಲೀಲೆಗಳನ್ನು ವರ್ಣಿಸಿದ್ದರೂ ತನ್ನದೇ ಆದ ಮೆರುಗನ್ನು ಕೊಟ್ಟಿರುವುದು ಸೂರದಾಸರ ವೈಶಿಷ್ಟ್ಯ.

ಅಲ್ಲದೆ ಭಾಗವತದಲ್ಲಿಲ್ಲದ ಕೆಲವು ಸಂದರ್ಭಗಳನ್ನೂ ತಮ್ಮ ಕಲ್ಪನಾ ವಿಲಾಸದ ಪ್ರಸಾದವಾಗಿ ನೀಡಿದ್ದಾರೆ. ರಾಧಾಕೃಷ್ಣರ ಪ್ರೇಮಲೀಲೆಗೆ ಸಂಬಂಧ ಪಟ್ಟ ಯಾವತ್ತೂ ವರ್ಣನೆ ಸೂರದಾಸರ ಪ್ರತಿಭೆಯು ಕೊಡುಗೆ. ಒಟ್ಟಿನಲ್ಲಿ ಹುಟ್ಟು ಕುರುಡರಾದರೂ ಸಹಜ ಪ್ರತಿಭಾವಂತರಾಗಿದ್ದ ಕಾರಣ ಸೂರದಾಸರು ವಲ್ಲಭಾ ಚಾರ್ಯರಿಂದ ಕೇಳಿದ ಭಾಗವತವನ್ನು ಬೀಜ ರೂಪದಲ್ಲಿಟ್ಟುಕೊಂಡು, ಕಲ್ಪನೆಯು ರದಿಗೊಬ್ಬರವನ್ನು ಕೊಟ್ಟು ಅಭಿರುಚಿಯ ಜಲ ಸಿಂಚನದಿಂದ ಕೃಷಿಮಾಡಿ ರಸಭರಿತ ಫಲ ರೂಪ ಪದಗಳನ್ನು ರಚಿಸಿ ರಸಿಕ ಸಜ್ಜನವೃಂದಕ್ಕೆ ಇಹದಲ್ಲಿ ಕಾವ್ಯಾನಂದವನ್ನೂ ಪರದಲ್ಲಿ ಬ್ರಹ್ಮಾನಂದವನ್ನೂ ಪಡೆಯಲು ಸಾಧ್ಯವಾಗುವ ಭಕ್ತಿರಸ ಪಾನವನ್ನು ಈಗ ನಾಲ್ಕೂವರೆ ಶತಮಾನಗಳಿಂದಲೂ ನೀಡುತ್ತಾ ಬಂದಿದ್ದಾರೆ.

ಯಾವುದೇ ಕಾವ್ಯವಾಗಿರಲಿ ಅದರ ಕಥ್ಯವು ಕೇವಲ ಅಸ್ಥಿಪಂಜರದಂತೆ. ಅದರಲ್ಲಿರುವ ರಸಪುಷ್ಟಿಯೇ ಅದರ ಜೀವಾಳ. ಆ ದೃಷ್ಟಿಯಿಂದ ವಿಚಾರ ಮಾಡಿದರೆ ಸೂರದಾಸರು ರಸ ಕವಿಗಳು. ಜ್ಞಾನ, ಭಕ್ತಿ, ತತ್ತ್ವ, ವೈರಾಗ್ಯ ಮುಂತಾದ ಹಲವು ಹತ್ತು ವಿಷಯ ವಿವೇಚನೆ ಸೂರಸಾಗರದಲ್ಲಿದ್ದರೂ ಅಲ್ಲಿ ಮುಖ್ಯವಾಗಿರುವುದು ಮರ್ಮಸ್ಪರ್ಶಿಯಾದ ಭಾವಧಾರೆ. ಕವಿಯು ಸೂಕ್ಷ್ಮಾತಿ ಸೂಕ್ಷ್ಮ ಮನೋಭಾವವನ್ನು ಗುರುತಿಸಿ ಹೃದಯಂಗಮವಾಗುವಂತೆ ನಿರೂಪಿಸಿರುವ ಕಲಾವಂತಿಕೆ ಸೂರಸಾಗರದ ತಿರುಳು. ವಾತ್ಸಲ್ಯ ಭಾವ ನಿರೂಪಣೆಯಲ್ಲಿ ಕವಿ ಸೂರದಾಸರ ಪ್ರತಿಭೆ ಅತುಲನೀಯ ಸಾರ್ಥಕ್ಯವನ್ನು ಪಡೆದಿದೆ. ಪ್ರಾಯಃ ಸೂರ ದಾಸರಷ್ಟು ಬಾಲ ಮನೋವಿಜ್ಞಾನವನ್ನರಿತಿರುವ ತಜ್ಞರು ಇಲ್ಲವೆಂದರೂ ಅತಿ ಶಯೋಕ್ತಿಯಲ್ಲ. ಶ್ರೀಕೃಷ್ಣನ ಬಗೆಬಗೆಯ ಬಾಲ ಲೀಲೆಗಳನ್ನು ವರ್ಣಿಸುವಾಗ ಸ್ಥಾಯೀಭಾವವಾದ 'ವತ್ಸಲ'ವು ಹರ್ಷ, ಗರ್ವ, ಕ್ಷೋಭ, ಗ್ಲಾನಿ, ಚಿಂತಾ, ಶಂಕಾ, ತ್ರಾಸ, ಮತಿ, ದೈನ್ಯ, ಮೋಹ, ಅಮರ್ಷ, ಉತ್ಸಾಹ, ನಿರ್ವೇದ, ಉನ್ಮಾದ, ವಿಷಾದ, ಔತ್ಸುಕ್ಯ ಮುಂತಾದ ನಾನಾ ಸಂಚಾರೀಭಾವಗಳಿಂದ ಪುಷ್ಟಿ ಯನ್ನು ಪಡೆದು ರಸರತ್ನಾಕರವಾಗಿ ತಣಿಸುತ್ತದೆ.

ಒಂದೇ ಒಂದು ಉದಾಹರಣೆ : 'ಮೈಯ್ಯಾ ಮೋರಿ ಮೈಂ ನಹಿಂ ಮಾಖನ ಖಾಯೋ' ಎಂಬ ಗೀತೆಯ ಭಾವ ಹೀಗಿದೆ : ಶ್ರೀಕೃಷ್ಣ ಬೆಣ್ಣೆ ಕದಿಯುವಾಗ ಸಿಕ್ಕಿಬಿದ್ದಿದ್ದಾನೆ. ಯಶೋದೆಯ ಬಳಿಗೆ ಎಳೆತಂದು ಒಬ್ಬ ಗೊಲ್ಲತಿ ನಿಂತಿದ್ದಾಳೆ. ಯಶೋದೆ ಒಂದು ಕೈಯಲ್ಲಿ ಛಡಿಯನ್ನು ಹಿಡಿದು ಇನ್ನೊಂದರಿಂದ ಕೃಷ್ಣನನ್ನು ಹಿಡಿದುಕೊಂಡು ದುರುಗುಟ್ಟಿ ಸಿಟ್ಟಿನಿಂದ ನೋಡುತ್ತಿದ್ದಾಳೆ. ಪ್ರತಿನಿತ್ಯ ದೂರು ಕೇಳಿಕೇಳಿ ಬೇಸತ್ತು ಹೋಗಿದ್ದಾಳೆ. ಗೊಲ್ಲತಿಯರೆಲ್ಲ ಬಂದು ನೆರೆದಿದ್ದಾರೆ. ಏನು ಮಾಡಬೇಕು. ಆಗ ಕೃಷ್ಣ ಅಳುವ ದನಿಯಲ್ಲಿ ಆದರೂ ಸಿಟ್ಟಿನಿಂದ ಮುಖ ಗಂಟಿಕ್ಕಿ, ಹೊಡೆತಕ್ಕೂ ಹೆದರಿ ಹೇಳುತ್ತಾನೆ.

ಅಮ್ಮ, ನಾನು ಬೆಣ್ಣೆಯನ್ನು ತಿಂದಿಲ್ಲ, ಈ ಮಿತ್ರರೆಲ್ಲ ಸೇರಿ ಎಲ್ಲೋ ನನ್ನ ಬಾಯಿಗಿಷ್ಟು ಬೆಣ್ಣೆ ಸವರಿರಬಹುದು. ನೀನೇ ನೆಲುವುಕಟ್ಟಿ ಮಡಕೆ ಇಟ್ಟಿದ್ದಾರೆ ಅಂತೀಯೆ. ಅದನ್ನೂ ಮೇಲೆ ಕಟ್ಟಿರೋದು ನೋಡು ನನ್ನ ಕೈ ಎಷ್ಟು ಚಿಕ್ಕದು. ನಾನು ಅದನ್ನು ಮುಟ್ಟುವುದಾದರೂ ಹೇಗೆ ? ಇವರೇ ನನ್ನ ಬಾಯಿಗೆ ಮೊಸರು ಮೆತ್ತಿ, (ಬೆಣ್ಣೆ ಇರುವ) ದೊನ್ನೆಯನ್ನು ಬೆನ್ನಹಿಂದೆ ಎಲ್ಲೋ ಮುಚ್ಚಿಟ್ಟು ಕೊಂಡಿದ್ದು ನನ್ನನ್ನು ಎಳೆದು ತಂದಿದ್ದಾರೆ.

ಆಗ ಕೈಯಲ್ಲಿರುವ ಛಡಿಯನ್ನು ಬಿಸುಟು ಯಶೋದೆ ಶ್ಯಾಮನನ್ನು ಬಿಗಿದಪ್ಪಿ ಮುದ್ದಾಡಿದಳು. ಆ ಬಾಲಕೃಷ್ಣನ ಮಾತುಗಳು ಅವಳ ಮನಸ್ಸನ್ನು ಸೂರೆ ಗೊಂಡಿದ್ದುವು. ಶಿವ ವಿರಿಂಚಿಗಳಿಗೂ ದುರ್ಲಭವಾದ ಸುಖವನ್ನು ಯಶೋದೆ ಭಕ್ತಿಯ ಪ್ರಭಾವದಿಂದಲೇ ಪಡೆದಿದ್ದಳು !

ಇಂಥ ನೂರಾರು ವರ್ಣನೆಗಳು. ನೂರಾರು ಭಾವಗಳು, ಭಾವನೆಗಳು. ಸೂರದಾಸರ ಈ ಸಾಹಿತ್ಯ ಸರಿಸಾಟಿ ಇಲ್ಲದ್ದು.

'ಭ್ರಮರಗೀತ' ಎಂಬ ಪ್ರಸಂಗವೂ ಅಷ್ಟೇ. ಇದೊಂದು ವಿಪ್ರಲಂಭ ಶೃಂಗಾರದ ವರ್ಣನಾಪ್ರಸಂಗ. ಮಧುರೆಗೆ ಅಕ್ರೂರನೊಡನೆ ತೆರಳಿದ್ದ ಕೃಷ್ಣನ ವಿರಹದಲ್ಲಿ ವಿಹ್ವಲರಾಗಿರುವ ಬ್ರಜವನಿತೆಯರಿಗೆ ಬ್ರಹ್ಮಜ್ಞಾನವನ್ನುಪದೇಶಿಸಿ, ಯೋಗಮಾರ್ಗದಿಂದ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಪ್ರೇರಣೆ ನೀಡುವ ಆತ್ಮವಿಶ್ವಾಸದಿಂದ ಉದ್ಧವನು ಗೋಕುಲಕ್ಕೆ ಬಂದನೆಂದೂ ಆಗ ಗೋಪಿಕಾ ಸ್ತ್ರೀಯರು ತಮ್ಮ ಅನನ್ಯ ಕೃಷ್ಣಪ್ರೇಮದಿಂದ ಉದ್ಧವನ ನಿಲುವೇ ಬದಲಾಗುವಂತೆ ಮಾಡಿದರೆಂದೂ ವರ್ಣಿಸುವ ಸಂದರ್ಭ. ಇದನ್ನು ಸಗುಣೋಪಾಸನೆಯ ಹಾಗೂ ಭಕ್ತಿಪಂಥದ ಸಮರ್ಥನೆಗೂ, ನಿರ್ಗುಣೋಪಾಸನೆ–ಹಾಗೂ ಜ್ಞಾನಮಾರ್ಗದ ಖಂಡನೆಗಾಗಿಯೂ ಸೂರದಾಸರು ಬಳಸಿಕೊಂಡಿದ್ದಾರೆ. ಅಷ್ಟೇ ಅಲ್ಲ. ಈ ತಮ್ಮ ಭಕ್ತಿಸಿದ್ಧಾಂತವನ್ನು ಮಂಡಿಸುವ ಹಾಗೂ ಜ್ಞಾನಪಂಥವನ್ನು ಖಂಡಿಸುವ ಸಂದರ್ಭ

ದಲ್ಲಿ ತರ್ಕಶೈಲಿಯನ್ನನುಸರಿಸದೆ ಕಾವ್ಯಪದ್ಧತಿಯನ್ನು ಅನುಸರಿಸಿ, ಸಹಜವಾದ ಹಾಸ್ಯದ ಮೆರುಗನ್ನು ಕೊಟ್ಟು ಅನುಪಮ ಪ್ರತಿಭೆಯನ್ನು ಮೆರೆದಿದ್ದಾರೆ.

'ನಿರ್ಗುನ ಕೌನ್ ದೇಸಕೋ ವಾಸೀ'—

ನಿನ್ನ ನಿರ್ಗುಣ (ಬ್ರಹ್ಮ) ಯಾವ ದೇಶದಲ್ಲಿ ವಾಸಮಾಡಿಕೊಂಡಿದ್ದಾನೆ?

ಅಥವಾ

ಊಧೋ ಜಾಹು ತುಮ್ಹೈ ಹಮ ಜಾನೆ

—ಉದ್ಧವ ಹೋಗು ಹೋಗು ನೀನಾರು ಎಂಬುದನ್ನು ಅರಿತೆವು ಏಕೆಂದರೆ

ಕಹಂ ಅಬಲಾ ಕಹಂ ದಸಾ ದಿಗಂಬರ
ಸಂಮ್ಮುಖ ಕರೋ ಪಹಿಚಾನೆ"

—ಅಲ್ಲ ಹೆಂಗಸರೆಲ್ಲಿ! ಅವರಿಗೆ ದಿಗಂಬರವೇಷವನ್ನು ಧರಿಸಲು ಹೇಳುವ ನಿನ್ನ ಉಪದೇಶವೆಲ್ಲಿ? ಸ್ವಲ್ಪವಾದರೂ ವಿಚಾರಮಾಡಿ ಮಾತನಾಡುವುದು ಬೇಡವೆ?

ಹೀಗೆಯೇ ಬಗೆಬಗೆಯಾಗಿ ಉದ್ಧವನ ಮಾತುಗಳನ್ನು ಪೊಳ್ಳೆಂದೂ, ಅಪ್ರಾಸಂಗಿಕವೆಂದೂ, ಹುಸಿ ಎಂದೂ ಹೇಳುತ್ತಾ ಕೊನೆಯದಾಗಿ —

ಸಾಂಚ ಕಹೋ ತುಮಕೋ ಅಪನೀ ಸೌಂ
ಬೂಯತಿ ಬಾತ ನಿದಾನೇ
ಸೂರಸ್ಯಾಮ ಜಬ ತುಮ್ಹೇ ಪಠಾ ಏ
ತಬನೇಕಹು ಮುಸುಕಾನೇ

ಸತ್ಯ ಹೇಳು. ನಿನ್ನಮೇಲೆ ನಮ್ಮ ಆಣೆ. ಕೊನೆಯದಾಗಿ ಕೇಳುತ್ತಿದ್ದೇನೆ. ಶ್ಯಾಮ ನಿನ್ನನ್ನು ಕಳಿಸಿಕೊಟ್ಟಾಗ ಸ್ವಲ್ಪ ಮುಗುಳ್ನಗೆ ನಕ್ಕ ಅಂತ ಕಾಣಿಸತ್ತೆ ಅಲ್ಲ? ಎಂಥ ಊಹೆ! ಎಂಥ ವ್ಯಂಗ್ಯ. ಹೀಗೆ ಈ ಭ್ರಮರಗೀತ ಪ್ರಸಂಗವು ಸೂರದಾಸರ ಪ್ರತಿಭೆಯ ಫಲವಾಗಿ ವಿರಹ ಕಾವ್ಯದಲ್ಲಿ ಹೊಸ ಮೆರುಗನ್ನು ಪಡೆದ ಮೈಲಿಗಲ್ಲಾಗಿ ನಿಂತಿದೆ.

ಸೂರಸಾಗರವನ್ನು ಮಥಿಸಿದಾಗ ಸಹೃದಯರಿಗೆ ಬಾಲಕೃಷ್ಣ, ರೂಪ ಮಾಧುರೀ, ಮುರಲೀ ಮಾಧುರೀ, ಭ್ರಮರಗೀತ ಮತ್ತು ಭಕ್ತಸಹೃದಯವನ್ನು ತೆರೆದು ತೋರಿಸುವ 'ವಿನಯ'ವೆಂಬ ಐದು ರತ್ನಗಳು ಲಭಿಸುತ್ತವೆ. ಇದರಲ್ಲಿ ಕೊನೆಯದಕ್ಕೆ ಕಿಂಚಿತ್ ಭಾವಸಾದೃಶ್ಯ ಬೇರೆ ಭಕ್ತಕವಿಗಳ ಪದಕೀರ್ತನೆಗಳಲ್ಲಿ ದೊರೆಯಬಹುದು. ಉಳಿದ ನಾಲ್ಕರಲ್ಲಿ ಸೂರದಾಸರ ಹೆಗಲೆಣೆಯಾಗಿ ನಿಲ್ಲುವವರು ಹಿಂದೀ ಕವಿಗಳಲ್ಲಿ ಬೇರೊಬ್ಬರಿಲ್ಲ; ಪ್ರಾಯಶಃ 'ಭ್ರಮರಗೀತೆ'ಯನ್ನು 'ತೆಗೆದುಕೊಂಡು

ವಿಚಾರಮಾಡಿದರೆ, ಹಿಂದೀಸಾಹಿತ್ಯವೇನು ವಿಶ್ವಸಾಹಿತ್ಯದಲ್ಲೇ ಸೂರದಾಸರಿಗೆ ಸರಿಸಾಟಿಯಾದ ಕವಿ ಇಲ್ಲವೆನ್ನಬಹುದು.

ಸಂಗೀತಸುಧೆ, ಸಾಹಿತ್ಯ ಸೌಷ್ಠವ, ಭಾವಗಾಂಭೀರ್ಯ, ಕಣ್ಣಿಗೆ ಕಟ್ಟುವಂತಹ ವರ್ಣನೆಗಳು, ಪದಲಾಲಿತ್ಯ ಮುಂತಾದ ಗುಣಗಳಿಂದ ರಸದ ಖನಿಗಳಂತಿರುವ ಸೂರದಾಸರ ಒಂದೊಂದು ಪದವೂ ಸಹೃದಯರ ಪಾಲಿಗೆ ಅಕ್ಷಯ ನಿಧಿಯಾಗಿದೆ. ಇದು ಬ್ರಜಭಾಷೆ ಎಂಬ ಹಿಂದೀ ಪ್ರಾದೇಶಿಕ ಭಾಷೆಯ ಮೊದಲ ಕೃತಿ ಎಂದರಿತಾಗ ಗಾತ್ರ ಹಾಗೂ ಗುಣವೆರಡರ ದೃಷ್ಟಿಯಿಂದ ಇದರ ಹಿರಿಮೆಯನ್ನರಿತವರು ಸೂರದಾಸರ ಮಹಾ ಪ್ರತಿಭೆಗೆ ಅಚ್ಚರಿಪಟ್ಟು ಸಹಸ್ರ ಸಹಸ್ರ ನಮನಗಳನ್ನು ಸಲ್ಲಿಸುತ್ತಾರೆ.

ತಮಿಳುನಾಡಿನ ಪುರಾತನರು ಹಾಗೂ ವಚನಕಾರರು

ಡಾ|| ವಿದ್ಯಾಶಂಕರ

ಚಾರಿತ್ರಿಕವಾಗಿ ತಮಿಳುನಾಡು ಹಾಗೂ ಕರ್ಣಾಟಕದ ಸಂಬಂಧ ಹಳೆಯದು. ಒಂದನೇ ಮಹೇಂದ್ರವರ್ಮನ (ಕ್ರಿ.ಶ. 580) ಮೇಲೆ ಎರಡನೇ ಪುಲಕೇಶಿಯು ದಂಡೆತ್ತಿ ಹೋಗಿ ಜಯಶಾಲಿಯಾದದ್ದಲ್ಲದೆ ಚೋಳರು, ಪಾಂಡ್ಯರು ತನ್ನ ಪ್ರಚ್ಛನ್ನ ಭುಜಬಲದ ಮುಂದೆ ತಲೆಬಾಗುವಂತೆ ಮಾಡಿದ ಸಂಗತಿ ಕರ್ಣಾಟಕದ ಚರಿತ್ರೆಯಲ್ಲಿ ಪ್ರಸಿದ್ಧ. ಎರಡೂ ನಾಡುಗಳ ನಡುವೆ ನಡೆದ ಪ್ರತಿಷ್ಠೆಯು ಕಾಳಗಗಳಿಂದ ಕನ್ನಡ ನಾಡಿನ ಗಡಿ ತಮಿಳುನಾಡಿಗೂ, ತಮಿಳುನಾಡಿನ ಗಡಿ ಕನ್ನಡನಾಡಿಗೂ ಮುಂಚಾಚುವ - ಹಿಂಚಾಚುವ ಆವರ್ಜನ - ನಿರಾವರ್ಜನ ಕ್ರಿಯೆ ಘಟಿಸಿತು. ರಾಜಕೀಯ ವಿಸಂಗತಿಗಳು ಏನೇ ಇರಲಿ, ಹೇಗೇ ಇರಲಿ ಎರಡೂ ಪ್ರಾಂತ್ಯಗಳ ಭಾಷೆ-ಆಚಾರ-ವಿಚಾರ-ನಡಾವಳಿಗಳು : ಶಾರೀರಿಕ ಹಾಗೂ ಭೌಗೋಲಿಕ ರಚನೆಗಳು ; ಆಹಾರ-ವಿಹಾರಗಳು ಈ ಎರಡೂ ಪ್ರದೇಶಗಳಿಗಿರುವ ನಿಕಟ ಸಾಂಸ್ಕೃತಿಕ ಸಂಬಂಧವನ್ನು ಬಹುವಾಗಿ ಸ್ಪಷ್ಟಪಡಿಸುತ್ತವೆ.

ಬೌದ್ಧ ಜೈನ ಧರ್ಮಗಳು, ರಾಜಾಶ್ರಯದಿಂದ ಹಾಗೂ ತಮ್ಮ ಬೆಂಬಲಿಗರ, ಅವಿರತ ಶ್ರಮದಿಂದ ತಮಿಳುನಾಡಿನಲ್ಲಿ ವ್ಯಾಪಕವಾಗಿ ಹರಡಿ ಬೇರುಬಿಟ್ಟಿದ್ದುವು. ತಮಿಳುನಾಡಿನ ಬದುಕಿನೊಂದಿಗೆ ಶೈವಧರ್ಮ ಹಾಸುಹೊಕ್ಕಾಗಿದ್ದುದು ಅನ್ಯಧರ್ಮಗಳ ಆಗಮನದಿಂದ, ಅವುಗಳ ತೀವ್ರತರವಾದ ಪ್ರಸರಣದಿಂದ—ಪೈಪೋಟಿಯಿಂದ ದಿಕ್ಕುಗಾಣದಿದ್ದಾಗ, ಶಕ್ತಿಗುಂದಿದ್ದಾಗ ಅದಕ್ಕೆ ಚೈತನ್ಯವಾಹಿನಿಯಾಗಿ ಸುಳಿದು ಬಂದವರು ಅಪ್ಪರ್ ಹಾಗೂ ಸಂಬಂಧರು. ಆರನೇ ಶತಮಾನದ ಉತ್ತರಾರ್ಧದಲ್ಲಿ ಶೈವಧರ್ಮಕ್ಕೆ ಒದಗಿದ್ದ ವಿಪತ್ತಿನಿಂದ ಪಾರುಗಾಣಿಸಲು ಅಪ್ಪರ್ ಹಾಗೂ ಸಂಬಂಧರು ತಮಿಳುನಾಡಿನಾದ್ಯಂತ ಸಂಚರಿಸಿ ಅನ್ಯಧರ್ಮೀಯರನ್ನು ವಾದದಲ್ಲಿ ಸೋಲಿಸಿ, ರಾಜರುಗಳ ಮನವೊಲಿಸಿ ಅವರನ್ನು ಶೈವಧರ್ಮಕ್ಕೆ ಪರಿವರ್ತಿಸಿ, ತಮ್ಮ ತೇವಾರಂಗಳ ಮೂಲಕ ಶಿವಭಕ್ತಿಯ ಬೀಜವನ್ನು ಜನಮನದಲ್ಲಿ ಬಿತ್ತಿ ವ್ಯಾಪಕವಾದ ಧಾರ್ಮಿಕ ಆಂದೋಲನವನ್ನು ನಡೆಸಿದರು. ಶೈವಧರ್ಮದ ಪುನರುತ್ಥಾನ ಕಾರ್ಯವನ್ನು, ಅಪ್ಪರ್ ಹಾಗೂ ಸಂಬಂಧರ್ ಅವರು, ಒಂದು ಧಾರ್ಮಿಕ ಚಳುವಳಿಯ ಅಥವಾ ಕ್ರಾಂತಿಯ ರೂಪದಲ್ಲಿ—ಅಸಾಧಾರಣವಾದ ಮಾರ್ಪಾಟನ್ನು ಸಾಮಾಜಿಕ ನೆಲೆಯಲ್ಲಿ—ತಂದರೆಂದರೆ ತಪ್ಪಾಗದು. ಇವರಂತೆ ಇವರಿಗಿಂತ ಪೂರ್ವದಲ್ಲಿ, ಸಮ

ಕಾಲದಲ್ಲಿ, ಅನಂತರದಲ್ಲಿ ಶೈವಧರ್ಮವನ್ನು ಕೈಹಿಡಿದು ಜನಸಾಮಾನ್ಯನತ್ತ ಕರೆದೊಯ್ದು ಅದಕ್ಕೊಂದು ವಿಶಾಲವಾದ ನೆಲೆಯನ್ನೂ, ಪಾವಿತ್ರ್ಯ–ಪೂಜ್ಯತೆಗಳನ್ನೂ ದೊರಕಿಸಿಕೊಟ್ಟವರು ತಮಿಳುನಾಡಿನ ಶೈವಸಂತರಾದ ಅರುವತ್ತು ಮೂವರು ಪುರಾತನರು.

ತಮಿಳುನಾಡಿನಲ್ಲಿ ನಡೆದಂತಹ ಧಾರ್ಮಿಕ ಆಂದೋಲನ ಕರ್ಣಾಟಕದಲ್ಲಿ 12ನೇ ಶತಮಾನದಲ್ಲಿ ಬಸವಾದಿ ಶಿವಶರಣರಿಂದ, ಆ ವೇಳೆಗಾಗಲೇ ತಮ್ಮ ವಿಚಾರ ಆಚಾರಗಳಿಂದ ಹಳವಂಡವಾಗಿದ್ದ ಜೈನ ಹಾಗೂ ವೈದಿಕ ಧರ್ಮಗಳ ವಿರುದ್ಧ ನಡೆಯಿತು. ಕನ್ನಡನಾಡಿನ ಸುತ್ತೆಲ್ಲ ಈ ಕ್ರಾಂತಿಯ ಬಿರುಬೀಸು ಹರಡಿ ದೊಡ್ಡ ಮಟ್ಟದಲ್ಲಿ ವೈಚಾರಿಕ ಚಿಂತನೆ ನಡೆಯಿತು. ವರ್ಣ-ವರ್ಗಗಳ ಸಂಕೋಲೆ ಕಳಚಿ ಜನರೆಲ್ಲ ಪುದುವಾಗಿ ಚಳುವಳಿಯ ಸಾಫಲ್ಯಕ್ಕಾಗಿ ಶ್ರಮಿಸಿದರು. ಬಸವಣ್ಣ ಇದಕ್ಕೆ ಸೂತ್ರಧಾರನಾದನು. ಸಾಮೂಹಿಕವಾದ ಮನಃಪರಿವರ್ತನೆಗೆ ವ್ಯಕ್ತಿ ವ್ಯಕ್ತಿಗಳ ಅಂತರಂಗದ ಮಿಡಿತ ಜೀವಂತ ಭಾಷೆಯತ್ತ ಕೈಚಾಚಿ ಸ್ಪಂದಿಸಿತು. ಮನದ ಆಲೋಚನೆಗಳಿಗೆ ಮಾತು ಜೀವತುಂಬಿತು. ಭಿನ್ನ ಭಿನ್ನ ನೆಲೆಯಲ್ಲಿ,ಅನುಭವದ ಸ್ತರಗಳಲ್ಲಿ ನುಡಿ,ಮನದ ಉತ್ಕಟವಾದ ಆಲೋಚನೆಗಳನ್ನು ಹರಳುಗೊಳಿಸಿತು. ಭಾವ–ಭಾಷೆಗಳ ಅನುಪಮ ಮೈತ್ರಿಯಿಂದ ಹೃದಯ ಹೃದಯಗಳ ಮಿಡಿತ ಕೇಳುವಂತಾಯಿತು. ಅದರಿಂದ ಎಚ್ಚತ್ತ ಸಮಾಜ ಹೊಸ ಧರ್ಮದ ಉದಯಕ್ಕೆ ಸ್ವಾಗತಿಸಿತು. ವೀರಶೈವ ಧರ್ಮ ಜೈನ ಹಾಗೂ ವೈದಿಕ ಧರ್ಮಗಳ ಪ್ರಭಾವವನ್ನು ಕ್ರಮಕ್ರಮೇಣ ಬದಿಗೊತ್ತಿ, ವಿಶ್ವವಿಶಾಲವಾದ, ಸರ್ವಜನಾದರಣೀಯವೂ, ಸರ್ವಕಾಲೀಕವೂ ಆದ ತತ್ತ್ವಗಳನ್ನು ಮುಂದಿಟ್ಟು ಸುಖೀ ಸಮಾಜದ ನಿರ್ಮಾಣಕ್ಕೆ ಸನ್ನದ್ಧವಾಯಿತು.

ತಮಿಳು ನಾಡಿನಲ್ಲಾಗಲೀ ಕನ್ನಡ ನಾಡಿನಲ್ಲಾಗಲೀ ಬೌದ್ಧ ಜೈನ ಧರ್ಮಗಳು ಭಕ್ತಿಯ ಉದ್ದೀಪನಕ್ಕೆ ಸಾಧನವಾದ ಸಾಹಿತ್ಯ ಸೃಷ್ಟಿಮಾಡಲಿಲ್ಲ. ಅವುಗಳು ದೈವದ ಅಸ್ತಿತ್ವದ ಬಗೆಗೆ ನಂಬುಗೆ ಹೊಂದಿರದ ಕಾರಣ ದೇವೋಪಾಸನೆ ಭಕ್ತಿಯ ಮೂಲಕ ಆದುದು ಆ ಧರ್ಮಗಳ ಸಾಹಿತ್ಯದಲ್ಲೆಲ್ಲೂ ಕಾಣಬರುವುದಿಲ್ಲ. ಶೈವ ಧರ್ಮವಾಗಲೀ ವೀರಶೈವಧರ್ಮವಾಗಲೀ ಭಕ್ತಿಪಂಥದಿಂದಲೇ ಶಕ್ತಿ ಸಂಚಯನ ಪಡೆದುದು. ಅಪ್ಪರ್, ಸಂಬಂಧರ್ ಅವರ ತೇವಾರಂಗಳು ಭಕ್ತಿಗೀತ ಮಾಲಿಕೆಗಳೇ. ಅವು ಜನಮನವನ್ನು ಮಿಡಿದುದು, ಅರಳಿಸಿದುದು ಅಂತಃಕರಣವನ್ನು ಮುಟ್ಟುವ ತಮ್ಮ ಸಾಹಿತ್ಯಗುಣದಿಂದಲೇ; ಶಿವನಲ್ಲಿಟ್ಟ ನಿಷ್ಠಾಪೂರ್ಣ ನಂಬುಗೆಯಿಂದಲೇ. "ಅವು ಗಹನವಾದ ತತ್ತ್ವವಿಚಾರಗಳನ್ನು ಸುಲಭವಾದ ಭಾಷೆಯಲ್ಲಿ ಜನಸಾಮಾನ್ಯಕ್ಕೆ ಹೇಳುವುದರಲ್ಲಿ ತೊಡಗಿದ್ದುವು. ತಮಿಳರ ಇಂತಹ ಹಾಡುಗಳನ್ನು ಕನ್ನಡಿಗರು ಅನುಕರಿಸಿರಬಹುದು..."[1] ವಚನಗಳು "ಶಿವಶರಣರ ಹೃದಯ ವಿದ್ರಾವಕವಾದ

1. ಪ್ರೊ. ಡಿ. ಎಲ್. ನರಸಿಂಹಾಚಾರ್, ಪೀಠಿಕೆಗಳು ಲೇಖನಗಳು, ಪು. 442

ಗೀತಗಳು'' ಎಂದು ಹೇಳುವ ಪ್ರೊ. ಡಿ. ಎಲ್. ಎನ್. ರವರು ತೇವಾರಂಗಳು ವಚನಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡಿರಬಹುದು ಎಂದು ಊಹಿಸಿರುವರು. ಜೇಡರ ದಾಸಿಮಯ್ಯ* ಬಸವ[2] ಹಾಗೂ ಪ್ರಭುದೇವರ[3] ವಚನಗಳಲ್ಲಿ 'ದೇಹಾರ' (< ತೇವಾರ) ದ ಪ್ರಸ್ತಾಪ ಬಂದಿದೆ. ಇದು 'ದೇಹಾರ' ವೆಂದಿದ್ದು ಸ್ತೋತ್ರ ಅಥವಾ ಪ್ರಾರ್ಥನೆ ಎಂದು ಅರ್ಥವಿರಬಹುದೇನೊ[4] ಎಂದು ಪ್ರೊ. ಬಸವನಾಳರವರು ಊಹಿಸಿರುವರು.

ತಮಿಳುನಾಡಿನ ಅರುವತ್ತು ಮೂವರು ಪುರಾತನರು ಶಿವನ ನಿಷ್ಠಾವಂತ ಭಕ್ತರು. ಅವರು ತಮ್ಮ ಶುದ್ಧ ಅಂತರಂಗದಿಂದ ಶಿವನನ್ನು ಆರಾಧಿಸಿ, ಪ್ರತಿ ಫಲಾಪೇಕ್ಷೆಯಿಲ್ಲದೆ ಭಗವದ್ಭಕ್ತಿಯೆಂಬ ದಿವ್ಯಾಮೃತವನ್ನು ತಮ್ಮ ನಾಲಿಗೆಯಿಂದ ಈಂಟಿ ಸುಖಿಸಿದವರು, ಇಷ್ಟದೈವದ ಕೃಪೆಗಾಗಿ ತಹತಹಿಸಿದವರು. ಅವರು ವರ್ಣ–ವರ್ಗಗಳಿಂದ ಕಲುಷಿತಮನಸರಾಗಿಲ್ಲ. ಇವರಲ್ಲಿ ತಿರುನೀಲನಕ್ಕನಾಯಿನಾರ್, ರುದ್ರ ಪಶುಪತಿ, ತಿರುಜ್ಞಾನಸಂಬಂಧರ್, ಸೋಮಾಸಿಮಾರರ್, ಕಣನಾದರ್, ಶಿರು ತೊಂಡರ್–ಬ್ರಾಹ್ಮಣರು; ಶೆಡ್ಡೈಯ ನಾಯನಾರ್, ಯಸ್ಸಜ್ಞಾನಿ, ಸುಂದರಮೂರ್ತಿ, ಪುಗಳ್ ತುಣೈ ನಾಯನಾರ್—ಆದಿಶೈವರು; ಕಳರ್‌ಜಂಗನಾಯನಾರ್, ಮೆಯ್ ಪುರುಳ್ ನಾಯನಾರ್, ಪುಗಳ್ ಚೋಳ, ನರಸಿಂಗ ಮುನೈಯರು, ನೆಡುಮಾರ ನಾಯನಾರ್, ಶೇರಮಾನ್ ಪೆರುಮಾಳ್, ನೇಡಿರಾಜ—ಅರಸುಗಳು. ಅಮರನೀತಿ ಇಹಪ್ಪಗೆಯಾಂಡಾರ್, ಮೂರ್ತಿನಾಯನಾರ್, ಕಲಿಕಾಮರ್, ಸಿರಿಯಾಳ–ವೈಶ್ಯರು; ಮಾನಕ್ಕಂಜರ್, ಏಯರ್‌ಕೋನ್ ಕಲಿಕಾಮ, ಮುನೈಯಿಡುವರ್, ವಿರಲ್‌ಮಿಂಡ ನಾಯನಾರ್, ಚಿರುತೊಣೆಯರು, ಇಳೆಯಾಂಡ ಗುಡಿಮಾರನಾಯನಾರ್, ವಾಯಿಲಾರ್ ನಾಯನಾರ್ ಮೂರ್ಖ ನಾಯನಾರ್, ಕೋಟ್ಪುಲಿ ನಾಯನಾರ್-ಒಕ್ಕಲಿಗರು;

---

* ದೇಹಗೊಂಡು ಹುಟ್ಟಿದರು
ಒಪ್ಪಚ್ಚಿ ದೇಹಾರವ ಮಾಡುವಿರಯ್ಯ
ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ
ಆಹಾರವ ಕೊಂಡರೆ
ಕೋಳಿ ಹುಳುವನಾಯ್ದು ತಿಂದಂತೆ ಕಾಣಾ ರಾಮನಾಥ
(ಜೇಡರ ದಾಸಿಮಯ್ಯನ ವಚನಗಳು ಸಂ: ಎಚ್. ದೇವೀರಪ್ಪ, ಆರ್. ರಾಚಪ್ಪ, ಪರಿಶಿಷ್ಟ ವ. 12)

2. 'ತನು ಶುಚಿಯಲ್ಲದನ ದೇಹಾರವೇಕೆ?' (ಬಸವಣ್ಣನವರ ಷಟ್‌ಸ್ಥಲದ ವಚನಗಳು. (1968) ವ. 649)
3. 'ಮನಮುಟ್ಟದ ಮಜ್ಜನ, ತನುತಾಗದ ದೇಹಾರ, ಭಾವ ತಾಗದ ಪೂಜೆ, ಎವೆ ತಾಗದ ನೋಟ, ವಾಯು ತಾಗದ ಲಿಂಗದ ಠಾವ ತೋಱಾ ಗುಹೇಶ್ವರಾ' (ಅಲ್ಲಮ ಪ್ರಭುದೇವರ ವಚನಗಳು, ವ. 419)
4. ಬಸವಣ್ಣನವರ ಷಟ್‌ಸ್ಥಲದ ವಚನಗಳು (1968), ಶಬ್ದಕೋಶ ಪು. 324.

ತಿರುನಾಳೈಪ್ಪೋವರ್-ಹರಿಜನ; ನೇಶನಾಯನಾರ್-ನೇಕಾರ: ಕಣ್ಣಪ್ಪ-ಬೇಡ;ತಿರುನೀಲಕಂಠ—ಕುಂಬಾರ; ಅನಾಯ ನಾಯನಾರ್—ಕುರುಬ; ಅತಿಭಕ್ತ—ಬೆಸ್ತ; ಕಲಿಯ ನಾಯನಾರ್—ಗಾಣಿಗ; ತಿರುಕುರುಪ್ಪೆ ತೊಂಡರ್—ಮಡಿವಾಳ. ಹೀಗೆ ವೈವಿಧ್ಯಮಯವಾದ ಬದುಕು ಅವರದು. 63 ಮಂದಿ ಪುರಾತನರು ಕ್ರಿ.ಶ. 5 ರಿಂದ 9 ನೆಯ ಶತಮಾನದವರಗಿನ ಅವಧಿಯಲ್ಲಿ[5] ಬಾಳಿ ಬೆಳಗಿದ ಮಹನೀಯರು. ಮೇಲು—ಕೀಳು, ಬಲ್ಲಿದ—ಬಡವ ಈ ಭಾವನೆಗಳಾವುವೂ ಅವರಲ್ಲಿ ಮನೆಮಾಡಿರಲಿಲ್ಲ. ಸಕಳ ಜೀವಾತ್ಮರಿಗೆ ಲೇಸನೇ ಬಯಸುವ ಸಾತ್ವಿಕ ಜೀವನ ಅವರದು. ಅವರಲ್ಲಿ ಜಾತಿಭೇದಗಳಿದ್ದರೂ ಅವರ ಹೃದಯಗಳನ್ನು ಸಮೀಪಕ್ಕೆ ತಂದು ಬೆಸುಗೆಗೊಳಿಸಿರುವುದು ಶಿವಭಕ್ತಿ. ಹುಟ್ಟಿನೊಂದಿಗೇ ಜಾತಿ ಅಂಟಿಕೊಂಡು ಬಂದಿದ್ದರೂ ಅವರಿಗೆ ಶಿವನೇ ದೈವ; ಲಿಂಗವೇ ಪೂಜ್ಯ ವಸ್ತು[6]. ಇಹಪ್ಪಗೆಯಾಂಡರು ವರ್ತಕರು. ಶಿವಸ್ವರೂಪಿಗಳಾದ ಜಂಗಮರು ತಮ್ಮಲ್ಲಿಗೆ ಬಂದಾಗ ಅವರನ್ನು ಗೌರವಿಸಿ ಅವರು ಬೇಡಿದ್ದನ್ನು ಕೊಡುವವರು. ಸೇದಿರಾಜ ದೊರೆ. ತಮ್ಮಲ್ಲಿಗೆ ಬಂದ ಭಕ್ತ ಹುಸಿಕನೇ ಇರಲಿ, ಅವನಿಗೆ ನಮಸ್ಕರಿಸುವವರು. ಮೆರೆಮಿಂಡದೇವರು ವೇಳಾಳ (ಒಕ್ಕಲಿಗ) ಕುಲದವರು. ತಿರುಕೂಟವನ್ನು ವಂದಿಸದೆ ಹೋದ ಆದಿಶೈವ ಕುಲದ ಸುಂದರಮೂರ್ತಿಗೆ ಬಹಿಷ್ಕಾರ ಹಾಕುವರು. ಸುಂದರಮೂರ್ತಿಯನ್ನಷ್ಟೇ ಅಲ್ಲ, ಶಿವನಿಗೂ ಬಹಿಷ್ಕಾರ ಹಾಕುವರು. ಸುಂದರಮೂರ್ತಿ 'ತಿರುತ್ತೊಂಡತ್ತೊಗೈ' ರಚಿಸಿ ಹಾಡಿದ ಮೇಲೇ ಬಹಿಷ್ಕಾರ ತೆಗೆದುದು. ಅಮರನೀತಿ ವರ್ತಕರು. ಇವರು ಶಿವಭಕ್ತರಿಗೆ ವಾಸಕ್ಕೆ ಮನೆ, ಉಡಲು ವಸ್ತ್ರ, ಉಣ್ಣಲು ಆಹಾರ ಇವನ್ನು ಒದಗಿಸುವುದು ತಮ್ಮ ಕರ್ತವ್ಯವೆಂದು ಬಗೆದು ನಡೆದವರು. ನಮಿನಂದಿಯಡಿಗಳು ಜಾತಿಯಲ್ಲಿ ಬ್ರಾಹ್ಮಣರು. ಶಿವನು ಸ್ವಪ್ನದಲ್ಲಿ ಬಂದು ತಿರುವಾಲೂರಿನಲ್ಲಿರುವ ಶಿವಭಕ್ತರೆಲ್ಲರೂ ಶಿವಗಣಗಳೆಂದು ಹೇಳಲು ಶಿವಭಕ್ತರಲ್ಲಿ ಜಾತಿ–ಭೇದ ಎಣಿಸದಾದರು. ಅಪ್ಪೂದಿ ಅಡಿಗಳು ಬ್ರಾಹ್ಮಣರಾಗಿದ್ದರೂ ಬ್ರಾಹ್ಮಣರಲ್ಲದ ಅಪ್ಪಾರ್ ಅವರ ಭಕ್ತರು. ಅಪ್ಪಾರರ ಜೊತೆ ಸಹಭೋಜನ ಮಾಡಿದರು. ತಿರುನೀಲನಕ್ಕ ನಾಯನಾರರು ಬ್ರಾಹ್ಮಣರು. ಪಾಣರ್ ಜಾತಿಗೆ ಸೇರಿದ ತಿರುನೀಲಕಂಠ ಯಾಳ್ಪಾಣ

---

5. ನೋಡಿ : ತ್ರಿಷಷ್ಟಿ ಪುರಾತನ ಚಾರಿತ್ರ್ಯ (ಸಂ : ಡಾ॥ ಆರ್. ಸಿ. ಹಿರೇಮಠ), ಪ್ರಸ್ತಾವನೆ ಪು. 4-11.

6. ತಮಿಳುನಾಡಿನಲ್ಲಿ ನಡೆದ ಕ್ರಾಂತಿಯ ವ್ಯಾಪ್ತಿ ಧರ್ಮಕ್ಕೆ ಮಾತ್ರ ಮೀಸಲಾಗಿತ್ತು. ಶೈವಧರ್ಮದ ಪುನರುತ್ಥಾನದತ್ತ ಚಳುವಳಿ ಮುಖ ಮಾಡಿದ್ದುದರಿಂದ ಅದರ ವ್ಯಾಪ್ತಿ ಸೀಮಿತವಾಗಿದ್ದಿತು. ಅದು ಶೈವಧರ್ಮವನ್ನು ಸಾಮಾನ್ಯನ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಹಬ್ಬಿಸಲು ನಡೆಸಿದ ಭಕ್ತಿಪಂಥದ ಚಳುವಳಿ ಎಂದರೆ ತಪ್ಪಾಗಲಾರದು. ಭಕ್ತಿ ಹುಟ್ಟಿದ್ದು ಬೆಳದದ್ದು ತಮಿಳುನಾಡಿನಲ್ಲಿ ಎಂಬ ನಾರದ ಭಕ್ತಿ ಸೂತ್ರದ ಹೇಳಿಕೆ ಈ ಹಿನ್ನೆಲೆಯಲ್ಲಿ ವಿಚಾರಾರ್ಹ.

ದಂಪತಿಗಳನ್ನು ತಮ್ಮ ಮನೆಗೆ ಬರಮಾಡಿಕೊಂಡ ತಿರುನೀಲನಕ್ಕರು ಅವರಿಗೆ ತಮ್ಮ ಯಾಗಕುಂಡದ ಬಳಿ ಇರವನ್ನು ಮಾಡಿಕೊಟ್ಟರು.

12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಚಳುವಳಿ ಕೇವಲ ಧಾರ್ಮಿಕ ವಲಯದಲ್ಲಿ ಮಾತ್ರವಾಗಲಿಲ್ಲ. ಸಾಮಾಜಿಕವಾಗಿ, ರಾಜಕೀಯವಾಗಿ, ಸಾಹಿತ್ಯಿಕ ವಾಗಿ ಬಹುಮುಖವಾದ ಚಾಲನೆಯನ್ನು ಈ ಚಳುವಳಿ ಪಡೆದುಕೊಂಡಿದ್ದಿತು. ತಮಿಳು ನಾಡಿನಲ್ಲಿ ಧಾರ್ಮಿಕ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಚಳುವಳಿ ಪರಿಣಾಮ ಕಾರಿಯಾದ ಯಶಸ್ಸನ್ನು ಕಂಡುಕೊಂಡಿತು. ಕನ್ನಡ ನಾಡಿನಲ್ಲಿ ನಡೆದ ಚಳುವಳಿ ಯಲ್ಲಿ ಪ್ರಬಲವಾದ ಬ್ರಾಹ್ಮಣ ಧರ್ಮದ ವ್ಯವಸ್ಥೆಯ ವಿರುದ್ಧ ಸಿಂಹ ಸೆಣಸ ಲಾಯಿತು. ಸಾಮಾಜಿಕ ಮೌಲ್ಯಗಳ ಪುನರ್ನವೀಕರಣವಾಯಿತು. ಪರಂಪರಾ ಗತವಾಗಿ ಬಂದಿದ್ದ ಆಚರಣೆಗಳು, ಪದ್ಧತಿಗಳು ಬದಲಾದವು. ಹುಟ್ಟಿನಿಂದ ಜಾತಿ ಯಲ್ಲ. ವ್ಯಕ್ತಿಯ ಆಚರಣೆಯಿಂದ, ಗುಣದಿಂದ ಜಾತಿ ನಿರ್ಣಯಗೊಂಡಿತು. ಲಿಂಗವಂತ-ಭವಿ ಈ ಎರಡೇ ಜಾತಿಗಳು ಕೊನೆಯಲ್ಲಿ ಉಳಿದುವು. ತಮಿಳುನಾಡಿನಲ್ಲಿ ನಡೆದ ಧಾರ್ಮಿಕ ಚಳುವಳಿ ಒಂದು ವಿಧದಲ್ಲಿ ಕನ್ನಡಿಗರಿಗೆ ಪ್ರೇರಣೆ ನೀಡಿದೆ. ಅಲ್ಲಿ ಸಮಾಜದ ಎಲ್ಲ ವರ್ಗದ ಜನ ಕಲೆತು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು ಕೆಳವರ್ಗದ ಜನ, ತಾವು ಗಳಿಸಿ ಬೆಳೆಸಿದ ವಿಶಿಷ್ಟ ವ್ಯಕ್ತಿತ್ವದಿಂದ ಉತ್ತಮ ವರ್ಣ ದವರನ್ನು ಪ್ರಶ್ನಿಸುವ, ತಿರಸ್ಕರಿಸುವ, ಶಿಕ್ಷಿಸುವ ಶಕ್ತಿ ಗಳಿಸಿದ್ದರು. ಹಿಡಿದ ಕಾಯಕ ಯಾವುದೇ ಇರಲಿ, ಭಾವಶುದ್ಧ ಬಾಳ್ವೆಗೆ ಅಲ್ಲಿ ಬೆಲೆಯಿದ್ದಿತು. ಕರ್ನಾಟಕದಲ್ಲಿಯೂ ಎಲ್ಲ ಬಗೆಯ ಜನ ಕಲೆತು ಒಂದಾಗಿ ಚಳುವಳಿಯಲ್ಲಿ ಪಾಲ್ಗೊಂಡರು. ಕೆಳವರ್ಗದ ಜನರ ಉದ್ಧಾರವೇ ಪ್ರಧಾನವಾದ ಈ ಚಳುವಳಿಯಲ್ಲಿ ಅವರ ಆಶೋತ್ತರಗಳು ಪೂರ್ಣಗೊಳ್ಳತೊಡಗಿತು. ಜಾತಿಯ ಸೋಂಕಿಲ್ಲದೆ ಎಲ್ಲರೂ ಒಂದೆಡೆ ಸೇರಿ ಮುಕ್ತಮನಸ್ಸಿನಿಂದ ಚರ್ಚಿಸುವ ಅವಕಾಶ ಪ್ರಾಪ್ತಿಯಾಯಿತು. ಕಾಯಕದಲ್ಲಿ ಅಧಮ- ಉತ್ತಮ ಎಂಬ ಭೇದ ನಶಿಸಿ ಎಲ್ಲವೂ ಗೌರವಾರ್ಹವೆನ್ನಿಸಿಕೊಂಡವು. ಸತ್ಯ ಶುದ್ಧ ಸದಾಚಾರ ಬಾಳುವೆ ಪ್ರಧಾನವಾಯಿತು. ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಮೋಳಿಗೆಯ ಮಾರಯ್ಯ, ಮೇದರ ಕೇತಯ್ಯ, ಒಕ್ಕಲ ಮುದ್ದಯ್ಯ, ನುಲಿಯ ಚಂದಯ್ಯ, ವೈದ್ಯ ಸಂಗಣ್ಣ. ರಾಯಸದ ಮಂಚಣ್ಣ, ಗಾಣದ ಕನ್ನಪ್ಪ, ಮಡಿವಾಳ ಮಾಚಯ್ಯ. ಅನಾಮಿಕ ನಾಚಯ್ಯ, ಚಾಂಗು ಬೊಲ್ಲಯ್ಯ, ಕಲಕೇತ ಬೊಮ್ಮಯ್ಯ, ಬಹುರೂಪಿ ಚೌಡಯ್ಯ. ಹಡಪದ ಅಪ್ಪಣ್ಣ, ದಾಸೋಹದ ಸಂಗಣ್ಣ, ಹೊಡೆಹುಲ್ಲ ಬಂಕಣ್ಣ, ಜೇಡರ ಮಾಯಣ್ಣ, ಸೂಳೆ ಸಂಕವ್ವೆ, ಕೊಟ್ಟಣದ ಸೋಮವ್ವೆ, ಹಾಡುವ ಪೀರದೇವಮ್ಮ. ಕನ್ನಡಿ ಕಾಯಕದ ರೇಮಮ್ಮ, ಕದಿರ ಕಾಯಕದ ಕಾಳವ್ವೆ, ಕೇಳಿಕೆಯ ಮಹಾದೇವಿ, ಮೋಳಿ ಗೆಯ ಮಹಾದೇವಿ, ನಿರಂಜನದ ಧವಳಾಯಿ, ದುಗ್ಗಿಯ ದುಗ್ಗಳವ್ವೆ, ದಂಡಿಗೆಯ

ಗುಡ್ಡಾದೇವಿ-ಹೀಗೆ ನೂರಾರು ಮಂದಿ ಶರಣ–ಶರಣೆಯರು ಕಾಯಕಸೂತ್ರ ಹಿಡಿದು ತನು-ಮನ ಬಳಲಿಸಿ ಗಳಿಸಿದರು. ಮೊದಲಿಗೆ ಕಾಯಕ ತತ್ವದ ನಿಜವಾದ ಅರ್ಥ ಗ್ರಹಿಸಿದವರು ತಮಿಳುನಾಡಿನ ಪುರಾತನರು. ದುಡಿಮೆಯೇ ದೇವರೆಂದು ಭಾವಿಸಿ ತಮ್ಮ ತಮ್ಮ ಕಾಯಕದಲ್ಲಿ ಪ್ರಾಮಾಣಿಕತೆಯನ್ನು; ಅಳವಡಿಸಿ ದುಡಿಮೆಯ ಫಲವನ್ನು ಶಿವರೂಪಿ ಭಕ್ತರಿಗೆ ನಂತರ ತಮಗೆ ವಿನಿಯೋಗಿಸಿ ನವೀನವಾದ ಆದರ್ಶವನ್ನು ಲೋಕಕ್ಕಿತ್ತರು. ತಿರುಕ್ಕುರಿಪ್ಪುಕೊಂಡ ನಾಯನಾರ್, ಇಳಯಾನ್‌ಗುಡಿ ಮಾರನಾಯನಾರ್, ಅತಿಭಕ್ತ, ಮೂರ್ಖನಾಯನಾರ್, ಮುನೈಯಿಡುವಾರ ನಾಯನಾರ್, ವೇಶನಾಯನಾರ್-ಇವರೇ ಮೊದಲಾದವರ ಕಾಯಕನಿಷ್ಠೆ, ಉದಾತ್ತ ಧ್ಯೇಯ ಅನುಕರಣೀಯ. ಬಹುಶಃ, ಈ ಅನುಕರಣೀಯವಾದ ಕಾಯಕ ತತ್ತ್ವದ ಮಹತ್ವವನ್ನು ಚೆನ್ನಾಗಿ ಗ್ರಹಿಸಿ ಇನ್ನಷ್ಟು ವ್ಯಾಪಕವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರು ಕರ್ನಾಟಕದ ಶಿವಶರಣರು. ಗುರು-ಲಿಂಗ-ಜಂಗಮಗಳಿಗಿಂತ ಕಾಯಕ ನಿಷ್ಠೆಗೇ ಹೆಚ್ಚು ಮಹತ್ವವನ್ನು ನಮ್ಮ ಶರಣರು ಕೊಟ್ಟರು. ಆಯ್ದಕ್ಕಿ ಮಾರಯ್ಯ

> ಕಾಯಕದಲ್ಲಿ ನಿರತನಾದರೆ, ಗುರುದರುಶನವಾದರೂ ಮಱೆಯಬೇಕು
> ಲಿಂಗಪೂಜೆಯಾದರೂ ಮಱೆಯಬೇಕು
> ಜಂಗಮ ಮುಂದಿದ್ದಡೂ ಹಂಗು ಹಱಿಯಬೇಕು
> ಕಾಯಕವೇ ಕೈಲಾಸವಾದ ಕಾರಣ
> ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಎಂದು ಹೇಳುವಲ್ಲಿ ಸಮಕಾಲೀನ ಬದುಕಿನ ಜೀವನ ಮೌಲ್ಯವನ್ನು, ಆದರ್ಶವನ್ನು ಎತ್ತಿ ತೋರಿದಂತಿದೆ. ಕಾಯಕಕ್ಕೆ ಹಾಗೂ ಭಕ್ತಿಗೆ ಜಾತಿ ಗೋತ್ರಗಳ ಸೀಮೆಯಿಲ್ಲ. ಕನ್ನಡಿಯ ಕಾಯಕದ ಅಮ್ಮಿದೇವಯ್ಯ ಹೇಳುವಂತೆ "ಆವಾವ ಜಾತಿ ಗೋತ್ರದಲ್ಲಿ ಬಂದಡು ತಂತಮ್ಮ ಕಾಯಕಕ್ಕೆ ಭಕ್ತಿಗೆ ಸೂತಕವಿಲ್ಲದಿರಬೇಕು." ತಮಿಳುನಾಡಿನ ಚಳುವಳಿಯಲ್ಲಾಗಲೀ ಕನ್ನಡನಾಡಿನ ಚಳುವಳಿಯಲ್ಲಾಗಲೀ ಪಾಲ್ಗೊಂಡವರಲ್ಲಿ ಬಹುಪಾಲು ಸಾಮಾನ್ಯರು. ಅವರುಗಳ ಮನೆಯಲ್ಲಿ ಬಡತನವಿರಬಹುದು, ಆದರೆ ಮನದಲ್ಲಲ್ಲ. ಸ್ವತಂತ್ರರೂ ಧೀರರೂ ಆದ ಈ ಮಹಾನುಭಾವರನ್ನು ಕುರಿತು ಬಸವಣ್ಣ "ಮನೆ ನೋಡಾ ಬಡವರು. ಮನ ನೋಡಾ ಘನ; ಸೋಂಕಿನಲ್ಲಿ ಸುಖಿ: ಸರ್ವಾಂಗ ಕಲಿಗಳು; ಪಸಾರಕ್ಕನುವಿಲ್ಲ : ಬಂದ ತತ್ಕಾಲಕ್ಕುಂಟು" ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.

ತಮಿಳುನಾಡಿನ 63 ಮಂದಿ ಪುರಾತನರ ಬದುಕು ಶಿವನಲ್ಲಿ ನಿಷ್ಠಾಪೂರ್ಣವಾದುದು. ಆ ಅನುಪಮವಾದ ಭಕ್ತಿನಿಷ್ಠೆ, ಎಂತಹ ಉಗ್ರ ಪರೀಕ್ಷೆಯಲ್ಲೂ ಬಾಗದ ಮನಸ್ಸು ನಮ್ಮ ಶಿವಶರಣರಿಗೆ ಬಹಳ ಪ್ರಿಯವಾದುದು. ಕಾಡುವ ಬೇಡುವ

---

7. ಬಸವಣ್ಣನವರ ಷಟ್‌ಸ್ಥಲದ ವಚನಗಳು, ವ. 328

ಶಿವನೂ ಇವರ ಮುಂದೆ ಸೋತು ಕೈಚೆಲ್ಲುವನು. ತಮ್ಮ ಶುಚಿಯಾದ ಬಾಳ್ವೆ, ನಿಷ್ಠಾ ಪೂರ್ಣವಾದ ಭಕ್ತಿ ಇವುಗಳಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡು, ಆ ಲೋಕ ಶಕ್ತಿಯಿಂದಲೇ ಒಮ್ಮೊಮ್ಮೆ ಸೇವೆ ಸ್ವೀಕರಿಸಿ ಪುನೀತರಾದ ಪುರಾತನರ ಜೀವನ ಕಥನದ ನೆನಕೆ ಶರಣರಿಗೆ ಪ್ರಿಯವಾದುದು. ಆದುದರಿಂದಲೇ ಶರಣರ ವಚನಗಳಲ್ಲಿ ಇವರ ಬದುಕಿನ ಅಮೂಲ್ಯ ಘಟನಾವಳಿಗಳು ಕೋದು ನಿಂತಿವೆ. ಅರುವತ್ತು ಮೂವರು ಪುರಾತನರಲ್ಲಿ ಹಲವರು ಲೌಕಿಕಕ್ಕೆ ವಿರುದ್ಧವಾಗಿ, ಅತಿಮಾನವರಾಗಿ ತಮ್ಮ ಉಗ್ರ ಭಕ್ತಿಯನ್ನು, ಶಿವನಲ್ಲಿನ ತಮ್ಮ ಅನನ್ಯ ನಿಷ್ಠೆಯನ್ನು ಪ್ರಕಟಿಸಿರುವರು. ಅವರ ವರ್ತನೆ ಲೋಕದ ಕಣ್ಣಿಗೆ ವಿಚಿತ್ರ; ಅಸದೃಶ; ಮಾನವ ಶಕ್ತಿಗೆ ಮೀರಿದುದು. ಇದನ್ನು ಗಮನದಲ್ಲಿಟ್ಟುಕೊಂಡೇ ಬಸವಣ್ಣ "ಮುನ್ನಿನ ಪುರಾತನರೆಲ್ಲರೂ ತನುಮನ ಧನವನಿತ್ತು ಮಾಡಿ ನೀಡಿ ಲಿಂಗವ ಕೂಡಿದ ಪರಿಗಳ ಅನುಭಾವದಲರ್ಥಯಿಸಿ ಹೇಳಬಹುದಲ್ಲದೆ ಮಾಡಿ ನೀಡಿ ತೋರಲು ಬಾರದು" ಎಂದಿರುವರು.

ಶರಣರು ವಿಶಿಷ್ಟವಾಗಿ ನೆನದಿರುವುದು ಸಿರಿಯಾಳ ದಂಪತಿಗಳು, ನಂಬಿಯಣ್ಣ, ಬಲ್ಲಾಳ, ಸಿಂಧುಮರಾಳ, ತಿರುನೀಲಕಂಠ-ಇವರುಗಳನ್ನು, ಭಕ್ತಿ, ಭಕ್ತಿಯ ಪರೀಕ್ಷೆ, ಭಕ್ತನ ವಿಚಲಿತ ಮನಸ್ಸು, ಶುದ್ಧ ಭಕ್ತಿಗೆ ಸಿಗುವ ಪ್ರತಿಫಲ-ಇವೇ ಮೊದಲಾದುವನ್ನು ಪ್ರಸ್ತಾಪಿಸುವಾಗ ನಿದರ್ಶನಾರ್ಥವಾಗಿ ಪುರಾತನರ ಭಕ್ತಿ ಹಾಗೂ ಅದರ ಪರೀಕ್ಷೆಯ ವಿಶೇಷತೆಯನ್ನು ವಚನಕಾರರು ಹೇಳಿರುವರು. ಸಿರಿಯಾಳ ಜಾತಿಯಲ್ಲಿ ವೈಶ್ಯ. ಆದರೂ ಶಿವನಲ್ಲಿ ಅಚಲವಾದ ಭಕ್ತಿ. ಲೌಕಿಕರಾದ ವೈಶ್ಯರಂತಲ್ಲ ಅವನು. 'ನೀಡುವ ರುಂಟು ಉಂಬುವರಿಲ್ಲ' ಎಂಬ ಬಿರುದಿನ ಕಹಳೆ ಅವನದು. ಇವನ ಮನಸ್ಸನ್ನು ಒರೆಹಚ್ಚಿ ನೋಡಬೇಕೆಂದೆ ಇಪ್ಪತ್ತೊಂದು ದಿನ ಸತತವಾಗಿ ಶಿವ ಮಳೆಗರೆದ. ಅಂಜದ ಸಿರಿಯಾಳ ಅಡುಗೆಗೆ ಬೇಕಾದ ಸೌದೆಗಾಗಿ ಹುಲ್ಲು ಮನೆ ಮಾಳಿಗೆ ಎಲ್ಲವನ್ನೂ ಬಳಸಿದ. ಹಸಿದು ಬಂದ ಭಕ್ತರಿಗೆ ಉಣಬಡಿಸಿದ[9]. ಮತ್ತೂ ಪರೀಕ್ಷಿಸುವೆನೆಂದು ಶಿವ ಜಂಗಮ ರೂಪ ಧರಿಸಿ ಬಂದು ನರಮಾಂಸ ಬೇಕೆಂದನು. ದಂಪತಿಗಳು ತಮ್ಮ ಏಕಮಾತ್ರ ಪುತ್ರ ಚೀಲಾಳನನ್ನೇ ಕೊಂದು ಪಾಕವ ಮಾಡಿ ಶಿವನಿಗೆ ಉಣಬಡಿಸಿದರು. ಮಾನವರಿಗೆ ಮೀರಿದ ಭಕ್ತಿ ನಿಷ್ಠೆಯನ್ನು ಸಿರಿಯಾಳ ತೋರಿದ. ಈ ಅಮಾನುಷ ವರ್ತನೆಯನ್ನು

8. ಅದೇ, ವ. 681

9. ಇಳೆಯಾಂಗುಡಿ ಮಾರನಾಯನಾರರೂ ಶಿವನ ನಿಷ್ಠಾವಂತ ಭಕ್ತರು. ಭಕ್ತರಿಗಾಗಿ ಎಲ್ಲವನ್ನೂ ದಾನಮಾಡಿ ಬಡವರಾದವರು. ಕಡುಬಡತನದಲ್ಲಿ ಬಾಳುವೆ ನಡೆಸುತ್ತಿದ್ದ ಅವರನ್ನು ಪರೀಕ್ಷಿಸಲು ವೃದ್ಧ ಭಕ್ತನ ವೇಷ ಧರಿಸಿ ಶಿವ ಮಧ್ಯರಾತ್ರಿಯಲ್ಲಿ ಬಿರುಗಾಳಿ ಧಾರಾಕಾರವಾಗಿ ಸುರಿವ ಮಳೆಯಲ್ಲಿ ಅವರಲ್ಲಿಗೆ ಬಂದನು. ನಡುಗುತ್ತಿದ್ದ ವೃದ್ಧರಿಗೆ ಬೆಂಕಿ ಕಾಯಿಸಿ ಬೆಚ್ಚಗೆ ಮಾಡಲು ತಮ ಮನೆಯ ಮಾಡಿನ ಜಂತೆಯನ್ನೆ ಹಿರಿದು ಬೆಂಕಿ ಹೊತ್ತಿಸಿದರು.

ಕಂಡು ಅಚ್ಚರಿಯಿಂದ ಬಸವಣ್ಣ 'ಸೆಟ್ಟಿಯೆಂಬೆನೆ ಸಿರಿಯಾಳನ'[10] ಎಂದುದು. ಅವನ ದಾನದ ವಿಶೇಷತೆಯನ್ನು 'ಉಂಬ ಉಡುವ ಠಾವ ಸಿರಿಯಾಳ ಬಲ್ಲ'[11] ಎಂದು ಪ್ರಭು ಕೊಂಡಾಡಿದುದು. ಮನದ ಸ್ಥೈರ್ಯದ ಪರೀಕ್ಷೆ ಒಂದು ಬಗೆಯಲ್ಲಿ ಜೂಜು. ಈ ಜೂಜನಾಡ ಹೊರಟವರು ಮಹಾದೇವಿಯಕ್ಕ ಹೇಳುವಂತೆ ಸಿರಿಯಾಳ-ಜೇಡರ ದಾಸಿಮಯ್ಯ-ಬಸವ ಈ ಮೂವರು. ಕ್ರಮವಾಗಿ, ಈ ಮೂವರೂ ಜೂಜಿನ ಪಣವಾಗಿ ಮಗ, ಸೀರೆ (=ವಸ್ತ್ರ), ತನು-ಮನ-ಧನಗಳನ್ನು ಒಡ್ಡಿದರು :

ಸಿರಿಯಾಳಂಗೆ ಜೇಡರ ದಾಸಿಮಯ್ಯಂಗೆ ಬಸವಂಗೆ
ಆದ ರೇಪೆಯ ಬಿಟ್ಟು ಜೂಜನಾಡರೆ ನಮ್ಮವರಂದು ?
ಒಬ್ಬಂಗೆ ಮಗನ ರಪಣ !
ಒಬ್ಬಂಗೆ ಸೀರೆಯ ರಪಣ !
ಒಬ್ಬಂಗೆ ತನು-ಮನ-ಧನ ರಪಣ !
ಮೂವರೂ ಮೂದಲಿಸಿ ಮುಕ್ಕಣ್ಣನ ಗೆಲಿದರು
ಎನ್ನ ದೇವ ಚನ್ನಮಲ್ಲಿಕಾರ್ಜುನ ![12]

ಭಕ್ತರ ಪರೀಕ್ಷೆಯಲ್ಲಿ ದೇವನದೇ ಸೋಲು. ಭಕ್ತರದೇ ಗೆಲುವು. ಲೋಕದಲ್ಲಿ ಕಬ್ಬಿನ ಜಲ್ಲೆಯಲ್ಲಿ ಹೊಡೆದಾಡುವವರೆ ಬಹಳ. 'ಕಾಯದ ಹಣದವನಾಡು'ವವರು ವಿರಳ. ಕೂಡಲ ಸಂಗಮದೇವ 'ಇಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ !'[13] ಶಿವನ ಭಕ್ತಿಪರೀಕ್ಷೆ ನಿಷ್ಕರುಣೆಯಿಂದ ಕೂಡಿದುದು. ಅಮಾನುಷವಾದುದು. ಈ ಕಾಡುವ ಕೈಯ ಕಾಟವನ್ನು ಸೈರಿಸುವ ಶಕ್ತಿ ಬಸವಣ್ಣ ಹೇಳುವಂತೆ ಸಿರಿಯಾಳನಿಗೆ ಮಾತ್ರ ಸಾಧ್ಯ :

ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ ?
ಕೋಳದ ಮೇಲೆ ಸಂಕಲೆಯನಿಕ್ಕುವರೆ ?
ಬೆಂದಹುಣ್ಣ ಕಂಬಿಯಲಿ ಕೀಸುವರೆ ?
ಕೂಡಲ ಸಂಗಯ್ಯನ ಕಾಡುವ ಕಾಟ
ಸಿರಿಯಾಳಂಗಲ್ಲದೆ ಸೈರಿಸಬಹುದೇ ?[14]

---

10. ಬಸವಣ್ಣನವರ ಷಟ್‌ಸ್ಥಲದ ವಚನಗಳು, ವ. 347
    ಅದೇ ನೋಡಿ : 'ಸಿರಿಯಾಳನಂತೆ ಉಣಲಿಕ್ಕ ಬಲ್ಲೆನೆ' ವ. 322
11. ಪ್ರಭುದೇವರ ವಚನಗಳು (ಸಂ. ಡಾ. ಎಂ. ಎಸ್. ಸುಂಕಾಪುರ) ವ. 799
    ಅದೇ ನೋಡಿ. 'ಸಿರಿಯಾಳನ ಮಗನ ಬೇಡಿದಾತನೊಬ್ಬ ಗಣೇಶ್ವರನು' ವ. 512
    'ಸಿರಿಯಾಳ-ಚಂಗಳೆಯಂತೆ ಶಿಶುವಧೆಯ ಮಾಡಿದವನಲ್ಲ' ವ. 800
    'ಮಗನಕೊಂದು ಬಾಣಸವ ಮಾಡಿ...' ವ. 801
12. ಅಕ್ಕನ ವಚನಗಳು (ಸಂ. ಡಾ. ಎಲ್. ಬಸವರಾಜು) ವ. 186
13. ಬಸವಣ್ಣನವರ ಷಟ್‌ಸ್ಥಲದ ವಚನಗಳು, ವ. 682
14. ಅದೇ ವ. 319

ನಂಬಿಯಣ್ಣನ ಭಕ್ತಿಗೆ ಮೆಚ್ಚಿದ ಶಿವ, ಅವನು ಭಕ್ತಿಪರವಶನಾಗಿ ಕೂಗಿ ಕರೆದಾಗ ಓ ಎಂದ. ಅಷ್ಟೇ ಅಲ್ಲ ನಂಬಿಗೆ ಕುಂಟಣಿಯೂ ಆಗುವನು. ಸಂಕಿಲೆಯನ್ನು ತಿರುವತ್ತಿಯೂರ ದೇವಾಲಯದಲ್ಲಿ, ಕಂಡ ನಂಬಿಯಣ್ಣ ಕಾಮತಾಪದಿಂದ ಬಳಲಿದ. ಶಿವನಲ್ಲಿ, ಸಂಕಿಲೆಯನ್ನು ನನಗೆ ಕೊಡಿಸಿ ಎಂದು ನಂಬಿಯಣ್ಣ ಬೇಡಿದ. ನಂಬಿಯಣ್ಣನ ಪರವಾಗಿ ಶಿವ ಸಂಕಿಲೆಯನ್ನು ಬೇಡಲು ಈಶಾನ್ಯಶೆಟ್ಟಿಯ ಮನೆಗೆ ಹೋಗುವನು. 'ಸಂಕಿಲೆಯನ್ನು ಬಿಟ್ಟು ಹೋಗಲಾರೆ' ಎಂದು ಶಿವನಿಗೆ ಭಾಷೆಕೊಟ್ಟು ಅವಳನ್ನು ನಂಬಿಯಣ್ಣ ಮದುವೆಯಾಗುವನು. ಸಂಕಿಲೆಯ ಕಾಮಸಾಮ್ರಾಜ್ಯದಲ್ಲಿ, ವೈವಾಹಿಕ ನಂಬಿಯಣ್ಣನಿಗೆ ದೇವಾಲಯಕ್ಕೆ ಹೋಗಿ ಪಡಿಹೊನ್ನು ಪಡೆಯಲು ಸಮಯವೆಲ್ಲಿದೆ? ಸಂಕಿಲೆಯ ಸ್ತನವನ್ನೇ ಲಿಂಗವೆಂದು ಭಾವಿಸಿ ಪೂಜಿಸಿ ಶಿವನ ಕೃಪೆ ಪಡೆಯುವನು. 'ನಂಬಿ ಕರೆದೊಡೋ' ಎಂದುದು[15], ನಂಬಿಗೆ ಶಿವ ಕುಂಟಣಿಯಾದುದು, 'ನಂಬಿಯ ಹಡಪವ ಶಿವಹಿಡಿದುದು' ಒಪ್ಪಬಹುದು. ಆದರೆ ಮೊಲೆ ಲಿಂಗವೆಂದು ನಂಬಿದ ನಂಬಿಗೆ ಶಿವ ಕೃಪೆಮಾಡಿದುದನ್ನು[17] ಹೇಗೆ ನಂಬುವುದು? 'ಅಂಗನೆಯ ಮೊಲೆ ಲಿಂಗವೆ?'[18] ಎಂದು ಪ್ರಭು ಪ್ರಶ್ನಿಸಿರುವನು. ಈ ಮಾತನ್ನು ಪ್ರಮಥರು ಮೆಚ್ಚುವರೆ? ಪುರಾತನರು ಮೆಚ್ಚುವರೆ? ನಿಮ್ಮ ಭಕ್ತರು ಮೆಚ್ಚುವರೆ? ಎಂದು ಸಂದೇಹಿಸಿರುವನು. (ಭಾವತೀವ್ರತೆಯಲ್ಲಿ ಎಲ್ಲವನ್ನೂ ಮೆಚ್ಚುವ ಬಸವನಿಗೂ, ತಾರ್ಕಿಕವಾಗಿ ವಿಚಾರ ಮಾಡಿಸಹಜವೆಂದುದನ್ನು ಮಾತ್ರ ಒಪ್ಪುವ ಪ್ರಭುವಿಗೂ ನಿಲುವಿನಲ್ಲಿ ವ್ಯತ್ಯಾಸವಿದೆ.)

ತಿರುವಣ್ಣಾಮಲೆಯಲ್ಲಿ ಸಿಂಧು ಬಲ್ಲಾಳನೆಂಬ ರಾಜನು ಜಂಗಮ ಭಕ್ತಿಯಲ್ಲಿ ಪ್ರಸಿದ್ಧನು. ಅವನನ್ನು ಪರೀಕ್ಷಿಸಬೇಕೆಂದು ಶಿವ ವಿಟ ವೇಷಧಾರಿಯಾಗಿ ಬಂದು ಅವನ ಆತಿಥ್ಯವನ್ನು ಸ್ವೀಕರಿಸಿ ಹೆಣ್ಣಿಲ್ಲದೆ ತನಗೆ ನಿದ್ದೆ ಬಾರದೆಂದನು. ಅಂತಃಪುರದ ಸ್ತ್ರೀಯರಾರೂ ಅವನಿಗೆ ಹಿಡಿಸಲಿಲ್ಲ. ತನಗೆ ಪಟ್ಟದ ರಾಣಿಯೇ ಬೇಕೆಂದನು. ಪತಿಯಾಜ್ಞೆಯಂತೆ ಬಂದ ರಾಣಿಗೆ ಕೂಡಲೆ ನಿದ್ದೆ ಹತ್ತಿತು. ಬೆಳಗಾದಾಗ ಕೂಸಾಗಿ ಜಂಗಮ ಅವಳ ಮೊಲೆಯುಣ್ಣುತ್ತಿದ್ದ. ಬಲ್ಲಾಳನ ದಾನ ಗುಣವನ್ನು ಮೆಚ್ಚಿದ ಪ್ರಭು 'ಕೊಂಬ ಕೊಡುವ ಠಾವ ಬಲ್ಲಾಳ ಬಲ್ಲ'[19] ಎಂದಿರುವನು. 'ಭಕ್ತಿ

---

15. ಅದೇ, ವ. 540
16. ಸಕಲ ಪುರಾತನರ ವಚನಗಳು–2 (ಸಂ. ಡಾ. ಎಂ. ಎಸ್. ಸುಂಕಾಪುರ) ವ. 1960
17. 'ಮೊಲೆಯ ನಂಬಿ[ದ] ನಂಬಿಯಣ್ಣಂಗೆ ಮುದ್ದು ಕುಂಟಣಿಗನಾದ'
– ಸಿದ್ಧರಾಮೇಶ್ವರ ವಚನಗಳು (ಸಂ. ಡಾ. ಆರ್. ಸಿ. ಹಿರೇಮಠ) ವ. 364
18 ಪ್ರಭುದೇವರ ವಚನಗಳು (ಸಂ. ಡಾ. ಎಂ. ಎಸ್. ಸುಂಕಾಪುರ) ವ. 798
19. ಅದೇ, ವ. 799
ಅದೇ. ನೋಡಿ : 'ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು' ವ. 512
'ನಂಬಿ ಬಲ್ಲಾಳರಂತೆ ಕಾಮುಕತನವ ಮಾಡಿದವನಲ್ಲ' ವ. 800

ಎಂತಹುದಯ್ಯಾ ? ನಮ್ಮ ಸಿಂಧು ಬಲ್ಲಾಳ ಮಾಡಿದಂತಹುದಯ್ಯಾ'[20] ಎಂದು ಬಸವಣ್ಣ ಹೃದಯ ತುಂಬಿ ನುಡಿದಿರುವನು. ಭಕ್ತನಿಲ್ಲದಿದ್ದರೆ ಶಿವನ ಕಾರುಣ್ಯ ಲೋಕಕ್ಕೆಲ್ಲಿ ಅರಿವಾಗುತ್ತಿತ್ತು ? ಈ ಹಿನ್ನಲೆಯಲ್ಲಿ ಸಿದ್ಧರಾಮನ ಪ್ರಶ್ನೆ: 'ನಾನಿಲ್ಲದಿರೆ ನೀನೆಲ್ಲಿಯುವನಯ್ಯಾ ?......ಸಿಂಧು ಬಲ್ಲಾಳನ ವಧುವಿನಲ್ಲಿ ಸಿಕ್ಕಿ ಸ್ವಯಂಭು ಅಳಿದಿರಿ......'[21]

ಸಿಂಧು ದೇಶದ ರಾಜ ಸಿಂಧು ಮರಾಳನು ಪ್ರಸಿದ್ಧ ದಾಸಿ. ಜಂಗಮನೋರ್ವ ಅವನಲ್ಲಿಗೆ ಬಂದು ರಾಜ್ಯವನ್ನು ಬೇಡಿದ. ಅವನಿಗೆ ರಾಜ್ಯವನ್ನಿತ್ತು ಸಿಂಧು ಮರಾಳ ಬರುತ್ತಿರಲು ಶಿವ ಅವನನ್ನು ಪರೀಕ್ಷಿಸಲು ಜಂಗಮ ರೂಪು ಧರಿಸಿ ಬಂದು ಅವನ ಶರೀರದ ಬಲಭಾಗ ಕೇಳುವನು. ಕರಗಸದಿಂದ ಶರೀರವನ್ನು ಕೊಯ್ದು ಕೊಡುವಾಗ ರಾಜನ ಎಡಗಣ್ಣಿಂದ ನೀರು ಬಂದಿತು. ಅಳುತ್ತಾ ಕೊಡುವ ದಾಸತನಗೆ ಬೇಡವೆಂದ ಹುಸಿ ವೇಷದ ಶಿವ. ಎಡಭಾಗ ವ್ಯರ್ಥವಾಗುತ್ತಿದೆಯಲ್ಲಾ ಎಂಬ ಕಾರಣಕ್ಕಾಗಿ ಎಡಗಣ್ಣಲ್ಲಿ ನೀರು ಬಂದಿತು ಎಂದು ಸಿಂಧು ಮರಾಳ ಸಮಾಧಾನಿಸಿದ. ಸಿಂಧು ಮರಾಳನ ಆತ್ಮಬಲಿಯ ಭಕ್ತಿ ಉಗ್ರವಾದುದು. ಮಾನವಲೋಕಕ್ಕೇ ಹೊಸತು, ಅಸಾಧ್ಯವಾದುದು. ಈ ಅನನ್ಯ ಗುಣವನ್ನು ಕಂಡೇ ಬಸವಣ್ಣ

ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬವರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ ;
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ ;
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ !
ಇವೆಲ್ಲ ಹೊಱಗಣ ಮಾತು :
ಕೂಡಲ ಸಂಗಮ ದೇವರಲ್ಲಿ ತನ್ನ ಕೊಟ್ಟ ಸಿಂಧು ಮರಾಳ ![22]

ಎಂದು ಹೇಳಿರುವನು. ಯಾರು ಏನನ್ನು ಬೇಕಾದರೂ ಕೊಡಬಹುದು. ಆದರೆ ತನ್ನನ್ನೇ ಅರ್ಪಿಸಿಕೊಳ್ಳುವುದು ಕಷ್ಟ. ಹಿಂದೆ ಅದನ್ನು ಮಾಡಿದವರು ಯಾರೂ ಇದ್ದಿರಲಿಲ್ಲ. ಸಿಂಧು ಮರಾಳ ಒಬ್ಬನೇ ಮಾಡಿದವನು. ಬಸವಣ್ಣ ಈ ಮಾತಿಗೇ ಒತ್ತುಗೊಟ್ಟು ಹೇಳಿರುವುದು.

---

20 ಬಸವಣ್ಣನವರ ಷಟ್‌ಸ್ಥಲದ ವಚನಗಳು. ವ. 149
ಅದೇ ನೋಡಿ : 'ನೆಱನಂಬೊ ನೆಱೆನಂಬೋ ಸಿಂಧು ಬಲ್ಲಾಳನಂತೆ. ನಂಬಿ-ದೆಬಾದಡೆ ತನ್ನನೀವ ಕೂಡಲಸಂಗಮದೇವ' ವ. 152

21. ಸಿದ್ಧರಾಮೇಶ್ವರ ವಚನಗಳು (ಸಂ. ಡಾ. ಆರ್. ಸಿ. ಹಿರೇಮಠ) ವ. 366

22. ಬಸವಣ್ಣನವರ ಷಟ್‌ಸ್ಥಲದ ವಚನಗಳು. ವ. 683

ತಮಿಳುನಾಡಿನ ಭಕ್ತರ ಅನಿರ್ವಚನೀಯವಾದ ಭಕ್ತಿ, ಕರ್ಣಾಟಕದ ಅನುಭಾವ ಸಾಹಿತ್ಯಕ್ಕೆ ಬಹಳ ಪ್ರೇರಣೆ ನೀಡಿದೆ. ತಮಿಳುನಾಡಿನ ಭಕ್ತರಲ್ಲಿ ಬಹಳ ಮಂದಿ ಸಾಮಾನ್ಯರು. ಆದರೂ ಅವರು ಜೀವನದ ಮೌಲ್ಯವನ್ನರಿತವರು. ತಮ್ಮ ನಿಜ ಬಾಳ್ವೆಯೊಂದಿಗೆ ಶಿವಭಕ್ತಿಯ ಸಾಮರಸ್ಯವನ್ನು ಸಾಧಿಸಿ ಅಮರ್ತ್ಯ ಸುಖವನ್ನು ಅವರು ಪಡೆದರು. ಭಗವದ್ಭಕ್ತಿಯನ್ನು ಅವರು ನಿರಾಕಾರ ನಿಷ್ಕಳಂಕ ಭಗವತ್ಸ್ವರೂಪವನ್ನು ಸ್ಥಾವರ ಲಿಂಗ ರೂಪದಲ್ಲಿ ಕಾಣಲು ಒಂದು ಸಾಧನವನ್ನಾಗಿ ಬಳಸಿಕೊಂಡರು. ಅವರದು ಯಾವ ಲೌಕಿಕ ಫಲಾಪೇಕ್ಷೆ ಇಲ್ಲದ ಶುದ್ಧ ಸಾತ್ವಿಕ ಭಕ್ತಿ. ಕರ್ಣಾಟಕದ ಶರಣರು ಅನುಭಾವವೇ ಭಕ್ತಿಗೆ ಆಧಾರವೆಂದು, ಅನುಭಾವವೇ ಭಕ್ತಿಗೆ ನೆಲೆವನೆ ಎಂದು ಭಾವಿಸಿ ಭಕ್ತಿಯ ಆಚರಣೆಗೆ ಸ್ಫೂರ್ತಿಯನ್ನು ತಮಿಳುನಾಡಿನ ಪುರಾತನರಿಂದ ಪಡೆದರು. ಅವರು ಹಿಡಿದ ಮಾರ್ಗದಲ್ಲಿ ವ್ಯತ್ಯಾಸವಿಷ್ಟೆ: ತಮಿಳುನಾಡಿನ ಪುರಾತನರು ಸ್ಥಾವರ ಲಿಂಗಗಳನ್ನು ಆರಾಧಿಸಿದರೆ, ಕನ್ನಡ ನಾಡಿನ ಶರಣರು ಇಷ್ಟಲಿಂಗವನ್ನು ಪೂಜಿಸಿದರು. ಭಕ್ತಿ ಅಂತರಂಗ ಸಂಬಂಧಿಯಾದುದು; ಬಾಹ್ಯಾಚರಣೆಯಲ್ಲ. ತಮಿಳುನಾಡಿನ ಭಕ್ತರು ಲಿಂಗದ ಪೂಜೆ, ಧ್ಯಾನ, ಗುಣಸಂಕೀರ್ತನ, ಇತ್ಯಾದಿಗಳಿಂದ ಅಂತರಂಗದ ನಿಷ್ಠೆಯನ್ನು ಬಲಿಸಿಕೊಂಡರು.[23] ಕನ್ನಡ ನಾಡಿನ ಶರಣರು ಮಲತ್ರಯಗಳಿಂದ ಬಂಧಿತವಾದ ಅಂಗವು ತನ್ನ ನಿಜಸ್ವರೂಪವನ್ನು ಕಳೆದುಕೊಂಡು ಬದ್ಧ ಜೀವರುಗಳಾಗಿ ಪರಿಣಮಿಸಿರುವುದರಿಂದ ಗುರುವಿನಿಂದ ದೀಕ್ಷೆ ಪಡೆದು ಶುದ್ಧ ಜೀವರುಗಳಾಗಿ ಷಟ್ಸ್ಥಲದ ಅನುಸರಣೆಯಿಂದ ಲಿಂಗಾಂಗ ಸಾಮರಸ್ಯವನ್ನು ಕಂಡುಕೊಂಡರು. ಶಿವಶರಣರ ಸಾಧನೆಯ ವಿವಿಧ ಸ್ಥಿತಿಗಳನ್ನು ಷಟ್ಸ್ಥಲ ಸಿದ್ಧಾಂತವು ವಿಶಿಷ್ಟವಾಗಿ ತಿಳಿಸುತ್ತದೆ. ಶಿವಶರಣರದು ಒಂದು ವ್ಯವಸ್ಥಿತವಾದ ಭಕ್ತಿ ಸಾಧನೆ. ಈ ಪರಮಾತ್ಮ ಜ್ಞಾನವೇ ಶಿವಶರಣರು ಹೇಳುವ ಅನುಭಾವ; ಅದನ್ನು ತಿಳಿಸುವ ಸಾಹಿತ್ಯವೇ– ಪರಮಾತ್ಮ ಜ್ಞಾನ. 'ದರ್ಶನ'ವೇ–ಅನುಭಾವ ಸಾಹಿತ್ಯ. ಶಿವಶರಣರು ತಮ್ಮ ಆತ್ಮೋದ್ಧಾರವನ್ನು ಮಾತ್ರ ಕಂಡುಕೊಳ್ಳಲಿಲ್ಲ. ಇತರರ ಆತ್ಮೋದ್ಧಾರದ ಬಗೆಗೂ ಯೋಚಿಸಿದರು. ಸದ್ಯಕ್ಕೆ ಆದ್ಯ ವಚನಕಾರನಾದ ಜೇಡರದಾಸಿಮಯ್ಯನು.

---

23. ಯೋಗಸಿದ್ಧಿಯಿಂದ ಮನಸ್ಸನ್ನೇ ದೇವಾಲಯವನ್ನಾಗಿ ಮಾಡಿ ಮಾನಸ ಪೂಜೆಯನ್ನು ಮಾಡಿದವರು ವಾಯಿಲ್ಲಾರ್‌ನಾಯನಾರ್‌ರವರು. ಯೋಗಶಕ್ತಿಯಿಂದ ಭೌತಿಕ ದೇಹವನ್ನು ತ್ಯಜಿಸಿ ಸುಂದರಮೂರ್ತಿಗಳಿಗಿಂತ ಮೊದಲೇ ಕೈಲಾಸವನ್ನು ಮುಟ್ಟಿದವರು ಪೆರು ಮಿಳಲೈ ಕುರುಂಬರು.
ಬಹುಶಃ ಭಕ್ತಿಯ ಅನುಸಂಧಾನದಲ್ಲಿ ಮನಸ್ಸಿನ ನಿಲುಗಡೆಗೆ ತಮಿಳುನಾಡಿನ ಪುರಾತನರು 'ಯೋಗ'ವನ್ನು ಸಾಧನವನ್ನಾಗಿ ಸ್ವೀಕರಿಸಿರಬೇಕು. ಕನ್ನಡನಾಡಿನ ಶಿವಶರಣರು ಮನಸ್ಸಿನ ಚಾಂಚಲ್ಯದ ನಿವಾರಣೆಗೆ 'ಶಿವಯೋಗ'ವನ್ನು ತಮ್ಮ ನಿತ್ಯ ಜೀವನಕ್ಕೆ ಅಳವಡಿಸಿಕೊಂಡು ಆ ಮೂಲಕ ಷಟ್‌ಸ್ಥಲದ ಐಕ್ಯಸ್ಥಿತಿಯನ್ನು ಕಂಡರು, ಆ ನಿಲುವಿನಲ್ಲಿ ಅನಿರ್ವಚನೀಯವಾದ ಆನಂದವನ್ನು ಅನುಭವಿಸಿದರು.

ಅನುಭಾವವಿಲ್ಲದೆ ಈ ತನು ಏಳಿತಟವಾದುದಯ್ಯಾ
ಅನುಭಾವವೀ ತನುವಿಂಗಾಧಾರ
ಅನುಭಾವರ ಅನುಭಾವವನು ಮನವಾರೆ ವೇದಿಸಿದವರಿಗೆ
ಜನನವಿಲ್ಲ ಕಾಣಾ ರಾಮನಾಥ[23]

ಎಂದಿರುವನು. ಭಕ್ತಿಮಾರ್ಗವು ಭಗವಂತನನ್ನು ಕಾಣಲು ಸುಲಭವಾದ ದಾರಿಯಾದರೂ ಅದು ಭಾವಿಸಿದಷ್ಟು ಸುಲಭವಲ್ಲ. ಅಂತರಂಗದ ಪರೀಕ್ಷೆಯಲ್ಲಿ ಗೆಲ್ಲುವುದು ಸುಲಭವಲ್ಲ. ಜೇಡರ ದಾಸಿಮಯ್ಯ ಹೇಳುವಂತೆ

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದಱದೆ ಬೆಚ್ಚಗೆ ಇದ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು[25]

ಬಸವಣ್ಣನ ವಚನಗಳಲ್ಲಿ ಶುದ್ಧ ಚೇತನವೊಂದರ ಭಕ್ತಿಯ ಮಿಡಿತವನ್ನು ಉದ್ದಕ್ಕೂ ಕಾಣುತ್ತ ಹೋಗಬಹುದು. 'ಭಕ್ತಿ ಭಂಡಾರಿ' ಎಂಬ ವಿಶೇಷಣ ಅವನಿಗೆ ಬಹಳ ಹೊಂದುತ್ತದೆ. ಭಕ್ತನ ಪ್ರಾರಂಭದ ಸ್ಥಿತಿಯಾದ ತಳಮಳದಿಂದ ಆರಂಭಿಸಿ, ಅನುಭಾವದ ಶಾಂತಸ್ಥಿತಿಯ ವರೆಗಿನ ಅವನ ಅಂತರಂಗಸಾಧನೆಯ ವಿವಿಧ ಗತಿಗಳನ್ನು ಗುರುತಿಸುತ್ತಾ ಹೋಗಬಹುದಾದ್ದರಿಂದ ಭಕ್ತಿ ಸಾಧನೆಯ ಸಾಧಕರಿಗೆ ಅವನ ವಚನಗಳು ನಿತ್ಯ ಮನನೀಯ. ಸಾಧನೆಯ ವಿವಿಧ ಹಂತಗಳಲ್ಲಿ ನಾನಾ ಬಗೆಯ ಪ್ರಲೋಭನೆಗಳು ಬಂದೊಡ್ಡುವವು–ಪರೀಕ್ಷಕ ಶಿವನಿಂದ. ಹಲವಾರು ವಚನಗಳಲ್ಲಿ ಈ ಕಾಡುವ ಕೈಯ ಕಾಟವನ್ನು ಬಸವಣ್ಣ ವಿವರಿಸಿರುವನು :

ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು ಹೋದರೆ
ನುಗ್ಗು ಮಾಡುವ, ನುಸಿಯ ಮಾಡುವ,
ಮಣ್ಣು ಮಾಡುವ, ಮಸಿಯ ಮಾಡುವ,
ಕೂಡಲ ಸಂಗಮ ದೇವರ ನೆಱೆನಂಬಿದನಾದರೆ
ಕಡೆಗೆ ತನ್ನಂತೆ ಮಾಡುವ[26]

ಅರೆವನಯ್ಯಾ ಸಣ್ಣಹವನ್ನಕ್ಕ, ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ
ಅರೆದರೆ ಸಣ್ಣವಾಗಿ. ಒರೆದರೆ ಬಣ್ಣವಾದರೆ
ಕೂಡಲ ಸಂಗಮದೇವನೊಲಿದು ಸಲಹುವನು[27]

---

24. ಜೇಡರ ದಾಸಿಮಯ್ಯನ ವಚನಗಳು (ಸಂ. ಎಚ್. ದೇವೀರಪ್ಪ. ಆರ್. ರಾಚಪ್ಪ) ವ 86
25. ಅದೇ, ಪರಿಶಿಷ್ಟ ವಚನ. 17
26 ಬಸವಣ್ಣನವರ ಷಟ್‌ಸ್ಥಲದ ವಚನಗಳು, ವ. 688
27 ಅದೇ, ವ. 689

ಮಾತಿನ ಮಾತಿನಲಿಪ್ಪುದೆ ಭಕ್ತಿ
ಮಾಡಿ ತನು ಸವೆಯದನ್ನಕ್ಕ ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ ?
ಕೂಡಲ ಸಂಗಮದೇವ ಎಲುದೋಱಿ ಸರಸವಾಡುವನು,
ಸೈರಿಸದನ್ನಕ್ಕ ಅಪ್ಪುದೇ ಭಕ್ತಿ ?

ಭಾವಶುದ್ಧವಿಲ್ಲದವರಿಗೆ ಭಕ್ತಿ ನೆಲೆಗೊಳ್ಳದು'[29] ಎಂದು ಎಚ್ಚರಿಸುತ್ತಾ, 'ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪನಂತೆ'[30] ಎಂದು ತಿಳಿಯ ಹೇಳುತ್ತ

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟ ಬಾರದಯ್ಯಾ
ನುಡಿದಂತೆ ನಡೆಯಲು ಬಾರದಯ್ಯಾ,
ಕೂಡಲ ಸಂಗನ ಶರಣರ ಭಕ್ತಿ ಬಾಳ ಬಾಯಧಾರೆ !

ಎಂದು ಭಕ್ತಿಯ ಆಚರಣೆಯ[31]ಲ್ಲಿನ ಸೂಕ್ಷ್ಮವನ್ನು, ಕಷ್ಟವನ್ನು ಅನುಭವಿಯ ಅನುಭವವಾಗಿ ವಿವರಿಸುತ್ತ ಹೋಗುವನು. ಕಾಡುವ ಕೈ ಕಾಪಾಡುವ ಕೈ ಸಹಾ ಆಗಿದೆ. ಭಕ್ತಿಪಥವ ತೋರುವ ತಂದೆ ಶಿವ. ಪ್ರೀತಿಸುವ–ಶಿಕ್ಷಿಸುವ ಹಕ್ಕು ಅವನಿಗೇ. "ಎಡದ ಕೈಯಲು ಹಾಲ ಬಟ್ಟಲು, ಬಲದ ಕೈಯಲ್ಲಿ ಓಜುಗಟ್ಟಿಗೆ. ಆವಾಗ ಬಂದಾನೋ, ನಮ್ಮಯ್ಯ ; ಬಡಿದು ಹಾಲ ಕುಡಿಸುವ ತಂದೆ ?"[32] ಎನ್ನುವನು ಬಸವಣ್ಣ. ಅಂತಃಕರಣ ಮೃದು-ಕಠಿಣವಿರುವ ತಂದೆಗೆ ಮಗನ ಅಭ್ಯುದಯ ಕಣ್ಣ ಮುಂದಿದೆ. ತನ್ನ ಕರ್ತವ್ಯದ ಅರಿವಿರುವ ತಂದೆ ಮಗನನ್ನು ಸಮಯ ಬಂದರೆ ಶಿಕ್ಷಿಸಿ ತಿದ್ದುತ್ತಾನೆ, ಹಾಗೆಯೇ,ಪ್ರೀತಿಯ ಹೊನಲಿನಲ್ಲಿ ಮಗನನ್ನು ಮಿಾಯಿಸುತ್ತಾನೆ. ಸಾಧಕರಿಗೆಸಾಧನೆಯಹಂತ ಹಂತಗಳಲ್ಲಿ ತಿಳಿಯಾಗಿ, ಅರ್ಥಪೂರ್ಣವಾಗಿ ಬಸವಣ್ಣ ದಾರಿತೋರುತ್ತಾ ಹೋಗುವನು.

ಭಕ್ತಿ ಸಾಧನೆಯಲ್ಲಿ ತಮಿಳುನಾಡಿನ ಭಕ್ತರು, ಹಾಗೆಯೇ, ಕರ್ಣಾಟಕದ ಕೆಲವರು ಶರಣರು ಅನುಸರಿಸಿದ ಮಾರ್ಗ ಉಗ್ರವಾದುದು. ಕಠಿಣ ಸಂದರ್ಭದಲ್ಲೂ ವಿಚಲಿತರಾಗದ ಅವರ ಅನನುಕರಣೀಯವಾದ ಚಿತ್ತಸ್ಥಿತಿ ಮಾನವರಿಗೆ ಗಾಬರಿಗೊಳಿಸುವಂತದು. ಆ 'ವಿಪರೀತ ಚರಿತರು' ತುಳಿದ ದಾರಿಯಲ್ಲಿ ಹೆಜ್ಜೆಯಿಡಲು ಭಯ— ಬಸವಣ್ಣನಿಗೆ.

---

28 ಅದೇ, ವ. 213
29 ಅದೇ, ವ. 659
30 ಅದೇ, ವ. 648
31 ಅದೇ, ವ. 214
32 ಅದೇ, ವ. 391

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ !
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿನ ಭಯ ಕಾಣಿರಣ್ಣಾ !
ಸಿರಿಯಾಳನ ಮಗನ ಬೇಡಿದಂದಿನ ಭಯ ಕಾಣಿರಣ್ಣಾ !
ದಾಸನ ವಸ್ತ್ರವ ಸೀಳಿದಂದಿನ ಭಯ ಕಾಣಿರಣ್ಣಾ !
ಅಘಟಿತ ಘಟಿತರು ವಿಪರೀತ ಚರಿತರು
ಕೂಡಲಸಂಗನ ಶರಣರು ನಡೆದ ದಾರಿ ಭಯ, ಕಾಣಿರಣ್ಣಾ ![33]

ಆಚರಣೆಗೆ ಕಷ್ಟವಾದದ್ದನ್ನು ಭಕ್ತರು ಆಚರಿಸಿದರು. ಭಕ್ತರ ಭಕ್ತಿ ಪರೀಕ್ಷೆಯಲ್ಲಿ ಶಿವನಿಗೆ ಸೋಲು. 'ಬೆಚ್ಚದೆ ಬೆದರದೆ ತೊತ್ತುತನವ ಮಾಡಲು' ಕೂಡಲ ಸಂಗಮ ದೇವನು ತನ್ನ ಭಕ್ತರಿಗೆ ತನ್ನನ್ನೇ ಒಪ್ಪಿಸಿದ. ಸಾಧಕರಿಗೆ, ಬಸವಣ್ಣ ತನ್ನೀ ಅನುಭವದಿಂದ

ನೆಚ್ಚಿ ನಂಬೋ, ನೆಚ್ಚಿ ನಂಬೋ ಧರಧುರವಿಲ್ಲದೆ
ಸಾಮವೇದಿಗಳಂತೆ ;
ನೆಚ್ಚಿ ನಂಬೋ, ನೆಚ್ಚಿ ನಂಬೋ ದಾಸ–ದುಗ್ಗಳೆಯಂತೆ ;
ನೆಚ್ಚಿ ನಂಬೋ, ನೆಚ್ಚಿ ನಂಬೋ ಸಿರಿಯಾಳ–ಚಂಗಳೆಯಂತೆ ;
ನೆಚ್ಚಿ ನಂಬೋ, ನೆಚ್ಚಿ ನಂಬೋ ಸಿಂಧು ಬಲ್ಲಾಳನಂತೆ,
ನಂಬಿದೆಯಾದಡೆ ತನ್ನನೀವ ಕೂಡಲ ಸಂಗಮದೇವ[34]

ಎಂದು ಹಿತವಚನ ನುಡಿದಿರುವನು.

ಭಕ್ತ-ದೇವರ ಪರೀಕ್ಷೆಯಲ್ಲಿ ಭಕ್ತನದೇ ಮೇಲುಗೈಯಾದುದರಿಂದ ಬಸವಣ್ಣನಿಗೆ ಅಂತರಂಗದಲ್ಲಿ ಖುಷಿ. "ದೇಹಿ ನೀನು, ವ್ಯಾಪಾರಿಗಳು ನಮ್ಮವರು ! ಬೇಡು ಕೂಡಲ ಸಂಗಮದೇವಾ, ಎಮ್ಮವರ ಕೈಯಲು"[35] ಎಂದು ದೇವನಿಗೇ ಹೇಳುವನು. ಅಷ್ಟೇ ಅಲ್ಲ, ದೇವನ ಕಾಡುವ, ಬೇಡುವ ಈ ಗುಣವನ್ನು ದೇವಲೋಕಕ್ಕೆ ಸಾರಿ ಹೇಳುವ ಉತ್ಸಾಹ :

ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ
ಬಲ್ಲಾಳನ ವಧುವ ಬೇಡಿದಾತನೀ ದೇವ !
ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ :
ದಾಸನ ವಸ್ತ್ರವ ಬೇಡಿದಾತನೀ ದೇವ !
ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ
ಸಿರಿಯಾಳನ ಮಗನ ಬೇಡಿದಾತನೀ ದೇವ !
ಕೂಡಲ ಸಂಗಮದೇವ ಜಂಗಮಮುಖಲಿಂಗವಾಗಿ,
ಕಾಡಿ ನೋಡುವ, ಬೇಡಿ ನೋಡುವ ![36]

33 ಅದೇ, ವ. 150
34 ಅದೇ, ವ. 152
35 ಅದೇ, ವ. 446
36 ಅದೇ, ವ. 437

ದೇವ-ಭಕ್ತರ ಸೋಲು-ಗೆಲ್ಲುವಾಟದಲ್ಲಿ ಸೋತ ಶಿವನನ್ನು ಎಷ್ಟು ಲೇವಡಿ ಮಾಡಿದರೂ ಕಡಿಮೆಯೇ–ಬಸವಣ್ಣನಿಗೆ :

> ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವೆ ಮಾಣೆ ; ಗರುವತನವೆ ?
> ದಾಸನ ವಸ್ತ್ರವನುಡುವುದೊಂದು ಗರುವತನವೆ !
> ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ !
> ಕೋಡಗವ ಹುಲ್ಲಲಿ ಮುಸುಕಿದಂತೆ
> ಕೂಡಲ ಸಂಗಮದೇವಾ, ನಿಮ್ಮಪರಿ ![37]

ಎಂದು ಹೇಳುವಲ್ಲಿನ ಬಸವಣ್ಣನ ವ್ಯಂಗ್ಯ, ಮಾತಿನ ಮೊನಚು ತೀಕ್ಷ್ಣವಾದುದು. 'ಕೋಡಗವ ಹುಲ್ಲಲಿ ಮುಸುಕಿದಂತೆ' ಎಂಬ ಉಪಮೆ ವಚನದ ಇಡೀ ಒಟ್ಟು ಧೋರಣೆಗೆ ಧ್ವನಿ ತುಂಬುತ್ತದೆ. ದೇವ ಭಕ್ತರ ಸಂಬಂಧ ಒಂದು ವಿಧದಲ್ಲಿ ನಂಬಿಯಣ್ಣ–ಬಸವಣ್ಣರಲ್ಲಿ ಆತ್ಮೀಯವಾದುದು ; ಮಾನವ ಸಂಬಂಧದಷ್ಟೇ ಗಟ್ಟಿಯಾದುದು.

ಬಸವಾದಿ ಶಿವಶರಣರು ಭಕ್ತನ ಲಕ್ಷಣಗಳನ್ನು ಭಕ್ತಸ್ಥಲದಲ್ಲಿ ಸಾಕಷ್ಟು ಹೇಳಿರುವರು. ಪ್ರಾಥಮಿಕವಾಗಿ ಭಕ್ತನಾಗಲು ಅಗತ್ಯವಿರುವ ಶೌಚ ಗುಣಗಳಿಷ್ಟೆ :

> ಭಕ್ತ ಶಾಂತನಾಗಿರಬೇಕು ;
> ತನ್ನ ಕುಱಿತು ಬಂದ ಠಾವಿನಲ್ಲಿ ಸತ್ಯವಾಗಿ ನುಡಿಯಬೇಕು ;
> ಭೂತಹಿತವಹ ವಚನವ ನುಡಿಯಬೇಕು ;
> ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು ;
> ತನು-ಮನ-ಧನವ ಗುರು-ಲಿಂಗ-ಜಂಗಮಕ್ಕೆ ಸವೆಸಬೇಕು ;
> ಅಪಾತ್ರದಾನವ ಮಾಡಲಾಗದು ;
> ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು ;
> ಇವೇ ಮೊದಲಲ್ಲಿ ಬೇಹ ಶೌಚ ನೋಡಾ,!

ಇವೇ ಲಿಂಗಾನುಗ್ರಹಕ್ಕೆ ಅಗತ್ಯವಾದ ಸಾಧನಗಳು. ಶರಣರು ನಂಬಿರುವಂತೆ 'ಭಕ್ತಿಗೆ ಅನುಭಾವವೇ ಆಧಾರ'. ಬಸವಣ್ಣ ಹೇಳುವಂತೆ "ವೀರಶೈವಾಚಾರ ಸಂಪನ್ನರೆನ್ನಿಸುವ ಪರಮ ಸದ್ಭಕ್ತರಿಗೆ ಅನುಭಾವವೆ ಅರಿವಿನಗೊತ್ತು..." ಜೇಡರ ದಾಸಿಮಯ್ಯನ ಪ್ರಕಾರ 'ಅನುಭಾವರ ಅನುಭಾವವನು ಮನವಾರೆ ವೇದಿಸಿದವರಿಗೆ ಜನನವಿಲ್ಲ.'[39]

---

37 ಅದೇ, ವ. 742

38 ಚನ್ನಬಸವಣ್ಣನವರ ವಚನಗಳು (ಸಂ. ಡಾ. ಆರ್. ಸಿ. ಹಿರೇಮಠ) ವ. 86

39 ಜೇಡರ ದಾಸಿಮಯ್ಯನ ವಚನಗಳು (ಸಂ. ಎಚ್. ದೇವೀರಪ್ಪ, ಆರ್. ರಾಚಪ್ಪ) ವ. 86

ಭಕ್ತರ ಭಕ್ತಿಯ ಆಚರಣೆಯಲ್ಲಿನ ವೈಪರೀತ್ಯಗಳನ್ನು ಮೆಚ್ಚಿದವರೂ, ಮನಸಾರೆ ಕೊಂಡಾಡಿದವರೂ ಬಹಳ. ಆದರೆ, ಪ್ರಭುದೇವ ಒಬ್ಬ ಮಾತ್ರ ಇದಕ್ಕೆ ವಿರುದ್ಧ. 'ಅಂಗನೆಯ ಮೊಲೆ ಲಿಂಗವೆ? ಬಳ್ಳ ಲಿಂಗವೆ? ಕಿತ್ತು ಬಹ ಸಾಣೆ ಲಿಂಗವೆ? ಆಡಿನ ಒಕ್ಕೆ ಲಿಂಗವೆ? ಮೆಚ್ಚುವರೆ ಪ್ರಮಥರು? ಮೆಚ್ಚುವರೆ ಪುರಾತನರು? ನಿಮ್ಮ ಭಕ್ತರು?'[40] ಎಂದು ನೇರವಾಗಿ ಪ್ರಶ್ನಿಸಿದ! ಕೋಂಗುಲಿಯ ಕಲಿಯರು ತಲೆಯನ್ನು ಕೊಯಿದುಕೊಂಡರು, ಸಿಂಧುಮರಾಳ ದೇಹವನ್ನು ಕಡಿದುಹಾಕಿದ, ಕಣ್ಣಪ್ಪ ಕಣ್ಣನ್ನು ಕಳೆದ, ಸಿರಿಯಾಳ ಮಗನನ್ನು ಕೊಂದು ಬಾಣಸವ ಮಾಡಿದ– ಹೀಗೆ ಇವರೆಲ್ಲ ಉಗ್ರವಾಗಿ ತಮ್ಮ ಭಕ್ತಿಯನ್ನು ಪ್ರಕಟಿಸಿ ಕೈಲಾಸಕ್ಕೆ ಹೋದರು. ಇಂತಹವರು ಭಕ್ತರೆ? ಇವರಿಗೆ ಶಿವಪಥವು ಸಾಧ್ಯವೆ? ಇವರ ಭವ ಕೊನೆಗೊಂಡಿತೆ? ಇವರ ಭಕ್ತಿ ಸಹಜವೆ? ಅಲ್ಲಲ್ಲ. 'ನಿತ್ಯ ನಿಜತತ್ತ್ವ ತಾನೆಂದಱಿಯದೆ ತತ್ವಮಸಿ ವಾಕ್ಯವ ಹೊಱಿ ಹೊಱಿಗನೆ ಬಳಸಿ ಕೆಟ್ಟರಲ್ಲಾ ಹಿರಿಯರು, ಸತ್ತರಲ್ಲಾ ನಾಯಿಸಾವ!'[41] ಎಂಬ ವ್ಯಥೆ ಪ್ರಭುವಿನದು.

ತಮಿಳುನಾಡಿನ ಭಕ್ತರು ಸ್ಥಾವರ ಲಿಂಗಪೂಜಕರು. ವೈದೀಕ ಪದ್ಧತಿಯಲ್ಲಿ, ಸ್ವಲ್ಪಮಟ್ಟಿಗೆ ವಿಶ್ವಾಸವುಳ್ಳವರು. ಕನ್ನಡನಾಡಿನ ಶರಣರು ಸ್ಥಾವರಲಿಂಗದ ಬದಲಿಗೆ ಇಷ್ಟಲಿಂಗದ ಪೂಜಕರು. ಸ್ಥಾವರಲಿಂಗಗಳನ್ನೇ ಆಗಲೀ, ವೈದೀಕ ಪೂಜಾ ಕ್ರಮಗಳನ್ನಾಗಲೀ, ಆಚರಣೆಗಳನ್ನಾಗಲೀ ಒಪ್ಪದವರು; ದೇವಸ್ಥಾನಗಳ ನಿರ್ಮಾಣವನ್ನು ಉಗ್ರವಾಗಿ ಖಂಡಿಸಿದವರು. ಹೀಗೆ ಪರಸ್ಪರ ವಿರುದ್ಧಾಂಶ, ಮೂಲಭೂತವಾಗಿ ಇದ್ದರೂ ವಚನಕಾರರು, ಕನ್ನಡದ ವೀರಶೈವ ಕವಿಗಳು ಇವರನ್ನು ಮನಸಾರೆ ಸ್ತುತಿಸಿರುವುದು, ಇವರ ಜೀವನ ಕಥನವನ್ನು ಸಂದರ್ಭೋಚಿತವಾಗಿ ಉಪಕಥೆಗಳ ರೂಪದಲ್ಲಿ ಹೇಳಿ ಇಲ್ಲವೇ ತಮ್ಮ ಕೃತಿಗೆ ಇವರ ಇಡೀ ಬದುಕನ್ನೇ ವಸ್ತುವಾಗಿಸಿ ಅಮರರನ್ನಾಗಿಸಿರುವುದು ವಿಶೇಷ. ಇವರ ಬದುಕಿನಿಂದ ಶರಣರು ಸ್ಫೂರ್ತಿ ಪಡೆದರೆ, ಮುಂದೆ, ಕವಿಗಳಿಂದಾಗಿ ಕನ್ನಡ ವೀರಶೈವ ಸಾಹಿತ್ಯ ಹೊಸ ಆಯಾಮವೊಂದನ್ನು ಪಡೆದಿದೆ; ಹೊಸ ಸಂಪತ್ತೊಂದನ್ನು ತನ್ನ ಸಾಹಿತ್ಯಕಣಜಕ್ಕೆ ತುಂಬಿಕೊಂಡಿದೆ.

---

40 ಪ್ರಭುದೇವರ ವಚನಗಳು (ಸಂ. ಡಾ. ಎಂ. ಎಸ್. ಸುಂಕಾಪುರ) ವ. 798

41 ಅದೇ, ವ. 801

ಭಾವನಾ ಜೀವನಾ

ಬಿದರಹಳ್ಳಿ ನರಸಿಂಹಮೂರ್ತಿ

ಚಿಕ್ಕ ಮಕ್ಕಳೆ ಸ್ವಚ್ಛಂದ ಹಕ್ಕಿಗಳೆ
ಮುಗ್ಧ ಹೂಗಳೆ ಕುತೂಹಲಿ ನಕ್ಷತ್ರಗಳೆ
ನಿಮ್ಮ ಭಾವನಾ ಜೀವನ ಬಣ್ಣ ಬಣ್ಣ
ನಿಮ್ಮ ಪ್ರತಿಭೆಯ ಮುಂದೆ ನಾವೆಲ್ಲ ಸಣ್ಣ

ಎಳೆ ಬಿಸಿಲ ಹುರುಪಲ್ಲಿ
ತಿಳಿ ಹಸಿರು ನಗೆ ನಗುತ
ನೀಲಿಯುಲ್ಲಾಡಿ ಮೋಡ ಹಿಡಿಯುವಿರಿ

ಜೀವ-ತೊಳೆಯೊಳಗಿಂದ
ಹೊಳೆದು ಬರುವಕ್ಕರೆಯು
ಸಿಹಿಯು ಬೆರೆಸುವಿರಿ ಬೆಳೆದವರ ಕಹಿಗೆ

ಕಪ್ಪು ಹಾಳೆಯು ಕಂಡು
ಚಿಕ್ಕೆಗಳ ಮಿಂಚಿಸುತ
ಅಂಕಿ ಅಕ್ಷರಗಳನು ಕೂಡಿ ಕಳೆಯುವಿರಿ

ಲೆಕ್ಕವಿಲ್ಲದ ಪ್ರಶ್ನೆ
ನೆಟ್ಟು ಅಲ್ಲಾಡಿಸುತ
ತಟ್ಟಕದ ಸುಕ್ಕುಗಟ್ಟಿಸುವಿರೆಲ್ಲರನು

ವೇಷ ಭೂಷಣ ಬಣ್ಣ
ಜಾತಿಗಳ ಗುರುತಿಸದೆ
ಬರಿ ಹೃದಯ ಬೆಸೆಯುವಿರಿ ಹೃದಯಗಳಿಗೆ

ಚಪ್ಪರದ ಹೊರಬಿಸಿಲ
ಚಿಂದಿ ಹೊದ್ದವರನ್ನು
ಒಳ ಮಾಡಿಕೊಳ್ಳುವಾತಂಕ ನಿಮಗೆ

ನೂರೆಂಟು ಮಿತಿ ಮೇರೆ
ಅಡ್ಡಗೋಡೆಗಳುಂಟು
ಕಲಿಯುತ್ತ ಬಲಿತಿರುವ ನಮ್ಮ ನಡುವೆ

ಚಿಕ್ಕ ಮಕ್ಕಳೆ ಸ್ವಚ್ಛಂದ ಹಕ್ಕಿಗಳೆ
ಮುಗ್ಧ ಹೂಗಳೆ ಕುತೂಹಲಿ ನಕ್ಷತ್ರಗಳೆ
ನಿಮ್ಮ ಪ್ರತಿಭೆಯು ಮುಂದೆ ನಾವೆಲ್ಲ ಸಣ್ಣ
ನಮ್ಮ ಸಣ್ಣತನ ಗೆಲ್ಲಲು ನೀವೆ ಸೈಯಣ್ಣ

ಮಾಟ – ಮದ್ದು

ಕೆ. ಮರುಳಸಿದ್ದಪ್ಪ

ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಮನುಷ್ಯ ಪ್ರಗತಿ ಹೊಂದಿದಂತೆ ಅತಿಮಾನುಷ ಸತ್ವಗಳಲ್ಲಿ ನಂಬಿಕೆ ಕಡಿಮೆಯಾದೀತೆಂಬ ಊಹೆಯನ್ನು ಸುಳ್ಳು ಮಾಡುವ ಅನೇಕ ಸಂಗತಿಗಳು ಆಗಾಗ ನಡೆಯುತ್ತಿರುತ್ತಲೇ ಇರುತ್ತವೆ. ಕಳೆದ ವರ್ಷ ಜನವರಿಯಲ್ಲಿ ಕೊಲಂಬಿಯಾದಲ್ಲಿ ಜರುಗಿದ ಜಾಗತಿಕ ಮಾಟಗಾರರ ಸಮ್ಮೇಳನ ಅಂತಹ ಪ್ರಕರಣಗಳಲ್ಲಿ ಒಂದು ಮಾತ್ರ. ದೇಶ ವಿದೇಶದ ಪತ್ರಿಕಾವರದಿಗಾರರು ಮತ್ತು ಸಾವಿರಾರು ಕುತೂಹಲಿಗಳ ಎದುರು 'ಬೃಹತ್ ಭೂತಪ್ರತಿಮೆ'ಯ ಸನ್ನಿಧಿಯಲ್ಲಿ ವಿವಿಧ ದೇಶಗಳ ಮಾಟಗಾರರು ತಮ್ಮ ಅತಿಮಾನುಷ ಶಕ್ತಿಗಳನ್ನು ಪ್ರದರ್ಶಿಸಿದರಂತೆ. ಹಿಂಸೆ ಕ್ರೌರ್ಯಗಳಿಂದ ತುಂಬಿದ ಸಮಕಾಲೀನ ಜಗತ್ತಿನಲ್ಲಿ ಒಂದು ವ್ಯವಸ್ಥೆಯನ್ನು ರೂಪಿಸಲು ಮಾಟಗಾರರಿಂದ ಮಾತ್ರ ಸಾಧ್ಯ ಎಂಬುದು ಅಲ್ಲಿ ವ್ಯಕ್ತವಾದ ಸರ್ವಾನುಮತ ಅಭಿಪ್ರಾಯ.

ದೂರದ ಕೊಲಂಬಿಯಾದ ಸುದ್ದಿಯಿರಲಿ, ನಮ್ಮ ಹಳ್ಳಿಗಳಲ್ಲೇ ಮಾಟದ ವಿವಿಧ ಆಚರಣೆಗಳು, ನಂಬಿಕೆಗಳು ಇಂದಿಗೂ ಪ್ರಚಲಿತವಾಗಿವೆ. ಕಳೆದ ಎರಡು ದಶಕಗಳಿಗಿಂತ ಹಿಂದಿನ ಕಾಲದಲ್ಲಿ ಮಾಟಗಾರರ ಬಹಿರಂಗ ಸ್ಪರ್ಧೆಗಳು ಕುಸ್ತಿಪಂದ್ಯಗಳಂತೆ ಹಳ್ಳಿಗಳಲ್ಲಿ ನಡೆಯುತ್ತಿದ್ದುದುಂಟು. ಮಾಟಗಾರರಿಬ್ಬರು ಸವಾಲು ಪ್ರತಿಸವಾಲುಗಳನ್ನು ಹಾಕಿ ಪರಸ್ಪರ ಮೋಡಿಯಾಟದಲ್ಲಿ ಸೆಣಸಿದಾಗ ಪ್ರೇಕ್ಷಕರಂತೂ ರಹಸ್ಯಭ್ರಮೆಗಳ ನಿಗೂಢ ಲೋಕದಲ್ಲಿ ತನ್ಮಯರಾಗುತ್ತಿದ್ದರು; ಅದು ಅವಾಸ್ತವವೆಂದು ಯಾರೂ ಭಾವಿಸುತ್ತಿರಲಿಲ್ಲ. ಕಂಚಿ ಗೊಲ್ಲರೆಂಬ ವಿಶಿಷ್ಟ ಪಂಗಡದ ಜನ ಈ ಮೋಡಿ ವಿದ್ಯೆಯಲ್ಲಿ ನಿಷ್ಣಾತರೆಂಬ ಪ್ರಸಿದ್ಧಿಯಿತ್ತು. ಇಂದಿಗೂ ಗ್ರಾಮೀಣ ಜಗತ್ತಿನಲ್ಲಿ ವೈರಿಗಳ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಜನ ಹವಣಿಸುವ ತಂತ್ರಗಳಲ್ಲಿ ಮಾಟಕ್ಕೆ ಮಹತ್ವದ ಸ್ಥಾನವಿದೆ.

ಮಾಟವೆಂದರೆ ನಮ್ಮಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ ಅರ್ಥ, ದುಷ್ಟ ಮಾಂತ್ರಿಕತೆ; ಮಾಟಗಾರರು ಕೆಳಜಾತಿಗಳ ಪುರೋಹಿತರು. ಸ್ಥಳೀಯವಾದ ಭಿನ್ನ ಕಲ್ಪನೆಗಳೇನಿದ್ದರೂ ಮಾಟವೆನ್ನುವುದು ಒಂದು ಜಾಗತಿಕ ಸಮಸ್ಯೆಯಾಗಿರುವುದರಿಂದ ಅದನ್ನು ಸಾರ್ವತ್ರಿಕ ನೆಲೆಯಲ್ಲಿಯೇ ಚರ್ಚಿಸಬೇಕಾಗಿದೆ. ಎಚ್ಚರದಿಂದ ಗಮನಿಸಿದರೆ ಎಲ್ಲ ಪ್ರಾಚೀನ ಸಂಸ್ಕೃತಿಗಳಲ್ಲೂ ಅತಿಮಾನುಷ ನಂಬಿಕೆಗಳು ಎರಡು

ನೆಲೆಯಲ್ಲಿ ಕಂಡುಬರುತ್ತವೆ. ಪವಿತ್ರವಾದದ್ದು ಮೊದಲನೆಯದು, ಭಯಂಕರ ವಾದುದು ಎರಡನೆಯದು. ಪವಿತ್ರವಾದುದು ಧಾರ್ಮಿಕ ವಿಧಿ ವಿಧಾನಗಳಾದರೆ ಭಯಂಕರವಾದುದು ಮಾಟದ ಪ್ರಯೋಗ ತಂತ್ರಗಳು. ಧರ್ಮದ ಅಧಿ ದೇವತೆ ಗಳು ನಾಗರಿಕರ ದೇವತೆಗಳು ; ಶಿವ, ವಿಷ್ಣು, ಬ್ರಹ್ಮ, ಸರಸ್ವತಿ, ಲಕ್ಷ್ಮಿ ಮುಂತಾದ ವರು. ಅವರು ಅಭಯಂಕರರು. ಮಾಟದ ಅಧಿದೇವತೆಗಳು ಚೌಡಿ, ಭೂತ, ಬೇತಾಳ, ಕಾಳಿ, ಚಾಮುಂಡಿಯರು ; ಭಯಂಕರ ವ್ಯಕ್ತಿತ್ವವುಳ್ಳವರು.

ಕೆಲವು ಮಾನವಶಾಸ್ತ್ರಜ್ಞರ ಪ್ರಕಾರ ಮಾಟವು ಧರ್ಮಕ್ಕಿಂತ ಹಿಂದಿನದು. ಆದಿ ಮಾನವನು ಪ್ರಕೃತಿ ವ್ಯಾಪಾರಗಳನ್ನು ತನ್ನ ಇಚ್ಛಾಶಕ್ತಿಗನುಸಾರವಾಗಿ ಒತ್ತಾಯಿಸಬಲ್ಲೆನೆಂದು ಭಾವಿಸಿ ನಡೆಸುತ್ತಿದ್ದ ವಿಧ್ಯುಕ್ತ ಆಚರಣೆಗಳೇ ಮಾಟದ ಮೂಲವೆಂದು ಹೇಳಲಾಗುತ್ತದೆ. ಮಾಟವು ಪ್ರಕೃತಿಯನ್ನು, ಅತಿಮಾನುಷ ಸತ್ವ ಗಳನ್ನು ಒತ್ತಾಯಿಸಿ, ಹಿಂಸಿಸಿ ತನ್ನ ಇಷ್ಟಾರ್ಥವನ್ನು ಪಡೆದುಕೊಂಡರೆ ಧರ್ಮವು ಅತಿಮಾನುಷ ಸತ್ವಗಳನ್ನು ಪ್ರಸನ್ನಗೊಳಿಸಿ ಒಲಿಸಿಕೊಳ್ಳಲು ಬಯಸುತ್ತದೆ. ಹಳ್ಳಿ ಗಳಲ್ಲಿ ಭೂತ ಚೌಡಿಗಳನ್ನು ಆರಾಧಿಸುವ ಜನ–ತಮ್ಮ ವೈರಿಯಮೇಲೆ ಪ್ರತೀಕಾರ ತೀರಿಸಿಕೊಳ್ಳುವಾಗ–ಚೌಡಿ ಭೂತಗಳಿಗೆ ಉರಿಯುವ ಮೆಣಸಿನ ಕಾರವನ್ನು ಮೆತ್ತಿ ಬರುವ ವಾಡಿಕೆಯಿದೆ. ಪ್ರಾಣಿಗಳನ್ನು ಬಲಿಕೊಟ್ಟು ರಕ್ತ ಚೆಲ್ಲುವುದೂ ಹಿಂಸೆ–ಕ್ರೌರ್ಯದ ಆರಾಧನಾ ವಿಧಿಯೇ ಹೊರತು ಮತ್ತೇನಲ್ಲ. ಇಲ್ಲೆಲ್ಲಾ ತಮ್ಮ ವೈರಿಯ ಮೇಲೆ ಭೂತ ಅಥವಾ ಚೌಡಿ ಮುನಿದುಕೊಳ್ಳುವಂತೆ ಒತ್ತಾಯಿಸುವ ತಂತ್ರವನ್ನೇ ಗುರುತಿಸಬಹುದು. ಕೆಳವರ್ಗದ ಗ್ರಾಮೀಣರು ಆರಾಧಿಸುವ ವಿಧಾನದಲ್ಲಿ–ಭೂತ ಚೌಡಿಗಳನ್ನೂ ಮೇಲುವರ್ಗದವರು ಆರಾಧಿಸುವುದಿಲ್ಲ. ಅತಿಮಾನುಷ ಸತ್ವಗಳು ದೇವತೆಯಾಗಿರಲಿ ಭೂತ ಚೌಡಿಗಳಾಗಿರಲಿ ಅವರ ಆರಾಧನಾ ತಂತ್ರಗಳು ಶುದ್ಧ ಸಾತ್ವಿಕ ಬಗೆಯವು. ಹಣ್ಣು ಕಾಯಿಗಳ ನೈವೇದ್ಯ, ಪುಷ್ಪಾಲಂಕಾರ ಇತ್ಯಾದಿ. ಇಲ್ಲೆಲ್ಲಾ ಭಯಕ್ಕಿಂತ ಭಕ್ತಿಗೆ ಮಹತ್ವ.

ಧರ್ಮದ ಸ್ವರೂಪ ಸಂಕೀರ್ಣವಾದುದು ; ಮಾಟ ಸರಳವಾದುದು. ಧರ್ಮದ ಸಾಮ್ರಾಜ್ಯ ವಿಸ್ತಾರವಾಗಿದ್ದು, ಅವಕ್ಕೆ ಸಂಬಂಧಿಸಿದ ಪುರಾಣಗಳು ವೈವಿಧ್ಯ ಮಯವಾಗಿರುತ್ತವೆ. ಮಾಟಕ್ಕೆ ಸಂಬಂಧಿಸಿದ ಕಥೆಗಳು ಸೀಮಿತವಾಗಿರುತ್ತವೆ. ಧರ್ಮವು ಎಲ್ಲರ ಸೊತ್ತು. ಒಂದು ಧರ್ಮದಲ್ಲಿ ಹುಟ್ಟಿದ ಎಲ್ಲರಿಗೂ ನಾಮಕರಣ, ಮದುವೆ, ಸಾವು - ಇವಕ್ಕೆ ಸಂಬಂಧಿಸಿದ ಕ್ರಿಯಾ ವಿಧಿಗಳಲ್ಲಿ ಭಾಗವಹಿಸಲು ಮತ್ತು ಅವುಗಳನ್ನು ಹೊಂದಲು ಸಮಾನ ಅವಕಾಶವಿರುತ್ತದೆ. ಆದರೆ, ಮಾಟವೆನ್ನುವುದು ಕೇವಲ ಒಬ್ಬ ಅಥವಾ ಕೆಲವೇ ಜನರ ಗುಟ್ಟಾಗಿದ್ದು ವ್ಯಕ್ತಿಯಿಂದ ವ್ಯಕ್ತಿಗೆ ರಹಸ್ಯ ವಾಗಿ ಉಪದೇಶದ ಮೂಲಕ ಮುಂದುವರಿಯುತ್ತದೆ. ಮಾಟಗಾರ ಒಂದು ಚಿಕ್ಕ ಸಾಮ್ರಾಜ್ಯದ ಕಠೋರ ಅಧಿಪತಿಯಾಗುತ್ತಾನೆ.

ಮಾಟ ಮತ್ತು ಧರ್ಮದ ವ್ಯತ್ಯಾಸವನ್ನು ವಿವರಿಸುತ್ತಾ ಮಲಿನೊವಸ್ಕಿ ಕೊಡುವ ಒಂದು ಉದಾಹರಣೆ ತುಂಬಾ ಸ್ಪಷ್ಟವಾಗಿದೆ. ಒಂದು ಮಗು ಹುಟ್ಟಿದಾಗ ನಡೆಯುವ ನಾಮಕರಣ ವಿಧಿ ಅಥವಾ ಸೂತಕ ವಿಧಿಗೆ ಸಂಬಂಧಿಸಿದ ಆರಾಧನೆಗೂ ಅದೇ ಮಗು ಇದ್ದಕ್ಕಿದ್ದಂತೆ ಜಾಡ್ಯಕ್ಕೆ ತುತ್ತಾಗಿ ಸಾವಿನ ದವಡೆಯಲ್ಲಿದ್ದಾಗ ರಕ್ಷಿಸಲು ನಡೆಸುವ ಪೂಜಾವಿಧಿಗಳಿಗೂ ನಿಖರವಾದ ವ್ಯತ್ಯಾಸವಿದೆ. ನಾಮಕರಣ ಅಥವಾ ಸೂತಕ ವಿಧಿಗಳಿಗೆ ಸಂಬಂಧಿಸಿದ ಆರಾಧನೆಗೆ ನಿರ್ದಿಷ್ಟ ಗುರಿಯಿಲ್ಲ: ಅದೊಂದು ರೂಢಿಗತವಾದ ಸಂಪ್ರದಾಯ. ಸಾವಿನ ಅಂಚಿನಲ್ಲಿರುವ ಮಗುವನ್ನು ರಕ್ಷಿಸಲು ನಡೆಸುವ ಆಚರಣಾ ವಿಧಿಗಳಿಗೆ ನಿರ್ದಿಷ್ಟ ಗುರಿಯಿದೆ. ಮಗುವನ್ನು ಸಾವಿನಿಂದ ರಕ್ಷಿಸುವುದೇ ಗುರಿಯಾಗಿದ್ದು ಪೂಜಾವಿಧಿಯೊಂದು ಅದರ ಸಾಧನ ಅಥವಾ ಮಾರ್ಗ. ಇಂದಿಗೂ ಗ್ರಾಮೀಣರು ಯಾರಿಗಾದರೂ ಸಖಿತ್ ಜಡ್ಡಾದಾಗ ಮೂರು ದಾರಿ ಕೂಡಿದ ಜಾಗವೊಂದರಲ್ಲಿ ಒಂದು ವಿಧ್ಯುಕ್ತ ಆಚರಣೆ ನಡೆಸುತ್ತಾರೆ. ಮಣ್ಣಿನ ಬೊಂಬೆಯನ್ನು ನಿರ್ಮಿಸಿ ಮೂರುದಾರಿ ಕೂಡುವೆಡೆ ರಂಗೋಲಿಯಿಂದ ಮಂಡಲ ಬರೆದು ಅರಿಶಿನ ಕುಂಕುಮಗಳನ್ನು ಚೆಲ್ಲಿ, ಲಿಂಬೆಹಣ್ಣು, ಹಣ, ಒಮ್ಮೊಮ್ಮೆ ಕೋಳಿ ಕುರಿಗಳನ್ನೂ ಬಲಿಕೊಟ್ಟು ನಡೆಸುವ ಈ ಪೂಜಾವಿಧಿಯನ್ನು ಇಲ್ಲಿ ಉಲ್ಲೇಖಿಸಬಹುದು. ಮಗು ಹುಟ್ಟಿದಾಗ, ಹುಡುಗಿ ಮೈನೆರೆದಾಗ, ಮದುವೆಯ ಕಾಲದಲ್ಲಿ, ವ್ಯಕ್ತಿ ಸತ್ತಾಗ ನಡೆಸುವ ಸಾಂಪ್ರದಾಯಿಕ ಆರಾಧನೆಗಳಿಗೂ ಮೇಲೆ ಉಲ್ಲೇಖಿಸಲಾಗಿರುವ ಪೂಜಾವಿಧಿಗೂ ಸ್ಪಷ್ಟ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಮಲಿನೊವಸ್ಕಿಯವರು ಸಾಂಪ್ರದಾಯಿಕ ಆರಾಧನೆಗಳು ಧರ್ಮದ ಕ್ಷೇತ್ರಕ್ಕೂ, ನಿರ್ದಿಷ್ಟ ಗುರಿಯಿಟ್ಟು ನಡೆಸುವ ಪೂಜಾವಿಧಿಗಳು ಮಾಟದ ಕ್ಷೇತ್ರಕ್ಕೂ ಸೇರುತ್ತವೆಯೆನ್ನುತ್ತಾರೆ. ಆದರೂ, ಧರ್ಮ ಮತ್ತು ಮಾಟ—ಇವೆರಡರ ನಡುವೆ ಪ್ರತ್ಯೇಕ ಗೆರೆಯೆಳೆದು ಗುರುತಿಸುವುದು ತೀರಾ ಕಷ್ಟ. ಏಕೆಂದರೆ ಎರಡೂ ಅತಿಮಾನುಷ ಸತ್ವಗಳ ಇರುವಿಕೆಯನ್ನು ನಂಬುತ್ತವೆ. ಸುಪ್ರಸಿದ್ಧ ಮಾನವಶಾಸ್ತ್ರಜ್ಞ ಫ್ರೇಜರ್ ಹೇಳುವಂತೆ ಮಾಟದ ಪ್ರಯೋಗ ತಂತ್ರಗಳಲ್ಲಿ ಧರ್ಮದ ಪೂರ್ವಭಾವಿ ಸಿದ್ಧತೆಯನ್ನು ಕಾಣಬಹುದಾಗಿದೆ. ಇವೆರಡೂ ಪರಸ್ಪರ ಪೂರಕವೆಂದು ಜನಸಾಮಾನ್ಯರು ನಂಬಿರುವ ಕಾರಣವಾಗಿ ಎರಡೂ ರೂಢಿಯಲ್ಲಿ ಉಳಿದಿವೆ.

ಅತ್ಯಂತ ಹಿಂದುಳಿದ ಕೆಲವು ಆದಿವಾಸಿ ಸಂಸ್ಕೃತಿಗಳಲ್ಲಿ ಮಾಟದ ಪ್ರಭಾವ ಎಷ್ಟು ವ್ಯಾಪಕವಾಗಿದೆಯೆಂದರೆ, ಅವರ ಬದುಕಿನ ಯಾವ ಒಂದು ಕ್ರಿಯೆಯೂ ಸ್ವತಂತ್ರವಲ್ಲ. ಪ್ರಾಕೃತಿಕ ವ್ಯಾಪಾರ, ಮಾನವನ ದೈನಂದಿನ ನಡವಳಿಕೆಗಳನ್ನೆಲ್ಲಾ ಮಾಟದಿಂದ ನಿಯಂತ್ರಿಸಲು ಮತ್ತು ಬದಲಾಯಿಸಲು ಸಾಧ್ಯ ಎಂದು ಅವರು ನಂಬುತ್ತಾರೆ. ಆದರೆ, ಎಲ್ಲ ಆದಿಯ ಸಂಸ್ಕೃತಿಗಳಲ್ಲೂ ಹೀಗಿಲ್ಲ. ಮಳೆ–ಬೆಳೆ, ಹುಟ್ಟು–ಸಾವು–ಮುಂತಾದ ನೈಸರ್ಗಿಕ ಸಂಗತಿಗಳ ಹಿಂದಿರುವ ಸ್ಥೂಲ ವ್ಯವಸ್ಥೆಯನ್ನು ಅವರು ಒಪ್ಪುತ್ತಾರೆ

ಆದರೆ ಇದ್ದಕ್ಕಿದ್ದಂತೆ ಬೆಳೆಗೆ ಬಂದೆರಗುವ ವಿಪತ್ತುಗಳು, ರೋಗಗಳು, ಮಾನವನಿಗೆ ಸಂಭವಿಸುವ ಅಕಾಲಿಕ ಮರಣದಂತಹ ಆಕಸ್ಮಿಕಗಳ ಹಿಂದೆ ಮಾಟದ ಪ್ರಭಾವವನ್ನು ಅನುಮಾನಿಸುತ್ತಾರೆ. ಇವುಗಳನ್ನು ನಿವಾರಿಸಿಕೊಳ್ಳಲು ಮಾಟದ ಪೂಜಾವಿಧಿಗಳ ಮೊರೆಹೋಗುತ್ತಾರೆ. ನಮ್ಮ ಗ್ರಾಮೀಣರು ಸಹಜ ನೈಸರ್ಗಿಕ ಸಮೃದ್ಧಿಗೆ ಅಭ್ಯುದಯಕ್ಕೆ ಧರ್ಮದ ಆರಾಧನೆಯನ್ನು ನಡೆಸಿದಂತೆ, ಭಯಂಕರ ಜಾಡ್ಯ-ಆಪತ್ತುಗಳ ನಿವಾರಣೆಗೆ ಭೂತ-ಚೌಡಿಗಳ ಪೂಜೆ ಮತ್ತು ಮಾಟಗಾರರನ್ನು ಆಶ್ರಯಿಸುವುದು ಸಾಮಾನ್ಯವಾದ ಸಂಗತಿ. ಸಹಜ ನಿಸರ್ಗದ ನಿಯಂತ್ರಕ ಶಕ್ತಿಯೂ ಧರ್ಮವನ್ನು ಆಕಸ್ಮಿಕಗಳ ಹಿಂದೆ ಮಾಟದ ಕೈವಾಡವನ್ನೂ ಗ್ರಾಮೀಣರು ನಂಬಿರುವಂತಿದೆ.

ಮಾಟವನ್ನು 'ಅನುಕರಣ ಮಾಟ' ಮತ್ತು 'ಸಂಕರ ಮಾಟ' ಎಂದು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಮಾಟಗಾರನು ಯಾವ ಫಲವನ್ನು ಬಯಸುತ್ತಾನೆಯೋ ಅದನ್ನು ವಿಧ್ಯುಕ್ತವಾಗಿ ನಾಟಕೀಯವಾಗಿ ಅನುಕರಿಸಿದರೆ, ಫಲಪ್ರಾಪ್ತಿಯುಂಟೆಂದು 'ಅನುಕರಣ ಮಾಟ'ವು ನಂಬುತ್ತದೆ. ಉದಾಹರಣೆಗೆ, ವೈರಿಯೊಬ್ಬನ ಪ್ರತಿಕೃತಿಯನ್ನು ಮಣ್ಣಿನಲ್ಲೋ, ಮರ ಅಥವಾ ಮೇಣದಲ್ಲೋ ನಿರ್ಮಿಸಿ ವಿಧಿಯುಕ್ತವಾಗಿ ಆಘಾತಕ್ಕೊಳಪಡಿಸಿದರೆ ಅದರ ಪರಿಣಾಮ ಮೂಲ ವ್ಯಕ್ತಿಯನ್ನು ತಟ್ಟುತ್ತದೆಯೆಂಬುದು ಅನುಕರಣ ಮಾಟವಿಧಿಯ ಆಶಯವಾಗಿದೆ. ಪ್ರತಿಕೃತಿಯ ಕೈಕಾಲು ಊನಗೊಳಿಸಿದರೆ ಅಥವಾ ಪೂರ್ತಿ ಸಾಯಿಸಿದಂತೆ ವಿಧಿಯುಕ್ತವಾಗಿ ನಾಟ್ಯೀಕರಿಸಿದರೆ ಮೂಲವ್ಯಕ್ತಿ ಊನಗೊಳ್ಳುತ್ತಾನೆ ಅಥವಾ ಸಾಯುತ್ತಾನೆ. ಮಳೆ ಬರಿಸಲು, ಬೆಳೆ ಬೆಳೆಯಲು, ಬೇಟೆಯ ಸಮೃದ್ಧಿಗೆ, ಯಥೇಷ್ಟವಾಗಿ ಮೀನುಗಳನ್ನು ಹಿಡಿಯಲು, ಅನುಕರಣ ಮಾಟವನ್ನು ಆಶ್ರಯಿಸುವ ರೂಢಿ ಆದಿವಾಸಿಗಳಲ್ಲಿದೆ.

ಸಂಕರ ಮಾಟದಲ್ಲಿ ವ್ಯಕ್ತಿಯು ಉಪಯೋಗಿಸುತ್ತಿದ್ದ ಅಥವಾ ಆತನಿಗೆ ಸೇರಿದ ಬಟ್ಟೆ, ಕೂದಲು, ಉಗುರು, ಮೂಳೆ, ಜೊಲ್ಲು, ಮಲ, ಮೂತ್ರ ಮುಂತಾದುವನ್ನು ಸಂಗ್ರಹಿಸಿ ಅವುಗಳನ್ನು ವಿಧ್ಯುಕ್ತವಾಗಿ ಮಂತ್ರಸಹಿತ ನಿಷೇಧಿಸಲಾಗುತ್ತದೆ. ಅದರ ಪರಿಣಾಮ ಮೂಲವ್ಯಕ್ತಿಯ ಮೇಲೆ ಉಂಟಾಗುತ್ತದೆಯೆಂಬುದು 'ಸಂಕರ ಮಾಟ' ವಿಧಿಯ ಆಶಯವಾಗಿದೆ. ಒಂದೇ ಮಾಟ ವಿಧಿಯಲ್ಲಿ ಅನುಕರಣ ಮತ್ತು ಸಂಕರ ಮಾಟಗಳೆರಡೂ ಸೇರಿರುವುದುಂಟು.

ಮಾಟದ ಪೂಜಾವಿಧಿಗಳನ್ನನುಸರಿಸಿ ಅವುಗಳನ್ನು, ಸಂಕರಮಾಟ ಅಥವಾ ಅನುಕರಣಮಾಟವೆಂದು ಕರೆದಂತೆ, ಮಾಟದ ಆಶಯವನ್ನನುಸರಿಸಿ ಅದನ್ನು 'ದುಷ್ಟ ಮಾಟ' ಅಥವಾ 'ಸಾತ್ವಿಕಮಾಟ'ವೆಂದೂ ವಿಂಗಡಿಸುವುದುಂಟು. ವ್ಯಕ್ತಿಯೊಬ್ಬನಿಗೆ ದೈಹಿಕವಾಗಿ ಊನಗೊಳಿಸುವುದು, ರೋಗರುಜಿನಕ್ಕೆ ಕಾರಣವಾಗುವುದು, ಸಾವಿಗೆ ಒಳಗುಮಾಡುವುದು ದುಷ್ಟ ಮಾಟವಾದರೆ, ಇಂತಹ ದುಷ್ಟಪ್ರಭಾವವನ್ನು

ನಿವಾರಿಸಲು ಎಸಗುವ ಮಾಟವಿಧಿ ಸಾತ್ವಿಕವಾದುದು. ಮಳೆ ಬರಿಸಲು, ಬೆಳೆಯ ಸಮೃದ್ಧಿಗೆ ಮತ್ತು ಬೇಟೆಯ ಸಮೃದ್ಧಿಗೆ ಅಥವಾ ಯಾವುದೇ ಸಾಮೂಹಿಕ ಹಿತದ ಸಲುವಾಗಿ ನಡೆಸುವ ಮಾಟವು ಸಾತ್ವಿಕ ಮಾಟವಾಗುತ್ತದೆ. ಒಬ್ಬನೇ ಮಾಟಗಾರ ಸಮಯ ಸಂದರ್ಭಗಳಿಗನುಸಾರವಾಗಿ ದುಷ್ಟಮಾಟ–ಸಾತ್ವಿಕಮಾಟಗಳೆರಡಕ್ಕೂ ಕಾರಣನಾಗಬಹುದು. ಮಾಟಗಾರರು ದೆವ್ವ, ಭೂತ, ಬೇತಾಳಗಳನ್ನು ವಶಪಡಿಸಿಕೊಂಡು ತಮ್ಮ ಶಕ್ತಿಯನ್ನು ಬಲಪಡಿಸಿಕೊಳ್ಳುತ್ತಾರೆಂದು ನಂಬಿಕೆಯಿದೆ. ದೆವ್ವದ ತಲೆಗೂದಲನ್ನು ಕಿತ್ತುತಂದು ರಹಸ್ಯವಾಗಿಟ್ಟುಕೊಂಡ ಮಾಟಗಾರ, ಅದನ್ನು ವಶಪಡಿಸಿಕೊಂಡು ಮೆರೆಯುವುದು, ದೆವ್ವವು ಉಪಾಯವಾಗಿ ತನ್ನ ಕೂದಲನ್ನು ತಿರುಗಿ ಪಡೆದು ಮಾಟಗಾರನನ್ನು ನಾಶಗೊಳಿಸುವುದು–ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಕಾಣಸಿಗುವ ಒಂದು ವಸ್ತು.

ಮಾಟವು ಪ್ರಕೃತಿಯಲ್ಲಿನ ಕಾರ್ಯಕಾರಣ ಸಂಬಂಧವನ್ನು ದೃಢವಾಗಿ ನಂಬುತ್ತದೆ. ಕೆಲವು ನಿಯಮಗಳನ್ನನುಸರಿಸಿ ಕರಾರುವಾಕ್ಕಾಗಿ ಆಚರಣೆಗಳನ್ನು ನಡೆಸಿದರೆ ನಿರ್ದಿಷ್ಟ ಫಲಿತಾಂಶ ಅನಿವಾರ್ಯವೆಂಬುದು ಮಾಟದ ನಂಬಿಕೆ. ಅತಿಮಾನುಷ ಸತ್ವಗಳ ಖಯಾಲಿಯಂತೆ ಅನಿರ್ದಿಷ್ಟವಾಗಿ ಜಗತ್ತಿನ ಆಗುಹೋಗುಗಳು ನಡೆಯುವುದಿಲ್ಲವೆಂದೂ, ಇದರ ಹಿನ್ನಲೆಯಾಗಿ ಸುವ್ಯವಸ್ಥಿತ ಕಟ್ಟುಪಾಡಿದೆಯೆಂದೂ, ಅದನ್ನರಿತು ಸ್ವಾಧೀನಪಡಿಸಿಕೊಂಡರೆ ತಮ್ಮ ಇಚ್ಛಾಶಕ್ತಿಗನುಸಾರವಾಗಿ ಪ್ರಕೃತಿಯ ನಿಯಮಗಳನ್ನು ನಿಯಂತ್ರಿಸಬಹುದೆಂಬುದು ಮಾಟಗಾರರ ಕಲ್ಪನೆ.

ಮೂಲಕ್ಕೆ ಸದೃಶವಾದದ್ದು ಉತ್ಪನ್ನವಾಗಲೇಬೇಕು. ಒಮ್ಮೆ ಸಂಪರ್ಕ ಬಂದಮೇಲೆ ದೇಶ–ಕಾಲ ತತ್ವವನ್ನು ಮೀರಿ ಸಾಹಚರ್ಯ ಶಾಶ್ವತವಾಗಿರುತ್ತದೆ, ಎಂಬ ಕಲ್ಪನೆಯೇ ಅನುಕರಣ ಮತ್ತು ಸಂಕರ ಮಾಟಗಳೆರಡರ ಹಿಂದಿರುವ ತತ್ವ. ಸೃಷ್ಟಿಯ ನಿಗೂಢ ರಹಸ್ಯಗಳನ್ನು ಭೇದಿಸಲು ಅನಾದಿಕಾಲದಿಂದಲೂ ಮನುಷ್ಯ ನಿರಂತರವಾಗಿ ಶೋಧಿಸಿದ್ದಾನೆ; ಪರಿಣಾಮವಾಗಿ ಕೆಲವು ಫಲಿತಗಳನ್ನು ಕಂಡುಕೊಂಡಿದ್ದಾನೆ. ಊಹೆ ಮತ್ತು ಭಾವನೆಗಳ ತಳಹದಿಯಮೇಲೆ ಮಾತ್ರ ಆತ ಕಲ್ಪಿಸಿಕೊಂಡ ನಿಯಮಗಳು ಮಾಟಕ್ಕೆ ಹಿನ್ನೆಲೆಯಾಗಿದ್ದರೆ, ತರ್ಕ ಮತ್ತು ವಿವೇಕದ ಮೇಲೆ ವಿಜ್ಞಾನ ನಿಂತಿದೆ. ಮಾಟವು ನಿಗೂಢ ಮೂಲವನ್ನು ಸ್ವೀಕರಿಸಿದರೆ, ವಿಜ್ಞಾನ ಸಂಗತಿ-ಸತ್ಯವನ್ನು ಮಾತ್ರ ಸ್ವೀಕರಿಸುತ್ತದೆ. ಮಾಟವು ಭ್ರಮೆ ಮತ್ತು ಅವಾಸ್ತವವನ್ನೇ ಆಶ್ರಯಿಸಿರುವುದರಿಂದ ಅದು ನಿಜವಾಗಿರಲು ಸಾಧ್ಯವೇ ಇಲ್ಲ. ಹಾಗೇನಾದರೂ ನಿಜದ ಸೀಮೆಯನ್ನೂ ಮಾಟವು ತಲುಪಿದರೆ ಆಗ ಅದು ಮಾಟವಾಗಿ ಉಳಿಯುವುದಿಲ್ಲ. ವೈಜ್ಞಾನಿಕ ಸತ್ಯವಾಗಿ ಪರಿಗಣಿಸಬೇಕಾಗುತ್ತದೆ. ಆದಿಮಾನವನ ನಿರಂತರ ಹಾರೈಕೆ ಮತ್ತು ಬಯಕೆಗಳೇ ಮಾಟದ ಪ್ರಯೋಗ ತಂತ್ರಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವ ಪ್ರೇರಕ ಶಕ್ತಿ. ಧರ್ಮ ಅಥವಾ ಮಾಟವೆರಡೂ ಇಂದಿನ

ವೈಜ್ಞಾನಿಕ ಪರಿಶೀಲನೆಯಲ್ಲಿ ಸುಳ್ಳಾಗಿ ಕಾಣಬಹುದಾದರೂ ಆದಿಮಾನವನ ಕುತೂಹಲ ಮತ್ತು ಸಾಹಸ ಪ್ರವೃತ್ತಿಯ ಸಂಕೇತವಾಗಿಯಾದರೂ ಅವುಗಳನ್ನು ನಾವು ಅಭ್ಯಸಿಸಬೇಕಾಗಿದೆ. ಒಂದು ಕಾಲದ ಕನಸು-ಭ್ರಮೆಯಾದರೂ—ಮತ್ತೊಂದು ಕಾಲಕ್ಕೆ ನನಸಾಗಿ ಪರಿಣಮಿಸಿರುವುದನ್ನು ನಾವು ಇತಿಹಾಸದಲ್ಲಿ ಕಂಡಿದ್ದೇವೆ. ಪುಷ್ಪಕ ವಿಮಾನದ ಕವಿಕನಸು ಇಂದು ನನಸಾಗಿದೆ. ಮಾಟದ ಪ್ರಯೋಗ ತಂತ್ರಗಳು ಆದಿಮಾನವನ ಕನಸುಗಳು. ಆತನ ಈ ಕನಸುಗಳಿಗೆ ಭೌತಿಕ ನಿಯಮಗಳು ಆಧಾರವಾಗಿಲ್ಲ. ಆದರೆ ಭವಿಷ್ಯದಲ್ಲಿ ಮಾಟವು ವಿಜ್ಞಾನಕ್ಕೆ ದಾರಿ ಮಾಡಿತೆಂದು ಹಲವು ವಿದ್ವಾಂಸರು ಒಪ್ಪುತ್ತಾರೆ.

ಆಧುನಿಕ ವಿಜ್ಞಾನ ಮತ್ತು ತಾಂತ್ರಿಕ ಅರಿವಿನಿಂದ ಸಮಕಾಲೀನ ಜಗತ್ತು ತರ್ಕ ಮತ್ತು ವಿವೇಕದ ವ್ಯಾಪ್ತಿಗೆ ಒಳಪಟ್ಟಿದೆ. ಕೇವಲ ತರ್ಕದ ನೆಲೆಯಲ್ಲಿ ನಿಂತಿರುವ ನಮಗೆ ಆದಿಮಾನವನ ಸಮಸ್ಯೆಗಳು ಅರ್ಥವಾಗಿಲ್ಲ. ಧರ್ಮ ಮತ್ತು ಮಾಟದ ನಂಬಿಕೆಯಿಲ್ಲದಿದ್ದರೆ ಆದಿಮಾನವನು ಏನಾಗುತ್ತಿದ್ದ ? ಎಂಬುದನ್ನು ಕಲ್ಪಿಸಿಕೊಳ್ಳಲು ನಾವು ಪ್ರಯತ್ನಿಸಬೇಕಾಗಿದೆ. ಬದುಕಿನಲ್ಲಿ ಬಂದೆರಗುತ್ತಿದ್ದ ಘೋರ ಆಪತ್ತುಗಳು, ಆತ್ಮೀಯರ ಆಕಸ್ಮಿಕ ಸಾವು, ಪ್ರವಾಹ, ಕಾಡ್ಗಿಚ್ಚು, ಬೇಟೆ ದೊರೆಯದೆ ಕಂಗಾಲಾದ ಸ್ಥಿತಿ, ಅಪರಿಚಿತ ಮಾನವರನ್ನು ಮತ್ತು ಪ್ರಾಣಿ ಪರಿಸರವನ್ನು ಕುರಿತ ಉದ್ವಿಗ್ನತೆ—ಇವೆಲ್ಲ ಆದಿಮಾನವನನ್ನು ಕಂಗೆಡಿಸುತ್ತಿದ್ದ ಕೆಲವು ಸಂಗತಿಗಳು ಈ ಬಗೆಯ ಆಕಸ್ಮಿಕಗಳು ಸಂಭವಿಸಿದಾಗ ಅವನು ಅನುಭವಿಸುತ್ತಿದ್ದ ಕಳವಳ, ನಿರಾಸೆ ಆತ್ಮಘಾತುಕವಾದ ಪರಿಣಾಮಕ್ಕೆ ಎಡೆಮಾಡಬಹುದಿತ್ತು. ಧರ್ಮ ಮತ್ತು ಮಾಟವನ್ನು ಕುರಿತ ಅತಿಮಾನುಷ ನಂಬಿಕೆಗಳು ಅವನನ್ನು ಇಂತಹ ನಿರಾಸೆಯ ಕ್ಷಣಗಳಲ್ಲಿ ಕಾಪಾಡಿವೆ. ಊರೆಗೋಲಾಗಿ ನಿಂತು ಭವಿಷ್ಯದಲ್ಲಿ ಭರವಸೆ ಹುಟ್ಟಿಸಿವೆ. ಈ ಭರವಸೆ ಭ್ರಮಾ ಮೂಲವಾದದ್ದೇ ಇರಬಹುದು. ಆದರೆ ಈ ಬಗೆಯ ಭರವಸೆ ಮತ್ತು ಆಶಾವಾದದ ರಕ್ಷಣೆ ದೊರೆಯದಿದ್ದರೆ ಆದಿಮಾನವನು ಸಾಂಸ್ಕೃತಿಕವಾಗಿ ಪ್ರಗತಿ ಹೊಂದುತ್ತಿದ್ದನೇ ? ಎಂಬುದು ಯೋಚಿಸಬೇಕಾದ ಸಂಗತಿ. ತರ್ಕ ಮತ್ತು ವಿವೇಕಗಳೇ ಪರಮ ಪ್ರಧಾನವೆಂದು ಭಾವಿಸುವ ಜನ, ಒಂದು ಸಂಸ್ಕೃತಿಯ ಪದರಗಳಲ್ಲಿ ಅಡಗಿರುವ ಅನೇಕ ಕನಸುಗಳನ್ನು ರಹಸ್ಯಗಳನ್ನು ಶೋಧಿಸಿ ಐತಿಹಾಸಿಕ ಹಿನ್ನೆಲೆಯೊಂದಿಗೆ ನಿರ್ವಿಕಾರವಾಗಿ ಪರಿಶೀಲಿಸಬೇಕು ; ಇಂದಿನ ನಮ್ಮ ಸ್ಥಿತಿಗೆ ಆದಿಮಾನವನ ಕೊಡುಗೆ ಏನೆಂಬುದನ್ನೂ ಸ್ಪಷ್ಟವಾಗಿ ಕಂಡುಕೊಳ್ಳಬೇಕು. ಅಂದರೆ, ಮೂಢ ನಂಬಿಕೆಗಳನ್ನು ಮುಂದುವರಿಸಬೇಕೆಂದು ಅರ್ಥವಲ್ಲ ; ಈ ಮೂಢನಂಬಿಕೆಗಳ ಹಿಂದಿರುವ ಸಾಂಸ್ಕೃತಿಕ ಸಂಗತಿಗಳನ್ನು ವೈಜ್ಞಾನಿಕವಾಗಿ ಐತಿಹಾಸಿಕ ಅರಿವಿನೊಂದಿಗೆ ಶೋಧಿಸಬೇಕು.

ಕನ್ನಡ ನಾಡಿನಲ್ಲಿ ‘ಮಾಟ’—‘ಮದ್ದು’ ಎಂಬ ಎರಡು ಪ್ರತ್ಯೇಕ ಕಲ್ಪನೆಗಳನ್ನು ಸಾಮಾನ್ಯವಾಗಿ ಒಟ್ಟಿಗೆ ಮಾತಿನಲ್ಲಿ ಬಳಸುವ ರೂಢಿಯುಂಟು. ಪ್ರಾಸದ ಚಪಲಕ್ಕಾಗಿ ಅಥವಾ ಎರಡೂ ದುಷ್ಟ ಚರ್ಯೆಯನ್ನೇ ಪ್ರತಿನಿಧಿಸುತ್ತಿವೆಯೆಂದು ನಂಬಿರುವ ಕಾರಣದಿಂದಲೋ ಹೀಗೆ ಒಟ್ಟಿಗೆ ಬಳಸಿದರೂ ಮೂಲತಃ ಇವೆರಡೂ ಭಿನ್ನ ಕಲ್ಪನೆಗಳು. ಮಾಟವು ಅತಿ-ಮಾನುಷವಾದುದು; ಮದ್ದು ಕೇವಲ ಮನುಷ್ಯ ಸೃಷ್ಟಿ. ಸುತ್ತು ಬಳಸಿಲ್ಲದೆ ಹೇಳುವುದಾದರೆ ಮದ್ದು ಹಾಕುವುದೆಂದರೆ ವಿಷ ಪ್ರಾಶನ ಮಾಡಿಸುವುದು. ಕೂಡಲೆ ಪರಿಣಾಮವನ್ನುಂಟು ಮಾಡುವ ಭಯಂಕರವಾದ ವಿಷವನ್ನು ಮದ್ದು ಹಾಕುವವರು ಪ್ರಯೋಗಿಸದೆ ನಿಧಾನ ವಿಷವನ್ನು ಬಳಸುತ್ತಾರೆ. ಹಿಂದಿನ ಕಾಲದಲ್ಲಿ—ಈಗಲೂ ಒಮ್ಮೊಮ್ಮೆ—ಮದ್ದು ಹಾಕಲು ಊಸರವಳ್ಳಿ ಅಥವಾ ಗೋಸುಂಬೆಯನ್ನು ಬಳಸುವ ರೂಢಿಯಿತ್ತು. ಗೋಸುಂಬೆಯೊಂದನ್ನು ತಂದು ತಲೆಕೆಳಗಾಗಿ ನೇತು ಹಾಕಿ, ಅದರ ಕೆಳಗೆ ಬೆಂಕಿ ಹಚ್ಚಿದಾಗ ಕಾರಿಕೊಳ್ಳುವ ವಿಷವನ್ನು ಸಂಗ್ರಹಿಸಿಟ್ಟುಕೊಂಡಿದ್ದು ಅಗತ್ಯ ಬಂದಾಗಲೆಲ್ಲಾ ಮದ್ದು ಹಾಕಲು ಬಳಸುತ್ತಾರೆಂದು ಹೇಳಿಕೆಯಿದೆ. ಇತ್ತೀಚಿನ ದಿನಗಳಲ್ಲಿ ಇಲಿ ಪಾಷಾಣವೇ ಮುಂತಾದ ಯಾವುದೇ ವಿಷವನ್ನು ತೀರಾ ಅಲ್ಪ ಪ್ರಮಾಣದಲ್ಲಿ ಈ ಉದ್ದೇಶಕ್ಕಾಗಿ ಬಳಸಲಾಗುತ್ತಿದೆಯಂತೆ. ಮದ್ದನ್ನು ಗುಟ್ಟಾಗಿ ಆಹಾರದಲ್ಲಿ ಬೆರಸಿ ಕೊಡಬಹುದು, ವೀಳೆಯದೆಲೆಗೆ ಹಚ್ಚಿ ತಾಂಬೂಲದೊಡನೆ ಅಥವಾ ಹಣ್ಣಿನಲ್ಲಿಯೂ ಕೊಡಬಹುದು.

ಮದ್ದು ಹಾಕುವುದಕ್ಕೆ ಸಂಬಂಧಿಸಿದಂತೆ ಒಂದು ಸಂಗತಿಯನ್ನು ಮಾತ್ರ ಮೊದಲು ಖಚಿತಪಡಿಸಿಕೊಳ್ಳಬೇಕು. ಯಾರೇ ಆಗಲಿ ಮದ್ದು ಹಾಕುವ ಉದ್ದೇಶ ಕೊಲೆಯಲ್ಲ; ಮದ್ದಿನ ಫಲ ಸಾವಲ್ಲ. ಮದ್ದಿಗೆ ಒಳಗಾದ ವ್ಯಕ್ತಿ ನಿಧಾನವಾಗಿ ಕ್ಷಯಿಸುತ್ತಾ ಬಳಲಿ ಕಳೆಗುಂದುತ್ತಾನೆ. ಒಬ್ಬ ವ್ಯಕ್ತಿಯ ಶಕ್ತಿ ಸ್ಥೈರ್ಯಗಳನ್ನು ಕುಂದಿಸಲು ಅವನ ಆರೋಗ್ಯವನ್ನು ಕೆಡಿಸುವುದೇ ಉತ್ತಮದಾರಿಯೆಂದು ಮದ್ದು ಹಾಕುವವರು ಹವಣಿಸುತ್ತಾರೆ. ಹೊಟ್ಟೆಕಿಚ್ಚು ಮದ್ದು ಹಾಕುವುದಕ್ಕೆ ಸಾಧಾರಣವಾದ ಪ್ರೇರಣೆಯಾದರೂ ಒಮ್ಮೊಮ್ಮೆ ದ್ವೇಷವೂ ಕಾರಣವಾಗಿರುತ್ತದೆ. ಮದ್ದು ಹಾಕುವವರು ಬಹುಪಾಲು ಕೆಳವರ್ಗದವರು, ಅದರಲ್ಲೂ ಹೆಂಗಸರು—ಎಂಬ ಸಂಗತಿ ವಿಚಿತ್ರವಾಗಿದ್ದರೂ ಸಾಮಾಜಿಕವಾಗಿ ಮಹತ್ವವಿರುವ ವಿಚಾರ. ಮನುಷ್ಯನ ಸಾಮಾನ್ಯ ಅಗತ್ಯಗಳಿಗೇ ಅವಕಾಶ ತಪ್ಪಿ ಹೋದ ಪರಿಸರದಲ್ಲಿ ಉಳ್ಳವರನ್ನು ಕಂಡಾಗ ಹೊಟ್ಟೆ ಕಿಚ್ಚು ಸ್ವಾಭಾವಿಕ; ಅಥವಾ ಆರೋಗ್ಯವಂತರನ್ನು ಕಂಡಾಗ, ಸ್ಫುರದ್ರೂಪಿಗಳನ್ನು ಕಂಡಾಗಲೂ ಹೊಟ್ಟೆ ಕಿಚ್ಚು ಭುಗಿಲೆನ್ನಬಹುದು. ತನ್ನ ವೈರಿಗಳ ಮೇಲೆ ಬಹಿರಂಗವಾಗಿ ಪ್ರತೀಕಾರ ಪಡೆಯಲು ಸಾಮರ್ಥ್ಯವಿಲ್ಲದವರು ಗುಟ್ಟಾಗಿ ಪ್ರತೀಕಾರಕ್ಕೆ ತೊಡಗುವ ಪ್ರಯತ್ನವಿದು. ಹೆಣ್ಣಿಗೆ ಸಹಜವಾಗಿಯೇ ಇರುವ ಸಾಮಾಜಿಕ ಪ್ರತಿಬಂಧಗಳು ಅವಳ ವೈರ ಅಥವಾ ಮಾತ್ಸರ್ಯವನ್ನು ವಕ್ರ

ಮಾರ್ಗಕ್ಕೆ ಒತ್ತಾಯಿಸುತ್ತವೆ. ಮದ್ದು ಹಾಕುವ ಚಟಕ್ಕೆ ಬಿದ್ದ ಹೆಣ್ಣು ಅದನ್ನು ಬದುಕಿರುವವರೆಗೂ ಮುಂದುವರಿಸಬೇಕೆಂಬ ನಂಬಿಕೆ ಪ್ರಚಾರದಲ್ಲಿದೆ. ಆಗಾಗ ಆಕೆ ಯಾರಿಗಾದರೂ ಮದ್ದು ಹಾಕಲೇ ಬೇಕೆಂದೂ, ಕೊನೆಗೆ ಯಾರೂ ಸಿಕ್ಕದಿದ್ದರೆ ತನ್ನ ಗಂಡ ಅಥವಾ ಮಕ್ಕಳಿಗೇ ಪ್ರಯೋಗಿಸಬೇಕೆಂದೂ ಒಳಮನಸ್ಸು ಆಕೆಯನ್ನು ತೀವ್ರವಾಗಿ ಪ್ರಚೋದಿಸುತ್ತದೆಯಂತೆ. ನಮಗೆ ಪರಿಚಿತರಾದ ಮದ್ದು ತೆಗೆವ ವೈದ್ಯರೊಬ್ಬರು, ತಮ್ಮಲ್ಲಿಗೆ ಬಂದ ಒಬ್ಬ ರೋಗಿ ತನ್ನ ಹೆಂಡತಿಯೇ ತನಗೆ ಮದ್ದು ಹಾಕಿರಬಹುದೆಂದು ಸಂದೇಹಿಸಿದನೆಂದು ಹೇಳಿದರು. ಮಾನಸಿಕವಾದ ವಿಕೃತಿಯೇ ಬಹುಶಃ ಈ ಬಗೆಯ ಅಸಹಜ ಪ್ರವೃತ್ತಿಯ ಮೂಲದಲ್ಲಿ ಹುದುಗಿರಬಹುದಾದ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಬೇಕಾಗಿದೆ. ಇಂತಹ ಮಾನಸಿಕ ವಿಕಾರಕ್ಕೆ ಬಳಗಾದವರನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಕೊಡಬೇಕು. ಆದರೆ ಈ ವಿಕಾರಕ್ಕೆ ಪ್ರೇರಿಸುವ ಆರ್ಥಿಕ – ಸಾಮಾಜಿಕ ಪರಿಸರವನ್ನು ಹೋಗಲಾಡಿಸುವ ಬಗೆ ಹೇಗೆ ?

ಮದ್ದು ಎಂದರೆ ಔಷಧಿ ಎಂಬ ಅರ್ಥವೂ ರೂಢಿಯಲ್ಲಿರುವುದರಿಂದ, ವಿಷಕ್ಕೆ ಈ ಅರ್ಥವೇಕಿರಬೇಕೆಂಬುದು ಕುತೂಹಲಕಾರಿಯಾದ ಮತ್ತೊಂದು ಸಂಗತಿ. ಬಂದೂಕು—ಕೋವಿಗಳಲ್ಲಿ ತುಂಬುವ ಸ್ಫೋಟಕದ ಪುಡಿಗೂ 'ಮದ್ದು' ಎಂದೇ ಕರೆಯುತ್ತಾರೆ. ಮದ್ದು ಹಾಕುವವರು ಇದನ್ನೂ ಅಲ್ಪ ಪ್ರಮಾಣದಲ್ಲಿ ಬಳಸುವ ರೆಂಬ ಪ್ರತೀತಿಯಿರುವುದರಿಂದ ಮದ್ದು ಹಾಕುವುದೆಂದರೆ ಸ್ಫೋಟಕದ ಪುಡಿಯ ಪ್ರಯೋಗವೇ ಎಂಬ ಅರ್ಥವೂ ಇದ್ದಿರಬಹುದು. ಹಿಂದೆ, ಮದ್ದು ಹಾಕುವು ದೆಂದರೆ ಸ್ಫೋಟಕದ ಪುಡಿಯ ಪ್ರಯೋಗವೇ ಆಗಿದ್ದು ಕ್ರಮೇಣ ಯಾವುದೇ ಬಗೆಯ ವಿಷಕ್ಕೆ ಈ ಅರ್ಥ ಬಂದಿರಬಹುದೆಂದೂ ಊಹಿಸಲು ಅವಕಾಶವಿದೆ. ನಿಧಾನ ವಿಷಕ್ಕೆ ಒಳಗಾದ ವ್ಯಕ್ತಿ ಕ್ರಮೇಣ, ಕಳೆಗುಂದಿ ಮಬ್ಬಾಗಿ, ಮತ್ತು ಅಥವಾ ಮದ್ದು (ಅಮಲು) ಬಂದಂತೆ ವರ್ತಿಸುವುದರಿಂದಲೂ ಈ ಅರ್ಥ ಬಳಕೆಗೆ ಬಂದಿರ ಬಹುದು. ವಿಷವನ್ನು ಔಷಧಿಯಲ್ಲಿಯೇ ಬೆರಸಿಕೊಡುವ ದುಷ್ಟ ವೈದ್ಯರಿಂದಾಗಿ ಈ ಅರ್ಥ ಬಂದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹಳ್ಳಿಗಳಲ್ಲಿ ಇಂದಿಗೂ ಮಕ್ಕಳಿಗೆ ಔಷಧಿ ಮಾಡುವ ನಾಟಿ ವೈದ್ಯರು ಹೆಂಗಸರೇ ! ವಾಸ್ತವವಾಗಿ ಮದ್ದು ಹಾಕಿದ್ದರಿಂದ ಹೀಗಾಗಿದೆಯೆಂದು ನಾಟಿ ವೈದ್ಯರು ಗುರುತಿಸುವ ಹಲವು ಪ್ರಕರಣ ಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ಸ್ಪಷ್ಟವಾಗಿ ಬೇರೆ ರೋಗಗಳಾಗಿರುತ್ತವೆಯೆಂದು ಆಧುನಿಕ ಡಾಕ್ಟರುಗಳು ಹೇಳುತ್ತಾರೆ. ಶಕ್ತಿವರ್ಧಕ ಆಹಾರದ ಕೊರತೆಯಿಂದಾಗಿ, ನರದೌರ್ಬಲ್ಯಗಳಿಂದಾಗಿ ಬರುವ ಹಲವು ರೋಗಗಳಿರಲಿ, ಕಾಮಾಲೆಯಂತಹ ಕಾಹಿಲೆ ಯನ್ನೂ ನಾಟಿ ವೈದ್ಯರು ಮದ್ದು ಹಾಕಿದ್ದರ ಪರಿಣಾಮವೆಂದು ಗುರುತಿಸುವ ವಾಡಿಕೆ ಯಿದೆ. ಇಂಡಿಯಾದಂತಹ ಬಡದೇಶದಲ್ಲಿ ಯಾವುದು ರೋಗ ? ಇನ್ನಾವುದು ಅನ್ನಾಂಗದ ಕೊರತೆ ? ಎಂದು ಗುರುತಿಸುವುದೂ, ಸಾಹಸದ ವಿಚಾರವೇ ಆಗಿರುವಾಗ ವೈದ್ಯರ ಪರಸ್ಪರ ಕಚ್ಚಾಟ ನಿರಂತರವಾಗಿ ಉಳಿಯುತ್ತದೆ.

ಭಾರತದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು

ಟಿ. ಬಿ. ಚಂದ್ರಶೇಖರಯ್ಯ

I. ಉದ್ಯಮಗಳಿಗೆ ಬಹುರಾಷ್ಟ್ರೀಯ ಸ್ವರೂಪ II. ಭಾರತಕ್ಕೆ ಬಹುರಾಷ್ಟ್ರೀಯ ಸಂಸ್ಥೆಗಳ ಸಂಪರ್ಕ. III. ದೇಶದಲ್ಲಿ ಅವುಗಳ ಕಾರ್ಯವಿಧಾನ. IV. ಇವುಗಳನ್ನು ಕುರಿತ ಸರ್ಕಾರದ ನೂತನ ನಿಲವು.

I

ಜನರಲ್ ಮೋಟಾರ್ಸ್, ಸ್ಟಾಂಡರ್ಡ್ ಆಯಿಲ್, ಯೂನಿಲಿವರ್, ಇಂಟರ್‌ನ್ಯಾಷನಲ್ ಬಿಸಿನೆಸ್ ಮೆಷೀನ್ಸ್, ಇಂಟರ್‌ನ್ಯಾಷನಲ್ ಟೆಲಿಫೋನ್ ಮತ್ತು ಟೆಲೆಗ್ರಾಫ್, ಫಿಲಿಫ್ಸ್, ಯೂನಿಯನ್ ಕಾರ್ಬೈಡ್, ಜನರಲ್ ಎಲೆಕ್ಟ್ರಿಕ್, ಸೈಮೆನ್ಸ್ ವೆಸ್ಟಿಂಗ್‌ಹೌಸ್, ಹೇಲ್‌ಮರ್-ಬೆಂಜ್, ಬೇಯರ್, ಕಾಲ್ಗೇಟ್ ಪಾಲ್ಮಾಲಿವ್, ಫಿಯಾಟ್–ಇವು ವಿಶ್ವದ ಉದ್ಯಮ ರಂಗದಲ್ಲಿ ಬಹುವಾಗಿ ಪರಿಚಿತವಾದ ಸಂಸ್ಥೆಗಳು. ಪ್ರಪಂಚದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಬಹು ಶಕ್ತಿಯುತವಾದ ಸಾಧನಗಳಾಗಿ ಬಹುರಾಷ್ಟ್ರೀಯ ಸಂಸ್ಥೆಗಳು ಮಾಡಿದುದು ಎರಡನೇ ಮಹಾಯುದ್ಧದ ನಂತರದ ಒಂದು ಪ್ರಮುಖವಾದ ಬೆಳವಣಿಗೆ.

ಯಾವುದೇ ಒಂದು ದೇಶದಲ್ಲಿ ರಿಜಿಸ್ಟರಾದ ಉದ್ಯಮ ಸಂಸ್ಥೆಯು ತನ್ನ ಕಾರ್ಯಕ್ಷೇತ್ರವನ್ನು ಹಲವಾರು ದೇಶಗಳಿಗೆ ವಿಸ್ತರಿಸಿಕೊಂಡರೆ ಅದು ಬಹು ರಾಷ್ಟ್ರೀಯವಾಗುತ್ತದೆ. ಒಂದು ದೇಶದಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಹಲವಾರು ದೇಶಗಳಲ್ಲಿ ಮಾರಾಟ ಮಾಡುವುದೇ ಇದರ ಅರ್ಥವಲ್ಲ. ಬಂಡವಾಳ ಹೂಡಿಕೆ, ಉತ್ಪಾದನೆ, ಆಡಳಿತ ಮತ್ತು ಮಾರಾಟ ಇವೆಲ್ಲವೂ ದೇಶ ವಿದೇಶಗಳಲ್ಲಿ ಹರಡಿದ್ದು ಇವೆಲ್ಲವುಗಳ ಮೇಲಿನ ಹತೋಟಿ ಮುಖ್ಯ ಕಛೇರಿಗೆ ಸೇರಿರುತ್ತದೆ. ಒಂದು ಸಂಸ್ಥೆ ಪೂರ್ಣವಾಗಿ ತನ್ನ ಬಂಡವಾಳವನ್ನು ವರ್ಗಾವಣೆ ಮಾಡಿ ಎರಡು ಅಥವಾ ಅದಕ್ಕೂ ಹೆಚ್ಚಿನ ದೇಶಗಳಲ್ಲಿ ತನ್ನ ಉತ್ಪಾದನಾ ಶಾಖೆಗಳನ್ನು ಸ್ಥಾಪಿಸಬಹುದು. ಅಲ್ಲದೆ ಬೇರೊಂದು ದೇಶದಲ್ಲಿ ರಿಜಿಸ್ಟರಾದ ಕಂಪೆನಿಯ ಬಂಡವಾಳದ ಜೊತೆಗೆ ತನ್ನ ಬಂಡವಾಳವನ್ನು ಕೂಡಿಸಿ ಸಹವರ್ತಿ ಸಂಸ್ಥೆಯಾಗಿ ಕೆಲಸ ಮಾಡಬಹುದು. ಅಥವಾ ತನಗೆ ಸಂಬಂಧಿಸಿದ ವಿದೇಶೀ ಘಟಕಗಳಲ್ಲಿ ತಯಾರಾದ ವಸ್ತುಗಳನ್ನು ಇನ್ನೊಂದು ದೇಶದಲ್ಲಿ ಮಾರಾಟ ಮಾಡುವ ವ್ಯವಹಾರವಷ್ಟನ್ನೇ ನಡೆಸಬಹುದು. ಕೇವಲ

ತನಗೆ ರೂಢಿಯಾಗಿ ಬಂದಿರುವ ತಂತ್ರಜ್ಞಾನ (technology) ವನ್ನಾಗಲೀ ಆಡಳಿತದ ಅನುಭವವನ್ನಾಗಲೀ ಒಂದು ವಿದೇಶೀ ಸಂಸ್ಥೆಯು ನೆರವಿಗೆ ನೀಡಿ ಪ್ರತಿಯಾಗಿ ಶುಲ್ಕವನ್ನು ಪಡೆಯಬಹುದು. ಒಂದು ಸಂಸ್ಥೆ ಬಹುರಾಷ್ಟ್ರೀಯ ವಾದಾಗ ಗರಿಷ್ಠ ಪ್ರಮಾಣದ ಲಾಭಗಳಿಕೆಯೇ ಪ್ರಧಾನವಾದ ಉದ್ದೇಶವಾಗುತ್ತದೆ.

ಒಂದು ದೊಡ್ಡ ಉದ್ಯಮ ಸಂಸ್ಥೆಗೆ ಸಾಧ್ಯವಾದ ಗರಿಷ್ಠ ಉತ್ಪಾದನಾ ಸಾಮರ್ಥ್ಯಕ್ಕೆ ಸಮವಾದ ಮಾರುಕಟ್ಟೆ ಆ ದೇಶದಲ್ಲೇ ಇಲ್ಲದಿದ್ದರೆ, ಆ ಸಂಸ್ಥೆ ಸಹಜವಾಗಿ ಮಾರು ಕಟ್ಟೆಗಳನ್ನು ಹುಡುಕಿಕೊಂಡು ಗಡಿ ದಾಟಬೇಕಾಗುವುದು. ಇನ್ನೊಂದು ಕಾರಣ ತನ್ನ ದೇಶದಲ್ಲಿ ವೇತನಗಳ ಪ್ರಮಾಣ ಹೆಚ್ಚಾಗಿದ್ದು ತನ್ಮೂಲಕ ಬೆಲೆಗಳು ಹೆಚ್ಚಾಗಿ ವಿದೇಶಗಳಲ್ಲಿ ಮಾರುಕಟ್ಟೆ ಕುಗ್ಗಿದರೆ, ವಿದೇಶದಲ್ಲಿನ ಕಂಪೆನಿಗಳ ಪೈಪೋಟಿಯಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಆಗ ತನ್ನ ವಸ್ತುಗಳನ್ನು ರಫ್ತು ಮಾಡುವುದರ ಬದಲು ತನ್ನ ಒಂದು ಶಾಖೆಯನ್ನೇ ರಫ್ತು ಮಾಡುತ್ತದೆ. ತನ್ನ ದೇಶದ ಸರ್ಕಾರ ವಿಧಿಸುವ ತೆರಿಗೆಗಳಿಗಿಂತ ಇನ್ನೊಂದು ದೇಶದ ಸರ್ಕಾರ ವಿಧಿಸುವ ತೆರಿಗೆಗಳ ಹೊರೆ ಕಡಿಮೆಯಾಗಿದ್ದರೆ ತನ್ನ ಉತ್ಪಾದನೆಯನ್ನು ವಿದೇಶಗಳಲ್ಲಿ ಪ್ರಾರಂಭಿಸುವುದೇ ಹೆಚ್ಚು ಲಾಭದಾಯಕವೆಂದು ಕಂಡುಕೊಂಡುದೂ ಬಹುರಾಷ್ಟ್ರೀಯತೆಗೆ ಒಂದು ಕಾರಣ. ಉತ್ಪಾದನೆಯಾಗಲೀ, ಮಾರಾಟ ಸಂಸ್ಥೆಯಾಗಲೀ ಇನ್ನೊಂದು ದೇಶ ದೊಂದಿಗೆ ಸಹವರ್ತಿ ಒಪ್ಪಂದ ಮಾಡಿಕೊಂಡಿರಲಿ, ಎಲ್ಲಾ ಸನ್ನಿವೇಶಗಳಲ್ಲೂ ಕೋಟ್ಯಾಂತರ ರೂಪಾಯಿಗಳ ವ್ಯವಹಾರದ ಮೇಲೆ ಮುಖ್ಯ ಕಚೇರಿಯ ಹತೋಟಿ ಇರುತ್ತದೆ. ಹಲವಾರು ದೇಶಗಳ ಘಟಕಗಳು ಒಂದು ದೊಡ್ಡ ಸಂಸ್ಥೆಯ ಒಳವಿಭಾಗಗಳಾಗಿ ಕೆಲಸಮಾಡುತ್ತವೆ. ಎಲ್ಲಿ ಎಷ್ಟು ಬಂಡವಾಳ ತೊಡಗಿಸಬೇಕು, ಎಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಬೇಕು, ಯಾವ ಯಾವ ವಸ್ತುಗಳನ್ನು ಉತ್ಪಾದನೆ ಮಾಡಬೇಕು, ಯಾವ ಬೆಲೆಗೆ ಅವುಗಳನ್ನು ಮಾರಬೇಕು, ಸ್ಥಳೀಯ ಸರ್ಕಾರದೊಂದಿಗೆ ಯಾವ ಯಾವ ರೀತಿಯಲ್ಲಿ ಸಹಕರಿಸಬೇಕು–ಇವೆಲ್ಲ ನಿರ್ದೇಶನ ಗಳನ್ನು ವಿದೇಶೀ ಘಟಕಗಳಿಗೆ ಕೊಡಲಾಗುವುದು. ವಿವಿಧ ದೇಶಗಳಲ್ಲಿ, ವಿವಿಧ ಪರಿಸರಗಳಲ್ಲಿ ಕಾರ್ಯನಿರ್ವಹಿಸುವ ಉದ್ಯಮದ ಆಡಳಿತಗಾರರಿಗೂ, ಪರಿಣತ ಕೆಲಸ ಗಾರರಿಗೂ ವಿಶೇಷ ತರಬೇತಿಯನ್ನೂ ನೀಡಿ ಇಡೀ ಬಹುರಾಷ್ಟ್ರೀಯ ಸಂಸ್ಥೆಯ ಕೆಲಸ ಸಮಂಜಸವಾಗಿ ಸುಗಮವಾಗಿ ನಡೆಯುವಂತೆ ಏರ್ಪಾಡು ಮಾಡಲಾಗುವುದು.

ಬಹುರಾಷ್ಟ್ರೀಯ ಸ್ವರೂಪವನ್ನು ತಾಳಿದ ಉದ್ಯಮ ಸಂಸ್ಥೆಗಳು ಅಮೆರಿಕಾ ದಿಂದ ಆರಂಭವಾದವು. ನಂತರ ಬ್ರಿಟನ್, ಜರ್ಮನಿ, ಹಾಲೆಂಡ್, ಜಪಾನ್, ಸ್ವಿಜರ್ಲೆಂಡ್, ಇಟಲಿಗಳ ಉದ್ಯಮಗಳು ವಿದೇಶಗಳಿಗೆ ಹಬ್ಬಿದುವು. ತಮಗೆ ಲಭ್ಯವಾದ ಉನ್ನತ ಮಟ್ಟದ ತಂತ್ರಜ್ಞಾನವನ್ನು ಇತರ ದೇಶಗಳಿಗೆ ಕೊಂಡೊಯ್ದು, ಆ ದೇಶದ ಶ್ರಮಿಕ ವರ್ಗದ ಹಾಗೂ ಸರ್ಕಾರದ ಸಹಾಯದಿಂದ ಉತ್ಪಾದನಾ ಕೇಂದ್ರ

ಗಳನ್ನು ಸ್ಥಾಪಿಸಿ ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡುವು. ಅಮೆರಿಕಾದ ಜನರಲ್ ಮೋಟಾರ್ಸ್, ಇಂಟರ್‌ನ್ಯಾಷನಲ್ ಟೆಲಿಫೋನ್ ಮತ್ತು ಟೆಲಿಗ್ರಾಫ್, ಇಂಟರ್‌ನ್ಯಾಷನಲ್ ಬಿಸಿನೆಸ್ ಮೆಷೀನ್ಸ್, ಕಾಂಟಿನೆಂಟಲ್ ಕ್ಯಾನ್ಸ್, ಯೂನಿಯನ್ ಕಾರ್ಬೈಡ್ ಯೂರೋಪ್ ದೇಶಗಳಿಗೂ ; ಗುಡ್‌ಇಯರ್ ಆಸ್ಟ್ರೇಲಿಯಾಕ್ಕೂ ; ಕೆನಡಾದ ಮಾಸೆ ಫರ್ಗುಸನ್ ಜರ್ಮನಿಗೂ; ಬ್ರಿಟನ್ನಿನ ಯೂನಿಲಿವರ್, ಹಾಲೆಂಡಿನ ಫಿಲಿಪ್ಸ್, ಜಪಾನಿನ ಟೊಯೋಟೋ ಅಮೆರಿಕಾಕ್ಕೂ ಧಾವಿಸಿದುವು. ಅಮೆರಿಕಾ ವಿದೇಶಗಳಲ್ಲಿ ತೊಡಗಿಸಿದ ಒಟ್ಟು ಬಂಡವಾಳದ ಮೂರನೇ ಎರಡು ಭಾಗ ಯೂರೋಪಿನ ದೇಶಗಳಿಗೆ ಹೋಯಿತು. 1966 ರ ವೇಳೆಗೆ ಬಹುರಾಷ್ಟ್ರೀಯ ಸಂಸ್ಥೆಗಳ ಶೇ. 55 ರಷ್ಟು ಅಮೆರಿಕಾಕ್ಕೆ ಸೇರಿದುವು; ಶೇ. 20 ರಷ್ಟು ಬ್ರಿಟನ್ನಿನವು; ಉಳಿದುವು ಜಪಾನ್ ಮತ್ತು ಇತರ ಯೂರೋಪಿನ ದೇಶಗಳವು.

ಅತಿಯಾದ ಲಾಭ ಗಳಿಕೆಗೆ ಅವಕಾಶ ಕೊಡದೆ ಕೇವಲ ತಂತ್ರಜ್ಞಾನವನ್ನು ವಿನಿಮಯ ಮಾಡಿಕೊಳ್ಳುವ ಉದ್ದೇಶದಿಂದ ಸಮಾಜವಾದೀ ದೇಶಗಳು ಪಶ್ಚಿಮದ ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಂಡಿವೆ. ಸಾಮಾನ್ಯವಾಗಿ ಈ ಸಂಬಂಧ ಸಮಾಜವಾದೀ ದೇಶಗಳ ಸರ್ಕಾರೀ ಸ್ವಾಮ್ಯದ ದೇಶಗಳೊಂದಿಗೆ ಇರುವಂತಹದು. ಯುಗೋಸ್ಲಾವಿಯಾ ದೇಶವು ಬ್ರಿಟನ್ನಿನ ಡನ್‌ಲಪ್, ಅಮೆರಿಕಾದ ಜಿಲೆಟ್, ಫ್ರಾನ್ಸಿನ ಸಿಟ್ರಿಯಾನ್ ಮೋಟಾರ್ಸ್, ಜರ್ಮನಿ, ಸ್ವಿಜರ್ಲೆಂಡುಗಳ ಔಷಧಿ ಉದ್ಯಮ ಸಂಸ್ಥೆಗಳನ್ನು ಬರಮಾಡಿಕೊಂಡಿದೆ. ಮೋಟಾರು ವಾಹನಗಳ ಜೋಡಣೆಗೆ ಸ್ವೀಡನ್ನಿನ ವಾಲ್ವೋ ಕಂಪನಿಯೂ, ತಾಂತ್ರಿಕ ಸಲಹೆಗಳಿಗಾಗಿ ಜರ್ಮನಿಯ ಸೈಮೆನ್ಸ್ ಸಂಸ್ಥೆಯೂ ಹಂಗೆರಿಯಲ್ಲಿ ನೆಲಸಿವೆ. ಸೋವಿಯತ್ ಒಕ್ಕೂಟವು ಬ್ರಿಟನ್ನಿನ ಇಂಪೀರಿಯಲ್ ಕೆಮಿಕಲ್ಸ್‌ನ ನೆರವಿನಿಂದ ಭಾರೀ ಪಾಲಿಥೀನ್ ಉತ್ಪನ್ನದ ಉದ್ಯಮ ವನ್ನೂ, ಇಟಲಿಯ ಫಿಯಾಟ್ ಸಂಸ್ಥೆಯ ನೆರವಿನಿಂದ ಒಂದು ದೊಡ್ಡ ಕಾರು ತಯಾರಿಕಾ ಉದ್ಯಮವನ್ನೂ ಸ್ಥಾಪಿಸಿದೆ. ಯೂರೋಪಿನ ದೇಶಗಳೂ ಸೋವಿಯಟ್ ಒಕ್ಕೂಟದ ತಂತ್ರಜ್ಞಾನದ ಪ್ರಯೋಜನವನ್ನು ಪಡೆದುಕೊಂಡಿವೆ.

ಆದರೆ, ಇವೆಲ್ಲ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಂಬಂಧಿಸಿದ ವಿಚಾರಗಳು. ಆದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅನುಭವ ವಿವಿಧ ರೀತಿಯದು. ಕಳೆದ ಇಪ್ಪತ್ತು ವರ್ಷಗಳಲ್ಲಿ ಆರ್ಥಿಕಾಭಿವೃದ್ಧಿಯನ್ನು ತೀವ್ರಗತಿಯಲ್ಲಿ ಸಾಧಿಸಲು ಅಪೇಕ್ಷಿಸಿದ ದೇಶಗಳಿಗೆ, ಬಂಡವಾಳದ ಕೊರತೆ, ವಿದೇಶೀ ವಿನಿಮಯದ ಕೊರತೆ, ತಂತ್ರಜ್ಞಾನದ ಕೊರತೆ, ಆಡಳಿತಾನುಭವದ ಕೊರತೆ ಎದುರಾದುವು. ಈ ಪರಿಸ್ಥಿತಿ ಯನ್ನು ಎದುರಿಸಲು ಅವು ಸಹಜವಾಗಿ ಬಹುರಾಷ್ಟ್ರೀಯ ಸಂಸ್ಥೆಗಳ ನೆರವನ್ನು ಪಡೆಯಬೇಕಾಯಿತು. ಹಿಂದುಳಿದ ದೇಶಗಳ ಪ್ರಕೃತಿ ಸಂಪತ್ತನ್ನು ಉಪಯೋಗಿಸಿ ಕೊಳ್ಳುವ ಸಾಧ್ಯತೆಯನ್ನು ತೋರಿಸಿ ಸ್ಥಳೀಯ ಜನರಿಗೆ ಉದ್ಯೋಗಗಳನ್ನು ಒದಗಿಸಿ

ದುವು, ತನ್ಮೂಲಕ ಆ ದೇಶಗಳ ಸರ್ಕಾರಗಳಿಗೆ ಅಗಾಧವಾದ ರಾಯಲ್ಟಿ ಮತ್ತು ತೆರಿಗೆ ಆದಾಯಗಳನ್ನು ಕೂಡಿಸಿಕೊಟ್ಟವು. ತಮ್ಮ ದೇಶದಿಂದ ತೆಗೆದುಕೊಂಡು ಹೋದ ಖನಿಜ ಉತ್ಪನ್ನಗಳಿಗೆ ವಿದೇಶೀ ಸಂಸ್ಥೆಗಳು ಕೊಟ್ಟ ಬೆಲೆಯನ್ನೇ ಈ ದೇಶಗಳು ಅಸಹಾಯಕವಾಗಿ ಒಪ್ಪಬೇಕಾಯಿತು. ಆ ದೇಶಗಳ ಕೆಲಸಗಾರರಿಗೆ ಅತಿ ಕಡಿಮೆ ಕೂಲಿಯನ್ನು ಕೊಟ್ಟು ಅವರನ್ನು ಬಹಳವಾಗಿ ಶೋಷಿಸಲಾಯಿತು. ವಿದೇಶಗಳಲ್ಲಿ ತಯಾರಾದ ಔಷಧಿಗಳು, ರಾಸಾಯನಿಕಗಳು, ಯಂತ್ರಗಳು ಈ ದೇಶಗಳಲ್ಲಿ ಮಿತಿಮೀರಿದ ಲಾಭಕ್ಕೆ ಮಾರಲಾಯಿತು. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ವಿದೇಶೀ ಆಡಳಿತಗಾರರನ್ನು ಭ್ರಷ್ಟಾಚಾರದ ಮೂಲಕ ಬುಟ್ಟಿಗೆ ಹಾಕಿಕೊಂಡದ್ದೂ ಉಂಟು. ಈ ದೇಶಗಳ ರಾಜಕಾರಣದಲ್ಲಿ ಪ್ರವೇಶಿಸಿ ರಾಜಕೀಯ ಬುಡಮೇಲು ಕೃತ್ಯಗಳನ್ನು ನಡೆಸಿದ ಪ್ರಸಂಗಗಳೂ ಇಲ್ಲದೇ ಇಲ್ಲ. ಈ ಎಲ್ಲ ಅಕ್ರಮಗಳ ವಿರುದ್ಧ ಈ ದೇಶಗಳು ಅನೇಕಸಾರಿ ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒಂದು ಆಚಾರಸಂಹಿತೆಯನ್ನು ರಚಿಸಬೇಕೆಂಬ ಪ್ರಯತ್ನ ವಿಶ್ವಸಂಸ್ಥೆಯ ಮಟ್ಟದಲ್ಲಿ ಮುಂದುವರೆದಿದೆ.

II

ಭಾರತಕ್ಕೆ ಬಹುರಾಷ್ಟ್ರೀಯ ಸಂಸ್ಥೆಗಳ ಸಂಪರ್ಕ ಹಲವಾರು ಸನ್ನಿವೇಶಗಳಿಂದ ಉಂಟಾಯಿತು. ನಮ್ಮ ದೇಶ ಸ್ವತಂತ್ರವಾಗುವುದಕ್ಕೆ ಮುಂಚಿನಿಂದಲೂ ಭಾರತದಲ್ಲಿ ಲಾಭದಾಯಕವಾದ ಉದ್ಯಮಗಳಲ್ಲಿ ಬ್ರಿಟಿಷ್ ಬಂಡವಾಳಸ್ಥರು ತಮ್ಮ ಬಂಡವಾಳವನ್ನು ತೊಡಗಿಸಿದ್ದರು. ಮುಖ್ಯವಾಗಿ, ಬ್ಯಾಂಕಿಂಗ್ ಸಂಸ್ಥೆಗಳು, ಗಣಿ ಉದ್ಯಮಗಳು, ರೈಲ್ವೆ ಕಂಪೆನಿಗಳು, ಟೀ, ಕಾಫಿ ಮತ್ತು ರಬ್ಬರ್ ಪ್ಲಾಂಟೇಷನ್ನುಗಳು. ಅಲ್ಲದೆ ಕೆಲವು ಬ್ರಿಟಿಷ್ ಕೈಗಾರಿಕಾ ಸಂಸ್ಥೆಗಳು ಭಾರತದಲ್ಲಿ ತಮ್ಮ ಉತ್ಪಾದನಾ ಮತ್ತು ಮಾರಾಟ ಸಂಸ್ಥೆಗಳನ್ನು ಆರಂಭಿಸಿದುವು. ಉತ್ಪಾದನಾಕಾರ್ಯದಲ್ಲಿ ಮುಖ್ಯವಾಗಿ, ಹಿಂದೂಸ್ತಾನ್ ಲೀವರ್, ಇಂಪೀರಿಯಲ್ ಕೆಮಿಕಲ್ಸ್, ಬ್ರಿಟಾನಿಯಾ ಬಿಸ್ಕತ್. ಇದೇ ಕಾಲದಲ್ಲೇ ಅಮೆರಿಕಾದ ಯೂನಿಯನ್ ಕಾರ್ಬೈಡ್ ಸಂಸ್ಥೆ ಉತ್ಪಾದನೆಯನ್ನು ಕೈಗೊಂಡಿತ್ತು.

ದೇಶವು ಸ್ವತಂತ್ರವಾದನಂತರ ತೀವ್ರಗತಿಯ ಕೈಗಾರಿಕಾಭಿವೃದ್ಧಿ ಅವಶ್ಯಕವಾಯಿತು. ಮೂಲ ಸ್ವರೂಪದ ಮತ್ತು ಆಧುನಿಕ ರೀತಿಯ ಕೈಗಾರಿಕೆಗಳ ಸ್ಥಾಪನೆಗೆ ಬೇಕಾದ ತಂತ್ರಜ್ಞಾನ ಮತ್ತು ವಿದೇಶೀ ವಿನಿಮಯ ದೇಶಕ್ಕೆ ಲಭ್ಯವಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಮುಂದುವರೆದ ದೇಶಗಳ ಸಹಕಾರವನ್ನು ಪಡೆಯಬೇಕಾಯಿತು. ವಿದೇಶೀ ಬಂಡವಾಳದ ಪ್ರವೇಶವನ್ನು ಕುರಿತು ನಮ್ಮ ದೇಶದ ನೀತಿಯೇನೆಂಬುದನ್ನು ಸ್ಪಷ್ಟಪಡಿಸಬೇಕಾಗಿತ್ತು. 1949ರಲ್ಲಿ ಭಾರತ ಸರ್ಕಾರ ಪ್ರಕಟಿಸಿದ ವಿದೇಶೀ ಬಂಡವಾಳವನ್ನು ಕುರಿತ ನೀತಿಯನ್ವಯ, ಭಾರತದ

ಕೈಗಾರಿಕೆಗಳನ್ನು ಸ್ಥಾಪಿಸಲು ವಿದೇಶೀ ಉದ್ಯಮಿಗಳಿಗೆ ಉತ್ತೇಜಕಗಳನ್ನು ನೀಡಲಾಯಿತು: (1) ಭಾರತ ಸರ್ಕಾರದ ಕೈಗಾರಿಕಾ ನೀತಿಗೆ ಬದ್ಧವಾಗಿ ನಡೆದುಕೊಳ್ಳುವ ದೇಶೀಯ ಮತ್ತು ವಿದೇಶೀಯ ಉದ್ಯಮಸಂಸ್ಥೆಗಳ ಬಗ್ಗೆ ಸರಕಾರವು ಯಾವ ತಾರತಮ್ಯಧೋರಣೆಯನ್ನು ತಾಳುವುದಿಲ್ಲ. (2) ಭಾರತೀಯ ಉದ್ಯಮಗಳಿಗೆ ಅನ್ವಯವಾಗದ ಯಾವ ಪ್ರತಿಬಂಧಕಗಳನ್ನು ವಿದೇಶೀ ಉದ್ಯಮಗಳಮೇಲೆ ಹೊರಿಸುವುದಿಲ್ಲ. (3) ಬೇರೆ ಎಲ್ಲಾ ಉದ್ಯಮಗಳಿಗೂ ಇರುವಂತೆ ವಿದೇಶೀ ಸಂಸ್ಥೆಗಳಿಗೂ ಲಾಭವನ್ನು ಗಳಿಸಲು ಅವಕಾಶ ಕೊಡಲಾಗುವುದು. (4) ನಮ್ಮ ವಿದೇಶೀ ವಿನಿಮಯ ಪರಿಸ್ಥಿತಿಗೆ ಅನುಗುಣವಾಗಿ, ವಿದೇಶೀ ಸಂಸ್ಥೆಗಳು ತಮ್ಮ ಲಾಭ ಮತ್ತು ಇತರ ಗಳಿಕೆಗಳನ್ನು ತಮ್ಮ ದೇಶಗಳಿಗೆ ವರ್ಗಾಯಿಸಲು ಅವಕಾಶ ಕೊಡಲಾಗುವುದು (5) ಒಂದು ವೇಳೆ ಭವಿಷ್ಯದಲ್ಲಿ ವಿದೇಶೀ ಸಂಸ್ಥೆಗಳನ್ನು ಸರಕಾರವೇ ವಹಿಸಿಕೊಳ್ಳುವುದಾದರೆ, ಅವುಗಳಿಗೆ ನ್ಯಾಯವಾದ ಪರಿಹಾರವನ್ನು ಕೊಡಲಾಗುವುದು. ಈ ಷರತ್ತುಗಳು ಬಹುಮಟ್ಟಿಗೆ ಸಮಂಜಸವಾಗಿದ್ದು, ವಿದೇಶೀ ಬಂಡವಾಳವು ನಮ್ಮ ದೇಶಕ್ಕೆ ಪ್ರವೇಶಿಸಲು ಯಾವ ಆತಂಕವೂ ಇರಲಿಲ್ಲ. ವಿದೇಶೀ ಸಂಸ್ಥೆಗಳು ಲಾಭಮಾಡಿಕೊಂಡರೂ ಸಹ, ನಮ್ಮ ಜನರಿಗೆ ವಿವಿಧ ರೀತಿಯ ಕೈಗಾರಿಕೆಗಳ ಸಂಬಂಧವಾದ ಅನುಭವ ಉಂಟಾಗಲು ಕಾರಣವಾಯಿತು. ಸಹವರ್ತಿ ಒಪ್ಪಂದಗಳ ಫಲವಾಗಿ, ತಾಂತ್ರಿಕ ಮತ್ತು ಯಂತ್ರ ನಿರ್ವಹಣೆಯ ರಹಸ್ಯಗಳನ್ನು ಭಾರತೀಯರು ತಿಳಿದುಕೊಳ್ಳಲು-ಸಹಾಯಕವಾಯಿತು.

1951 ರಿಂದ ಮೊದಲಾಗಿ ಭಾರತದ ಕೈಗಾರಿಕಾಭಿವೃದ್ಧಿಯಲ್ಲಿ ಹಲವಾರು ದೇಶಗಳು ವಿವಿಧ ರೀತಿ ಪಾಲುಗೊಂಡಿವೆ. ಪೆಟ್ರೋಲಿಯಂ ಉತ್ಪನ್ನಗಳ ತಯಾರಿಕೆ, ವಿದ್ಯುತ್ ಉತ್ಪಾದನಾಯಂತ್ರಗಳು, ವಿದ್ಯುತ್ ಉಪಕರಣಗಳು, ಲೋಹ ಸಂಬಂಧವಾದ ಉದ್ಯಮಗಳು, ಯಂತ್ರೋಪಕರಣಗಳು, ಭಾರೀ ಕೈಗಾರಿಕಾ ಯಂತ್ರಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳು, ರಾಸಾಯನಿಕ ವಸ್ತುಗಳು, ಔಷಧಿಗಳು, ಮೋಟಾರ್ ವಾಹನಗಳು ಮತ್ತು ಬಿಡಿಭಾಗಗಳು, ಟೆಲಿಫೋನ್ ಮತ್ತು ಟೆಲಿಗ್ರಾಫ್ ಸಲಕರಣೆಗಳು, ಟ್ರ್ಯಾಕ್ಟರುಗಳು, ಗಡಿಯಾರಗಳು, ಮಕ್ಕಳ ಆಹಾರ, ಕ್ರಿಮಿನಾಶಕಗಳು—ಇವು ಪ್ರಮುಖ ವಿಭಾಗಗಳು. ಕೆಲವು ಉದ್ಯಮಗಳು ಬಹುಪಾಲು ವಿದೇಶೀ ಒಡೆತನದಲ್ಲೂ, ಕೆಲವು ಸಂಪೂರ್ಣ ವಿದೇಶೀ ಒಡೆತನದಲ್ಲೂ, ಹಲವಾರು ಸಂಸ್ಥೆಗಳು ಭಾರತೀಯ ಕಂಪೆನಿಗಳೊಂದಿಗೆ ಸಹವರ್ತಿಗಳಾಗಿಯೂ ಕಾರ್ಯನಿರತವಾಗಿವೆ. ಸರಕಾರೀ ಉದ್ಯಮಗಳಲ್ಲಿ ಖಾಸಗೀ ಬಂಡವಾಳಕ್ಕೆ ಅವಕಾಶವಿಲ್ಲದೇ ಇರುವುದರಿಂದ ಅವುಗಳಲ್ಲಿ ಕೇವಲ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ನೆರವಾಗಿವೆ. 1976ರ ವೇಳೆಗೆ ವಿದೇಶೀ ಸಂಸ್ಥೆಗಳು ಭಾರತೀಯ ಉದ್ಯಮ ಸಂಸ್ಥೆಗಳೊಂದಿಗೆ ಒಟ್ಟು 4687 ಸಹವರ್ತಿ (Collaboration)

ಒಪ್ಪಂದಗಳನ್ನು ಮಾಡಿಕೊಂಡಿವೆ. ಇವುಗಳಲ್ಲಿ ರಾಸಾಯನಿಕಗಳ ಮತ್ತು ಔಷಧಿಗಳ ತಯಾರಿಕೆಗಾಗಿ 636, ವಿದ್ಯುತ್‌ಯಂತ್ರಗಳನ್ನೂ, ಉಪಕರಣ ಗಳನ್ನೂ ತಯಾರಿಸಲು 638, ಕೈಗಾರಿಕಾ ಯಂತ್ರಗಳನ್ನೂ ಉಪಕರಣಗಳನ್ನೂ ತಯಾರಿಸಲು 685, ಸಾರಿಗೆ ಸಾಧನಗಳು ಮತ್ತು ಬಿಡಿಭಾಗಗಳನ್ನು ತಯಾರಿಸಲು 364 ಇದ್ದುವು. ಆಧುನಿಕ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯಲು ಭಾರತೀಯ ಸಂಸ್ಥೆಗಳು ವಿದೇಶೀ ಸಂಸ್ಥೆಗಳಿಗೆ ಹೇರಳವಾಗಿ ಶುಲ್ಕವನ್ನೂ ಪ್ರತಿ ಫಲವನ್ನೂ ನೀಡಿವೆ. ಬಹುರಾಷ್ಟ್ರೀಯ ಸಂಸ್ಥೆಗಳೂ ಸೇರಿ ನಮ್ಮ ದೇಶದಲ್ಲಿ ಸ್ಥಾಪಿತವಾಗಿರುವ ವಿದೇಶೀ ಕಂಪೆನಿಗಳು ಇತ್ತೀಚಿನ ಮೂರು ವರ್ಷಗಳಲ್ಲಿ (1973-76) 286 ಕೋಟಿ ರೂಪಾಯಿಗಳನ್ನು ತಮ್ಮ ದೇಶಗಳಿಗೆ ರವಾನಿಸಿವೆ. ಈ ಒಟ್ಟು ಮೊತ್ತದಲ್ಲಿ, ಲಾಭಗಳ ರೂಪದಲ್ಲಿ 80 ಕೋಟಿ ರೂ.ಗಳೂ, ಸಾಲದ ಮೇಲಿನ ಬಡ್ಡಿಗಳಿಗಾಗಿ 77 ಕೋಟಿ ರೂ.ಗಳೂ. ತಂತ್ರಜ್ಞಾನವನ್ನು ಪಡೆದ ಶುಲ್ಕ ಗಳಿಗಾಗಿ 52 ಕೋಟಿ ರೂ.ಗಳೂ ಸೇರಿವೆ. ಒಟ್ಟು ಮೊಬಲಗಿನ ಶೇ 61ರಷ್ಟು ಪಾಲು ಬ್ರಿಟನ್ ಮತ್ತು ಅಮೆರಿಕಾಗಳಿಗೆ ಹೋಗಿದೆ. ಈ ಮೂರು ಬಾಬುಗಳಿಗಾಗಿ ಬ್ರಿಟನ್ನಿನ ಪಾಲು 112 ಕೋಟಿ ರೂ.ಗಳು. ತಾಂತ್ರಿಕಜ್ಞಾನದ ವರ್ಗಾವಣೆ ಶುಲ್ಕಗಳಿಗಾಗಿ ಸೋವಿಯಟ್ ಯೂನಿಯನ್ನಿಗೆ 8.7 ಕೊಟಿ ರೂ.ಗಳೂ, ಪಶ್ಚಿಮ ಜರ್ಮನಿಗೆ 6.9 ಕೊಟಿ ರೂ.ಗಳೂ ಸಂದಾಯವಾದುವು.

ದೇಶದ ಕೈಗಾರಿಕೆಗಳ ಒಟ್ಟು ಉತ್ಪನ್ನದಲ್ಲಿ ಶೇ. 50ರಷ್ಟು ಭಾಗ, ಹಲವಾರು ರೀತಿಯ ವಿದೇಶೀ ಸಂಪರ್ಕವನ್ನು ಇಟ್ಟುಕೊಂಡ ಸಂಸ್ಥೆಗಳಿಂದ ಬರುತ್ತಿದೆ. ಕಳೆದ ಹದಿನೈದು ವರ್ಷಗಳಲ್ಲಿ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಬಹುವಾದ ವೈವಿಧ್ಯತೆ ಯನ್ನು ಸಾಧಿಸಲಾಗಿದೆ. ಒಂದು ಕಾಲಕ್ಕೆ ಕೇವಲ ಕೃಷಿ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದ ದೇಶ, ಈಗ ಅನೇಕ ರೀತಿಯ ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡುವ ಸ್ಥಿತಿಯಲ್ಲಿದೆ. ಆಧುನಿಕ ರೀತಿಯ ಹಲವಾರು ಸೌಕರ್ಯಗಳನ್ನು ಜನರು ಅನುಭವಿಸಲು ಸಾಧ್ಯವಾಗಿದೆ. ಪ್ರಕೃತಿ ಸಂಪತ್ತಿನ ಅಭಿವೃದ್ಧಿಯಿಂದಾಗಿ, ರಾಷ್ಟ್ರೀಯ ವರಮಾನದ ಹೆಚ್ಚಳವೂ ಸಾಧ್ಯವಾಗಿದೆ. ಭಾರತ ಈಗ ಇತರ ಅಭಿವೃದ್ಧಿಶೀಲ ದೇಶಗಳಿಗೆ ಆಧುನಿಕ ತಂತ್ರಜ್ಞಾನವನ್ನೂ ಕೈಗಾರಿಕಾ ಅನುಭವವನ್ನೂ ನೀಡಲು ಸಾಧ್ಯವಾಗಿದೆ.

III

ಆದರೆ ಕೆಲವು ಬಹುರಾಷ್ಟ್ರೀಯ ಸಂಸ್ಥೆಗಳಂತೂ ಭಾರತೀಯರ ನಿರೀಕ್ಷೆಯನ್ನು ಹುಸಿಯಾಗಿಸಿದುವು. ದೇಶದ ಒಂದು ವರ್ಗದ ಸ್ತಿಮಿತವಾದ ಬೇಡಿಕೆಗಳನ್ನು ಪೂರೈಸಿ ಅಗಾಧವಾದ ಲಾಭವನ್ನು ಕೂಡಿಹಾಕಿಕೊಂಡವು. ಚಾಕಲೇಟುಗಳು, ಸಿಗರೇಟು, ಪೌಡರ್, ಸ್ನೋ, ಟೂತ್‌ಪೇಸ್ಟ್, ಮೈಸೋಪು, ಬಿಸ್ಕತ್, ಕೋಕಾಕೋಲಾ

ಗಳನ್ನು ಅಪಾರ ವೆಚ್ಚದ ಜಾಹೀರಾತುಗಳ ಮೂಲಕ ಮಾರಿದುವು. ಇದೇ ವರ್ಗಕ್ಕೆ ಸೇರಿದ ದೇಶೀಯ ಉದ್ಯಮಗಳು ಇವುಗಳ ಪೈಪೋಟಿಯನ್ನು ಎದುರಿಸಬೇಕಾಯಿತು. ಅಲ್ಲದೆ, ಈ ವರ್ಗದ ಜನರಲ್ಲಿ "ಫಾರಿನ್"ವಸ್ತುಗಳನ್ನು ಬಯಸುವ ಹವ್ಯಾಸವೂ ಬೆಳೆಯಿತು. ಅಮೆರಿಕಾದ ಕೋಕಾಕೋಲಾ ಸಂಸ್ಥೆ ಭಾರತದಲ್ಲಿ ಕೆಲವೇ ವರ್ಷಗಳ ಹಿಂದೆ ಸುಮಾರು 6 ಲಕ್ಷ ರೂಪಾಯಿಗಳಿಗೆ ಸಮವಾಗುವ ಬಂಡವಾಳವನ್ನು ಹಾಕಿ 12 ಕೋಟಿ ರೂ. ಗಳ ಲಾಭವನ್ನು ಅಮೆರಿಕಾಕ್ಕೆ ಸಾಗಿಸಿದೆ. ಅದು ಗಳಿಸುತ್ತಿದ್ದ ಲಾಭ ಶೇ. 400 ರಷ್ಟು. ಅಮೆರಿಕಾದ ಇಂಟರ್ ನ್ಯಾಷನಲ್ ಬಿಸಿನೆಸ್ ಮೆಷೀನ್ಸ್ ಸಂಸ್ಥೆಯು ಸೂಕ್ಷ್ಮವಾದ ಗಣಕಯಂತ್ರಗಳನ್ನು ತಯಾರಿಸಲು ಬಿಡಿಭಾಗಗಳನ್ನು ಆಮದು ಮಾಡಿಕೊಂಡು, ಕೇವಲ ಎರಡನೇ ದರ್ಜೆಯ ತಂತ್ರಜ್ಞಾನವನ್ನು ಉಪ ಯೋಗಿಸಿಕೊಂಡಿತು. ಆಮದು ಬೆಲೆ 517 ರೂ.ಗಳಿದ್ದ ಡಿಸ್ಕಪ್ಯಾಕ್ ಎಂಬ ಉಪಕರಣವನ್ನು ಈ ಸಂಸ್ಥೆ ಭಾರತೀಯ ರೈಲ್ವೆಗಳಿಗೆ 3,712ರೂ. ಗಳಿಗೆ ಮಾರಿದೆ.

ಬಹುಪಾಲು ವಿದೇಶೀ ಬಂಡವಾಳವಿರುವ ಔಷಧಿ ತಯಾರಿಕಾ ಸಂಸ್ಥೆಗಳು, ತಮಗೆ ಬೇಕಾದ ಕಚ್ಚಾವಸ್ತುಗಳನ್ನು ತರಿಸಿಕೊಳ್ಳುವ ನೆಪದಲ್ಲಿ ತಮ್ಮ ಮಾತೃ ಸಂಸ್ಥೆಗಳಿಗೆ ಹೇರಳವಾದ ಲಾಭವನ್ನು ಗಳಿಸಿಕೊಟ್ಟಿವೆ. ಕಚ್ಚಾವಸ್ತುವಿನ ಬೆಲೆಯನ್ನೇ ಹೆಚ್ಚಿಸಿಕೊಂಡರೆ, ಲಾಭದ ಪ್ರಮಾಣ ಸಹಜವಾಗಿ ಕಡಿಮೆಯಾಗುವುದು. ಇದರಿಂದ ಕಂಪೆನಿಗಳ ಮೇಲಿನ ವರಮಾನ ತೆರಿಗೆಯನ್ನು ತಗ್ಗಿಸಿಕೊಳ್ಳಲು ಸಾಧ್ಯವಾಗುವುದು. ಕೆಲವು ಸಂದರ್ಭಗಳಲ್ಲಿ ಕಚ್ಚಾವಸ್ತುಗಳಿಗೆ ಸಾಮಾನ್ಯವಾದ ಬೆಲೆಗಳಿಗಿಂತ ನಾಲ್ಕರಷ್ಟು, ಹತ್ತರಷ್ಟು ಬೆಲೆ ತೋರಿಸಿರುವುದುಂಟು. ರೋಗ ನಿರೋಧಕ ವಿಧಾನಗಳಿಗಾಗಿ ಹೆಚ್ಚಿನ ಸಂಶೋಧನೆಯನ್ನು ಕೈಗೊಳ್ಳುವುದಾಗಿ ಪ್ರಕಟಿಸಿದ ಸಂಸ್ಥೆಗಳು ಹೆಚ್ಚಿನ ಯಾವ ಸಂಶೋಧನೆಯಲ್ಲೂ ತೊಡಗಲಿಲ್ಲ. ನಮ್ಮ ದೇಶದಲ್ಲಿ ಸಾಮಾನ್ಯವಾಗಿರುವ ಮಲೇರಿಯಾ, ಕ್ಷಯ ಮತ್ತು ಕುಷ್ಠರೋಗಗಳಿಗೆ ನಿವಾರಕಗಳನ್ನು ಕಂಡುಹಿಡಿಯುವ ತೀವ್ರ ಪ್ರಯತ್ನಗಳನ್ನೇ ಮಾಡಿಲ್ಲ.

ಬಹು ರಾಷ್ಟ್ರೀಯ ಸಂಸ್ಥೆಗಳ ಕೆಲವು ಅಧೀನ ಸಂಸ್ಥೆಗಳು ಕಳೆದ ಕೆಲವು ವರ್ಷ ಗಳಲ್ಲಿ ತಮ್ಮ ಮೂಲಧನವನ್ನೇ ವೃದ್ಧಿಸಿಕೊಂಡು ಹೆಚ್ಚು ಲಾಭವನ್ನು ಹಂಚುವ ಮಾರ್ಗವನ್ನು ಕಂಡುಕೊಂಡಿವೆ. ಹಿಂದೂಸ್ತಾನ್ ಲೀವರ್ ಸಂಸ್ಥೆ ಎರಡು ಕೋಟಿ ರೂಪಾಯಿಗಳ ಬಂಡವಾಳದಿಂದ ಸಾಬೂನುಗಳು, ವನಸ್ಪತಿ, ಮಕ್ಕಳ ಆಹಾರ ಮುಂತಾದುವನ್ನು ಉತ್ಪಾದಿಸಿ ಮಾರಿ ಈಗ 17 ಕೋಟಿ ರೂಪಾಯಿಗಳ ಮೂಲ ಧನವನ್ನು ಹೊಂದಿದೆ. 1977–78 ರಲ್ಲಿ 100 ಕೋಟಿ ರೂಪಾಯಿಗಳ ವ್ಯಾಪಾರ ಮಾಡಿ 10 ಕೋಟಿ ರೂಪಾಯಿ ಲಾಭ ಪಡೆಯಿತು. ಅಮೆರಿಕಾದ ಫೈಜರ್ ಔಷಧಿ ತಯಾರಿಕಾ ಸಂಸ್ಥೆ 1955ರ ನಂತರ ಉತ್ಪಾದನೆಯನ್ನು ಆರಂಭಿಸಿದಾಗ ಅದರ

ಮೂಲಧನ 26 ಲಕ್ಷ ರೂಪಾಯಿಗಳು. 1975ರಲ್ಲಿ ಈ ಸಂಸ್ಥೆ 34 ಕೋಟಿ ರೂಪಾಯಿಗಳ ಬೆಲೆ ಉತ್ಪನ್ನಗಳನ್ನು ಮಾರಿ 1.6 ಕೋಟಿ ರೂಪಾಯಿ ಲಾಭ ಗಳಿಸಿದೆ. ಹೀಗೆ ಮೂಲಧನ ವೃದ್ಧಿಯಾಗಲು ಈ ಸಂಸ್ಥೆಗಳು ಅನುಸರಿಸಿದ ಬಂಡವಾಳ ರಚನಾ ರೀತಿಯೇ ಕಾರಣ. ಗಳಿಸಿದ ಒಟ್ಟು ಲಾಭದ ಒಂದು ಮುಖ್ಯ ಪಾಲನ್ನು ಆಗಿನ ಷೇರುದಾರರಿಗೇ ಬೋನಸ್ ಷೇರುಗಳ ರೂಪದಲ್ಲಿ ಕೊಡಿಸಿಕೊಟ್ಟುದ ರಿಂದ ಸಂಸ್ಥೆಗಳ ವಿಸ್ತರಣೆಗೆ ಆಸ್ಪದವಾಯಿತು. ಮೂಲಬಂಡವಾಳ ವೃದ್ಧಿ ಯಾದುದರಿಂದ ಹೆಚ್ಚು ಹೆಚ್ಚು ಲಾಭವನ್ನು ವಿದೇಶಗಳಿಗೆ ಸಾಗಿಸಲು ಅನುಕೂಲ ವಾಯಿತು.

ಈ ಸಂಸ್ಥೆಗಳ ಬಗ್ಗೆ ನಮಗೆ ಯಾವುದೇ ದೂರುಗಳಿದ್ದರೂ, ಅವನ್ನು ದೇಶ ದಿಂದ ಹೊರಗೆ ಹಾಕಲು ಸಾಧ್ಯವಿಲ್ಲ. ಸೂಕ್ತವಾದ ಮೇಲ್ವಿಚಾರಣೆ ಮತ್ತು ಹತೋಟಿ ಯನ್ನು ಇವುಗಳಮೇಲೆ ಇಟ್ಟುಕೊಳ್ಳಲು ಮಾತ್ರ ಸಾಧ್ಯ.

IV

ಬಹು ರಾಷ್ಟ್ರೀಯ ಸಂಸ್ಥೆಗಳೂ ಸೇರಿದಂತೆ ಎಲ್ಲಾ ವಿದೇಶೀ ಉದ್ಯಮಗಳೂ ತಮ್ಮ ಕ್ಷೇತ್ರದಲ್ಲಿ ಏಕಸ್ವಾಮ್ಯತೆಯನ್ನು (monopoly) ಸಾಧಿಸಿ, ಕೊಳ್ಳುವವರನ್ನೂ ಶ್ರಮಿಕ ವರ್ಗವನ್ನೂ ಶೋಷಣೆಗೆ ಈಡು ಮಾಡುವುದನ್ನು ತಪ್ಪಿಸಲು ಸರ್ಕಾರ ಎಚ್ಚರಿಕೆ ವಹಿಸುತ್ತಲೇ ಬಂದಿದೆ. ಆಧುನಿಕ ತಂತ್ರಜ್ಞಾನವು ಭಾರತೀಯ ಉದ್ಯಮಿ ಗಳಿಗೆ ಎಟುಕದೇ ಇದ್ದ ಸಂದರ್ಭದಲ್ಲಿ, ಅಂತಹ ತಂತ್ರಜ್ಞಾನವು ನಮ್ಮಲ್ಲಿ ಆದ್ಯತೆ ಪಡೆದ ಕೈಗಾರಿಕೆಗಳಿಗೆ ಅವಶ್ಯಕವಾಗಿದ್ದಲ್ಲಿ ಮಾತ್ರ ವಿದೇಶೀ ಬಂಡವಾಳಕ್ಕೆ ಪ್ರವೇಶ ನೀಡಲಾಗಿದೆ. ಆದಷ್ಟುಮಟ್ಟಿಗೆ ಭಾರತೀಯರು ವಿದೇಶೀ ಉದ್ಯಮಗಳೊಂದಿಗೆ ಜಂಟೀ ಕೈಗಾರಿಕೆಗಳನ್ನು ಸ್ಥಾಪಿಸಿದಾಗ ಭಾರತೀಯ ಬಂಡವಾಳದ ಪ್ರಮಾಣವು ಶೇ. 51ರಷ್ಟಕ್ಕಿಂತ ಹೆಚ್ಚಾಗಿರುವಂತೆ ನೋಡಿಕೊಳ್ಳಲಾಗಿದೆ. ಇದರಿಂದ ಹೆಚ್ಚು ಹೆಚ್ಚು ಲಾಭವನ್ನು ವಿದೇಶೀ ವಿನಿಮಯಕ್ಕೆ ಪರಿವರ್ತಿಸುವಾಗ ಆಗುವ ಹೊರೆಯು ಕಡಿಮೆಯಾದಂತಾಗುವುದಲ್ಲದೆ, ಭಾರತೀಯರು ಉದ್ಯಮಗಳ ಆಡಳಿತದಲ್ಲಿ ಹೆಚ್ಚು ಪಾಲು ಪಡೆಯಲು ಅನುಕೂಲವಾಗುತ್ತದೆ.

1969ರಲ್ಲೇ ವಿದೇಶೀ ಬಂಡವಾಳವು ಬ್ಯಾಂಕಿಂಗ್, ವಾಣಿಜ್ಯ, ಪ್ಲಾಂಟೇಷನ್, ಗ್ರಾಹಕರ ವಸ್ತುಗಳ ಕೈಗಾರಿಕೆ ಮತ್ತು ಅತಿಲಾಭ ನೀಡುವ ಕೈಗಾರಿಕೆಗಳಿಗೆ ಹರಿಯು ವುದಕ್ಕೆ ಅನುಮತಿಯನ್ನು ನಿಲ್ಲಿಸಲಾಯಿತು. 1973ರ ಫಾರಿನ್ ಎಕ್ಸ್‌ಚೇಂಜ್ ರೆಗ್ಯುಲೇಷನ್ ಆಕ್ಟ್ (FERA) ಪ್ರಕಾರ, ವಿದೇಶಗಳಲ್ಲಿ ರಿಜಿಸ್ಟರಾಗಿ, ಭಾರತದಲ್ಲಿ ಕಾರ್ಯನಿರತವಾಗಿರುವ ಸಂಸ್ಥೆಗಳೂ, ವಿದೇಶೀ ಬಂಡವಾಳದ ಪಾಲು ಶೇ. 40ಕ್ಕಿಂತ ಹೆಚ್ಚಾಗಿರುವ ಭಾರತೀಯ ಕಂಪೆನಿಗಳೂ, ತಮ್ಮ ಉದ್ಯಮಗಳನ್ನು ಮುಂದುವರಿಸಿ

ಕೊಂಡು ಹೋಗಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಹೊಸದಾಗಿ ಅನುಮತಿಯನ್ನು ಪಡೆಯಬೇಕಾಯಿತು. ಈ ಸಂಬಂಧದಲ್ಲಿ ಸರ್ಕಾರವು ನೀಡಿದ ನಿರ್ದೇಶನಗಳ ಪ್ರಕಾರ, ವಿದೇಶಗಳಲ್ಲಿ ರಿಜಿಸ್ಟರಾದ ಕಂಪೆನಿಗಳ ಭಾರತೀಯ ಶಾಖೆಗಳು ಭಾರತೀಯ ಕಂಪೆನಿಗಳಾಗಿ ಪರಿವರ್ತಿತವಾಗಬಹುದು. ಭಾರತೀಯ ಕಂಪೆನಿಗಳು ಶೇ 40ಕ್ಕಿಂತ ಹೆಚ್ಚು ವಿದೇಶೀ ಬಂಡವಾಳವನ್ನು ಹೊಂದಿದ್ದರೆ, ಈ ವಿದೇಶೀ ಪಾಲನ್ನು, ಆಯಾ ಉದ್ಯಮದ ಪ್ರತ್ಯೇಕ ಸ್ಥಾನವನ್ನೂ ಪರಿಶೀಲಿಸಿ, ಶೇ. 74, ಶೇ. 51 ಮತ್ತು ಶೇ. 40ರಷ್ಟಕ್ಕೆ ಇಳಿಸಿಕೊಳ್ಳಬೇಕಾಗುವುದು.

ವಿದೇಶೀ ವಿನಿಮಯದ ಹತೋಟಿ ಶಾಸನ ರೀತ್ಯಾ, 1975 ರಲ್ಲೇ 100 ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ತಮ್ಮ ಭಾರತೀಯ ಘಟಕಗಳ ವಿದೇಶೀ ಬಂಡವಾಳದ ಪ್ರಮಾಣವನ್ನು ಶೇ 40 ರಷ್ಟಕ್ಕೆ ಇಳಿಸಿಕೊಂಡು, ಉಳಿದ ಷೇರುಗಳನ್ನು ಭಾರತೀಯರಿಗೆ ಮಾರಬೇಕೆಂದು ತಿಳಿಸಲಾಯಿತು. ಎರಡು ವರ್ಷ ಕಳೆದರೂ ಈ ಸಂಸ್ಥೆಗಳು ಕಾಲ ತಳ್ಳುತ್ತಲೇ ಇದ್ದುವು. 1977 ರ ಸೆಪ್ಟೆಂಬರ್‌ನಲ್ಲಿ ರಿಸರ್ವ್ ಬ್ಯಾಂಕು ಮತ್ತೆ ಎರಡು ತಿಂಗಳ ಅವಧಿಯನ್ನು ಸೂಚಿಸಿ, ಈ ಅವಧಿಯಲ್ಲಿ ಶಾಸನಕ್ಕೆ ತಲೆಬಾಗದ ಸಂಸ್ಥೆಗಳು ತಮ್ಮ ದೇಶಗಳಿಗೆ ವರ್ಗಾಯಿಸುವ ಲಾಭವನ್ನು ತಡೆಹಿಡಿಯಬೇಕಾಗಬಹುದೆಂದೂ, ಇಲ್ಲವೇ ಇನ್ನಾವುದೇ ಕ್ರಮವನ್ನು ತೆಗೆದುಕೊಳ್ಳಬೇಕಾಗಬಹುದೆಂದೂ ತಿಳಿಸಿತು. ನಂತರದ ತಿಂಗಳುಗಳಲ್ಲಿ 93 ಸಂಸ್ಥೆಗಳು ತಮ್ಮ ವಿದೇಶೀ ಮೂಲ ಧನದ ಪ್ರಮಾಣವನ್ನು ಶೇ 40 ರಷ್ಟಕ್ಕೆ ಇಳಿಸಿಕೊಂಡುವು. ಎರಡು ಕಂಪೆನಿಗಳು ಈ ನಿಯಮಗಳಿಗೆ ಒಪ್ಪದೇ ಭಾರತದಲ್ಲಿ ತಮ್ಮ ವ್ಯವಹಾರಗಳನ್ನು ನಿಲ್ಲಿಸುವುದಾಗಿ ತಿಳಿಸಿದುವು– ಇವು ಅಮೆರಿಕಾದ ಕೊಕಾಕೋಲಾ, ಇಂಟರ್‌ನ್ಯಾಷನಲ್ ಬಿಸಿನೆಸ್ ಮೆಷಿನ್ಸ್. ಹನ್ನೊಂದು ಸಂಸ್ಥೆಗಳು 1980 ರ ಕೊನೆಯ ವೇಳೆಗೆ ನಿಯಮಗಳಿಗೆ ಬದ್ಧವಾಗಿರಲು ಒಪ್ಪಿದುವು. ಕೊಕಾಕೋಲಾ ಮತ್ತು ಐ. ಬಿ. ಎಂ ಗಂಟು ಮೂಟೆ ಕಟ್ಟಿದುವು. ಉನ್ನತ ಮಟ್ಟದ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಸಂಸ್ಥೆಗಳು ಮಾತ್ರ ಶೇ 74 ರಷ್ಟು ವಿದೇಶೀ ಬಂಡವಾಳವನ್ನು ಹೊಂದಿರಲು ಅವಕಾಶವಿದೆ. ಆದರೆ, ಒಟ್ಟು ಸಂಸ್ಥೆಗಳ ಶೇ 4 ರಷ್ಟು ಮಾತ್ರ. 1974ರ ಮಾರ್ಚ್‌ನಲ್ಲಿ 550 ಬಹುರಾಷ್ಟ್ರೀಯ ಸಂಸ್ಥೆಗಳಿದ್ದು, ಅವುಗಳ ಸಂಖ್ಯೆ 1978 ರಲ್ಲಿ 473ಕ್ಕೆ ಇಳಿದಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಈ ಸಂಸ್ಥೆಗಳು ತಮ್ಮಲ್ಲಿದ್ದ ಹೆಚ್ಚುವರಿ ಬಂಡವಾಳದ ಷೇರುಗಳು ಭಾರತೀಯರಿಗೆ ಮಾರುತ್ತಲಿವೆ– ಬ್ರಿಟಾನಿಯಾ ಬಿಸ್ಕತ್, ಇಂಪೀರಿಯಲ್ ಕೆಮಿಕಲ್ಸ್, ಚೀಸ್‌ಬ್ರೊ ಪಾಂಡ್ಸ್, ಬೈಮೆಟಲ್ ಬೇರಿಂಗ್ಸ್, ಇಂಡಿಯಾ ಫಾಯಿಲ್ಸ್, ಜಾನ್‌ಸನ್ ಅಂಡ್ ಜಾನ್‌ಸನ್, ಮೆಟಲ್ ಬಾಕ್ಸ್ ಇಂಡಿಯಾ, ಕಾಲ್ಗೇಟ್ ಪಾಲ್ಮಾಲಿವ್, ರೆಮಿಂಗ್‌ಟನ್ ರ್‍ಯಾಂಡ್, ಹಿಂದುಸ್ತಾನ್ ಮಿಲ್ಸ್ ಫುಡ್ಸ್, ಅತುಲ್ ಕೆಮಿಕಲ್ಸ್, ಅಶೋಕ್

ಲೇಲ್ಯಾಂಡ್, ಬೆಸ್ಟ್ ಅಂಡ್ ಕ್ರಾವ್‌ಟನ್, ಲಿಪ್ಟನ್ ಟೀ ಮುಂತಾದುವು. ಈ ಕಂಪೆನಿಗಳು ಮಾರಾಟಕ್ಕೆ ಬಿಡುಗಡೆ ಮಾಡಿದ ಷೇರುಗಳಿಗೆ ಒಳ್ಳೆಯ ಬೇಡಿಕೆಯೂ ಇದೆ.

1978 ರ ಕೊನೆಯಲ್ಲಿ, ಸರ್ಕಾರವು ದೇಶೀಯವಾದ ತಂತ್ರಜ್ಞಾನ ಬಹಳ ವಾಗಿ ವಿಕಾಸಗೊಂಡಿರುವ 22 ವಿಧವಾದ ಕೈಗಾರಿಕೆಗಳಲ್ಲಿ ಯಾವ ವಿಧವಾದ ವಿದೇಶೀ ಸಹಯೋಗವೂ ಬಂಡವಾಳ ಹೂಡಿಕೆಯೂ ಅಗತ್ಯವಿಲ್ಲವೆಂದು ಪ್ರಕಟಿಸಿತು. ಹೀಗೆ ಪಟ್ಟಿಮಾಡಿದ ಉದ್ಯಮಗಳಲ್ಲಿ ಲೋಹ ಸಂಬಂಧವಾದ ಕೈಗಾರಿಕೆಗಳು, ಎಲೆಕ್ಟ್ರಾನಿಕ್ ಉಪಕರಣಗಳು, ವೈಜ್ಞಾನಿಕ ಮತ್ತು ಕೈಗಾರಿಕಾ ಉಪಕರಣಗಳು, ಸಾರಿಗೆ ವಾಹನಗಳ ನಿರ್ಮಾಣ, ಕೈಗಾರಿಕಾ ಯಂತ್ರಗಳು, ಯಂತ್ರೋಪಕರಣಗಳು, ಕೃಷಿ ಯಂತ್ರಗಳು, ರಾಸಾಯನಿಕ ವಸ್ತುಗಳು, ಬಣ್ಣಗಳು ಮತ್ತು ಔಷಧಿಗಳು ಸೇರಿವೆ. ತಾಂತ್ರಿಕ ಸಹಯೋಗಕ್ಕೆ ಅವಕಾಶವಿಲ್ಲದ ಕೈಗಾರಿಕೆ ಗಳು– ಮೆಕಾನಿಕಲ್ ಎಂಜಿನಿಯರಿಂಗ್ ಕೈಗಾರಿಕೆಗಳು, ಗೃಹ ಬಳಕೆಯ ವಸ್ತುಗಳು, ಕಛೇರಿಗಳಲ್ಲಿ ಬಳಸುವ ಸಾಧನಗಳು, ರಾಸಾಯನಿಕ ಗೊಬ್ಬರಗಳು, ಕಾಗದದ ತಯಾರಿಕೆ, ವನಸ್ಪತಿ, ರಬ್ಬರ್ ಕೈಗಾರಿಕೆಗಳು, ಚರ್ಮದ ಉತ್ಪನ್ನಗಳು, ಗಾಜು, ಸಿಮೆಂಟ್ ಮುಂತಾದವು.

ಆದರೆ, ದೇಶದಲ್ಲಿ ಯಾವುದೇ ಉದ್ಯಮದಲ್ಲಿ ತಂತ್ರಜ್ಞಾನವು ರಹಸ್ಯವಾಗಿ ಡಲ್ಪಟ್ಟಿದ್ದರೆ, ಅದು ಪೈಪೋಟಿ ದರದಲ್ಲಿ ಹೊಸ ಉದ್ದಿಮೆದಾರರಿಗೆ ದೊರಕದೇ ಇದ್ದರೆ, ಆ ಸಂದರ್ಭಗಳಲ್ಲಿ ವಿದೇಶಿ ಸಹಯೋಗಕ್ಕೆ ಅನುಮತಿ ನೀಡಲಾಗುವುದು. ಉನ್ನತ ಮಟ್ಟದ ತಂತ್ರಜ್ಞಾನವು ದೇಶದ ಆವಶ್ಯಕತೆಗಳನ್ನು ಪೂರೈಸಲು ಸಹಾಯಕವಾಗುವುದಾದರೆ, ಸ್ಪರ್ಧಾತ್ಮಕವಾದ ರಫ್ತು ವ್ಯಾಪಾರಕ್ಕೆ ನೆರವಾಗು ವುದಾದರೆ ಅಂತಹ ಸಂದರ್ಭಗಳನ್ನು ನೂತನ ಸಹಯೋಗಕ್ಕೆ ಅನುಮತಿ ನೀಡ ಲಾಗುವುದು. ಮುಖ್ಯವಾಗಿ ತಾಂತ್ರಿಕ ಸಹಯೋಗಕ್ಕೆ ಅನುಮತಿಯೇ ಹೊರತು, ವಿದೇಶೀ ಬಂಡವಾಳಕ್ಕಲ್ಲ. ಅಲ್ಲದೆ ಯಾವುದೇ ಭಾರತೀಯ ಸಂಸ್ಥೆಯು ತಾಂತ್ರಿಕ ಸಹಯೋಗಕ್ಕೆ ಪಾವತಿ ಮಾಡುವ ಪ್ರತಿಫಲ ಒಟ್ಟು 50 ಲಕ್ಷಕ್ಕೆ ಮೀರಬಾರದು.

ಅಲ್ಲದೇ ಹಲವಾರು ಪ್ರಮುಖ ಉದ್ಯಮಗಳು ಸರ್ಕಾರೀ ಕ್ಷೇತ್ರದಲ್ಲಿ ಬೆಳೆಯಲು ಸೋವಿಯಟ್ ಒಕ್ಕೂಟವು ನಮಗೆ ಅಮೂಲ್ಯವಾದ ನೆರವನ್ನು ನೀಡಿದೆ. ಉಕ್ಕು, ಭಾರೀ ವಿದ್ಯುತ್ ಯಂತ್ರಗಳು, ಔಷಧಿಗಳು, ಯುದ್ಧ ವಿಮಾನಗಳು, ಪೆಟ್ರೋಲಿಯಂ ಉತ್ಪನ್ನಗಳು, ಅಲ್ಯೂಮಿನಿಯಂ, ತಾಮ್ರದಗಣಿ, ಎಲೆಕ್ಟ್ರಾನಿಕ್ಸ್, ಬಾಹ್ಯಾಕಾಶ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಸ್ಥಾಪಿತವಾದ ಸರ್ಕಾರೀ ಸಂಸ್ಥೆ ಗಳು ಭವಿಷ್ಯದಲ್ಲಿ ನಮಗೆ ಭರವಸೆ ಮೂಡುವಂತೆ ಮಾಡಿವೆ. ಬಂಡವಾಳವಾದೀ ದೇಶಗಳ ಹಿಡಿತಕ್ಕೆ ಪೂರ್ಣವಾಗಿ ಭಾರತ ಸಿಗಲಾರದು.

ಇಡೀ ವಿಶ್ವದಲ್ಲಿ ಲಭ್ಯವಾಗಿರುವ ತಂತ್ರಜ್ಞಾನದ ಪ್ರಯೋಜನ ಎಲ್ಲಾ ದೇಶಗಳಿಗೂ ನ್ಯಾಯವಾದ ವಿಧಾನಗಳಿಂದ ಸಾಧ್ಯವಾಗಬೇಕು. ಈ ದಿಸೆಯಲ್ಲಿ ಅಭಿವೃದ್ಧಿಗೆ ಸಹಾಯಕವಾಗುವ ಸೂತ್ರಗಳನ್ನು ವಿಶ್ವಸಂಸ್ಥೆ ಸೂಚಿಸುತ್ತಲೇ ಬಂದಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳೂ ಸಾಧ್ಯವಾದ ಮಟ್ಟಿಗೂ ಕೈಗಾರಿಕಾ ಸಂಶೋಧನೆಗೆ ಆದಷ್ಟು ಪ್ರೋತ್ಸಾಹ ನೀಡಬೇಕು. ತಮ್ಮ ಆರ್ಥಿಕಾಭಿವೃದ್ಧಿಗೆ ಅನಿವಾರ್ಯವಾದ ತಂತ್ರಜ್ಞಾನವನ್ನು ಬಹುರಾಷ್ಟ್ರೀಯ ಸಂಸ್ಥೆಗಳು ಒದಗಿಸಲು ಸಿದ್ಧವಾಗಿದ್ದರೆ ಅವುಗಳ ನೆರವನ್ನು ಪಡೆಯಲೂ ಬೇಕು. ಈ ಸಂಸ್ಥೆಗಳು "ಆರ್ಥಿಕ ಸಾಮ್ರಾಜ್ಯಶಾಹೀ" ಮನೋಭಾವವನ್ನು ತ್ಯಜಿಸಿ, ಸದ್ಭಾವನೆಯಿಂದ ವ್ಯವಹರಿಸುವುದಾದರೆ, ಅವು ರಾಷ್ಟ್ರಗಳ ನಡುವೆ ಸ್ನೇಹಸೇತುವನ್ನು ನಿರ್ಮಿಸಬಲ್ಲುವು. ಆಗ ರಾಷ್ಟ್ರೀಯತ್ವದ ಕಲ್ಪನೆಯೇ ಮುಖ್ಯವಲ್ಲವೆಂಬ ಕಾಲ ದೂರದಲ್ಲಿ ಉಳಿಯಲಾರದು.

ಬಿಳಿಗೆಯ ಶಾಸನಗಳು

ಆರ್. ಎಸ್. ಗುರವ

1 ಭಟ್ಟಾಕಲಂಕನ ಶಾಸನ (ಕ್ರಿ. ಶ. 1593)

ಕನ್ನಡ ಭಾಷೆಯ ಪ್ರಸಿದ್ಧ ವ್ಯಾಕರಣಗ್ರಂಥವಾದ ಶಬ್ದಾನುಶಾಸನವನ್ನು ವಿರಚಿಸಿದ ಭಟ್ಟಾಕಲಂಕದೇವನು ಎರಡು ಶಾಸನಗಳನ್ನು ಬರೆಸಿದ್ದಾನೆ. ಇವುಗಳಲ್ಲಿ ಮೊದಲನೆಯ ಶಾಸನವನ್ನು ಈ ಲೇಖನದಲ್ಲಿ ಕೊಡಲಾಗಿದೆ. ಭಟ್ಟಾಕಲಂಕನ ಶಿಷ್ಯರು ಹಾಗೂ ಆಶ್ರಯದಾತರಾದ ಬಿಳಿಗೆಯ ರಂಗರಾಜ ಮಹಾರಾಜ ಮತ್ತು ಆತನ ಮಗ ಘಂಟೇಂದ್ರ ಮಹಾರಾಜ ಇವರ ವಂಶಾವಳಿ ಮತ್ತು ಭಟ್ಟಾಕಲಂಕನ ಗುರುಪರಂಪರೆ ಇವು ಈ ಶಾಸನದಲ್ಲಿ ಸುದೀರ್ಘವಾಗಿ ಬರುತ್ತವೆ. ದಿವಂಗತ ಆರ್. ನರಸಿಂಹಾಚಾರರು ತಮ್ಮ ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟದಲ್ಲಿ (ಪುಟ 285–86), ಅಗ್ಗಳನ ಚಂದ್ರಪ್ರಭ ಪುರಾಣದ ಸಂದರ್ಭದಲ್ಲಿ ಈ ಶಾಸನದ ಉಲ್ಲೇಖ ಮಾಡಿ, ಅದರಲ್ಲಿಯ ಹದಿನೆಂಟನೆಯ ಪದ್ಯವನ್ನು ಉದ್ಧರಿಸಿದ್ದಾರೆ. ಮತ್ತು ಈ ಶಾಸನದ ಪಾಠವೊಂದು ಮದರಾಸ್ ಪ್ರಾಚ್ಯಕೋಶಾಲಯದಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ, ಈ ಪಾಠವು ಜನಸಾಮಾನ್ಯರಿಗೆ ಲಭ್ಯವಿಲ್ಲ. ಶಾಸನವು ಇನ್ನೂ ಅಪ್ರಕಟಿತವಿದೆ.

ಬಿಳಿಗೆ ಗ್ರಾಮವು ಕಾರವಾರ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಸಿದ್ದಾಪುರ ದಿಂದ ಪಶ್ಚಿಮಕ್ಕೆ ಸುಮಾರು ಎಂಟು ಮೈಲುಗಳ ಅಂತರದಲ್ಲಿದೆ. ಪ್ರಸ್ತುತ ಶಾಸನ ವನ್ನು ಆ ಗ್ರಾಮದ ತ್ರಿಕೂಟ ಬಸದಿಯ ಚಂದ್ರಶಾಲೆಯಲ್ಲಿ ಗೋಡೆಗೆ ಆನಿಸಿ ಇಡ ಲಾಗಿದೆ. ರಂಗರಾಜ ಮಹಾರಾಜ ಮತ್ತು ಘಂಟಪ್ಪೊಡೆಯರು ಕಟ್ಟಿಸಿದ ರತ್ನತ್ರಯ ಚೈತ್ಯಾಲಯವು ಇದೆ. ನಾಲ್ವತ್ತಾರನೆಯ ಸಾಲಿನವರೆಗೆ ಶಾಸನವು ಒಳ್ಳೇ ಸ್ಥಿತಿಯಲ್ಲಿದೆ. ಮುಂದಿನ ಭಾಗದಲ್ಲಿ ಶಾಸನದ ಮೇಲೆ ಕೆಲವು ಕಡೆ ಚುಕ್ಕೆಗಳಾಗಿವೆ. 70 ರಿಂದ 80ರ ವರೆಗಿನ ಸಾಲುಗಳ ಕೊನೆಯ ಭಾಗದಲ್ಲಿ 8-10 ಅಕ್ಷರಗಳು ಬಹಳಷ್ಟು ಕೆಟ್ಟಿವೆ. ಆದರೂ ಶಾಸನವನ್ನು ಸಂಪೂರ್ಣವಾಗಿ ಓದಲು ಸಾಧ್ಯವಾಗಿದೆ. ಶಾಸನದ ಭಾಷೆ ಕನ್ನಡ. ಆದರೆ, ಕೆಲವು ಸಂಸ್ಕೃತ ಪದ್ಯಗಳೂ ಬರುತ್ತವೆ. ಲಿಪಿಯು ಚನ್ನಾಗಿದೆ. ಅದು ಹದಿನಾರನೆಯ ಶತಮಾನದ ಲಿಪಿಗೆ ಹೋಲುತ್ತದೆ. ಅಕ್ಷರಗಳು ಆಳವಾಗಿ ಕಂಡರಿಸಲಾಗಿವೆ.

ಶಾಸನದ ವಿಷಯ :

ಜಂಬೂದ್ವೀಪದಲ್ಲಿ ಮೇರು ಪರ್ವತ, ಮೇರುಪರ್ವತದ ದಕ್ಷಿಣ ದಿಕ್ಕಿಗೆ ಆರ್ಯಖಂಡ (ಭರತ ಕ್ಷೇತ್ರ). ಆರ್ಯಖಂಡದಲ್ಲಿ ವನ್ಯದೇಶ (ಬನವಾಸಿ ನಾಡು). ವನ್ಯದೇಶದಲ್ಲಿ ಚಂದ್ರಗುತ್ತಿ ಗಿರಿ. ಆ ಗಿರಿಯ ಪರಿಸರದಲ್ಲಿ ಐಸೂರ ಎಂಬ ಊರು.

ಈ ಐಸೂರ ಎಂಬ ಪೊಳಲಲ್ಲಿ ಅನೇಕ ಅರಸರು ಆಗಿ ಹೋದರು. ಆ ಅರಸರಲ್ಲಿ ಮುಂಡಗೊಡೆಯನೆಂಬ ಒಬ್ಬ ಮಹಾರಾಜ. ಆತನಿಗೆ ಕಲ್ಲಪ್ಪೊಡೆಯ, ಬೋಳಪ್ಪೊಡೆಯ ಎಂಬ ಮೂವರು ತನಯರು. ಕಲ್ಲಪ್ಪೊಡೆಯನು ತನ್ನ ಜನ್ಮಭೂಮಿಯಾದ ಐಸೂರಲ್ಲಿ ಪಾರ್ಶ್ವತೀರ್ಥಂಕರರ ಬಸದಿಯನ್ನು ಕಟ್ಟಿಸಿ ಆ ಬಸದಿಗೆ ಬಿಜ್ಜೆಯಹಳ್ಳ ಎಂಬ ಗ್ರಾಮದಲ್ಲಿ ಭೂಮಿಯನ್ನು ದಾನಮಾಡಿ ಕೊಟ್ಟನು ಮತ್ತು ಇಡುವಣಿಯ ಪಾರ್ಶ್ವತೀರ್ಥಂಕರರ ಪೂಜೋತ್ಸವಕ್ಕೆ ಹೊರಗುಪ್ಪೆ ಹೆಬ್ಬಯಲ ಕಾಡೊಳಗೆ ಭೂಮಿಯನ್ನು ಬಿಟ್ಟನು.

ಕಲ್ಲಪ್ಪೊಡೆಯನಿಗೆ ಮುಂಡಣ್ಣ ಭೂಪಾಲ ಮತ್ತು ನರಸಿಂಹ ಭೂಪಾಲರೆಂಬ ಇಬ್ಬರು ಮಕ್ಕಳು. ಮುಂಡಭೂಪಾಲನಿಗೆ ಭೈರವೇಂದ್ರ ಮತ್ತು ಕಲ್ಲಭೂಪಾಲರೆಂಬ ಇಬ್ಬರು ಕುಮಾರರು. ನರಸಿಂಹ ಭೂಪಾಲನಿಗೆ ಘಂಟಣ್ಣೊಡೆಯ ಮತ್ತು ಮುಂಡಣ್ಣೊಡೆಯರೆಂಬ ಇಬ್ಬರು ಪುತ್ರರು. ಈ ಘಂಟಣ್ಣೊಡೆಯನು ತನ್ನ ರಾಜ್ಯದಲ್ಲಿ ಸೋಮನದಿಯ ದಂಡೆಯ ಮೇಲೆ ಬಿಳಿಗೆ ಎಂಬ ಪಟ್ಟಣವನ್ನು ಕಟ್ಟಿ ಅದರಲ್ಲಿ ಪಾರ್ಶ್ವತೀರ್ಥಂಕರರ ಬಸದಿಯನ್ನು ನಿರ್ಮಿಸಿದನು. ಆ ದೇವರ ಪೂಜಾರ್ಥವಾಗಿ ಸೀರಹಳ್ಳಿ, ಹೊರಗದ್ದೆ ಮತ್ತು ಹೊಂಕುಳಿ ಎಂಬ ಗ್ರಾಮಗಳಲ್ಲಿ ಭೂಮಿಯನ್ನು ದಾನ ಮಾಡಿದನು.

ಭೈರವೇಂದ್ರನಿಗೆ ಅಭಿನವ ಭೈರವೇಂದ್ರನೆಂಬ ಕುಮಾರನಿದ್ದನು. ಆತನಿಗೆ ಹಿರಿಯಪ್ಪೊಡೆಯ ಎಂದು ನಾಮಾಂತರವಿದ್ದಿತು. ಆತನು ತನ್ನ ಅರಮನೆಯಲ್ಲಿ ಎರಡು ಅಂತಸ್ತಿನ ಪಾರ್ಶ್ವತೀರ್ಥಂಕರರ ಬಸದಿಯನ್ನು ಕಟ್ಟಿಸಿ, ಹೊಕ್ಕಳಿ ಮತ್ತು ಇಟ್ಟಗೆ ಗ್ರಾಮಗಳಲ್ಲಿ ಭೂಮಿಯನ್ನು ದಾನಮಾಡಿದನು. ಆತನ ಪಟ್ಟದ ಅರಸಿ ಮಲ್ಲಿದೇವಿ. ಅವಳ ಹೆಸರಿನಲ್ಲಿ ಮಾಣಿಕ್ಯ ತೀರ್ಥಂಕರರ ಬಸದಿಯನ್ನು ಕಟ್ಟಿಸಿ ದೇವಕಾರ್ಯಕ್ಕಾಗಿ ಇಟ್ಟಗೆ ಗ್ರಾಮವನ್ನು ಬಿಟ್ಟುಕೊಟ್ಟನು. ಮತ್ತು ತಾಳಗುಪ್ಪೆಯ ಪಂಚಬಸದಿಯ ಜೀರ್ಣೋದ್ಧಾರವನ್ನು ಮಾಡಿಸಿ ಒಂದು ಭೂಮಿಯನ್ನು ದಾನವಾಗಿ ಕೊಟ್ಟನು. ಹಿರಿಯಪ್ಪೊಡೆಯನ ಮಗ ಲಕ್ಷ್ಮಣ ಭೂಪಾಲ. ಆತನು ಆದೀಶ್ವರರ ಬಸದಿಯನ್ನು ಕಟ್ಟಿಸಿ ನಾವಿಲಗಾರು, ಹೊನ್ನೆಯ ಬೀಡಾರ, ಹಿತ್ತಿಲಮಕ್ಕಿ ಮತ್ತು ಅಂದುಲ ಗ್ರಾಮಗಳಲ್ಲಿ ಭೂಮಿಯನ್ನು ದಾನಮಾಡಿದನು.

ಘಂಟಣ್ಣೊಡೆಯರ ಪುತ್ರ ತಿಮ್ಮರಸೊಡೆಯ. ಆತನು ತ್ರಿಕೂಟ ಮಂಡಿತವಾದ ರತ್ನತ್ರಯ ಜಿನಾಲಯವನ್ನು ಕಟ್ಟಿಸಿ ದೇವರಿಗೆ ಕೋಡಿಗದ್ದೆಯನ್ನು ಮತ್ತು ಹೆರ ಕೊಪ್ಪ ಗ್ರಾಮದಲ್ಲಿ ಭೂಮಿಯೊಂದನ್ನು ಕೊಟ್ಟನು. ಆತನ ಹಿರಿಯ ಅಕ್ಕ ತಿಮ್ಮಾಂಬಿಕೆ. ಅವಳ ಹೆಸರಿನಲ್ಲಿ ಶಾಂತೀಶ್ವರ ಬಸದಿಯನ್ನು ಕಟ್ಟಿಸಿ ಎರಡು ಭೂಮಿಗಳನ್ನು ದಾನ ಮಾಡಿದನು. ತಿಮ್ಮರಸೊಡೆಯನ ತಮ್ಮ ನರಸಿಂಹಭೂಪಾಲ. ಆತನು ತನ್ನ ಹಿರಿಯರು ಕಟ್ಟಿಸಿದ ಸಕಲ ಚೈತ್ಯಾಲಯಗಳ ಜೀರ್ಣೋದ್ಧಾರವನ್ನು ಮಾಡಿಸಿದನು.

ಈ ನರಸಿಂಹಭೂಪಾಲನ ಕುಮಾರ ವೀರೇಂದ್ರ. ಈತನು ಹಿರಿಯ ಬಸದಿಯ ಪಾರ್ಶ್ವತೀರ್ಥಂಕರರ ಷೋಡಶಭಾವನಾ ಪೂಜೋತ್ಸವಕ್ಕೆ ಭೂಮಿಯನ್ನು ಬಿಟ್ಟು ಕೊಟ್ಟನು. ತನ್ನ ತಂಗಿ ತಿಮ್ಮಾಂಬಿಕೆಯು ಕಟ್ಟಿಸಿದ ಚಂದ್ರಪ್ರಭ ತೀರ್ಥಂಕರರ ಬಸದಿಗಾಗಿ ಬಳುಗುಳಿ, ಕಾರವಳ್ಳಿ ಹಾಗು ಹೆಬ್ಬಲಸಿನಮಾನಿ ಗ್ರಾಮಗಳಲ್ಲಿ ಭೂಮಿ ಗಳನ್ನು ಬಿಟ್ಟನು. ಮತ್ತು ಅಭಿನವ ಭೈರವೇಂದ್ರನು ನಿತ್ಯ ಪೂಜಾರ್ಥವಾಗಿ ಮಾಡಿ ಸಿದ ಪಾರ್ಶ್ವತೀರ್ಥಂಕರರ ಸುವರ್ಣದ ಮೂರ್ತಿಯನ್ನು ಮತ್ತು ಚಂದ್ರಪ್ರಭ ತೀರ್ಥಂ ಕರರ ಬೆಳ್ಳಿಯ ಮೂರ್ತಿಯನ್ನು ಬಿದಿರೆ ಗ್ರಾಮದ ತ್ರಿಭುವನತಿಲಕ ಎಂಬ ಬಸದಿ ಯಲ್ಲಿ ಒಯ್ದಿಟ್ಟು ಆ ಮೂರ್ತಿಗಳ ನಿತ್ಯಪೂಜಾರ್ಥವಾಗಿ ಕುಡುಗನ ಬಯಲ ಎಂಬ ಗ್ರಾಮವನ್ನು ಕೊಟ್ಟನು.

ವೀರೇಂದ್ರನ ಪುತ್ರ ರಂಗರಾಜ ಮಹಾರಾಜ. ಶಾಸನವು ಈತನ ಅನೇಕ ಬಿರುದು ಹಾಗು ಗುಣಗಳನ್ನು ವಿಸ್ತಾರವಾಗಿ ವರ್ಣಿಸುತ್ತದೆ. ಈತನಿಗೆ ರಂಗೇಂದ್ರ ನೆಂದೂ ಹೆಸರು. ಈತನು ಬಿಳಿಗೆಯಲ್ಲಿ ಹೊಸದಾಗಿ ಒಂದು ರತ್ನತ್ರಯ ಚೈತ್ಯಾ ಲಯವನ್ನು ಕಟ್ಟಿಸಿದನು. ರಂಗರಾಜನ ಮಗನಾದ ಘಂಟೇಂದ್ರ ಮಹಾರಾಜನು ಈ ಚೈತ್ಯಾಲಯಕ್ಕೆ ರಂಗಮಂಟಪ, ಚಂದ್ರಶಾಲೆ, ಮುನಿವಾಸ, ಪ್ರಾಕಾರ ಮೊದ ಲಾದ ಕೆಲಸಗಳನ್ನು ಗೆಯ್ಸಿ ಮಹೋತ್ಸವದಿಂದ ನೇಮೀಶ್ವರ, ಪಾರ್ಶ್ವನಾಥ ಮತ್ತು ವರ್ಧಮಾನ ತೀರ್ಥಂಕರರ ಪ್ರತಿಷ್ಠೆಯನ್ನು ಮಾಡಿಸಿದನು. ಹಾಗು ದೇವರ ಪೂಜೆ ಪುನಸ್ಕಾರಕ್ಕೆ ಸೊವಿನಕೊಪ್ಪ, ಹಾದರಿಮಾನಿ, ಮಳಿಗೆಯ ಕೆಯ, ಕೊರತಾರಿ, ನೇರಿಲಮಾನಿ, ಚಟ್ಟನಹಳ್ಳಿ, ಗೊರಬಿನಹಳ್ಳ, ಬಲುಗಣೆ ಮತ್ತು ಒಂದಾನೆ ಎಂಬ ಒಂಬತ್ತು ಗ್ರಾಮಗಳನ್ನು ದಾನಮಾಡಿದನು. ಪ್ರಸ್ತುತ ಶಾಸನವು ಇದೇ ಬಸದಿಯಲ್ಲಿ ಇದೆ.

ಘಂಟೇಂದ್ರನ ಪಟ್ಟದರಾಣಿ ರಾಮಾದೇವಿ. ಇವಳು ಗಂಧಕುಟಿಯ ಶಾಂತೀ ಶ್ವರರ ಬಸದಿಯನ್ನು ಕಟ್ಟಿಸಿದಳು. ಅದಕ್ಕೆ ಘಂಟೇಂದ್ರನು ಮಾಗಡ ಬಯಲ ಸ್ಥಲದಲ್ಲಿ ಭೂಮಿಯನ್ನು ಕೊಟ್ಟನು. ಮತ್ತು ತನ್ನ ಅನ್ವಯ ಪರಂಪರೆಯ ಗುರುಗಳಾದ ಅಕಲಂಕದೇವರಿಗೆ ತಮ್ಮ ತಂದೆ ರಂಗಪ್ಪರಾಜೊಡೆಯರು ಕೊಟ್ಟ

ಕರ್ಬುಗಾಹ ಮತ್ತು ಗೋಣವತ್ತಿ ಗ್ರಾಮಗಳಲ್ಲಿಯ ಕ್ಷೇತ್ರಗಳಿಗೆ ಚತುಸ್ಸೀಮೆಗಳಲ್ಲಿ ಕಲ್ಲುಗಳನ್ನು ನಡಿಸಿಕೊಟ್ಟನು. ಹಾಗೆಯೇ, ತನ್ನ ಪರಮಗುರುಗಳಾದ ಭಟ್ಟಾಕಲಂಕ ದೇವರಿಗೆ ತಾನು ಕೊಟ್ಟ ಸೆಟ್ಟಿವಳ್ಳಿ ಗ್ರಾಮದಲ್ಲಿಯ ಕ್ಷೇತ್ರಕ್ಕೆ ಮತ್ತು ಭಟ್ಟಾಕಲಂಕದೇವರಿಗೆ ಶಾಸ್ತ್ರೋಪದೇಶವನ್ನು ಗೆಯ್ದ ವಿಜಯಮುನೀಶ್ವರರ್ಗೆ ಕೊಟ್ಟ ಅದೇ ಗ್ರಾಮದಲ್ಲಿಯ ಕ್ಷೇತ್ರಕ್ಕೆ ಚತುಸ್ಸೀಮೆಗಳಲ್ಲಿ ಕಲ್ಲುಗಳನ್ನು ನಡಿಸಿ ಕೊಟ್ಟನು. ಪದ್ಯ 8 ಮತ್ತು 9 ರಲ್ಲಿ ಘಂಟೇಂದ್ರನ ಬಿರುದು ಹಾಗೂ ಗುಣಗಳ ವರ್ಣನೆ ಬರುತ್ತದೆ.

ತರುವಾಯ, ಶಾಸನವು ಘಂಟೇಂದ್ರ ಮಹಾರಾಜನ ಗುರುಗಳಾದ ಭಟ್ಟಾಕ ಲಂಕದೇವನ ಗುರುಪರಂಪರೆಯನ್ನು ಕೊಡುತ್ತದೆ. ಅದೆಂತೆನೆ : ಅಂತ್ಯಜಿನೇಶನೆನಿಸಿದ ವರ್ಧಮಾನ ತೀರ್ಥಂಕರರು ಮುಕ್ತಿಗೆ ಸಂದ ಬಳಿಕ ಅನುಬದ್ಧಕೇವಲಿಗಳು, ಶ್ರುತ ಕೇವಲಿಗಳು, ದಶಪೂರ್ವಧಾರಿಗಳು, ಏಕಾದಶಾಂಗಧರರು, ಪ್ರಥಮಾಂಗಧರರು ಎಂಬ ಪಂಚವಿಧ ವಿಕಲ್ಪದಿಂದ ಇಪ್ಪತ್ತೆಣ್ಬರು ಆಚಾರ್ಯರಾದರು ಆಬಳಿ, ಅರ್ಹದ್ಬಲ್ಯಾಚಾರ್ಯರ ಕಾಲದಲ್ಲಿ ಹುಟ್ಟಿದ ನಾನಾ ಗಣಗಚ್ಛವಿಕಲ್ಪಗಳಲ್ಲಿ ದೇಶೀಗಣ ಪುಸ್ತಕಗಚ್ಛ ಎಂಬ ಸಂಪ್ರದಾಯದಲ್ಲಿ ಕುಂಡಕುಂದಾಚಾರ್ಯರೆಂಬ ಮಹಾಮು ನೀಶ್ವರರಾದರು. ಕ್ಷಮಾಮಯನಾದ ಈ ಮುನೀಶ್ವರರ ವರ್ಣನೆ ಹಾಗೂ ಪವಾಡ ವನ್ನು ಪದ್ಯ 13, 14ರಲ್ಲಿ ಕೊಡಲಾಗಿದೆ. ಈ ಕುಂಡಕುಂದಾಚಾರ್ಯರ ಅನ್ವಯದಲ್ಲಿ ಅನೇಕ ಆಚಾರ್ಯರು ಆದರು.

ರಾಜಋಷಿ ಎನಿಸಿದ ಭರತೇಶ್ವರನಿಂದ ಸೃಷ್ಟವಾದ ವಿಶಿಷ್ಟ ಜೈನಬ್ರಹ್ಮವಂಶ ದಲ್ಲಿ ಹುಟ್ಟಿದ ಪಂಡಿತದೇವನೆಂಬ ಬ್ರಾಹ್ಮಣೋತ್ತಮನು ಜಿನದೀಕ್ಷೆಯನ್ನು ತಾಳ್ದು ನಿರತಿಚಾರಚಾರಿತ್ರದಿಂದ ಚಾರುಕೀರ್ತಿಪಂಡಿತದೇವಾಚಾರ್ಯ ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಕರ್ನಾಟಕ ಸಿಂಹಾಸನಾಧೀಶ್ವರನೆನಿಸಿದ ಬಲ್ಲಾಳರಾಯನನ್ನು ಮೆಚ್ಚಿಸಿ ಜಿನಮಾರ್ಗಪ್ರಭಾವಕನಾಗಿದ್ದನು. ಆ ಕಾಲದಲ್ಲಿ ಉತ್ಪಾತದಿಂದ ನೆಲ ಬಾಯ್ಬಿಟ್ಟಿರಲು ಅದನ್ನು ತನ್ನ ಮಂತ್ರಜಪವಿಧಿಯಿಂದ ಹೂಳ್ದು ಬಲ್ಲಾಳರಾಯನನ್ನು ರಕ್ಷಿಸಿದನು ಈ ಚಾರುಕೀರ್ತಿಪಂಡಿತದೇವನು. ಆದ್ದರಿಂದ ರಾಯರಾಜಗುರು,ಮಂಡಲಾಚಾರ್ಯ, ರಾಯವಾದಿ ಪಿತಾಮಹ, ಬಲ್ಲಾಳರಾಯಜೀವರಕ್ಷಾಪಾಲಕ, ದೇಶೀಗಣಾಗ್ರಗಣ್ಯ ಮುಂತಾದ ಬಿರುದುಗಳನ್ನು ಪಡೆದನು. ಈತನ ಶಿಷ್ಯಪರಂಪರೆಯನ್ನು ಶಾಸನದಲ್ಲಿ ಮುಂದೆ ಹೇಳಲಾಗಿದೆ :

ತನ್ನ ಶಿಷ್ಯನಾದ ಕವಿ ಅಗ್ಗಳನಿಂದ ಚಂದ್ರಪ್ರಭಪುರಾಣವನ್ನು ಬರೆಸಿದ ಶ್ರುತಕೀರ್ತಿದೇವ. ಆತನ ಶಿಷ್ಯ ವಿಜಯಕೀರ್ತಿಮುನೀಶ್ವರ. ಈ ವಿಜಯಕೀರ್ತಿ ಮುನೀಶ್ವರನ ಪೆಳ್ಮೆಗೆ ಮೆಚ್ಚಿ ಅಭಯಚಂದ್ರಸೂರಿಯು ತನ್ನ ವೈದಿಕಮತವನ್ನು ಪರಿಹರಿಸಿ ಜೈನಮತವನ್ನು ಧರಿಸಿದನು. ಮತ್ತು ಈ ವಿಜಯಕೀರ್ತಿಮುನೀಶ್ವರನು

ಸಂಗೀತಪುರಾಧಿಪನಾದ (ಹಾಡುವಳ್ಳಿ ಪುರಾಧಿಪನಾದ) ಇಂದ್ರಭೂಪಾಲಂಗೆ ಸಾಮ್ರಾಜ್ಯಪ್ರದನಾದನು. ಆತನ ಶಿಷ್ಯ ಶ್ರುತಕೀರ್ತಿದೇವ. ಶ್ರುತಕೀರ್ತಿದೇವನು ತನ್ನ ಆತ್ಮಶಿಷ್ಯನಾದ ಸಂಗಿರಾಯನನ್ನು ಪ್ರತಿಷ್ಠಿಸಿದನು. ಆತನ ಶಿಷ್ಯ ವಿಜಯಕೀರ್ತಿದೇವ. ಈ ವಿಜಯಕೀರ್ತಿದೇವನು ತನ್ನ ಆತ್ಮೀಯ ಶಿಷ್ಯನಾದ ದೇವರಾಯ ಭೂಪಾಲನಿಗೆ ಪಶ್ಚಿಮಸಮುದ್ರಸಿಕಟದಲ್ಲಿ ಭಟ್ಕಳವೆಂಬ ಪಟ್ಟಣವನ್ನು ಅನೇಕ ವಾಸ್ತುಲಕ್ಷಣ ಲಕ್ಷಿತವಾಗಿ ಕಟ್ಟಿಸಿದನು. ಆತನ ಶಿಷ್ಯರು ಅಕಲಂಕಮುನೀಶ್ವರ ಹಾಗು ಚಂದ್ರಪ್ರಭಮುನೀಶ್ವರರು. ಇವರು ಶ್ವೇತಪುರದಲ್ಲಿ (ಬಿಳಿಗೆಯಲ್ಲಿ) ತಿಮ್ಮ ಭೂಪಾಲ ಹಾಗು ನರಸಿಂಹಭೂಪಾಲ. ಈ ತಮ್ಮ ಶಿಷ್ಯರಿಗೆ ಪರಮ ಧರ್ಮರಹಸ್ಯೋಪದೇಶವನ್ನು ಗೆಯ್ದು ಜಿನ ಮಾರ್ಗವನ್ನು ಬೆಳಗಿದರು. ಈ ಅಕಲಂಕಮುನೀಶ್ವರನ ಶಿಷ್ಯ ವಿಜಯಕೀರ್ತಿ ಮುನೀಶ್ವರ. ಆತನ ಶಿಷ್ಯ ಅಕಲಂಕದೇವ. ಅಕಲಂಕದೇವನು ಶಿಷ್ಯಾನುಗ್ರಹ ಗಣಪೋಷಣ, ಪ್ರವಚನ, ವಾತ್ಸಲ್ಯಾದಿ ಗುಣಗಳಿಂದ ಆಚಾರ್ಯಪದವಿ ಧುರಂಧರನಾದನು. ಅಕಲಂಕದೇವನ ಶಿಷ್ಯ ಭಟ್ಟಾಕಲಂಕದೇವ. ಈತನು ರಂಗರಾಜ ನೃಪತಿ ಪ್ರೇರಣೆಯಿಂದ ಮತ್ತು ವಿಜಯಮುನೀಶ್ವರನ ಉಪದೇಶನದಿಂದ ಸಾರ ತ್ರಿತಯವನ್ನು ಅಲಂಕಾರ ತ್ರಿತಯವನ್ನು ಓದಿದನು. ಮತ್ತು ಶಬ್ದ, ಆಗಮ, ತರ್ಕ, ನಾಟಕ, ಭರತ, ಜ್ಯೋತಿಷ, ಶಿಲ್ಪ, ನ್ಯಾಯ, ವೇದ, ಸ್ಮೃತಿ, ಪುರಾಣ, ವೈದ್ಯ, ಗಣಿತ, ಮೊದಲಾದ ಶಾಸ್ತ್ರಗಳಲ್ಲಿ ಪಾರಂಗತನಾದನು.

ಶಾಸನಾಂತ್ಯದಲ್ಲಿ ಸಂಸ್ಕೃತ, ಕನ್ನಡ ಈ ಎರಡು ಭಾಷೆಗಳಲ್ಲಿ ಗದ್ಯ ಪದ್ಯಮಯವಾದ ಎರಡು ಶಾಸನಗಳನ್ನು ಭಟ್ಟಾಕಲಂಕನು ಬರೆಯಿಸಿದನೆಂದು ಹೇಳಿ ಶಾಸನವನ್ನು ಸಂಪೂರ್ಣಮಾಡಿದ ತಿಥಿಯನ್ನು ಕೊಡಲಾಗಿದೆ.

ಕರ್ನಾಟ ಸಿಂಹಾಸನಾಧೀಶ್ವರನೆನಿಸಿದ ಬಲ್ಲಾಳರಾಯನನ್ನು ಮೆಚ್ಚಿಸಿ, ಆತನನ್ನು ಉತ್ಪಾತದಿಂದ ಸಂಭವಿಸಿದ ಪ್ರಸಂಗದಿಂದ ರಕ್ಷಿಸಿ, ಆತನಿಂದ ರಾಯರಾಜಗುರು, ಬಲ್ಲಾಳರಾಯಜೀವರಕ್ಷಾಪಾಲಕ, ಮಂಡಲಾಚಾರ್ಯ ಮುಂತಾದ ಬಿರುದುಗಳನ್ನು ಚಾರುಕೀರ್ತಿಪಂಡಿತದೇವನು ಪಡೆದನೆಂದು ಶಾಸನದಲ್ಲಿ ಹೇಳಲಾಗಿದೆ. ಸಂದರ್ಭದ ಮೇಲಿಂದ ಈ ಬಲ್ಲಾಳರಾಯನು ಕ್ರಿ. ಶ. 1173 ರಿಂದ 1220 ರವರೆಗೆ ಹಳೇಬೀಡಿನಲ್ಲಿ ರಾಜ್ಯವಾಳಿದ ಹೊಯ್ಸಳ ಮನೆತನದ ಎರಡನೆಯ ಬಲ್ಲಾಳರಾಯನಾಗಿರಬಹುದೆಂದು ಭಾವಿಸಬಹುದು.

ಶಾಸನದ ತಿಥಿಯನ್ನು ಸಾಲು ೮೨ರಲ್ಲಿ 'ಶಕ ವರುಷ ೧೫೧೫ನೆಯ ನಂದನ ಸಂವತ್ಸರದ ಮಾಘ ಶು ೫ಲೂ' ಎಂದು ಹೇಳಲಾಗಿದೆ. 'ಶಕ ವರ್ಷ ೧೫೧೪ಕ್ಕೆ ನಂದನ ಸಂವತ್ಸರವು ವರ್ತಮಾನ (Current) ಸಂವತ್ಸರವಾಗಿದೆ. ಈ ಸಂವತ್ಸರದ ಮಾಘ ಶುದ್ಧ ಪಂಚಮಿಯ ತಿಥಿ ಕ್ರಿಸ್ತ ತಾರೀಖು ೨೭ ರವಿವಾರ, ಜನೇವರಿ ೧೫೯೩ಕ್ಕೆ ಸಮಾನವಾಗುತ್ತದೆ.

ಘಂಟಣ್ಣೊಡೆಯನ ವಂಶಾವಳಿ :

- ಘಂಟಣ್ಣೊಡೆಯ
  - ಕಲ್ಲಪ್ಪೊಡೆಯ
    - ಮುಂಡಣ್ಣ ಭೂಪಾಲ
      - ಭೈರವೇಂದ್ರ
        - ಅಭಿನವ ಭೈರವೇಂದ್ರ (ಹಿರಿಯಪ್ಪೊಡೆಯ)
          - ರಾಣಿ ಮಲ್ಲಿದೇವಿ
            - ಲಕ್ಷ್ಮಣಭೂಪಾಲ
      - ಕಲ್ಲಭೂಪಾಲ
    - ನರಸಿಂಹ ಭೂಪಾಲ
      - ಘಂಟಣ್ಣೊಡೆಯ (ಅಮ್ಮಣ್ಣೊಡೆಯ)
        - ತಿಮ್ಮಾಂಬಿಕೆ
        - ತಿಮ್ಮರಸೊಡೆಯ
        - ನರಸಿಂಹಭೂಪಾಲ
          - ವೀರೇಂದ್ರ (ವೀರಪ್ಪೊಡೆಯ)
            - ರಂಗರಾಜ ಮಹಾರಾಜ
            - ಘಂಟಣ್ಣೊಡೆಯ (ಘಂಟೇಂದ್ರ)
            - ರಾಣಿ ರಾಮಾದೇವಿ
          - ತಿಮ್ಮಾಂಬಿಕೆ
      - ಮುಂಡಣ್ಣೊಡೆಯ
  - ಬೋಳಪ್ಪೊಡೆಯ
  - ಅಮ್ಮಣ್ಣೊಡೆಯ

ಭಟ್ಟಾಕಲಂಕನ ಗುರು ಪರಂಪರೆ :

ದೇಶೀಗಣ ಪುಸ್ತಕಗಚ್ಛ ಎಂಬ ಸಂಪ್ರದಾಯದಲ್ಲಿ

ಕುಂಡ ಕುಂದಾಚಾರ್ಯ

⋮

ಅನೇಕ ಆಚಾರ್ಯರು

⋮

ಚಾರುಕೀರ್ತಿ

|

ಶ್ರುತಕೀರ್ತಿದೇವ

(ಅಗ್ಗಳನಿಂದ ಕ್ರಿ.ಶ. ೧೧೮೯ ರಲ್ಲಿ ಚಂದ್ರಪ್ರಭ ಪುರಾಣವನ್ನು ಬರೆಯಿಸಿದ)

|

ವಿಜಯಕೀರ್ತಿ

|

ಶ್ರುತಕೀರ್ತಿ

|

ವಿಜಯಕೀರ್ತಿ

|

ಅಕಲಂಕ ಮುನೀಶ್ವರ ಮತ್ತು ಚಂದ್ರಪ್ರಭ ಮುನೀಶ್ವರ

|

ವಿಜಯಕೀರ್ತಿ

|

ಅಕಲಂಕದೇವ

|

ಭಟ್ಟಾಕಲಂಕ

ಶಾಸನದಲ್ಲಿ ನಿರ್ದಿಷ್ಟವಾದ ಸ್ಥಳಗಳು : (೧) ಜಂಬೂದ್ವೀಪ (ಸಾಲು ೨); (೨) ಮೇರು (ಸಾ. ೨); (೩) ಆರ್ಯಾಖಂಡ (ಸಾ. ೨); (೪) ವನ್ಯಮಂಡಲ (ಸಾ. ೩); (೫) ಐಸೂರ (ಸಾ. ೩); (೬) ಚಂದ್ರಗುತ್ತಿಗಿರಿ (ಸಾ. ೩); (೭) ಬಿಜ್ಜಿಯ ಹಳ್ಳ (ಸಾ. ೬); (೮) ಇಡವಣಿ (ಸಾ. ೭); (೯) ಹೊರುಗುಪ್ಪೆ ಹೆಬ್ಬಯಲ (ಸಾ. ೭); (೧೦) ಸೋಮನದಿ (ಸಾ. ೧೦); (೧೧) ಬಳಿಗೆ (ಸಾ. ೧೦, ೭೬), ಶ್ವೇತಪುರ (ಸಾ. ೭೩); (೧೨) ನೀರಹಳ್ಳಿ (ಸಾ. ೧೧); (೧೩) ಪೊಱಗದ್ದೆ (ಸಾ. ೧೧); (೧೪) ಹೊನ್ನುಳಿ, ಹೊಕ್ಕುಳಿ (ಸಾ. ೧೧, ೧೩); (೧೫) ಇಟ್ಟಗೆ (ಸಾ. ೧೩, ೧೪); (೧೬) ತಾಳುಗುಪ್ಪೆ (ಸಾ. ೧೪); (೧೭) ನಾವಿಲಗಾರು (ಸಾ. ೧೬); (೧೮) ಹೊನ್ನೆಯ ಬಿಥಾರ (ಸಾ. ೧೬); (೧೯) ಹಿತ್ತಿಲಮಕ್ಕಿ (ಸಾ. ೧೬); (೨೦) ಅಸ್ದುಲ (ಸಾ. ೧೬); (೨೧) ಕೋಡಿಗದ್ದೆ (ಸಾ. ೧೭); (೨೨) ಹೆಱಕೊಪ್ಪ (ಸಾ. ೧೭); (೨೩) ಬಳಂಗುಳಿ (ಸಾ. ೨೨); (೨೪) ಕಾರವಳ್ಳಿ (ಸಾ. ೨೨); (೨೫) ಹೆಬ್ಬಲಸಿನ ಮಾನಿ (ಸಾ. ೨೨); (೨೬) ಕೊಟ್ಟಹಳ್ಳಿ (ಸಾ. ೨೨) : (೨೭) ಬಿದಿರೆ (ಸಾ. ೨೪); (೨೮) ಕುಡುಗನ ಬಯಲ (ಸಾ. ೨೪-೨೫); (೨೯)

ಸೋಪಿನ ಕೊಪ್ಪ (ಸಾ. ೩೭) ; (೩೦) ಹಾದರಿವಮಾನಿ (ಸಾ. ೩೪) ; (೩೧) ಮಳಿಗೆಯ ಕೆಯಿ (ಸಾ. ೩೮) ; (೩೨) ಕೊಜತಾರಿ (ಸಾ. ೩೮) ; (೩೩) ನೇಡಿಲ ಮಾನಿ (ಸಾ. ೩೮) ; (೩೪) ಚಟ್ಟನಹಳ್ಳಿ (ಸಾ. ೩೯) ;, (೩೫) ಗೊರಟಿನಹಳ್ಳ (ಸಾ. ೩೯) ; (೩೬) ಬಲುಗಣೆ (ಸಾ. ೩೯) ; (೩೭) ಒಂದಾನೆ (ಸಾ. ೩೯) (೩೮) ಮಾಗಡ ಬಯಲ (ಸಾ. ೪೦) (೩೯) ಕರ್ಬುಗಾಡ (ಸಾ. ೪೨) ; (೪೦) ಗೋಣವತ್ತಿ (ಸಾ. ೪೨); (೪೧) ; ಸೆಟ್ಟಿವಳ್ಳಿ (ಸಾ. ೪೫) ; (೪೨) ಸಂಗೀತಪುರ (ಸಾ. ೭೦) ; (೪೩) ಭಟ್ಕಳ (ಸಾ. ೭೨).

(೧) ಜಂಬೂದ್ವೀಪ : ಸ್ಥೂಲವಾಗಿ ಏಶಿಯಾ ಖಂಡ ; (೨) ಮೇರು : ಏಶಿಯಾ ಖಂಡದ ಮಧ್ಯದಲ್ಲಿರುವ ಪರ್ವತಶ್ರೇಣಿ. (೩) ಆರ್ಯಾಖಂಡ : ಭರತ ಕ್ಷೇತ್ರ. (೪) ವನ್ಯಮಂಡಲ : ಬನವಾಸಿ ನಾಡು. (೬) ಚಂದ್ರಗುತ್ತಿಗಿರಿ : ಸೊರಬ ತಾಲೂಕಿನ ಪಶ್ಚಿಮ ಭಾಗದಲ್ಲಿಯ ಬೆಟ್ಟ. ಈ ಬೆಟ್ಟದ ಶ್ರೇಣಿಯಲ್ಲಿ ಸುವಿಖ್ಯಾತ ಚಂದ್ರಗುತ್ತಿ ಗ್ರಾಮ ಮತ್ತು ಕೋಟೆ ಇರುತ್ತವೆ. (೮) ಇಡುವಣೆ : ತಾಳಗುಪ್ಪೆಯಿಂದ ಪಶ್ಚಿಮಕ್ಕೆ ಸುಮಾರು ನಾಲ್ಕು ಮೈಲು ಅಂತರದಲ್ಲಿದೆ. (೯) ಪೊರುಗುಪ್ಪೆ ಹೆಬ್ಬಯಲ : ಇಡುವಣಿಯಿಂದ ದಕ್ಷಿಣ–ಪೂರ್ವಕ್ಕೆ ಮೂರು ಮೈಲು ಅಂತರದಲ್ಲಿರುವ ಈಗಿನ ಹೆಬ್ಬಯಲ ಆಗಿರಬಹುದು. (೧೦) ಸೋಮನದಿ : ಬಳಿಗೆಯ ಪಶ್ಚಿಮಕ್ಕೆ ದಕ್ಷಿಣೋತ್ತರವಾಗಿ ಹರಿಯುವ ಅದೇ ಹೆಸರಿನ ಚಿಕ್ಕನದಿ. (೧೧) ಬಳಿಗೆ : ಮೇಲೆ ವಿವರಿಸಲಾಗಿದೆ; ಶ್ವೇತಪುರ ನಾಮವು ಬಳಿಗೆಯ ಸಂಸ್ಕೃತ ಭಾಷಾಂತರ. (೧೩) ಮೊಜಿಗದ್ದೆ : ಬಳಿಗೆಯಿಂದ ದಕ್ಷಿಣ–ಪಶ್ಚಿಮಕ್ಕೆ ಎರಡು ಮೈಲು ಅಂತರದಲ್ಲಿರುವ ಈಗಿನ ಹೊರಗದ್ದೆ. (೧೪) ಹೊಸ್ಕುಳಿ : ಬಳಿಗೆಯಿಂದ ಪೂರ್ವ-ಪೂರ್ವ-ದಕ್ಷಿಣಕ್ಕೆ ಐದು ಮೈಲು ಅಂತರದಲ್ಲಿರುವ ಈಗಿನ ಭಂಕುಳಿ ಗ್ರಾಮವಾಗಿರಬಹುದು. (೧೫) ಇಟ್ಟಗೆ : ಬಳಿಗೆಯ ದಕ್ಷಿಣಕ್ಕೆ ಮೂರು ಮೈಲು ಅಂತರದಲ್ಲಿರುವ ಈಗಿನ ಇಟ್ಟಗಿ ಗ್ರಾಮ. (೧೬) ತಾಳುಗುಪ್ಪೆ : ಸಾಗರದಿಂದ ಪಶ್ಚಿಮಕ್ಕೆ ಸುಮಾರು ಎಂಟು ಮೈಲು ಅಂತರದಲ್ಲಿರುವ, ಅದೇ ತಾಲೂಕಿನ ತಾಳಗುಪ್ಪೆ ಗ್ರಾಮ–ರೇಲವೆ ನಿಲ್ದಾಣವೂ ಆಗಿದೆ. (೧೭) ಸಾಪಿಲಗಾರು = ಬಳಿಗೆಯಿಂದ ಪಶ್ಚಿಮೋತ್ತರಕ್ಕೆ ಐದು ಮೈಲು ಅಂತರದಲ್ಲಿರುವ ಈಗಿನ ನೇಗರ ಗ್ರಾಮವಾಗಿರಬಹುದು. (೨೧) ಕೋಡಿಗದ್ದೆ = ಬಳಿಗೆಯಿಂದ ಪಶ್ಚಿಮಕ್ಕೆ ಸುಮಾರು ೧೨ ಮೈಲು ಅಂತರದಲ್ಲಿದೆ. (೨೩) ಬಳುಗುಳಿ = ಬಳಿಗೆಯಿಂದ ಪೂರ್ವ–ಪೂರ್ವೋತ್ತರಕ್ಕೆ ಸುಮಾರು ಆರು ಮೈಲು ಅಂತರದಲ್ಲಿರುವ ಈಗಿನ ಬಳ್ಳುಳಿ ಗ್ರಾಮ. (೨೬) ಕೊಟ್ಟಹಳ್ಳಿ = ಬಳಿಗೆಯಿಂದ ಪಶ್ಚಿಮೋತ್ತರಕ್ಕೆ ಮೂರು ಮೈಲು ಅಂತರದಲ್ಲಿರುವ ಈಗಿನ ಕೋಟಳಿ ಗ್ರಾಮವಾಗಿರಬಹುದು. (೨೭) ಬದಿರೆ = ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಮೂಡಬಿದಿರೆ ಆಗಿರಬಹುದು. (೨೮) ಸೋಪಿನ ಕೊಪ್ಪ =

ಬಿಳಿಗೆಯಿಂದ ಉತ್ತರಕ್ಕೆ ಸುಮಾರು ನಾಲ್ಕು ಮೈಲು ಅಂತರದಲ್ಲಿದೆ. (೩೦) ಹಾದರಿಮಾನಿ=ಸೋಪಿನ ಕೊಪ್ಪದಿಂದ ಪಶ್ಚಿಮೋತ್ತರಕ್ಕೆ ಎರಡು ಮೈಲು ಅಂತರದಲ್ಲಿದೆ. (೩೩) =ನೇಜಿಲಮಾನಿ=ಸಿದ್ಧಾಪುರದಿಂದ ಉತ್ತರ–ಉತ್ತರ–ಪಶ್ಚಿಮಕ್ಕೆ ಸುಮಾರು ಹತ್ತು ಮೈಲು ಅಂತರದಲ್ಲಿರುವ ಈಗಿನ ನೇರಲಮಾನಿ ಆಗಿರಬಹುದು. ಬಿಳಿಗೆಯಿಂದ ಉತ್ತರ-ಉತ್ತರ-ಪಶ್ಚಿಮಕ್ಕೆ ಸುಮಾರು ಹತ್ತು ಮೈಲು ಅಂತರದಲ್ಲಿ ಇನ್ನೊಂದು ನೇರಲಮಾನಿ ಇದೆ. (೩೭) ಒಂದಾನೆ=ಬಿಳಿಗೆಯಿಂದ ಪಶ್ಚಿಮಕ್ಕೆ ಐದು ಮೈಲು ಅಂತರದಲ್ಲಿದೆ. (೪೦) ಗೋಣಪತ್ತಿ=ಒಂದಾನೆಯಿಂದ ಉತ್ತರಕ್ಕೆ ಅರ್ಧಮೈಲು ಅಂತರದಲ್ಲಿರುವ ಈಗಿನ ಗೋಣತಿ ಆಗಿರಬಹುದು. (೪೨) ಸಂಗೀತಪುರ=ಭಟಕಳದಿಂದ ಪೂರ್ವೋತ್ತರಕ್ಕೆ ಸುಮಾರು ಏಳು ಮೈಲು ಅಂತರದಲ್ಲಿರುವ ಹಾಡುವಳ್ಳಿ ಗ್ರಾಮ. ಸಂಗೀತಪುರ ಈ ಹೆಸರು ಹಾಡುವಳ್ಳಿ ಹೆಸರಿನ ಸಂಸ್ಕೃತ ರೂಪ. (೪೩) ಭಟ್ಟಿಕಳ : ಈಗಿನ ಭಟಕಳ ಗ್ರಾಮ. ಕಾರವಾರ ಜಿಲ್ಲೆಯಲ್ಲಿ ಒಂದು ತಾಲೂಕ ಸ್ಥಳವಾಗಿದೆ.

ಇನ್ನುಳಿದ ಗ್ರಾಮಗಳನ್ನು ಸಧ್ಯಕ್ಕೆ ಗುರುತಿಸಲು ಸಾಧ್ಯವಾಗಿಲ್ಲ. ಅವುಗಳಲ್ಲಿ ಕೆಲವು ಗ್ರಾಮಗಳು ಹಾಳಾಗಿರಬಹುದು ಮತ್ತು ಕೆಲವುಗಳ ಹೆಸರು ಬದಲಾಯಿಸಿರಬಹುದು.

ಶಾಸನ ಪಾಠ[1]

[ವೃತ್ತಗಳು : ಅನುಷ್ಟುಭ್ : ೧, ೨, ೩ ; ಕಂದ ೪, ೭, ೧೦, ೧೧, ೧೨, ೧೪, ೧೫–೨೩, ೨೬ ; ಸ್ರಗ್ಧರೆ ೫ ; ಮಹಾಸ್ರಗ್ಧರೆ ೬, ೧೩ ; ಚಂಪಕಮಾಲೆ ೮, ೯ ; ಮತ್ತೇಭವಿಕ್ರೀಡಿತ ೨೪ ; ಶಾರ್ದೂಲ ವಿಕ್ರೀಡಿತ–೨೫]

೧. ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ । ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ [೧] ಜಯಂತಿ ಸಿರ್ಜ್ಜಿತಾಶೇಷಸರ್ವ್ವ

೨. ಥೈಕಾಂತನೀತಯಃ । ಸತ್ಯವಾಕ್ಯಾಧಿಪಾಃ ಶಶ್ವದ್ವಿದ್ಯಾನಂದಾ ಜಿನೇಶ್ವರಾಃ ॥ [೨*] ಅಥಾಸ್ತಿ ಜಂಬೂದ್ವೀಪೇಸ್ಮಿನ್ಮೇರೋರ್ದ್ದಕ್ಷಿಣತೋ ದಿಶಿ । ಆರ್ಯ್ಯಾಖಂಡಾಂಗನಾ

1 ಬಿಳಿಗೆ ಗ್ರಾಮಕ್ಕೆ 1974ರ ಜೂನ್ ತಿಂಗಳ 23ನೆಯ ದಿನಾಂಕದಂದು ಕರ್ನಾಟಕ ವಿಶ್ವವಿದ್ಯಾಲಯುದ ವ್ಯಾಸಂಗ ವಿಸ್ತರಣ ವಿಭಾಗದ ಉಪನ್ಯಾಸಮಾಲೆಯಲ್ಲಿ 'ಕಾರವಾರ ಜಿಲ್ಲೆಯ ಶಾಸನಗಳು' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಲು ನಾನು ಹೋದ ಸಮಯದಲ್ಲಿ ತೆಗೆದುಕೊಂಡ ಬಿಳಿಗೆಯ ಬಸದಿಯಲ್ಲಿರುವ ಶಾಸನದ ಪಡಿಯಚ್ಚುಗಳಿಂದ.

೩ ವಕ್ಷಮಿವ ಶ್ರೀವತ್ಸಮಂಡಲಂ ॥ [೩*) ಅಂತೆಸೆವ ವತ್ಸದೇಶ
ದೊಳಂತಾತೀತ ಪ್ರಕಾರಶೋಭಾರುಚಿಯಿಂ ತಾಂ ತಳೆದೈಸೂರೆಂಬ
ಪುರಂ ತೋರ್ಪ್ಪುದು ಚಂದ್ರಗುಪ್ತಿಗಿರಿಪರಿಸರದೊ–

೪ ಳ್ ॥ [೪*] ಆ ಪೊಳಲೊಳ್ಪಲಂಬರರಸುಗಳನುಕ್ರಮದಿಂ ಧರ್ಮ
ವಿಜಯಿಗಳಾಗಿ ರಾಜ್ಯಂಗೆಯ್ದುದಾ ಸಂತಾನದೊಳ್ಮುಂಡಂಣೊಡೆಯ
ರೆಂಬ ಮಹಾರಾಜಂಗೆ ಕಲ್ಲಪ್ಪೊಡೆಯರುಂ

೫ ಬೋಳಪ್ಪೊಡೆಯರುಂ ಅಂಮಂಣೊಡೆಯರುಮೆಂಬ ಮೂವರ್ತ್ತನಯ
ರಾದರವರೊಳ್ಕಲ್ಲಪ್ಪ ಭೂಪಾಲಂ ತಂನ ಜನನಸ್ಥಾನಮಪ್ಪ ಅಯಿ
ಸೂರೊಳ್ಪಾರ್ಶ್ವಂ ತೀರ್ತ್ಥಂಕರರ ಬಸದಿ–

೬ ಯುಂ ಕಟ್ಟಿಸಿ ಪ್ರತಿಷ್ಠೆಯುಂ ಮಾಡಿ ತತ್ಪೂಜಾರ್ತ್ಥವಾಗಿ ಬಿಜ್ಜೆಯ
ಹಳ್ಳದ ಗ್ರಾಮದೊಳೆಪ್ಪತ್ತನಾಲ್ಕು ಗದ್ಯಾಣಮುಂ ನೂರು
ಖಂಡುಗ ಭತ್ತಮುಂ ಬರ್ಪ್ಪ ಕ್ಷೇತ್ರಮಂ ಶಾಸನಾಂಕಿತಂ ಮಾ—

೭ ಡಿ ಮತ್ತಂ ಯಿಡುವಣೆಯ ಪಾರ್ಶ್ವತೀರ್ತ್ಥಂಕರರ ಪೂಜೋತ್ಸವಕ್ಕೆ
ಹೊರುಗುಪ್ಪೆ ಹೆಬ್ಬಯಲ ಕಾಡೊಳಗೆ ಅಱುವತ್ತಮೂಱು ಗದ್ಯಾಣ
ಮೆತ್ತಿ ಬರ್ಪ್ಪ ಕ್ಷೇತ್ರಮಂ ಶಾಸನಾಂಕಿತಂ ಮಾಡಿ[ದಾ]ತಂಗೆ

೮ ಮುಂಡಣ ಭೂಪಾಲನುಂ ನರಸಿಂಹ ಭೂಪಾಲನುಮೆಂಬಿರ್ವ್ವರ್ಕ್ಕು
ಮಾರರಾದರವರೊಳ್ಮುಂಡ ಭೂಪಾಲಂಗೆ ಭೈರವೇಂದ್ರನುಂ ಕಲ್ಲ
ಭೂಪಾಲನುಮೆಂಬಿರ್ವ್ವರ್ಕುಮಾರರಾದರಾ ನರಸಿಂಹ

೯ ಭೂಪಾಲಂಗೆ ಘಂಟಂಣೊಡೆಯರುಂ ಮಂಡಂಣೊಡೆಯರುಮೆಂಬಿರ್ವ್ವ
ರ್ಕ್ಕುಮಾರರಾದರವರೊಳ್ ಘಂಟಂಣೊಡೆಯರಂಮಂಣೊಡೆಯರೆಂಬ
ನಾಮಾಂತರದಿಂ ಪ್ರಸಿದ್ಧನಾಗಿ ತಂನ ರಾ–

೧೦ ಜ್ಯದೊಳ್ಪ್ರಸಿದ್ಧಮಾಪ ಸೋಮನದೀ ತೀರದೊಳ್ ಬಿಳಿಗೆಯೆಂಬ
ಪಟ್ಟಣಮಂ ಕಟ್ಟಿಯದರೊಳ್ಪಿರಿಯ ಬಸದಿಯಂ ಕಟ್ಟಿಸಿ ಪಾರ್ಶ್ವ
ತೀರ್ತ್ಥಂಕರರ ಪ್ರತಿಷ್ಠೆಯುಂ ಮಾಡಿಸಿ ತತ್ಪೂಜಾರ್ತ್ಥವಾ–

೧೧. ಗಿ ಸೀರಹಳ್ಳಿಯುಂ ಪೊರಗದ್ದೆಯುಂ ಹೊನ್ನುಕಳಿಯೊಳ್ಕಱಿದು
ಭೂಮಿಯುಮಂ ಬೆರಸಿ ನೂಱಱುವತ್ತ ಮೂಱು ಗದ್ಯಾಣಮೆತ್ತಿ ಬರ್ಪ್ಪ
ಕ್ಷೇತ್ರಮಂ ಶಾಸನಾಂಕಿತಂ ಮಾಡಿದನಾ ಭೈರವೇಂದ್ರ–.

೧೨. ನ ಕುಮಾರನಭಿನವ ಭೈರವೇಂದ್ರಂ ಓರಿಯುಪ್ಪೊಡೆಯರೆಂಬ ನಾಮಾಂತರಮಂ ಪಡೆದು ತಂನರಮನೆಯೊಳಿರಲ್ನೆಲೆಯ ಬಸದಿಯುಂ ಕಟ್ಟಿಸಿ ಪಾರ್ಶ್ವ ತೀರ್ತ್ಥಂಕರರ ಪ್ರತಿಷ್ಠೆಯುಂ ಮಾಡಿ ತತ್ಪೂ–

೧೩. ಜಾರ್ತ್ಥವಾಗಿ ಹೊಕ್ಕುಳಿಯಿಟ್ಟಗೆಯೆಂಬಗ್ರಾಮದೊಳ್ನೂಱನಾಲ್ಕುಂ ಗದ್ಯಾಣ ಪ್ರಮಿತ ಕ್ಷೇತ್ರಮಂ ಶಾಸನಾಂಕಿತಂ ಮಾಡಿ ಮತ್ತಂ ತಂನ ಪಟ್ಟದರಸಿಯಪ್ಪ ಮಲ್ಲಿದೇವಿಯರ ಪೆಸರೊಳ್ಮಾಣಿಕ್ಯ --

೧೪. ತೀರ್ತ್ಥಂಕರರ ಬಸದಿಯುಂ ಕಟ್ಟಿಸಿ ತತ್ಪೂಜಾರ್ತ್ಥವಾಗಿ ಅಯಿವತ್ತು ಗದ್ಯಾಣವೊತ್ತಿ ಬರ್ಪ ಯಿಟ್ಟಗೆಯೆಂಬ ಗ್ರಾಮಮುಂ ಶಾಸನಾಂಕಿತಂ ಮಾಡಿ ಮತ್ತಂ ತಾಳುಗುಪ್ಪೆಯ ಪಂಚಬಸದಿ–

೧೫. ಯುಂ ಜೀರ್ಣ್ಣೋದ್ಧಾರಮಂ ಮಾಡಿಸಿ ಮೂವತ್ತಱುಂ ಗದ್ಯಾಣವೊತ್ತಿ ಬರ್ಪ ನಂದಿಮ ಜೋಗೆಂಬ ಕ್ಷೇತ್ರಮಂ ಶಾಸನಾಂಕಿತಂ ಮಾಡಿದಾತನ ತನುಜಂ ಲಕ್ಷ್ಮಣ ಭೂಪಾಲನಾದೀಶ್ವರರ

೧೬. ಬಸದಿಯುಂ ಕಟ್ಟಿಸಿ ತತ್ಪೂಜಾರ್ತ್ಥವಾಗಿ ನಾಪಿಲಗಾರು ಹೊಂನೆಯ ಬಿಥಾರ ಹಿತ್ತಿಲಮಕ್ಕಿಯುನ್ದುಲಡೊಳ್ನಾಲ್ವತ್ತು ಮೂಱುವರೆ ಗದ್ಯಾಣದ ಕ್ಷೇತ್ರಮಂ ಶಾಸನಾಂಕಿತಂ ಮಾಡಿದನಾ ಘಂ–

೧೭. ಟಂಣೊಡೆಯರ ಕುಮಾರಂ ತಿಂಮರಸೊಡೆಯರ್ತ್ರಿಕೂಟಮಪ್ಪ ರತ್ನತ್ರಯ ಚೈತ್ಯಾಲಯಮುಮಂ ಕಟ್ಟಿಸಿ ತತ್ಪೂಜಾರ್ತ್ಥವಾಗಿ ಕೋಡಿಗದ್ದೆಯುಂ ಪೆಱ ಕೊಪ್ಪವೆಂಬ ಗ್ರಾಮದೊಳ್ನೂ–

೧೮. ಱೊಂದುವರೆ ಗದ್ಯಾಣದ ಕ್ಷೇತ್ರಮಂ ಶಾಸನಾಂಕಿತಂ ಮಾಡಿ ಮತ್ತಂ ತಂನಗ್ರಜೆಯಪ್ಪ ತಿಂಮಾಂಬಿಕೆಯ ಪೆಸರೊಳ್[೧] ಪೆಱತೊಂದು ಬಸದಿಯುಂ ಕಟ್ಟಿಸಿ ಶಾಂತೀಶ್ವರರಂ ಪ್ರತಿ–

೧೯. ಷ್ಠಿಸಿ ತತ್ಪೂಜಾರ್ತ್ಥವಾಗಿ ಮೂವತ್ತಱುಂ ಗದ್ಯಾಣವೊತ್ತಿ ಬರ್ಪ ಯೆಲೆಯ ಬಳ್ಳಿ ಹೂವಿನಮಾನಿಯೆಂಬ ಕ್ಷೇತ್ರಂಗಳಂ ಶಾಸನಾಂಕಿತಂ ಮಾಡಿದಾತನ–ನುಜಂ ನರಸಿಂಹ ಭೂಪಾಲಂ.

೨೦. ತಂನ ಪಿರಿಯರ್ಕಟ್ಟಿಸಿದ ಸಕಲ ಚೈತ್ಯಾಲಯಂಗಳಂ ಜೀರ್ಣ್ಣೋದ್ಧಾರಂ ಮಾಡಿಸಿದಾತನ ಕುಮಾರಂ ವೀರೇಂಪ್ರನೆಂಬಂ ಕಲಿಯುಗ ಧರ್ಮಪುತ್ರನೆನಿಸಿ ಪಿರಿಯ ಬಸದಿಯುಂ ಪಾರ್ಶ್ವತೀರ್ತ್ಥಂ–

---

೧. 'ಳ್' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.

೨೧. ಕರರ ಶ್ರೀಪಾದ ಮೂಲದೊಳ್ನಡೆವ ಷೋಡಶಭಾವನಾ ಪೂಜೋ
ತ್ಸವಕ್ಕೆ ಪಿರಿಯ ಕೋಲೊಳ್ಮೂವತ್ತಾಱು ಗದ್ಯಾಣಮೊತ್ತಿ ಬರ್ಪ್ಪ
ಕ್ಷೇತ್ರಮುಂ ಶಾಸನಾಂಕಿತಂ ಮಾಡಿ ಮತ್ತಂ ತಂನನುಜೆ—

೨೨. ಯಪ್ಪ ತಿಂಮಾಂಬಿಕೆ ಕಟ್ಟಿಸಿದ ಚಂದ್ರಪ್ರಭ ತೀರ್ತ್ಥಂಕರರ ಬಸದಿಯ
ಪೂಜೋತ್ಸವಕ್ಕೆ ಬಳುಗುಳಿ ಕಾರವಳ್ಳಿ ಹೆಬ್ಬುಲಸಿನಮಾನಿ ಕೊಟ್ಟ
ಹಳ್ಳಿಯ ಸ್ಥಲ ನಾಲ್ಕೊಱೊಳಿಪ್ಪತ್ತೆಂ.

೨೩ ಟಂ ಗದ್ಯಾಣಯುಂ ಹಣಹಾಗಮೊತ್ತಿ ಬರ್ಪ್ಪ ಕ್ಷೇತ್ರಮುಂ ಶಾಸನಾಂಕಿ
ತಂ ಮಾಡಿ ಮತ್ತಮಭಿನವ ಭೈರವೇಂದ್ರಂ ನಿತ್ಯಪೂಜಾರ್ತ್ಥವಾಗಿ
ಮಾಡಿಸಿದ ಸುವರ್ಣ್ಣದ ಪಾರ್ಶ್ವತೀರ್ತ್ಥಂ

೨೪ ಕರರಂ ರಜತದ[೧] ಚಂದ್ರಪ್ರಭ ತೀರ್ತ್ಥಂಕರರಂ ಬಿದಿರೆಯ ತ್ರಿಭುವನ—
ತಿಲಕವೆಂಬ ಬಸದಿಯೊಳ್ಬಿಜಯಂಗೆಯ್ಸಿ ತತ್ಪೂಜಾರ್ತ್ಥವಾಗಿ
ನಾಲ್ವತ್ತನಾಲ್ಕುವರೆ ಗದ್ಯಾಣಕ್ಕೆ ಕು—

೨೫ ಡುಗನ ಬಯಲೆಂಬ ಗ್ರಾಮಮಂ ಶಾಸನಾಂಕಿತಂ ಮಾಡಿದನಾತನ
ಕುಮಾರನನೇಕಗುಣಸಮುತ್ತುಂಗಂ ರಂಗರಾಜನೆಂಬ ಮಹಾರಾಜಂ
ನಿಜಗಾಂಭೀರ್ಯ್ಯಾದ್ಯನೇಕಗುಣಸಂ

೨೬ ಜಾತ ಭೋಜರಾಜಸಂಘಾಲಂಘನಜಂಘಾಲ ವಿವೇಕವಿತರಣಕಲಾ
ಪಾಂಡಿತ್ಯಾದ್ಯನೇಕಗುಣನಿರ್ಜ್ಜಿತಕಲ್ಪವೃಕ್ಷ ಮಲಯಹುಲಿ ಮಾಕೊರ್ಕ್ಕ
ಲ ಬಿರುದೋದ್ದಂಡ ಯೆಂಟು

೨೭ ದಂಡಿಗೆಯ ಮನ್ನೆಯರ ಗಂಡ ಗಡಿಯಂಕಸಿಂಹ ಮೂಮ್ಮುರ್ಡಿರಾವು
ತ್ತರಾಯ ದುರ್ಗ್ಗವಿಭಾಡ ಶ್ರೀಮನ್ಮಹಾಪ್ರಭುವೆಂಬ ನಿಜಾನ್ವಯಾಗ
ತಮಾದ ಬಿರುದಾವಳಿಯಂ ಪರಿ

೨೮ ಪರಿಪಾಳಿಸಿ ಮತ್ತಮಭಂಗಪ್ರತಾಪಸಂಗತನುಮಶೇಷ ವೈರಿ ವಧೂ
ವೈಧವ್ಯ ದೀಕ್ಷಾಚಾರ್ಯ್ಯನುಮಖಿಲದಿಗಂತ ವಿಶ್ರಾಂತಕೀರ್ತ್ತಿಕಾಂತಾ
ಕಾಂತನುಮಶೇಷ ವಿದ್ವದ್ಗಣಗಣನೀ

೨೯ ಯಗುಣಗಣಾಭರಣನುಮನೂನ ಸರಸ ಗಾನಕಲಾಕಾಮಿನೀ ಕಂದ
ರ್ಪ್ಪರೂಪನುಮನೇಕಸಮಾಶ್ರಿತ ದಾರಿದ್ರ್ಯವಿದ್ರಾವಣನುಮನೇಕ
ಮತರಹಸ್ಯವಿಚಾರಚಾತುರೀಧುರಂಧ

---

೧. 'ದ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಸಣ್ಣದಾಗಿ ಬರೆಯಲಾಗಿದೆ.

೩೦ ರನುಪಮನವದ್ಯಸ್ಯಾದ್ವಾದ ವಿದ್ಯಾ ವಿದಗ್ಧವಿದ್ವಜ್ಜನ ಪ್ರೀತನುಮಖಿಲ ಜಗದೇಕಶರಣ್ಯ ಜಿನಮಾರ್ಗ್ಗಪ್ರತಿಷ್ಠಾಪನಾಚಾರ್ಯ್ಯನುಮೆಂಬಿವು ಮೊದಲಾಗಿ ಪೆಱವುಂ ಗುಣನಾ

೩೧ ಮಂಗಳಂ ತಳೆದು ಪ್ರಸಿದ್ಧಿವಡೆದನಾತನ ಜಸದೆಸಕಮೆಂತೆನೆ ॥ ಮೂಲೋಕಕ್ಕೆಂದು ಮೇಲೆತ್ತಿದ ವಿಪುಲ ಸಿತಚ್ಛತ್ರಮೆಂಬಂತೆ ಸದ್ಧರ್ಮ್ಮಾಲಂಬಂ ಕೀರ್ತ್ತಿಯೊಪ್ಪಲ್ಕಡಱ ನೆಳಲ

೩೨ ಪೊಲ್ಲಂತತಂ ತೋರ್ಪ್ಪುದಿಂತೀ ಸೀಲಾಭ್ರಂ ಪದ್ಮರಾಗೋಜ್ವಲಕಲಶ ಮೆನಲ್ತತ್ಪ್ರಪಾರ್ಕ್ಕನಲ್ಲಿಂ ಮೇಲಿಪ್ಪಂ ನೋಡೆ ತದ್ರಂಗಪಧರಣಿ ಪನಂ ಬಣ್ಣಿಸಲ್ಬಲ್ಲನಾವಂ ॥ [೫*] ಮತ್ತಮಾತ

೩೩ ನ ಕಯ್ಯಕೂರಲಗೆಂತಿರ್ಪ್ಪುದೆನೆ ॥ ಹರಭಾಳಾಭೀಳನೇತ್ರಾಗ್ನಿಯೊಳತಿ ಭರದಿಂ ಪ್ರೇತರಾಟ್ತ್ರಕ್ಷಕಂ ತದ್ಗರಳಾಯ್ಸಃ ಪಿಂಡಮಂ ತಾಪಿಸಿ ಫಣಿ ಫಣಗ್ರಾವದೊಳ್ ಸ್ಫೂರ್ಜ್ಜ

೩೪ ಥುಪ್ರಸ್ಫುರದುಗ್ರಾಸೋಟೀಟನೀಘಾತದೊಳೆ ಸಮೆದದಂ ತಂದು ತಾಂ ಕಾಣ್ಕೆಯೆಂದೀ ಧರಣೀಶಂಗಿತ್ತವೊಲೊಪ್ಪಿದುದು ಹೃತರಿಪುಪ್ರಾಣ ಮುದ್ಯತ್ಕೃಪಾಣಂ ॥ [೬*] ಮತ್ತಮಾತ

೩೫ ನೆಂತಪ್ಪನೆನೆ ॥ ಪಾವಡಿಗನ ಪೂವಡಿಗನ ದೇವಡಿಗನ ಮಡಲಿ[೧]ಯರ್ಕ್ಕಳ್ ರೊಳ್ಕಡು ಸೋಲ್ತುಂ ಭಾವಿಸಲುತ್ತಮನಾಯಕದೇವಂ ಪರದಾರ ಸೋದರಂ ರಂಗೇಂದ್ರಂ ॥ [೭*] ಯಿಂತು ಸಕಲಭುವನಪ್ರ

೩೬ ಸಿದ್ಧನಾದ ರಂಗರಾಜ ಮಹಾರಾಜಂ ಬಳಿಗೆಯೊಳ್ನೂತನವಾಗಿ ಶಿಲಾ ಮಯಮಾಗಿ ರತ್ನತ್ರಯ ಚೈತ್ಯಾಲಯಮಂ ಕಟ್ಟಿಸಿದನಾತನ ಕುಮಾರಂ ಘಂಬೇಂದ್ರನೆಂಬ ಮಹಾರಾಜನಾ

೩೭ ಚೈತ್ಯಾಲಯಕ್ಕೆ ರಂಗಮಂಡಪಮುಂ ಚಂದ್ರಶಾಲೆಯುಂ ಮುನಿವಾಸ ಮುಂ ಪ್ರಾಕಾರಮುಂ ಮೊದಲಾದ ಕೆಲಸಂಗಳಂ ಗೆಯಿಸಿ ಸಂಪೂರ್ಣ್ಣಂ ಮಾಡಿ ಮಹೋತ್ಸವದಿಂ ನೇಮೀಶ್ವರ ಪಾ

೩೮ ರ್ಶ್ವನಾಥ ವರ್ದ್ಧಮಾನ ತೀರ್ತ್ಥಂಕರರ ಪ್ರತಿಷ್ಠೆಯಂ ಮಾಡಿಸಿ ನಿತ್ಯ ನೈಮಿತ್ತಿಕ ಅಂಗರಂಗವೈಭವಂಗಳಿಗೆ ಸೋವಿನಕೊಪ್ಪ ಹಾವರಿಮಾನಿ ಮಳಿಗೆಯಕೆಯಿ ಕೊಱತಾರಿ ನೇಱಿಲಮಾನಿ

---

೧. 'ಲಿ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.

೩೯ ಚಟ್ಟನಹಳ್ಳಿ ಗೊರಟಿನಹಳ್ಳ ಬಲುಗಣಿ ಒಂದಾನೆಯೆಂಬ ವೊಂಭತ್ತು ಗ್ರಾಮಂಗಳಿಂ ಸಾಸುಜನಾಲ್ವತ್ತಮೂಱು ಗದ್ಯಾಣಮುಂ ಮೂನೂಱು ಖಂಡುಗ ಭತ್ತಮುಂ ಬರ್ಪ್ಪ ಕ್ಷೇತ್ರ

೪೦ ಮಂ ಕುಳಖಂಡಿತಂ ಮಾಡಿ ಶಾಸನಾಂಕಿತಂ ಮಾಡಿ ಮತ್ತಂ ತಂನ ರಾಣಿವಾಸವಾದ ರಾಮಾದೇವಿಯರ್ಕ್ಕಟ್ಟಿಸಿದ ಗಂಧಕುಟಿಯ ಶಾಂತೀಶ್ವರರ ಶ್ರೀಕಾರ್ಯ್ಯಕ್ಕೆ ಮಾಗಡಬಯಲ ಸ್ಥಲದೊಳ್ವನೆ

೪೧ ರಡು ಗದ್ಯಾಣಮೆತ್ತಿ ಬರ್ಪ್ಪ ಕ್ಷೇತ್ರಮುಂ ಶಾಶನಾಂಕಿತಂ ಮಾಡಿ ಮತ್ತಂ ತಂಮ ಅನ್ವಯಪರಂ ಪರಂಪರೆಯ ಗುರುಗಳಾದ ಶ್ರೀಮದ ಕಲಂಕದೇವ ಮುನೀಶ್ವರರ್ಗ್ಗಾಹಾರದಾನ ಶಾಸ್ತ್ರದಾನಾ

೪೨ ರ್ತ್ಥವಾಗಿ ತಂಮಪ್ಪಾಜಿ ರಂಗಪ್ಪರಾಜೊಡೆಯರ್ದ್ಧಾರಾಪೂರ್ವ್ವಕವಾಗಿ ಕೊಟ್ಟ ಕಬ್ಬುರ್ಗಾ[ಹ] ಗೋಣವತ್ತಿಯೆಂಬೀ ಸ್ಥಲವೆರಡಱಿಂ ಪುಟ್ಟುವ ಅಱುವತ್ತೆರಡುವರೆ ಗದ್ಯಾಣದ ಕ್ಷೇತ್ರಕ್ಕಂ ಮ

೪೩ ತ್ತಂ ತಂನ ಪರಮಗುರುಗಳಾದ ಶ್ರೀಮದಕಲಂಕದೇವರ ಶಿಷ್ಯರಾದ ಭಟ್ಟಾಕಲಂಕದೇವ ಮುನೀಶ್ವರರ್ಗ್ಗೆ ಧಾರಾಪೂರ್ವ್ವಕವಾಗಿ ತಾಂ ಸಮರ್ಪ್ಪಿಸಿಕೊಟ್ಟ ಸೆಟ್ಟಿವಳ್ಳಿಯ ಗ್ರಾಮದೊಳ್ನ

೪೪ ಱ ನಾಲ್ವತ್ತೊಂದು ಗದ್ಯಾಣಮುಮೆಪ್ಪತ್ತಯ್ದು ಖಂಡುಗ ಭತ್ತಮುಂ ಬರ್ಪ್ಪ ಕ್ಷೇತ್ರಕ್ಕಂ ಮತ್ತಮಾ ಭಟ್ಟಾಕಲಂಕದೇವರ್ಗ್ಗೆ ಶಾಸ್ತ್ರೋಪ ದೇಶಂಗೆಯ್ದು ಜಿನಧರ್ಮ್ಮಪ್ರಭಾವಕರಾದ ವಿಜಯ

೪೫ ಮುನೀಶ್ವರಂಗೆ ಧಾರಾಪೂರ್ವ್ವಕವಾಗಿ ಕೊಟ್ಟ ಶೆಟ್ಟಿವಳ್ಳಿಯ ಗ್ರಾಮದೊಳಱುವತ್ತುಂ ಗದ್ಯಾಣಮೆತ್ತಿ ಬರ್ಪ್ಪ ಕ್ಷೇತ್ರಕ್ಕಂ ಚತುಸ್ಸೀಮೆಯೊಳ್ಮ್ರಕ್ಕೊಡೆಯ ಕಲ್ಲಂ೨ ನೆಡಿಸಿ ಸರ್ವ್ವಮಾನ್ಯವಾಗಿ ಸ

೪೬ ಮರ್ಪ್ಪಿಸಿ ಜಿನಶಾಸನಪ್ರಭಾವಕನಾಗಿ ನೆಗಳ್ತೆವಡೆದನಂತುಮಲ್ಲದೆಯುಂ ಮಲೆವರಿರಾಯಜಾಲವಿಲಯಾಶನಿ ಮೂಮ್ಮಡಿರಾಯರಾವುತಂ ಮಃಲಿ ಹುಲಿ ಯೆಂಟುದಂಡಿಗೆಯ ಮನ್ನೆಯ

೪೭ ಗಂಡನುದಾತ್ತ ರಾಘವಂ ಕಲಿ ಗಡಿಯಂಕಸಿಂಹ ಸರಿಮಾರ್ಗ್ಗಣ ಭೈರವನೆಂಬ ಸಾರ್ತ್ಥಕೋಜ್ವಲ೩ ಬಿರುದಂಗಳೊಪ್ಪಿದುವು ರಂಗನೃಪಾತ್ಮಜ ಘಂಟೆ ಭೂಪನಾ॥ [೮*] ಧುರಕಿದಿರಾಂತು.

---

೧. ಬಿಂದುವನ್ನು ಅತಿ ಚಿಕ್ಕದಾಗಿ ಬರೆಯಲಾಗಿದೆ.

೨. ಅದೆ.

೩. ಜ್ವಲ ಶಬ್ದವನ್ನು ಜ್ಲವ ಎಂದು ಕಂಡರಿಸಲಾಗಿದೆ. ಲಿಪಿಕಾರನು ಜ್ವ ಅಕ್ಷರವನ್ನು ಬಿಟ್ಟು ಅದರ ಸ್ಥಳದಲ್ಲಿ ಲ ಅಕ್ಷರವನ್ನು ಕಂಡರಿಸಿದ ಮೂಲಕ, ಜ್ವ ಅಕ್ಷರವನ್ನು ಕಂಡರಿಸಲು ಸ್ಥಳವಿಲ್ಲದಾಗಿ. ಜ್ವ ದಲ್ಲಿಯ ಜ ಅಕ್ಷರವನ್ನು ಲ ಅಕ್ಷರದ ಮೇಲ್ಭಾಗದಲ್ಲಿ ಮತ್ತು ವ ಅಕ್ಷರದ ಒತ್ತನ್ನು ಲ ಅಕ್ಷರದ ಕೆಳಭಾಗದಲ್ಲಿ ಕಂಡರಿಸಿದ್ದಾನೆ.

೪೮ ಮುಂದುವರಿದೇಱಿ ಕಾದಲ್ಲದೆ ಪಿಂದೆ ಮೆಟ್ಟ ವಾ ಧೊರೆಗಳ ಗಂಡನೆಂಬ
ಶರಣಾಗತ ಭೂಮಿಪಸೇವಕಾಶ್ರಿತರ್ಗ್ಗೆರೆದುವನೀವ ಸದ್ಗುಣಕರಂಡಕ
ನೆಂಬುದು ಸರ್ವ್ವದೇಶದೊಳ್ಪ್ರಿದೆಸೆದಿರ್ಪ್ಪುದೇ-

೪೯ ಮ [ರ] ರೆ ರಂಗಸ್ವಪಾತ್ಮಜ ಘಂಟೆಭೂಪನಾ।। [೯*] ಇಂತು ಸಕಲ
ಭುವನ ಪ್ರಸಿದ್ಧನಾದ ಘಂಟೇಂದ್ರ ಮಹಾರಾಜನ ಪರಮಗುರುವೆನಿ
ಸಿದ ಭಟ್ಟಾಕಲಂಕದೇವ ಮುನೀಶ್ವರನ ಗುರು । ಪರ-

೫೦ ಮಗುರು। ಪರಮೇಷ್ಟಿಗುರು! ಪರಾಪರಗುರುಗಳೊಳ್ದಲಾದ ಗುರು
ಸಂಪ್ರದಾಯ ಪ್ರಶಸ್ತಿಯೆಂತೆನೆ॥ ಶ್ರೀಮದವಿರತನತಸುತ್ರಾಮ ಕಿರೀ
ಟಾಗ್ರಖಚಿತಮಣಿಗಣ ಕಿರಣಸ್ತೋಮ-

೫೧ ದ್ವಿಗುಣಿತ ಪದನಖರಾಮಲ ಭಾಭಾಸಿತಾತನಂತ್ಯ ಜಿನೇಶಂ ॥ [೧೦*]
ಅಂತೆಸೆವಂತ್ಯಜಿನೇಶಂ ತಾಂ ತುರ್ಯ್ಯಸಮಾಂತ್ಯದೊಳ್ನಿತಾಂತವಿಶು
ದ್ಧಿಲಕಾಂತ ಗುಣಾಷ್ಟಕಮಯ ದೇಹಾ ತಾಳ್ದಿರೆ ಪರಮಮು-

೫೨ ಕ್ತಿಸತಿಯೊಳ್ನೆರೆದಂ ।। [೧೧*] ಅಂತು ವರ್ದ್ಧಮಾನ ತೀರ್ತ್ಥೇಶ್ವರಂ
ಪರಮ ಮುಕ್ತಿಗೆ ಸಂದಿಂ ಬಳಿಯ ಮನುಬದ್ಧಕೇವಲಿಗಳುಂ ಶ್ರುತ
ಕೇವಲಿಗಳುಂ ದಶಪೂರ್ವ್ವಧಾರಿಗಳುಮೇಕಾದಶಾಂಗಧರರು-

೫೩ ಂ ಪ್ರಥಮಾಂಗಧರರುಮೆಂಬ ಪಂಚವಿಧವಿಕಲ್ಪದಿನಿಪ್ಪತ್ತೆಣ್ಬರಾಚಾ
ರ್ಯ್ಯರ್ಪ್ಪಂಚಮಕಾಲಧರ್ಮ್ಮತೀರ್ತ್ಥಪ್ರವರ್ತ್ತಕರಾದರಲ್ಲಿಂ
ಬಳಿಯಂ।। ಪ್ರಥಮಾಂಗ ಪ್ರಥಮಾಂಶ ಪ್ರಥಿತಾಂಬು-

೫೪ ಧಿಮಥನದಕ್ಷಮತಿ ಮಂಥಾದ್ರಿಪ್ರಥನಂ ನಿರ್ವ್ಯಥನಂ ಚಿದ್ಗ್ರಥನು
ಸತ್ಕಥನಧಿಕಮನ್ಮಥಮಥನಂ॥ [೧೨*] ಎನಿಸಿದರ್ಹದ್ಬಲ್ಯಾ
ಚಾರ್ಯ್ಯರ ಕಾಲದೊಳ್ಪುಟ್ಟಿದ ನಾನಾಗಣಗಚ್ಛವಿಕಲ್ಪದೊಳ್ದೇ-

೫೫ ಶೀಗಣಮುಂ ಪುಸ್ತಕಗಚ್ಛಮೆಂಬ ಸಂಪ್ರದಾಯದೊಳ್ಕುಂಡಕುಂದಾ
ಚಾರ್ಯ್ಯರೆಂಬ ಮಹಾಮುನೀಶ್ವರರ್ನ್ನೆಗಳ್ದರವರ ಪ್ರಭಾವಮಂತೆನೆ।।
ಮುನಿದೊರ್ವ್ವಂ ಕುಂಡದೊಳ್ತನ್ಮನಿಯಱಿಯದ

೫೬ ವೊಲ್ಮದ್ಯಮಂ ತೀವಿ ನೋಡೀ ಮುನಿಕಳ್ಳಂ ತಂದನೀ ಗುಂಡಿಗೆಯೊಳಿ
ಸಲೊಡಂ ಮಂತ್ರಸಾಮರ್ತ್ಥದಿಂ ನೆಟ್ಟನೆ ನೋಡಲ್ಮೊಲ್ಲೆಲ್ಲವೂ
ವೆಂದನೆ ವಿರಚಿಸಿ ಸತ್ಕುಂಡ ಕುಂದಾಖ್ಯೆಯುಂ ತಾನನುವೋ-

೫೭ ದಂ ಬೆತ್ತು ಪೆತ್ತಂ ನರಪತಿಸಭೆಯೊಳ್ಕುಂಡ ಕುಂದಾರ್ಯವರ್ಯ್ಯಂ।।
[೧೩*] ಕ್ಷಮೆಗಂ ಸ್ವಕೀಯ ದಿವ್ಯಕ್ಷಮೆ ನಾಲ್ವೆರಳಧಿಕವೆಂದು
ತೋರ್ಪ್ಪವೊಲಂತಾ ಕ್ಷಮೆಯುಂ ಮೆಟ್ಟದೆ ನಡೆವಂ ಕ್ಷಮಾಮ-

೫೮ ಯಂ ಕುಂದ ಕುಂದ ಚಾರಣಮುನಿಪಂ॥ [೧೪*] ಮತ್ತಮಾ ಕುಂದ ಕುಂದಾಚಾರ್ಯ್ಯಾನ್ವಯದೊಳನೇಕಾಚಾರ್ಯ್ಯರ್ಪ್ಪೋರ್ಗಳಿಂ ಬಳಿಯಂ ಚಾರುಕೀರ್ತ್ತಿಪಂಡಿತ ದೇವರೆಂಬಾಚಾರ್ಯ್ಯರ್ನೆಗಳ್ದರ-

೫೯ ವರ ವಂಶ ಪ್ರಶಂಸೆಯೆಂತೆನೆ॥ ಮುಂಕೃತಯುಗಾದಿ ಯೊಳ್ಸಮಲಂ ಕೃತ ವಿಶ್ವಾವನೀತಲಂ ಕೃತಕರ್ಮ್ಮಾಹಂಕೃತಿ ಕೃಂತನಪಟು ಸರ್ಗ್ಗಂ ಕೃತಿ ಪುರುಷಾಗ್ರಗಣ್ಯನೂರ್ಜ್ಜಿತಪ್ರ-

೬೦ ಣ್ಯಂ॥ [೧೫*] ಎನಿಸಿದಾದಿಬ್ರಹ್ಮನ ಕುಮಾರನುಮಾದ್ಯಚಕ್ರಿಯು ಮಂತ್ರ್ಯಬ್ರಹ್ಮನುಂ ಪದಿನಾರನೆಯ ಮನುವುಂ ರಾಜರುಷಿಯುಮೆನಿಸಿದ ಭರತೇಶ್ವರನಿಂ ಸೃಷ್ಟ ಮಾದ ವಿಶಿಷ್ಟ ಜೈನಬ್ರಹ್ಮ-

೬೧ ವಂಶದೊಳ್ಬಾಲ್ಯದೊಳುಪಾಸಕಾಗಮಾಭ್ಯಾಸಮುಂ ಯೌವನದೊಳು ಚಿತಭೋಗಾನುಭವನಮುಂ ವಾರ್ಧ್ಧಕದೊಳ್ ಜಿನದೀಕ್ಷಾಶ್ರಯಣ ಮುಂ ತಮಗೆ ಕುಲವ್ರತಮಾಗಿ ನಿಲ್ಗೆ ಪಲಂಬರ್ಸ್ಸ-

೬೨ ಂದರಾ ವಂಶದೊಳೊರ್ವ್ವಂ ಪಂಡಿತದೇವನೆಂಬಂ ಬ್ರಾಹ್ಮಣೋತ್ತಮ ನಧಿಗತಸ್ವಪರ ಸಮಯರಾದ್ಧಾಂತಹೃದಯಂ ಸಕಲ ಲೌಕಿಕವೈದಿಕ ಕಲಾಚಾತುರೀಧುರಂಧರನುಮಾಗಿ ಸಹಜ ವೈರಾಗ್ಯಪರಾಯ.

೬೩ ಣಂ ಜಿನದೀಕ್ಷೆಯಂ ತಾಳ್ದಿ ನಿರತಿಚಾರಚಾರಿತ್ರದಿಂ ಚಾರುತರ ಕೀರ್ತಿಯಂ ಪಡೆದು ಚಾರುಕೀರ್ತ್ತಿ ಪಂಡಿತ ದೇವಾಚಾರ್ಯ್ಯರೆಂಬ ಪೆಸರಿಂದೆಸೆದು ಕರ್ನಾಟಸಿಂಹಾಸನಾಧೀಶ್ವರನೆನಿಸಿದ ಬಲ್ಲಾಳರಾಯ-

೬೪ ನಂ ಮೆಚ್ಚಿಸಿ ಜಿನಮಾರ್ಗ್ಗ ಪ್ರಭಾವತನಾಗಿರಲಾ ಕಾಲದೊಳ್ಪುಟ್ಟಿದು ತ್ಪಾತದಿಂ ನೆಲಂ ಬಾಯ್ಬಿಟ್ಟಿರಲದಂ ಪೂಳ್ವಮೆಂದು ಮಿಥ್ಯಾಮತಿಗಳ ನೇಕ ಹಿಂಸಾಕರ್ಮ್ಮಗೆಯ್ಯಲದಕ್ಕದು ಪೆರ್ಚ್ಚಿ ಪಾತಾಳಂ ಬರಂ ಬಾ-

೬೫ ಯ್ವಿಟ್ಟು ರಾಯನಂ ತನಗೆ ಬಲಿಗೆಯ್ಯಲ್ವೇಳ್ಕುಮೆನಲದಂ ಪಂಡಿತ ದೇವಾಚಾರ್ಯ್ಯರ್ಕ್ಕಂಡು ಕಾರುಣ್ಯದಿಂ ಜಿನಶಾಸನ ದೇವತಾರಾಧನಂ ಗೆಯ್ದು॥ ಘೀಷ್ಮತರ ಜೀವವಧೆಯಿಂ ಶ್ಲೇಷ್ಮಾತಕ ಮಾತ್ರಮ ಪ್ಪೊಡಂ ಪೂ-

೬೬ ಳದುದಂ ಕೂಷ್ಮಾಂಡಫಲದಿನೊಂದಱಿನೂಷ್ಮಬಿಲಂಬೂಳ್ದ ನರರೆ ಪಂಡಿತರಾಯಂ॥ [೧೬*] ತಿಂಬೆಂ ರಾಯನೆಂದು ನೆಲಂ ಬಾಯ್ವಿಡೆ ತಂನ ಮಂತ್ರಜಪ ವಿಧಿಯಿನದಂ ಕುಂಬಳಕಾಯಿಂ ಪೂಳ್ದು ಜನಂ-

೧. 'ಳೂ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಕಂಡರಿಸಲಾಗಿದೆ.

೬೭ ಒಡೆದೆಸಕಕ್ಕೆ ಪಂಡಿತಾರ್ಯ್ಯನೇ ನೋಂತಂ॥ [೧೭*] ಇಂತು ನೆಲ
ವಾಯಂ ಪೂಳ್ದು ರಾಯನಂ ರಕ್ಷಿಸಿ ಶ್ರೀಮದ್ರಾಯರಾಜಗುರು
ಮಂಡಲಾಚಾರ್ಯನುಂ ಮಹಾವಾದ ವಾದೀಶ್ವರನುಂ ರಾಯವಾದಿ
ಪಿತಾಮ–

೬೮ ಹನುಂ। ಸಕಲ ವಿದ್ವಜ್ಜನ ಚಕ್ರವರ್ತಿಯುಃ। ಬಲ್ಲಾಳರಾಯ ಜೀವ
ರಕ್ಷಾಪಾಲಗಿಕನುಂ। ದೇಶೀಗಣಾಗ್ರಗಣ್ಯನುಮೆಂಬ ಬಿರುದಾವಲಿಯಂ
ಪಡೆದು ಕೀರ್ತ್ತಿವಡೆದು ನಡೆದನಾತನ ಶಿಷ್ಯಪರಂಪರೆಯೊಳ್

೬೯ ಶ್ರುತ ಕೀರ್ತಿದೇವಸತ್ಯೂರ್ಜ್ಜಿತಕೀರ್ತಿತನಾತ್ಮಶಿಷ್ಯನಿಂದಗ್ಗಳನಿಂದತಿ
ಶಯಿತಕಾವ್ಯಮಾರ್ಗ್ಗದೆ ನುತಚಂದ್ರಪ್ರಭಪುರಾಣಮಂ ಪೇಳಿಸಿದಂ
[೧೮*] ಆತನ ಶಿಷ್ಯನಪ್ಪ ವಿಜಯಕೀರ್ತಿ [ಮುನೀಶ್ವರನ ಪ್ರ]
ಭಾವಮೆಂತೆನೆ

೭೦ ವರ ವಿಜಯಕೀರ್ತಿ ಯೋಗಿಶ್ವರನೇಳ್ಗೆಗೆ ಮೆಚ್ಚಿ ತಂನ ವೈದಿಕ
ಮತಮಂ ಪರಿಹರಿಸಿ ಜೈನ ಮತಮಂ ಧರಿಸಿದ ನಿರದಭಯ ಚಂದ್ರ
ಸೂರಿ ವರೇಣ್ಯಂ ॥ [೧೯*] ಮತ್ತಮಾ ವಿಜಯಕೀರ್ತ್ತಿ ಮುನೀಶ್ವರಂ
ಸಂಗೀತ ಪುರಾ—

೭೧ ಧಿಪನಪ್ಪಿಂದ್ರ ಭೂಪಾಲಂಗೆ ಸಾಮ್ರಾಜ್ಯಪ್ರದನಾಗಿ ಪ್ರಸಿದ್ಧಿವೆತ್ತ
ನಾತನ ಶಿಷ್ಯಂ ಶ್ರುತಕೀರ್ತ್ತಿ ದೇವನಖಿಲ ಶ್ರುತವಿಶ್ರುತನಾಗಿ ನೆಗಳ್ತೆ
ವಡೆದಾತ್ಮ ಶಿಷ್ಯನಪ್ಪ ಸಂಗಿರಾಯ [ಭೂಪಾಲನಂ] ಪ್ರತಿಷ್ಠಿ–

೭೨ ಸಿದನಾತನ ಶಿಷ್ಯಂ ವಿಜಯಕೀರ್ತ್ತಿ ಮುನೀಶ್ವರನಾತ್ಮೀಯ ಶಿಷ್ಯನಾದ
ದೇವರಾಯ ಭೂಪಾಲಂಗೆ ಪಶ್ಚಿಮ ಸಮುದ್ರ ನಿಕಟದೊಳ್ಬಟ್ಟಕಳ
ಮೆಂಬ ಪಟ್ಟಣಮನನೇಕ ವಾಸ್ತು [ಲಕ್ಷಣ ಲಕ್ಷಿತ] ಮಾಗಿ ಕಟ್ಟ–

೭೩ ಸಿ ಲಬ್ಧ ಪ್ರತಿಷ್ಠನಾದನಾತನ ಶಿಷ್ಯರ ಕಲಂಕ ಮುನೀಶ್ವರನುಂ
ಚಂದ್ರಪ್ರಭ ಮುನೀಶ್ವರನು ಮೆಂಬಿರ್ವ್ವರುಂ ಕಲಿಯುಗದೊಳ್ಚಾರಣ
ಯುಗಲದಂತೆ ನಿರತಿಚಾರ ಚಾರಿತ್ರ [ರಾಗಿ ಶ್ವೇತಪುರದೊ]ಳ್ತಿಂಮ–

೭೪ ಭೂಪಾಲನುಂ ನರಸಿಂಹ ಭೂಪಾಲನುಮೆಂಬಿರ್ವ್ವರುಂ ಶಿಷ್ಯರ್ಗ್ಗಂ
ಪರಮ-ಧರ್ಮ್ಮರಹಸ್ಯೋಪದೇಶಂಗೆಯ್ದು ಚಂದ್ರಸೂರ್ಯ್ಯರಂತೆ
ಜಿನ ಮಾರ್ಗ್ಗಮಂ ಬೆಳಗಿದರವ [ರೊಳಕಲಂಕ ಮುನೀ]ಶ್ವರ–

೭೫ ನ ಶಿಷ್ಯ ವಿಜಯಕೀರ್ತ್ತಿ ಮುನೀಶ್ವರಂ ಸಕಲದೇಶದೊಳಂ ಸದ್ಧರ್ಮ್ಮ
ಪ್ರಭಾವಕನಾದನಾತನ ಶಿಷ್ಯನಕಲಂಕದೇವ ಯೋಗೀಂದ್ರಂ ಸ್ವಮತ
ಪರಮತ ಪ್ರಸಿದ್ಧ ಸಕಲ ಭೂಪಾಲ [ಪೂಜಿತ] ಪಾದಾರವಿಂದ–

---

೧. 'ಲ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಕಂಡರಿಸಲಾಗಿದೆ.

೨೬ ನಾಗಿ ಜಿನಶಾಸನ ಪ್ರಭಾವಕನಾದನೆಂತೆನೆ ॥ ಲೌಕಿಕ ಕಲಾವಿದಗ್ಧಂ ಲೋಕೋತ್ತರ ನಿರತಿಶಯ ಚರಿತ್ರಸ್ನಿಗ್ಧಂ ವ್ಯಾಕೀರ್ಣ್ಣಯಶೋದಿಗ್ಧಂ ಶ್ರೀಕರ ಜಿನಗದಿತ ತತ್ವಗತ ಸಂದಿಗ್ಧಂ ॥ [೨೦*] [ಮತ್ತಂ ಶಿಷ್ಯಾನುಗ್ರ] ಹಗಣ–

೨೭ ಪೋಷಣ ಪ್ರವಚನ ವಾತ್ಸಲ್ಯಾದಿ ಗುಣಂಗಳಿನಾಚಾರ್ಯ್ಯ ಪದವಿಧು ರಂಧರನಾಗಿ ಪ್ರಸಿದ್ಧಿವೆತ್ತಂ ॥ ಆತನ ಶಿಷ್ಯಂ ಸಕಲಕಲಾತತ ವೈದುಷ್ಯನಖಿಲಗುಣ ಗಣ ಭೂಷ್ಯಂ [ಸಾತಿಶಯ ಚರಿತ]ಪೋಷ್ಯಂ

೨೮ ಖ್ಯಾತಂ ಭಟ್ಟಾಕಲಂಕನನುಪಮ ಭಾಷ್ಯಂ ॥ [೨೧*] ಶ್ರೀ ರಂಗ ರಾಜ ನೃಪತಿ ಪ್ರೇರಣೆಯಿಂ ವಿಜಯ ಮುನಿಪನುಪದೇಶನದಿಂ ಸಾರ ತ್ರಿತಯಮುಮನಲಂಕಾರತ್ರಿತಯಮುಮನೋದಿ [ಜಸಮಂ ಪಡೆ] ದಂ ॥ [೨೨*]ಸ್ವ–

೨೯ ಪರಮತ ಗ್ರಂಥಂಗಳೊಳಪರಿಮಿತಂ ಪಠನ ಪಾಠನಾಭ್ಯಾಸನದಿಂ ನೃಪ ಸಭೆಯೊಳ್ಬುಧ ಸಭೆಯೊಳ್ ಸುಪರೀಕ್ಷಕ ಹೃದಯಹಾರಿಯೆನಿಸಿದನಿಳೆ ಯೊಳ್ ॥ [೨೩*] ವರ [ಶಬ್ದಾಗಮ ತರ್ಕ್ಕ] ನಾಟಕ–

೩೦ ಮಹಾಲಂಕಾರ ಸತ್ಸಂಹಿತಾ ಭರತ ಜ್ಯೋತಿಷಮಂತ್ರ ತಂತ್ರ ವಿಧಿ ಶಿಲ್ಪನ್ಯಾಯ ವೇದಸ್ಮೃತಿಸ್ಫುರದಧ್ಯಾತ್ಮ ಪುರಾಣವೈದ್ಯ ಗಣಿತಧ್ಯಾ ನಾದಿ ಶಾಸ್ತ್ರಾಬ್ಧಿ ಚಂದಿರನೆಂದು [ವ್ವರೆ ಕೂ]ರ್ತ್ತು ಕೀರ್ತ್ತಿಸು-

೩೧ ವುದೀ ಭಟ್ಟಾಕಲಂಕಾರ್ಯ್ಯನಂ ॥ [೨೪*] ಶ್ರೀಮಜ್ಜೈನ ಮತಾಬ್ಧಿ ಸೋಮನೆನಿಪೀ ಘಂಟೇಂದ್ರನುಂ ಸದ್ಗುಣ ಪ್ರೇಮಶ್ರೀ ಯಕಲಂಕ ದೇವ ಮುನಿಯುಂ ತಚ್ಛಿಷ್ಯನುದ್ಯದ್ಬುಧ ಸ್ತೋಮಾರಾಧಿತ ಪಾ–

೩೨ ದ ಪದ್ಮನೆನಿಪೀ ಭಟ್ಟಾಕಲಂಕಾರ್ಯ್ಯನುಂ ಕ್ಷೇಮಂ ಬಾಳ್ಕೆ ಧರಿತ್ರಿಗಕ್ಕೆ ವಿಜಯಂ ಭದ್ರಂ ಶುಭಂ ಮಂಗಲಂ ॥ [೨೫*] ವರಸಂಸ್ಕೃತ ಕರ್ನಾಟಕವೆರಡಱೊಳಂ ಗದ್ಯ ಪದ್ಯ ವಾಙ್ಮಯ ಮಾಲಾ–

೩೩ ವಿರಚನೆಯಿಂದೀ ಶಾಸನವೆರಡಂ ಭಟ್ಟಾಕಲಂಕಯತಿ ಬರಯಿಸಿದಂ ॥ [೨೬*] ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೫೧೫ನೆಯ ನಂದನ ಸಂವತ್ಸರದ ಮಾಘ ಶು ೫ ಲ್ಲೂ ಶ್ರೀ–

೩೪ ಮದ್ಭಟ್ಟಾಕಲಂಕ ದೇವರುಗಳು ಬರಸಿ ಸಂಪೂರ್ಣ್ಣಂ ಮಾಡಿಸಿದ ಜಿನಶಾಸನಕ್ಕೆ ಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ [॥*]

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಏಳ್ಗೆ 1918–1926

(ಸರ್ಕಾರಿ ಸೇವೆ ಮತ್ತು ವಿದ್ಯಾಭ್ಯಾಸ ವಲಯಗಳ ಹಿನ್ನೆಲೆಯಲ್ಲಿ)

ಇಂಗ್ಲಿಷ್ ಮೂಲ : ಎಸ್. ಚಂದ್ರಶೇಖರ
ಅನುವಾದ : ಬಸವರಾಜ ಕಲ್ಗುಡಿ

ಕರ್ನಾಟಕ ಜನಸಂಖ್ಯೆಯ ಬಹು ಹೆಚ್ಚಿನ ಭಾಗವು (97%) ಹಿಂದುಳಿದ ವರ್ಗಗಳದೇ ಆಗಿತ್ತು. ಬ್ರಾಹ್ಮಣೇತರರೆಲ್ಲರೂ ಹಿಂದುಳಿದ ವರ್ಗಗಳಿಗೆ ಸೇರಿದ್ದವರೆಂದು ಭಾವಿಸಲ್ಪಟ್ಟಿತ್ತು. ಸಾಮಾಜಿಕವಾಗಿ ಹಾಗೂ ಸರ್ಕಾರಿ, ವಿದ್ಯಾಭ್ಯಾಸ ವಲಯಗಳಲ್ಲಿ ಅವರಿಗೆ ಇದ್ದಂತಹ ಹೀನಸ್ಥಿತಿಯು ಸಾಮಾನ್ಯವಾಗಿ ಅವರನ್ನು ಹಿಂದುಳಿದ ವರ್ಗಗಳ ಗುಂಪಿಗೆ ಸೇರಿಸಲು ಮುಖ್ಯ ಕಾರಣವಾಗಿತ್ತು. ಹರಿಜನರ ಸ್ಥಿತಿಯಂತೂ ಉಳಿದ ವರ್ಗಗಳ ಹಿಡಿತದಲ್ಲಿ ಜರ್ಝರಿತಗೊಂಡಿತ್ತು. ಬಡತನ ಹಾಗೂ ಆಡಳಿತ ವರ್ಗದ ನಿರ್ಲಕ್ಷ್ಯ ಮತ್ತು ಉದಾಸೀನತೆಯಿಂದಾಗಿ ಈ ವರ್ಗವು ಬಡತನದ ರೇಖೆಯಲ್ಲಿ ಇದ್ದುದನ್ನು ಇಲ್ಲಿ ಗಮನಿಸಬಹುದು.

ಈ ಪ್ರಬಂಧದಲ್ಲಿ-ಹಿಂದುಳಿದ ವರ್ಗಗಳು ತಮ್ಮ ಏಳ್ಗೆಗಾಗಿ ಮಾಡಿದ ಪ್ರಯತ್ನಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದೇನೆ. ಆಡಳಿತ ವರ್ಗ ಅಥವಾ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕೆಲವು ಕ್ರಮಗಳು ಹಾಗೂ ಅವುಗಳ ಪರಿಣಾಮಗಳನ್ನು ಕುರಿತ ಕೆಲವು ವಿವರಗಳನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದೆ. ಈ ವಿಶ್ಲೇಷಣೆಗೆ ಅನೇಕ ಮೂಲ ಸಾಮಗ್ರಿಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಮೈಸೂರಿನ ಆಡಳಿತದ ಬಗ್ಗೆ ಇರುವ ವರದಿಗಳು ; (Reports on the administration of Mysore) ; ಪ್ರಜಾಪ್ರತಿನಿಧಿ ಸಭೆಯ ಹಾಗೂ ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳ ವಿವರಗಳು (Proceedings of the Representative Assembly and Legislative Council) ; ಸಾರ್ವಜನಿಕ ವಿದ್ಯಾಭ್ಯಾಸ ಇಲಾಖೆಯ ಕಾರ್ಯಕಲಾಪಗಳ ಬಗ್ಗೆ ಬಂದ ವರದಿಗಳು (Reports on the working of the Department of Public Instruction) ; ಸರಕಾರದ ವ್ಯವಹಾರಗಳ ಬಗ್ಗೆ ಇರುವ ವಿವರಗಳು ಹಾಗೂ ಮಹಾರಾಜರ ಭಾಷಣಗಳು — ಈ ಎಲ್ಲ ಮೂಲ ಸಾಮಗ್ರಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಈ

ಮೂಲ ಸಾಮಗ್ರಿಗಳ ಜೊತೆಗೆ, ಇತ್ತೀಚಿನವರೆಗೆ ಪ್ರಕಟಗೊಂಡ ಉಳಿದ ಆಕರಗಳನ್ನೂ ಸಹ ನೀಡಲಾಗಿದೆ.

ದುರ್ಬಲ ವರ್ಗಗಳ ಏಳ್ಗೆಗೋಸ್ಕರ ಮೈಸೂರು ಸರ್ಕಾರ ಕೆಲವು ಯೋಜನೆಗಳನ್ನು ಹಾಕಿಕೊಂಡಿತ್ತೇನೋ ನಿಜ. ಆದರೆ ಇವೆಲ್ಲವೂ ಬಹುಪಾಲು ಹಾಳೆಗಳ ಮೇಲೆಯೇ ಉಳಿದಿದ್ದವು. ವಿದ್ಯಾಭ್ಯಾಸ ಮತ್ತು ಸರ್ಕಾರಿ ಕೆಲಸಗಳಲ್ಲಿ ಮುಖ್ಯವಾಗಿ ಹಿಂದುಳಿದ ವರ್ಗಗಳನ್ನು ಕಡೆಗಣಿಸಲಾಗಿತ್ತು. ಇದಕ್ಕೆ ಕಾರಣ ಈ ವಲಯಗಳು ಮುಂದುವರಿದ ವರ್ಗಗಳ ಹಿತಾಸಕ್ತಿಯ ಮುಖ್ಯ ಕ್ಷೇತ್ರವಾಗಿಯೇ ಪರಿಣಮಿಸಿದ್ದವು. ಹಿಂದುಳಿದವರಿಗೆ ವಿದ್ಯಾಭ್ಯಾಸ ದಕ್ಕದೇ ಇರಲು ಅವರ ಆರ್ಥಿಕ ಸ್ಥಿತಿಯೂ ಒಂದು ಮುಖ್ಯ ಕಾರಣವಾಗಿತ್ತು. ಹಿಂದುಳಿದ ವರ್ಗಗಳು ಬಹು ಸಂಖ್ಯೆಯಲ್ಲಿ ಇದ್ದ ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಸಂಸ್ಥೆಗಳ ಅನುಕೂಲವಿರಲಿಲ್ಲ.

ಆದರೆ ಈ ಶತಮಾನದ ಆರಂಭದಲ್ಲಿ ಇವರಲ್ಲಿ ಜಾಗೃತಗೊಂಡ ಎಚ್ಚರವೊಂದು ಇವರನ್ನು ಜಾತಿಯ ಆಧಾರದ ಮೇಲೆ ಗುಂಪುಗಳಾಗುವದನ್ನು ಪ್ರಚೋದಿಸಿತು. ತಮ್ಮ ಅಸ್ತಿತ್ವವನ್ನು ಬ್ರಾಹ್ಮಣೇತರ ವರ್ಗಗಳಾಗಿಯೇ ಇವು ರೂಪಿಸಿಕೊಂಡವು. ಇಂತಹ ಗುಂಪುಗಳಲ್ಲಿ ಮುಖ್ಯವಾದವುಗಳು ; 1905ರಲ್ಲಿ ಪ್ರಾರಂಭವಾದ ವೀರಶೈವ ಮಹಾಸಭೆ, 1906ರಲ್ಲಿ ಪ್ರಾರಂಭವಾದ ಒಕ್ಕಲಿಗರ ಸಂಘ, ಆದಿ ದ್ರಾವಿಡ ಅಭಿವೃದ್ಧಿ ಸಂಘ, ಕುರುಬರ ಸಂಘ ಹಾಗೂ ಕೇಂದ್ರ ಮುಸ್ಲಿಮರ ಸಂಘ ಮುಂತಾದವುಗಳು. ಸರ್ಕಾರಿ ಸೇವೆ ಮತ್ತು ವಿದ್ಯಾಭ್ಯಾಸ ಇಲಾಖೆಯಲ್ಲಿ ಬಹುತೇಕವಾಗಿ ಇದ್ದಂತಹ ಬ್ರಾಹ್ಮಣರ ಹಿಡಿತವನ್ನು ವಿರೋಧಿಸಿ ಈ ಸಂಘಗಳು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದವು. ತಮಗೆ ಆದ ಅನ್ಯಾಯವನ್ನು ಪರಿಹಾರ ಮಾಡಲು ಇವರ ಪ್ರತಿನಿಧಿಗಳು 1918ರಲ್ಲಿ ಮಹಾರಾಜರನ್ನು ಭೆಟ್ಟಿಮಾಡಿ ಮನವಿಯೊಂದನ್ನು ಸಲ್ಲಿಸಿದರು. ಮಹಾರಾಜರು ಇವರಿಗಾಗಿಯೇ, ವಿಶೇಷ ಸವಲತ್ತುಗಳನ್ನು ಒದಗಿಸುವ ಭರವಸೆಗಳನ್ನಿತ್ತರು.[1]

ಮೈಸೂರು ಸಂಸ್ಥಾನದ ಆಡಳಿತವ್ಯವಸ್ಥೆಯಲ್ಲಿ ಬ್ರಾಹ್ಮಣ ವರ್ಗಕ್ಕೆ ಇದ್ದಂತಹ ಪಾರಂಪಾರಿಕ ಹಿಡಿತವೊಂದಕ್ಕೆ ಈ ಚಳುವಳಿಯ ಪ್ರಾರಂಭ ಪರಿಣಾಮ ಮಾಡದೇ ಇರಲಿಲ್ಲ. 1881 ರಿಂದ ಮೈಸೂರು ಸಂಸ್ಥಾನದ ಮುಖ್ಯ ಸೂತ್ರಧಾರಿಗಳಾಗಿದ್ದ ದಿವಾನರೆಲ್ಲರೂ ಈ ಮೇಲು ವರ್ಗದಿಂದಲೇ ಬಂದವರಾಗಿದ್ದರು. ಎಲ್ಲ ಮುಖ್ಯ ಸ್ಥಾನಗಳೂ ಇವರಿಂದಲೇ ತುಂಬಿಹೋಗಿದ್ದವು. ದಕ್ಷರಾದ ಆಡಳಿತಗಾರರು ಬ್ರಾಹ್ಮಣೇತರರಲ್ಲಿ ಇಲ್ಲವೆನ್ನುವದೇ ಇವರು ಕೊಡುವ ಕುಂಟು ನೆಪವೂ ಕೂಡ ಆಗಿತ್ತು.

ತಮಗೆ ಸಿಗಬೇಕಾದ ಸಮರ್ಪಕ ರೀತಿಯ ಅಧಿಕಾರ ಮತ್ತು ಗೌರವದ ಬಗ್ಗೆ ಹಿಂದುಳಿದ ವರ್ಗಗಳ ಪ್ರತಿನಿಧಿಗಳು ಒಗ್ಗಟ್ಟಾದ ಪ್ರಯತ್ನವನ್ನು ನಡೆಸಿದರು.

1916ರಲ್ಲಿ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸಕ್ಕಾಗಿ ಒಂದು ಲಕ್ಷ ರೂಪಾಯಿಗಳ ಮೊತ್ತವನ್ನು ತೆಗೆದಿಡುವ ನಿರ್ಣಯವನ್ನು ಇವರಲ್ಲಿಯ ಮುಖ್ಯಸ್ಥರೊಬ್ಬರು ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಿದರು. ಆದರೆ ಈ ನಿರ್ಣಯವನ್ನು ಚರ್ಚೆಗೆ ತರುವ ಅವಕಾಶವನ್ನು ಅಧ್ಯಕ್ಷರಾಗಿದ್ದ ದಿವಾನರು ಮಾಡಿಕೊಡಲಿಲ್ಲ. ಆದರೆ ಈ ನಿರ್ಣಯದ ಹಿಂದಿದ್ದ ಒಳ್ಳೆಯ ಉದ್ದೇಶವನ್ನು ಅರಿತ ಮಹಾರಾಜರು ಈ ಮೊತ್ತವನ್ನು ತೆಗೆದಿಡಲು ಒಪ್ಪಿದರು.[2] ಇಲ್ಲಿಂದ ಮುಂದೆ ಹಿಂದುಳಿದ ವರ್ಗಗಳ ಧ್ವನಿಯೊಂದರ ಬೆಳವಣಿಗೆಗಾಗಿಯೇ ಬ್ರಾಹ್ಮಣೇತರರ ರಾಜಕೀಯ ಸಂಸ್ಥೆಯೊಂದು 1917ರಲ್ಲಿ 'ಪ್ರಜಾಮಿತ್ರ ಮಂಡಲಿ' ಎನ್ನುವ ಹೆಸರಿನಲ್ಲಿ ಸ್ಥಾಪಿತವಾಯಿತು.

ಸ್ಕಾಲರ್‌ಶಿಪ್ ಮತ್ತು ಫೀ ರಿಯಾಯಿತಿಯ ಸಂದರ್ಭಗಳಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷ ಸವಲತ್ತುಗಳನ್ನು ಕೊಡಲಾಯಿತು. ಕೆಲಸದ ನೇಮಕಾತಿಯ ಸಂದರ್ಭದಲ್ಲೂ ಈ ವರ್ಗಗಳಿಗೆ ಆದ್ಯತೆ ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಲಾಯಿತು. ಹಿಂದುಳಿದ ವರ್ಗಗಳ ಒತ್ತಾಯಗಳು ಬೆಳೆದ ಹಾಗೆಯೇ ಇವರಿಗೆ ಅಧಿಕ ಪ್ರಾತಿನಿಧ್ಯವನ್ನು ಕೊಡಬೇಕೆನ್ನುವ ವಿಚಾರವನ್ನು ತೀರ್ಮಾನಿಸಲು ಒಂದು ಸಮಿತಿಯನ್ನು ರಚಿಸಲು ಮಹಾರಾಜರು ಒಪ್ಪಿದರು.

ಮಹಾರಾಜರ ಈ ಒಪ್ಪಿಗೆಗೆ ವಿರೋಧ ಮನೋಭಾವವನ್ನು ಹೊಂದಿದ್ದ ದಿವಾನ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು.[3] 1918ರಲ್ಲಿ ಕಾಂತರಾಜ್ ಅರಸರನ್ನು ದಿವಾನ ಹುದ್ದೆಗೆ ನೇಮಕ ಮಾಡಲಾಯಿತು. ಇವರು ಈ ಹುದ್ದೆಗೆ ಬಂದ ಮೊದಲನೆಯ ಬ್ರಾಹ್ಮಣೇತರ ದಿವಾನರು.

1918 ಆಗಸ್ಟ್ ತಿಂಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯವನ್ನು ಕುರಿತ ಹಾಗೆ ವಿಚಾರಣೆ ಮಾಡಲು ಸಮಿತಿಯೊಂದು ನೇಮಕವಾಯಿತು. ಇದಕ್ಕೆ ನ್ಯಾಯಾಧೀಶ ಮೆಸ್ಲಿ ಮಿಲ್ಲರ್‌ನನ್ನು ಅಧ್ಯಕ್ಷನನ್ನಾಗಿ ಮಾಡಿತ್ತು. ಈ ಸಮಿತಿಯು 1919ರಲ್ಲಿ ನಿರ್ಣಯವೊಂದನ್ನು ಕೊಟ್ಟಿತು. ಇದರ ಪ್ರಕಾರ–ಬ್ರಾಹ್ಮಣರನ್ನು ಬಿಟ್ಟು ಸರ್ಕಾರಿ ಸೇವೆಯಲ್ಲಿ ಸಾಕಷ್ಟು ಪ್ರಾತಿನಿಧ್ಯಪಡೆಯದೇ ಇರುವ ಉಳಿದೆಲ್ಲ ಬ್ರಾಹ್ಮಣೇತರರನ್ನು ಹಿಂದುಳಿದ ವರ್ಗಗಳು ಎಂದು ವ್ಯಾಖ್ಯಾನಿಸಲಾಯಿತು. ಈ ವರ್ಗಗಳಿಗೆ ವಿದ್ಯೆಯ ಸವಲತ್ತು ಹಾಗೂ ಸರ್ಕಾರಿ ಸೇವೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಶಿಫಾರಸ್ಸನ್ನೂ ಸಹ ಈ ಸಮಿತಿಯು ಮಾಡಿತು. 1921 ಮೇ ತಿಂಗಳಲ್ಲಿ ಸರ್ಕಾರ ಈ ನಿರ್ಣಯವನ್ನು ಒಪ್ಪಿ ಆಜ್ಞೆಗಳನ್ನು ಹೊರಡಿಸಿತು.[4]

ವಿದ್ಯಾಭ್ಯಾಸದ ಸೌಲಭ್ಯಗಳು

ಹಿಂದುಳಿದ ವರ್ಗಗಳಿಗಾಗಿ ಅನೇಕ ವಿದ್ಯಾಸಂಸ್ಥೆಗಳು ತೆರೆಯಲ್ಪಟ್ಟವು ನಿಜ. ಆದರೆ ಹರಿಜನ ವಿದ್ಯಾರ್ಥಿಗಳಿಗಾಗಿ ತೆರೆದ ಶಾಲೆಗಳಿಗೆ ಕಲಿಸುವ ಶಿಕ್ಷಕರೇ ಸಿಗುವುದು

ಕಷ್ಟವಾಯಿತು. ಹರಿಜನರ ಶಾಲೆಗಳಲ್ಲಿ ಕಲಿಸುವವರಿಗೆ ಹೆಚ್ಚು ಸಂಬಳವನ್ನು ಕೊಡಬೇಕೆಂಬ ಒತ್ತಾಯವನ್ನು ಸರಕಾರಕ್ಕೆ ಮಾಡಲಾಯಿತು.[5] ಮಹಾರಾಜರು ಮತ್ತುದಿವಾನರಷ್ಟೇ ಅಲ್ಲದೆ ಯುವರಾಜರು ಹಾಗೂ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ಲರಾಗಿದ್ದ ಸಿ. ಆರ್. ರೆಡ್ಡಿಯವರೂ ಸಹ ಹಿಂದುಳಿದ ವರ್ಗಗಳ ಬಗ್ಗೆ ಕಾಳಜಿ ತೋರಿಸುವವರೇ ಆಗಿದ್ದರು. 1919ರಲ್ಲಿ ಮಹಾರಾಜರು ಎಲ್ಲ ಶಾಲೆಗಳಲ್ಲೂ ಪಂಚಮರ ಪ್ರವೇಶಕ್ಕೆ ಅವಕಾಶಮಾಡಿಕೊಟ್ಟರು. ಪಂಚಮರು ಹಾಗೂ ಉಳಿದ ದುರ್ಬಲ ವರ್ಗಗಳ ಜೊತೆಗೆ ಶಾಲೆಯಲ್ಲಿ ಕುಳಿತುಕೊಂಡು, ಹಿಂದುಳಿದ ವರ್ಗಗಳ ಶಿಕ್ಷಕರಿಂದ ಪಾಠವನ್ನು ಕೇಳಬೇಕಾದ ಪರಿಸ್ಥಿತಿಯಲ್ಲಿ ಮೇಲ್ವರ್ಗದ ವಿದ್ಯಾರ್ಥಿಗಳು ಅಪವಿತ್ರಗೊಳ್ಳುವರು ಎನ್ನುವ ನೆಪವನ್ನು ಹೂಡಿ ಮಿಲ್ಲರ್ ಕಮಿಟಿಯ ವರದಿಯನ್ನೇ ಹಿಂತೆಗೆದುಕೊಳ್ಳಲು ಒಬ್ಬ ಸಂಪ್ರದಾಯಸ್ಥ ಮುಖ್ಯಸ್ಥನೊಬ್ಬ ಒತ್ತಾಯಿಸಿದ[6]. ಹರಿಜನರಿಗೆ ಆದ ಅವಕಾಶಗಳ ವಿರುದ್ಧ ಹಿಂದುಳಿದ ವರ್ಗಗಳ ಉಳಿದ ಜಾತಿಯವರೂ ಸಹ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಆದರೆ ಸರಕಾರ ಈ ಬಗ್ಗೆ ದೃಡನಿರ್ಧಾರ ತೆಗೆದುಕೊಂಡಿತು. ಮಹಾರಾಜರಂತೂ 'ಹರಿಜನರು ನನ್ನ ಪ್ರಜೆಗಳಲ್ಲವೇ ?' ಎಂದು ಪ್ರಶ್ನಿಸಿ ಇವರ ಪರವಾಗಿ ತಮ್ಮ ನಿಲುವನ್ನು ವ್ಯಕ್ತ ಮಾಡಿದರು. ಈ ಕಾರಣಗಳಿಂದ ಎದ್ದಂತಹ ವಿರೋಧವನ್ನು ಸಾಕಷ್ಟು ಕಡಿಮೆ ಮಾಡಲಾಯಿತು.

ಈ ಕಾಲದಲ್ಲೇ, ವಿಶೇಷ ಸ್ಕಾಲರ್‌ಷಿಪ್ಪು, ಪುಸ್ತಕ, ಹಾಗೂ ಸ್ಲೇಟುಗಳನ್ನೂ ಉಚಿತವಾಗಿ ಹಂಚುವದು, ಶಾಲೆಗಳು ಮತ್ತು ಹಾಸ್ಟೆಲ್ಲುಗಳಿಗೆ ಉಚಿತ ಕಟ್ಟಡಗಳನ್ನು ಕೊಡುವದು–ಹೀಗೆ ಹರಿಜನರ ಓದಿಗಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಯಿತು. ಮಕ್ಕಳನ್ನೂ ಶಾಲೆಗೆ ಕಳುಹಿಸಲೆಂದು ಹರಿಜನರ ತಂದೆ ತಾಯಿಗಳಿಗೆ ಹಣವನ್ನೂ ಕೂಡ ಸರಕಾರ ಕೊಡುವ ವ್ಯವಸ್ಥೆ ಮಾಡಿತು (Parental Allowance). ಅಲ್ಲದೇ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಪಂಚಮರ ಉಚಿತ ವಿದ್ಯಾರ್ಥಿ ನಿಲಯಗಳನ್ನು ತೆರೆಯಲಾಯಿತು. ಎಸ್. ಎಸ್. ಎಲ್. ಸಿ.ಯವರಿಗೆ ಈ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಫೀರಿಯಾಯಿತಿ ಮಾಡಲಾಯಿತು.[8] ಈ ಸೌಲಭ್ಯಗಳು ಹರಿಜನ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲ ಮಾಡಿದವು. ಹರಿಜನರಿಗೇ ಪ್ರತ್ಯೇಕವಾದ ಶಾಲೆಗಳಲ್ಲಿ ಸುಮಾರು 16575 ವಿದ್ಯಾರ್ಥಿಗಳೂ–ಉಳಿದ ಶಾಲೆಗಳಲ್ಲಿ ಸುಮಾರು 4306 ವಿದ್ಯಾರ್ಥಿಗಳೂ[9]–ಈ ಕಾಲಕ್ಕೆ ಕಲಿಯುತೊಡಗಿದರು. ಹರಿಜನರ ವಿದ್ಯಾಭ್ಯಾಸಕ್ಕೆ 1918–19ರಲ್ಲಿ ಕೊಟ್ಟ ಸ್ಕಾಲರ್‌ಶಿಪ್‌ನ ಮೊತ್ತ 1126 ರೂಪಾಯಿಗಳಾದರೆ.[10] 1925–26ರಲ್ಲಿ ಅದು 44528 ರೂಪಾಯಿಗಳಿಗೆ ಏರಿತು.[11]

ಹಿಂದುಳಿದ ವರ್ಗಗಳಿಗೂ ಸಹ ಅವರ ಜನಸಂಖ್ಯೆಗನುಗುಣವಾಗಿ ಜಿಲ್ಲಾವಾರು ಸ್ಕಾಲರ್‌ಶಿಪ್‌ಗಳನ್ನು ಹಂಚಲಾಯಿತು. ಹಣವನ್ನು ಸರಿಯಾಗಿ ಹಂಚಲು

ಅಧಿಕಾರಿವರ್ಗದ ಹಾಗೂ ಅಧಿಕಾರೇತರ ಜನರನ್ನು ಒಳಗೊಂಡ ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡಲಾಯಿತು[12]. ಸರ್ಕಾರಿ ಶಾಲೆಗಳಿಗೆ ಮಾತ್ರ ಸೀಮಿತವಾಗಿದ್ದ ಸ್ಕಾಲರ್‌ಶಿಪ್ ಹಾಗೂ ಫೀ ರಿಯಾಯಿತಿಗಳನ್ನು ಸಾರ್ವಜನಿಕರ ಒತ್ತಾಯದ ಮೇರೆಗೆ ಖಾಸಗಿ ಶಾಲೆಗಳಿಗೂ ವಿಸ್ತರಿಸಲಾಯಿತು. ಇದರಿಂದ ಉಂಟಾದ ಹಣದ ನಷ್ಟವನ್ನು ಸರ್ಕಾರವೇ ತುಂಬಿಕೊಂಡಿತು. ಮಿಡ್ಲ್‌ಸ್ಕೂಲಿನ ವರೆಗೆ ಫೀ ರಿಯಾಯಿತಿಯನ್ನು ಮಾಡುವ ಪ್ರಗತಿಪರ ಯೋಜನೆಯನ್ನು ಸರ್ಕಾರ ಕೈಗೊಂಡಿತು. ಇದರಿಂದ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲವಾಯಿತು.[13].

ಈ ಎಲ್ಲ ಕಾರಣಗಳಿಂದ ಹಿಂದುಳಿದ ವರ್ಗಗಳಲ್ಲಿ ಅಕ್ಷರಜ್ಞಾನ ಕ್ರಮೇಣ ಹೆಚ್ಚುತ್ತ ಹೋಯಿತು. 1921 ರಲ್ಲಿ 27.7% ಇದ್ದಂತಹ ಇವರ ಅಕ್ಷರಸ್ಥರ ಸಂಖ್ಯೆ 1931ರ ವೇಳೆಗೆ 42.3%ಗೆ ಏರಿತು. (ಒಕ್ಕಲಿಗರು, ಲಿಂಗಾಯಿತರ ಸಂಖ್ಯೆ ಯನ್ನು ಇಲ್ಲಿ ಬಹುತೇಕವಾಗಿ ಗಮನಿಸಲಾಗಿದೆ) ಅಕ್ಷರ ಜ್ಞಾನದ ಶೇಕಡಾವಾರು ಹೆಚ್ಚುವರಿಕೆ ಇವರಲ್ಲಿ ಸುಮಾರು 14.6 ಆದರೆ ಬ್ರಾಹ್ಮಣರ ಅಕ್ಷರಸ್ಥರ ಸಂಖ್ಯೆ ಈ ಕಾಲದಲ್ಲಿ ಶೇಕಡಾ 8.1 ರಷ್ಟು ಮಾತ್ರ ಏರಿತು.[14] ಹಿಂದುಳಿದ ವರ್ಗಗಳಿಗೆ ಕೊಟ್ಟ ಸ್ಕಾಲರ್‌ಶಿಪ್‌ನ ಮತ್ತು 1918-19ರಲ್ಲಿ 6,024 ರೂಪಾಯಿಗಳಿದ್ದದ್ದು[15] 1925-26ರಲ್ಲಿ 67,170 ರೂಪಾಯಿಗಳಿಗೆ ಏರಿತು[16]. 1918 ರಿಂದ 1926ರ ವರೆಗಿನ ಕಾಲದಲ್ಲಿ ಸರ್ಕಾರವು ಕೈಗೊಂಡ ಈ ಕಾರ್ಯಗಳಿಂದ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸಕ್ಕೆ ಪರಿಣಾಮಕಾರಿಯಾದ ದಾರಿಯೊಂದು ಪ್ರಾರಂಭಗೊಂಡಿತೆಂದೇ ಹೇಳಬೇಕು.

ಸಿವಿಲ್ ಸರ್ವೀಸು (ಸಾರ್ವಜನಿಕ ಸೇವೆ)

ಸರ್ಕಾರಿ ಸೇವೆಗಳಲ್ಲೆಲ್ಲ 1892 ರಿಂದಲೇ ಬ್ರಾಹ್ಮಣರ ಆಧಿಕ್ಯವಿತ್ತು. ಕೆಳದರ್ಜೆಯ ಸರಕಾರಿ ಕೆಲಸಗಳಲ್ಲಿ ಹಿಂದುಳಿದ ವರ್ಗಗಳಿಗೆ ಹೆಚ್ಚು ಪ್ರಾತಿನಿಧ್ಯ ಕೊಟ್ಟು ಶೇಕಡಾ 25 ರಷ್ಟು ಕೆಲಸಗಳನ್ನು ಕಾದಿರಿಸಬೇಕೆಂದು ತೀರ್ಮಾನ ವಾಯಿತಾದರೂ ಅದು ಇನ್ನೂ ಕಾರ್ಯಗತವಾಗಿರಲಿಲ್ಲ.

ಮಿಲ್ಲರ್ ಕಮಿಟಿಯ ನೇಮಕಾತಿಯ ನಂತರ, ಪರಿಸ್ಥಿತಿ ಕೊಂಚ ಸುಧಾರಿಸಿತು. ಹಿಂದುಳಿದ ವರ್ಗದ ಎಲ್ಲ ಜಾತಿಯವರಿಗೆ, ವಿಶೇಷವಾಗಿ ಹರಿಜನರಿಗೆ ಹೇರಳವಾಗಿ ಪ್ರಾತಿನಿಧ್ಯ ಕೊಡಬೇಕೆಂದು ಸರ್ಕಾರವು ನೇಮಕಾತಿ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟಿತು. ಹೀಗೆ ನೇಮಕಾತಿಯಾದ ಬಗ್ಗೆ ವಾರ್ಷಿಕ ವರದಿಯೊಂದನ್ನು ಒಪ್ಪಿಸು ವಂತೆ ಇವರಿಗೆ ಸರ್ಕಾರ ತಿಳಿಸಿತು. 1918-19ರಲ್ಲಿ ನೇಮಕಗೊಂಡ, 1266 ಸ್ಥಳಗಳಲ್ಲಿ ಹಿಂದುಳಿದ ವರ್ಗಗಳಿಗೆ 514 ಸ್ಥಳಗಳು ಕಾದಿರಿಸಲ್ಪಟ್ಟವು. ಇಲ್ಲಿ

ಕಾದಿರಿಸಿದ ಸ್ಥಳಗಳ ಶೇಕಡಾವಾರು ಸಂಖ್ಯೆ ಸುಮಾರು 42.7 ಆದ ಹಾಗೆ ಆಯಿತು. ಸರಕಾರವು ಈ ನೇಮಕಾತಿಯ ವಿಷಯದಲ್ಲಿ ತೀವ್ರ ಕ್ರಮವನ್ನೇ ಕೈಗೊಂಡಿತು. ವಾರ್ಷಿಕ ವರದಿಯನ್ನು ಒಪ್ಪಿಸದವರಿಗೆ ವಿವರಣೆ ನೀಡುವಂತೆ ಆಜ್ಞೆಯನ್ನು ಮಾಡುವುದರ ಜೊತೆಗೆ ಹಿಂದುಳಿದ ವರ್ಗಗಳಿಗೆ ಸರಿಯಾದ ಸೀಟು ಹಂಚಿಕೆಯಾಗಲಿಲ್ಲವೆಂದು ತೋರಿದಲ್ಲಿ ಆ ಕಾರ್ಯ ಬೇಕೆಂದೇ ಮಾಡಿರುವದೆಂದು ಅವರನ್ನು ಜವಾಬ್ದಾರರನ್ನಾಗಿ ಮಾಡಿತು[17].

ಇದೇ ಸಂದರ್ಭದಲ್ಲಿ ಮಿಲ್ಲರ್ ಕಮಿಟಿಯ ವರದಿಗೆ ಅನುಸಾರವಾಗಿ ಹಿಂದುಳಿದ ವರ್ಗಗಳಿಗೆ ಕನಿಷ್ಠ ಅರ್ಹತೆಯ ಮೇಲೆಯೇ ಪೂರ್ಣ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಆಜ್ಞೆಯೊಂದು ಹೊರಟಿತು. ಮಿಲ್ಲರ್ ಕಮಿಟಿಯ ವರದಿಯು ಜಾರಿಗೆ ಬಂದ ಏಳು ವರ್ಷಗಳೊಳಗೆ ಸರ್ಕಾರಿ ಸೇವೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಕನಿಷ್ಠ ಶೇಕಡಾ 50ಕ್ಕಾದರೂ ಏರಬೇಕೆಂಬ ನಿಯಮವನ್ನು ಸರ್ಕಾರ ವಿಧಿಸಿತು. ಸಿವಿಲ್ ಸರ್ವೀಸ್ ಸೇರುವುದರ ಸಲುವಾಗಿ ಅರ್ಹತೆಯನ್ನು ಗಳಿಸಿಕೊಳ್ಳಲು ಬ್ರಾಹ್ಮಣೇತರರಿಗೆ ಸರಕಾರ ಮನವಿಯನ್ನು ಸಹ ಮಾಡಿತು. ಹಿಂದುಳಿದ ವರ್ಗಗಳಿಗೆ ಸ್ಪರ್ಧಾ ಪರೀಕ್ಷೆ (competitive Exams.)ಗಳನ್ನು ತೆಗೆದುಹಾಕುವ ಬೇಡಿಕೆಗಳನ್ನು ಸರ್ಕಾರ ತಿರಸ್ಕರಿಸಿತಾದರೂ, ಅವರಿಗೆ ಗೆಜೆಟೆಡ್ ಹುದ್ದೆಗಳನ್ನು ನಾಮಕರಣದ ಮೂಲಕ ನೇಮಕ ಮಾಡಿಕೊಡಲು ಆಶ್ವಾಸನೆ ಇತ್ತಿತು. ಅದರಂತೆಯೇ 1922-23ರಲ್ಲಿ ನೇಮಕವಾದ 8 ಜನ ಅಮಲ್ದಾರ ಜಾಗೆಗಳಲ್ಲಿ ಆರು ಜಾಗೆಗಳಿಗೆ ಹಿಂದುಳಿದ ವರ್ಗಗಳವರೇ ನೇಮಕಾತಿಯಾಗಿದ್ದರು[18].

ಕೇಂದ್ರ ಸಚಿವಾಲಯದಲ್ಲಿ ಜಾರಿಯಲ್ಲಿ ಇದ್ದಂತಹ ನಿಯಮಗಳನ್ನೇ ಸಂಸ್ಥಾನದ ನೇಮಕಾತಿಗಳಲ್ಲಿಯೂ ಅನುಸರಿಸಲು ತೀರ್ಮಾನಗಳನ್ನು ತೆಗೆದುಕೊಂಡು ಒಂದು ಕೇಂದ್ರ ನೇಮಕಾತಿ ಸಮಿತಿಯನ್ನು ಮೈಸೂರು ಸಂಸ್ಥಾನದಲ್ಲಿ ರಚಿಸಲಾಯಿತು. ಈ ಸಮಿತಿಗೆ ಅಭ್ಯರ್ಥಿಗಳ ಆಯ್ಕೆಮಾಡುವ ಅಧಿಕಾರವನ್ನು ನೀಡಲಾಯಿತು. ಇದರಿಂದ ಸರ್ಕಾರದ ವಿಭಾಗೀಯ ನೇಮಕಾತಿಗಳಲ್ಲಿ ಆಗುತ್ತಿದ್ದ ಅಕ್ರಮ ವ್ಯವಹಾರಗಳು ಮತ್ತು ಪಕ್ಷಪಾತಗಳನ್ನು ಕೆಲಮಟ್ಟಿಗೆ ತಪ್ಪಿಸಲಾಯಿತು.

ಸರ್ಕಾರೀ ಸಹಾಯವಿಲ್ಲದೆ ಹಿಂದುಳಿದ ವರ್ಗಗಳು ಅಭಿವೃದ್ಧಿ ಹೊಂದಲಾರವು ಎನ್ನುವದನ್ನು ಮನಗಂಡು ಸರಕಾರವೇ ಈ ಕಾರ್ಯಕ್ಕಾಗಿ ಕೆಲವು ಯೋಜನೆಗಳನ್ನು ರೂಪಿಸಿಕೊಂಡು ಮುಂದೆ ಬಂದಿತು. ಈ ಬ್ರಾಹ್ಮಣೇತರ ಚಳುವಳಿಯ ಬಗ್ಗೆ ಸೂಚ್ಯವಾಗಿ ಮಾತನಾಡುತ್ತ ಆಗಿನ ದಿವಾನರು ಮೈಸೂರಿನಲ್ಲಿ ಹಿಂದುಳಿದ ವರ್ಗದವರ ರಾಜಕೀಯ ಪ್ರಜ್ಞೆಯ ಜಾಗ್ರತಾವಸ್ಥೆಯನ್ನು ಹಾಗೂ ಅದರ ಪರಿಣಾಮಗಳನ್ನು ಕುರಿತ ಹಾಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಈ ವರ್ಗಗಳ

ಮುನ್ನಡೆಗೆ ಸಾಧ್ಯವಾದಷ್ಟು ಸಹಾಯನೀಡುವ ಭರವಸೆಯನ್ನಿತ್ತರು[19]. ಮೈಸೂರಿನವರಿಗೇ ಕೆಲಸದ ಅವಕಾಶಗಳನ್ನು ಕೊಡುವ ತೀರ್ಮಾನವನ್ನೂ ಸಹ ಸರ್ಕಾರ ತೆಗೆದುಕೊಂಡಿತು. ಸಿವಿಲ್ ಸರ್ವೀಸಿನಲ್ಲಿ ಆಗಲೇ ಹೊರಗಿನವರು ಬಹಳ ಜನ ಇದ್ದದ್ದರಿಂದ, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮೊದಲು ಸರಕಾರದ ಅನುಮತಿಯನ್ನು ಮುಂಗಡವಾಗಿ ಪಡೆಯಲೇಬೇಕೆಂಬ ನಿರ್ಧಾರವನ್ನೂ ಕೊಡಲಾಯಿತು[20]. ಹಿಂದುಳಿದ ವರ್ಗಗಳ ಪ್ರತಿನಿಧಿಗಳು ನೇಮಕಾತಿಗಳ ಬಗ್ಗೆ ಎಚ್ಚರಿಕೆಯಿಂದ ಗಮನಿಸುತ್ತಿದ್ದು ಏನಾದರೂ ಲೋಪಗಳಾಗಿರುವದು ಕಂಡುಬಂದರೆ ಸರಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದರು.

ಮೈಸೂರು ಅರಸರ ಈ ಹಲವು ಕಾರ್ಯಕ್ರಮಗಳಿಂದ ಹಿಂದುಳಿದ ವರ್ಗಗಳ ಪ್ರಾತಿನಿಧ್ಯವು ಮೇಲೆ ವಿವರಿಸಿದ ವಲಯಗಳಲ್ಲಿ ಹೆಚ್ಚಲು ಕಾರಣವಾಯಿತು. 1921ರ ಸಮಯಕ್ಕೆ ಕೆಳದರ್ಜೆ ಮತ್ತು ಮಧ್ಯಮ ದರ್ಜೆಯ ನೇಮಕಾತಿಗಳಲ್ಲಿ ಶೇಕಡಾ 30 ರಷ್ಟು ಭಾಗವನ್ನು ಈ ವರ್ಗದವರು ಪಡೆದಿದ್ದು 1926ರಲ್ಲಿ ಅದು ಶೇಕಡಾ 42ಕ್ಕೆ ಏರಿದರೆ, ಶೇಕಡಾ 69.6 ರಷ್ಟು ಇದ್ದ ಬ್ರಾಹ್ಮಣರ ಸಂಖ್ಯೆ ಶೇಕಡಾ 54.1 ಕ್ಕೆ ಇಳಿಯಿತು[21]. ಇದರಿಂದ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಸುಮಾರು 12 ಶೇಕಡಾವಾರಿನಷ್ಟು ಹೆಚ್ಚು ಆದಹಾಗಾಯಿತು. ಬ್ರಾಹ್ಮಣರ ಪ್ರಾತಿನಿಧ್ಯ ಶೇಕಡಾ 13.5 ರಷ್ಟು ಇಳಿಯಿತು.

ಮೈಸೂರು ಅರಸರ ಸರಕಾರ ಹಿಂದುಳಿದ ವರ್ಗಗಳಿಗೆ ಮಾಡಿದ ವಿಶೇಷ ಸವಲತ್ತುಗಳಿಂದ ಸರ್ಕಾರಿ ಸೇವೆ ಮತ್ತು ವಿದ್ಯಾಭ್ಯಾಸಗಳ ವಲಯಗಳಲ್ಲಿ ಅವರ ಸ್ಥಿತಿಗಳು ಉತ್ತಮಗೊಳ್ಳಲು ಕಾರಣವಾಯಿತು ಎಂದೇ ಹೇಳಬಹುದು.

ಸಹಾಯಕ ಸಾಮಗ್ರಿಗಳು

1 Speeches of His Highness Krishnaraja Wadeyar Vol. I 1902–1920 Bangalore 1921 Pp. 222–225.

2 ವೀರತ್ತಪ್ಪ, ಕೆ: ಮೈಸೂರು ಸಂಸ್ಥಾನದ ಸ್ವಾತಂತ್ರ ಚಳುವಳಿ, ಬೆಂಗಳೂರು, 1977 P. 7

3 (a) James Manor : Political changes in Mysore 1917–1955. Delhi. 1977 P. 60

(b) ನಾರಾಯಣರಾವ್ ವಿ. ಎಸ್. : ಮೋಕ್ಷಗುಂಡಂ ವಿಶ್ವೇಶ್ವರಯ್ಯ—ಜೀವನ ಮತ್ತು ಸಾಧನೆ. 1974 ಪುಟ. 185–186

(c) ತಿರುಮಲೆ ತಾತಾಚಾರ್ಯ : ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1960. P. 71

(d) ಮಾಸ್ತಿವೆಂಕಟೇಶ ಅಯ್ಯಂಗಾರ್ ಸರ್. ಎಂ. ವಿಶ್ವೇಶ್ವರಯ್ಯ—Centenary collection, Bangalore, 1960 P. 25

4 Proceedings of the Government of Mysore, May 1921 Group A. Chief Secretariat Section V. Efficiency audit P. 2

5 Proceedings of the Representative Assembly Dasara Session 1919. Bangalore, 1919. P. 45.

6 Proceedings of the Legislative Council ; December 1926 P. 326.

7 C. R. Reddy : Quarterly Journal of Mythic Society January-April 1941. Krishna Raja Wodeyar Special number, Bangalore 1941. P. 247

8 Proceedings of the Government of Mysore, Sep. 1919 Group I. Education ; Bangalore 1919. P. 2. also Proceedings of the Assembly 1920. P. 13.

9 Report on Public Instruction in Mysore 1918–19 Bangalore–1926. P. 67

10 Report on the administration of Mysore 1918–19 Bangalore–1919. P. 85

11 Report on the administration of Mysore, 1925–26 Bangalore–1926 P. 66

12 Proceedings of the Govt. of Mysore, May 1919. G.P.C Edn. Bangalore–1919 Pp. 6–9

13 Proceedings of the Representative Assembly Dasara Session 1920. Bangalore 1920. Pp. 12–13.

14 James Manor Op. Cit. P. 32

15 Report on the administration of Mysore 1918–19 Bangalore 1919 P. 85

16 Report on the administration of Mysore 1925–26 Bangalore 1926 P. 66

17 Proceedings of the Govt. of Mysore, May 1920 G.P.A. Chief Section, 9. P. 8. and See. also Proceedings of

the Govt. of Mysore, Oct. 1919. G. P. A. Chief Secretariat Sec. Pp. 4-5.

18 Report on the administration of Mysore 1922-23 Bangalore 1923 P. 4

19 Proceedings of the Representative Assembly Dasara Session 1920 Pp. 23-30

20 Proceedings of the Govt. of Mysore Nov. 1921 G.P.A. C.S. Sec. X Efficiency Audit Pp. 3-4

21 Proceedings of the Legislative Council Jan. 1927 Bangalore 1927, P. 74

ಸ್ಥಳನಾಮ ರೂಪರೇಷೆ

—ಕೆಮ್ತೂರು ರಘುಪತಿಭಟ್ಟ

ಒಂದು ಎಡೆ ಅಥವಾ ಪ್ರದೇಶಕ್ಕೆ ರೂಢಿಯಲ್ಲಿ ಬಂದಿರುವ ಹೆಸರನ್ನ ‘ಎಡೆವೆಸರು’ ಅಥವಾ ‘ಸ್ಥಳನಾಮ’ ಎಂದು ಕರೆಯುತ್ತೇವೆ. ಸ್ಥಳನಾಮಗಳ ಕುರಿತಾಗಿ–ಅದರ ಮೂಲ, ಅರ್ಥ ಇತ್ಯಾದಿ ಅಧ್ಯಯನ ಮಾಡುವ ಒಂದು ಅರ್ವಾಚೀನ ಶಾಸ್ತ್ರ ಪ್ರಕಾರಕ್ಕೆ ‘ಸ್ಥಳನಾಮ ಶಾಸ್ತ್ರ’ (toponymy) ಎಂಬ ಹೆಸರಿದೆ. ಈ ಹೆಸರು ಪ್ರಾಯಃ ಗ್ರೀಕ್ ಭಾಷೆಯಿಂದ ಬಂದುದು : topos + nomos, ಅಂದರೆ ಸ್ಥಳಕ್ಕೆ ಸಂಬಂಧಿಸಿದ ಶಾಸ್ತ್ರ ಅಥವಾ ವಿಜ್ಞಾನ. ಇದು ಬೆಳೆದು ಬಂದುದು, ಒಂದು ಸುವ್ಯವಸ್ಥಿತ ಶಾಸ್ತ್ರದ ಪಟ್ಟಗಳಿಸಿದುದು, ಒಂದು ಶತಮಾನದ ಹಿಂದೆ. ಈ ಶಾಸ್ತ್ರ ಪ್ರಕಾರದ ಪಿತನೆನ್ನಿಸಿಕೊಂಡವ ಲೀಬ್ನಿಜ್, G. W. (1768). ಪ್ರೊ. ಸ್ಕೀಟ್, ಜೆ. ಜೆ. ಎಸ್ಲಿ, ಪ್ಯಾಟರ್‌ಸನ್, ಎಡ್ರಿಯನ್ ಡಿ' ವಾಲ್ಯಾಸ್, ಜೀನ್ ಲೆಬ್ಯೂಫ್, ಜಾನ್ ಹೆಕ್‌ವೆಲ್ಡರ್, ಹೆಚ್. ಆರ್. ಪೂಲೆರಾಫ್ಟ್, ಸಾಲ್ವರ್ಟೆ, ಫ್ರೋಯರ್ಸ್ಟೆಮ್ಯಾನ್, ಫ್ಲೇವಿಯಸ್ ಎಡ್ಮಂಡ್ಸ್ ಪ್ರಭೃತಿಗಳು ಈ ಕ್ಷೇತ್ರದ ಬೆಳವಣಿಗೆಗಾಗಿ ಬಹುವಾಗಿ ಶ್ರಮಿಸಿದವರು. ಇನ್ನು, ಇತ್ತೀಚೆಗೆ ದ. ಐರೋಪ್ಯ ಭಾಷೆಯ ಸ್ಥಳನಾಮಗಳಿಗೂ ದ್ರಾವಿಡ ಭಾಷಾ ಸ್ಥಳನಾಮಗಳಿಗೂ ಇರುವ ಸಹಜ ಸಾಮ್ಯಗಳನ್ನು ಆಧಾರ ಪೂರ್ವಕವಾಗಿ ತೋರಿಸಿಕೊಟ್ಟ ಫ್ರೆಂಚ್ ವಿದ್ವಾಂಸ ಡಾ. ಎನ್. ಲಿಹೋವರಿ ಕೂಡಾ ಅಭಿನಂದನೀಯರು. ಭಾರತೀಯ ವಿದ್ವಾಂಸರು ಇಂಥವರ ಹೆಜ್ಜೆಯನ್ನು ಇನ್ನೂ ಅನುಸರಿಸಬೇಕಾಗಿದೆ, ಅಷ್ಟೆ.

ವ್ಯಕ್ತಿಗಳನ್ನ, ವಸ್ತುಗಳನ್ನ ಗುರುತಿಸಲು ಹೇಗೆ ಹೆಸರು ಅಗತ್ಯವೋ ಹಾಗೆಯೇ ಸ್ಥಳಗಳಿಗೂ ಕೂಡ. ಹಾಗೆ ಗುರುತಿಸಿ ಹೇಳುವಾಗ ಯಾವ ಗುಣ ಸ್ವಭಾವವನ್ನ ಉದ್ದೇಶಿಸಿ ನಿರ್ದೇಶಿಸುತ್ತೇವೆ ಎಂಬುದು ಇಲ್ಲಿ ಅಪ್ರಕೃತವಾದರೂ, ಬಹುಶಃ ಸ್ಥಳಗಳ ಭೂವೈಶಿಷ್ಟ್ಯ (Topography) ಗಳಿಗನುಗುಣವಾಗಿ, ಒಂದು ಊರನ್ನ ಇನ್ನೊಂದರಿಂದ ಸುಲಭದಲ್ಲಿ ಗುರುತಿಸಲಿಕ್ಕಾಗಿ ಬೇರ್ಪಡಿಸಿ ಹೇಳುವುದೇ ಸ್ಥಳನಾಮಗಳ ಮುಖ್ಯ ಗಮ್ಯ ಎನ್ನಲಡ್ಡಿಯಿಲ್ಲ. ಅದಕ್ಕಾಗಿಯೇ ಸ್ಥಳನಾಮಗಳನ್ನ 'identificatory labels' (‘ಗುರುತು ಪಟ್ಟಿ’) ಎಂದು ಕರೆದಿರುವುದು. ಈ ಮೂಲಭೂತ ಅಂಶವೇ ಸ್ಥಳನಾಮಗಳ ಹುಟ್ಟಿನ ಹಿಂದಿರುವ ರಹಸ್ಯವಾಗಿದೆ; ಮತ್ತು ಅವುಗಳನ್ನ ಚಿರಂಜೀವಿಗಳನ್ನಾಗಿಸುವ ಕ್ರಿಯಾಶಕ್ತಿಯಾಗಿದೆ. ಕೆಲವೊಮ್ಮೆ

ಕೆಲವು ಊರ ಹೆಸರುಗಳು ಚಾರಿತ್ರಿಕ ವ್ಯಕ್ತಿಗಳು, ಅಧಿಕಾರಿಗಳು, ಕುಲಗಳು, ದೇವತೆಗಳು ಅಥವಾ ಮುಖ್ಯ ಘಟನೆಗಳನ್ನ ಸ್ಮರಿಸುವ ಉದ್ದೇಶದಿಂದ ಹುಟ್ಟಿದ್ದಿರಬಹುದು. ಇಂಥ 'ಕೃತಕ ಸ್ಥಳನಾಮ'ಗಳ ಹಿಂದೆಯೂ ಅಡಗಿರುವ ಉದ್ದೇಶ ಗುರುತಿಸುವಿಕೆಯೇ ತಾನೆ ?

ನಮಗೆ ನಾವೇ ಹೆಸರಿಟ್ಟು ಕೊಂಡಿರುವುದಿಲ್ಲ. ನಮ್ಮ ಜಾತಕಕ್ಕೆ ಅನುಗುಣವಾದ ಹೆಸರನ್ನು ನಮ್ಮ ಹಿರಿಯರು 'ನಾಮಕರಣ' ಮಾಡಿರುತ್ತಾರೆ. ಹಾಗೆಯೇ ಒಂದು ಊರಿನ ಹೆಸರು ಅಲ್ಲಿ ನೆಲೆಗೊಂಡಿದ್ದ ಮೂಲ ನಿವಾಸಿಗಳಿಂದಲೇ ಬಂದಿರದೆ, ಅವರ ಆಸುಪಾಸಿನ ಊರಿಗರಿಂದ ಬಂದಿರುವ ಸಂಭವ ಅಧಿಕ. ಏಕೆಂದರೆ ಒಂದು ಊರಲ್ಲಿರುವ ಜನ ತಮ್ಮ ಊರನ್ನ ಕುರಿತು ಮಾತಾಡಬೇಕಾದಾಗ 'ಇಲ್ಲಿ', 'ನಮ್ಮಲ್ಲಿ', 'ನಮ್ಮ ಊರಲ್ಲಿ' ಮುಂತಾಗಿ ಹೇಳುತ್ತಾರೆ. ಅವರಿಗೆ ಹತ್ತಿರದ ಊರವರು, ಗುರುತಿಸುವುದಕ್ಕಾಗಿ ಈ ಊರಿಗೊಂದು ಹೆಸರು ಹಚ್ಚುತ್ತಾರೆ. (ಹೀಗೆ ಹೆಸರಿಡುವಾಗ–ವ್ಯಕ್ತಿ ಒಬ್ಬನಿಗೆ ಅವನ ಕುಲ, ಗೋತ್ರ, ಹುಟ್ಟಿದ ನಕ್ಷತ್ರ, ಕರಣ, ತಂದೆ–ಗುರು–ದೈವಗಳ ಹೆಸರು ಮುಂತಾದವನ್ನ ಗಮನಿಸಿ, ಅದಕ್ಕೆ ಅನುಗುಣವಾದ ನಾಮಕರಣ ಮಾಡುವಂತೆ, ಆ ಸ್ಥಳದ ಭೂವಿವರಕ್ಕೆ–ಏರು, ತಗ್ಗು ; ನೀರು, ಪಾರು; ಕಾಡು, ಕೋಡು ಮೊದಲಾದ ಹೊಂದುವ ಹೆಸರನ್ನೆ ಕೊಡುವ ಔಚಿತ್ಯಜ್ಞಾನ ಈ ನಾಮದಾತರಿಗೆ ಇತ್ತೆಂಬುದನ್ನ ಮರೆಯಕೂಡದು, ಈ ಅರ್ಥದಲ್ಲಿ, ಆ ಸ್ಥಳ ಆ ಹೆಸರನ್ನ ಕೊಡಿಸಿಕೊಂಡಿದ್ದು ಇದು 'ಸ್ವನಾಮಕರಣ'ವೇ ಆಗಿದೆ–ಎಂಬುದನ್ನೂ ಸ್ಥಳನಾಮ ಸಂದರ್ಭದಲ್ಲಿ ತಿಳಿದಿರಬೇಕು. (ಆದರೆ, ಇದೀಗ ನಾವು ವ್ಯಕ್ತಿಗಳಿಗೆ ಹೆಸರಿಡುವಾಗ ಇಂಥ ಔಚಿತ್ಯಜ್ಞಾನವನ್ನ ಪೂರ್ಣ ಕಳಗೊಂಡಿದ್ದೇವೆ ಎಂದು ಹೇಳಬೇಕಾದ್ದಿಲ್ಲ). ಈ ಹೆಸರು, ಮುಂದೆ ಆ ಸ್ಥಳ ಹಾಗೂ ಅದರ ಪರಿಸರ ಹತ್ತು ಹಲವು ರೀತಿಯಲ್ಲಿ ಪ್ರಗತಿ ಹೊಂದಿದಾಗ, ದಾಖಲೆ ಮುಂತಾದ ಲಿಖಿತ ಸಂದರ್ಭಗಳಲ್ಲಿ, ಕೆಲವೊಮ್ಮೆ, ವ್ಯವಹಾರದಲ್ಲಿಯೂ ಅದೇ ಊರಿಗರಿಂದ ಬಳಸಲ್ಪಡುತ್ತದೆ. ಈ ಮಾತಿಗೆ ಮಾನವ ಶಾಸ್ತ್ರದ ಸಮರ್ಥನೆ ಇದೆ. ಒಂದು ಸ್ಥಳನಾಮದ ಉಳಿವು ಮತ್ತು ಶಾಶ್ವತತೆಯನ್ನು ನಿರ್ಧರಿಸುವ ಅಂಶಗಳು ಆ ಸ್ಥಳದ ಗಾತ್ರ ಮತ್ತು ಅಲ್ಲಿರುವ ಜನಸಂಖ್ಯೆಗಳು. ಆದ್ದರಿಂದಲೇ, ಹೆಚ್ಚು ಚಲಾವಣೆ ಪಡೆದ ನದಿ-ಪರ್ವತ ಮತ್ತಿತರ ಪ್ರಧಾನ ಭೌಗೋಳಿಕ ಲಕ್ಷಣಗಳ ಹೆಸರುಗಳು ಅಷ್ಟೊಂದು ದೃಢವೂ ಶಾಶ್ವತವೂ ಆಗಿ ಉಳಿದಿರುವುದು; ಕಡಿಮೆ ಜನಸಂಖ್ಯೆಯ ವ್ಯವಹಾರದಲ್ಲಿ ಚಲಾವಣೆ ಪಡೆದ ಕ್ಷೇತ್ರನಾಮಗಳು (field names) ಮತ್ತಿತರ ಗೌಣ ಹೆಸರುಗಳು ಶಾಶ್ವತ ಅಸ್ತಿತ್ವಕ್ಕೆ ಅವಶ್ಯವಾದ ವಿಸ್ತೃತ ಅಂಗೀಕಾರ ಪಡೆಯದಿರುವುದರಿಂದ, ಕಾಲಾಂತರದಲ್ಲಿ ಜನರ ಸ್ಮೃತಿಪಟದಿಂದ ಈ ಹೆಸರುಗಳು ಮಸುಳಿ ಹೋಗಿರುವುದುಂಟು (ಇದೊಂದು ಸಾಧಾರಣೀಕರಣ, ಅಷ್ಟೆ; ಇದಕ್ಕೆ ಅಪವಾದಗಳೂ ಇವೆ).

ಜನ ವಾಸ್ತವ್ಯದ ಭೂಮಿ ಎಲ್ಲ ಕಡೆಯೂ ಒಂದೇ ಆದರೂ, ಭೌಗೋಳಿಕ ಲಕ್ಷಣಗಳು ಬೇರೆ ಬೇರೆ ಆಗಿರುತ್ತವೆ; ಅಥವಾ ಸಮಾನವಾಗಿದ್ದರೂ ಅವುಗಳನ್ನು ಹೇಳುವ ಪದ-ಭಾಷೆ ಬೇರೆ ಬೇರಾಗಿರುತ್ತದೆ. ಊರ ಹೆಸರುಗಳನ್ನು ವಿಶ್ಲೇಷಿಸಿ ನೋಡಿದರೆ, ಅವುಗಳ ಉತ್ತರ ಭಾಗವು ಸಾಮಾನ್ಯವಾಗಿ ಆ ನಿರ್ದಿಷ್ಟ ಸ್ಥಳಕ್ಕಲ್ಲದೆ ಅದೇ ಭೂ ಲಕ್ಷಣ–ಸಂನಿವೇಶ ಪಡೆದಿರುವ ಇನ್ನೊಂದು ಸ್ಥಳಕ್ಕೂ ಅನ್ವಯವಾಗು ವಷ್ಟು 'ಸಾಮಾನ್ಯಾರ್ಥಕ'ವಾಗಿರುತ್ತದೆ. ಉದಾಹರಣೆಗೆ, 'ಕೋಡಿ' ಎಂಬ ಸ್ಥಳ ನಾಮ ಭಾಗವನ್ನು ಎತ್ತಿಕೊಳ್ಳೋಣ. ಇದು ತುಳು ನಾಡಿನಲ್ಲಿ ಹತ್ತಾರು ಸ್ಥಳಗಳ ಹೆಸರಿನಲ್ಲಿ ಕಾಣಿಸಿಕೊಂಡಿದೆ. ಸಾಮಾನ್ಯವಾಗಿ 'ಮೂಲೆ, ಅಥವಾ ಅಗಲ ಕಿರಿದಾ ಗುತ್ತ ಕೊನೆಯಾಗುವ ಬೈಲಿನ ತುದಿ' ಎಂಬ ಅರ್ಥವನ್ನು ಈ ಭೂವಾಚಕ ಹೇಳು ತ್ತದೆ. ಇಂಥ ಎಷ್ಟೋ 'ಕೋಡಿ'ಗಳ ಪೈಕಿ, ಒಂದರಲ್ಲಿ ಜತ್ತನ (ಜತ್ತಣ್ಣ) ಎಂಬವನು ಮೊದಲು ನೆಲೆ ನಿಂತರೆ, ಮನೆ ಆಸ್ತಿ ಕಟ್ಟಿಕೊಂಡು ಪ್ರಭಾವಿಯಾದರೆ ಹತ್ತಿರದ ಬೇರೊಂದು ಊರವರು, ಈ ಸ್ಥಳವನ್ನ ನಿರ್ದೇಶಿಸಬೇಕಾದಾಗ, 'ಓ ಅಲ್ಲಿ, ಜತ್ತ ಇರುವ ಕೋಡಿಯಲ್ಲಿ' ಮುಂತಾಗಿ ಹೇಳ ತೊಡಗಿ, ಆ ಮನೆಯಡಿಗೆ, ನಂತರ ಇಡೀ ಊರಿಗೆ 'ಜತ್ತನ ಕೋಡಿ' ಎಂಬ ಹೆಸರು 'ಅಂಕಿತ'ವಾಯಿತು. ಹೀಗೆಯೇ ಬಂದ ಹೆಸರುಗಳು–ತಿಪ್ಪಕೋಡಿ, ಅರಬ್ಬಿ ಕೋಡಿ, ದಾದು ಕೋಡಿ, ಪರವೆರೆ (ಒಂದು ಜಾತಿ-ವರ್ಗ) ಕೋಡಿ, ಜಾಚು ಕೋಡಿ, ಕಾಂತ ಕೋಡಿ, ಸಬ್ಬಣ (<ಸುಬ್ಬಣ/ನ) ಕೋಡಿ, ಶಿವರಾಮ ಕೋಡಿ, ಬಲ್ಯಾಯ (ಕುಲನಾಮ) ಕೋಡಿ, ಇತ್ಯಾದಿ. ಇದೇ ಕೋಡಿ ಸ್ಥಳನಾಮ ಸಮಸ್ತ ಪದಗಳಲ್ಲಿ ಪೂರ್ವ ಸ್ಥಾನದಲ್ಲಿ ಬಂದಾಗ 'ವಿಶಿಷ್ಟಾರ್ಥಕ'ವಾಗುವುದಕ್ಕೆ ದೃಷ್ಟಾಂತಗಳಿವೆ-ಕೋಡಿ ಬೈಲು (ಕೋಡಿ ಇರುವ, ಕೋಡಿಯಾಗಿರುವ ಬೈಲು), ಕೋಡ್ಯಡ್ಕ, ಕೋಡಿತಲೆ, ಕೋಡಂಗಾರು, ಕೋಡಿ ಕನ್ಯಾನ, ಕೋಡುಂಬೆ, ಕೊಡೇರಿ, ಕೋಡಿಯಾಡಿ, ಕೋಡಿ ಕಂಡಾಳ ಕ್ಷೇತ್ರ, ಕೋಡಿಂಬಾಡಿ, ಕೋಡಿಂಬಳ, ಕೋಡಿ (ಈ ಹೆಸರಿನವು ಹಲವು) ಇತ್ಯಾದಿ. ಹೆಚ್ಚು ಕಮ್ಮಿ ಹೀಗೆಯೇ ಉಳಿದ ಹೆಸರುಗಳೂ ಬಂದಿರುತ್ತವೆ; ಪ್ರಚಲಿತವಾಗಿವೆ.

ಇನ್ನು ಸ್ಥಳ ನಾಮಗಳು ಯಾವ ಭಾಷೆಯ ಪದಗಳಿಂದ ನಿಷ್ಪನ್ನವಾಗಿರುತ್ತವೆ ಎಂಬ ಪ್ರಶ್ನೆ. ಸಾಮಾನ್ಯವಾಗಿ ಸ್ಥಳೀಯ ಭಾಷೆಯಿಂದ ಇವು ಸೂಚಿತವಾಗಿದ್ದರೂ ತುಳುವ ಸ್ಥಳ ನಾಮಗಳಿಗೆ ಸೀಮಿತಗೊಳಿಸಿ ಹೇಳುವುದಾದರೆ, ಕೇವಲ ತುಳು ಪದಗಳೇ ಅಲ್ಲದೆ ಕನ್ನಡ ಪದಗಳೂ – ಕೆಲವೊಮ್ಮೆ ದ್ರಾವಿಡ ಭಾಷೆಗಳಿಗೆ ಸಮಾನವಾದ ರೂಪಗಳೂ – ಇಲ್ಲಿ ಕಾಣಬರುತ್ತವೆ ಎಂಬುದನ್ನು ಕಂಡುಕೊಳ್ಳಬೇಕು. ಇವುಗಳಲ್ಲಿ ಕೆಲವಂತೂ ಅತ್ಯಂತ ಪ್ರಾಚೀನ ಪದಗಳಾಗಿದ್ದು – ಬಹುಶಃ ಮೂಲದ್ರಾವಿಡ ಪದಗಳಾಗಿದ್ದು – ಇದೀಗ ಅರ್ಥಹೀನವಾಗಿಬಿಟ್ಟಿವೆ. ಇಲ್ಲಿರುವುದು ಚೋದ್ಯ : ಒಂದು ಪದ ಬಳಕೆತಪ್ಪಿ ಅರ್ಥಹೀನವಾಗಿ ಆ ಭಾಷೆಯ ಪದವೇ ಅಲ್ಲವೇ ಎಂಬ

ಸಂಶಯ ಹುಟ್ಟಿಸಿಬಿಡುವಷ್ಟು ಅಪರಿಚಿತವಾಗಿಬಿಡಬಹುದು. ಸ್ಥಳನಾಮಗಳಲ್ಲಿ ಇಂಥ ಎಷ್ಟೋ ಅಪ್ರಚಲಿತ, ಅರ್ಥಹೀನ ಪದಗಳಿದ್ದರೂ ಅವು ಸಾಮಾನ್ಯವಾಗಿ 'ಸ್ಥಿರಪಟ್ಟಿಕೆ' (fixed lables) ಗಳಾಗಿರುವುದರಿಂದ ಹಾಗೆ ಹಾಗೆಯೇ ಬಳಸಲ್ಪಡುವುದುಂಟು (ಉದಾ. ಅಜೆ ಮತ್ತು ಅದರ ಪರಿಭೇದಗಳು, ಕಜೆ, ಅಡಕ, ಅಳಿಕೆ, ಪಳ್ಳಿ, ಆಲ (ಳ), ಆರ (ರು), ಪಾಣತಿ, ಬಜೆ, ತುದಿ, ಮಾಣತಿ, ಕುಕ್ಕ್ (ಕುಕ್ಕೆ ಇತ್ಯಾದಿ ಪಾಡಿ, ಕಾರ್ (ಗಾರ್) ಇತ್ಯಾದಿ). ಇಂಥ ಸ್ಥಳನಾಮಗಳು ಅತ್ಯಂತ ಪ್ರಾಚೀನ ಚಾರಿತ್ರಿಕ ಸ್ಮಾರಕಗಳಾಗಿದ್ದು ಸಂರಕ್ಷಣೆಗೆ, ಅಷ್ಟೇ ಸಂಶೋಧನೆಗೆ ಅರ್ಹವಾಗಿವೆ.

ಇತ್ತೀಚೆಗೆ ಎಲ್ಲ ದೇಶದ ಭಾಷಾವಿಜ್ಞಾನಿಗಳು ಸ್ಥಳನಾಮಗಳ ಮಹತ್ವವನ್ನು ಅರಿತಿದ್ದು ಅದನ್ನೊಂದು ಅಧ್ಯಯನದ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ. ಇದರಿಂದಾಗುವ ಪ್ರಯೋಜನ ಹಲವು. ಭೌಗೋಳಿಕವಾಗಿ, ಭಾಷಾವೈಜ್ಞಾನಿಕವಾಗಿ, ಜನಾಂಗಿಕ ಯಾ ಮಾನವಶಾಸ್ತ್ರೀಯವಾಗಿ, ಚಾರಿತ್ರಿಕವಾಗಿ, ಸಾಹಿತ್ಯಿಕವಾಗಿ – ಹೀಗೆ ಹತ್ತು ಹಲವು ಮುಖಗಳಿಂದ ಇದು ತೀರಾ ಉಪಯುಕ್ತ ಸಂಶೋಧನೆಯಾಗಬಲ್ಲದು. ಇದೀಗ ದ್ರಾವಿಡವರ್ಗದ ಮೂಲನಿವಾಸವನ್ನ ಗೊತ್ತುಹಚ್ಚುವಲ್ಲಿ ಭಾಷೆಯು ಇತರ ಪರಿಕರಗಳೊಂದಿಗೆ ಸ್ಥಳನಾಮವೂ ಪ್ರಧಾನ ಸಾಧನವಾಗಿ, ಆಧಾರವಾಗಿ ಪರಿಣಮಿಸಿದೆ. ದ್ರಾವಿಡ ಭಾಷೆಗಳಿಗೂ ದ. ಐರೋಪ್ಯ ಭಾಷೆಗಳಿಗೂ (ಮುಖ್ಯವಾಗಿ ಬಾಸ್ಕ್, ಸೋಚಿಕ್, ಪರ್ಷಿಯನ್ ಇ.ಇ.) ವ್ಯಾಕರಣ ಮತ್ತಿತರ ಭಾಷಾವೈಜ್ಞಾನಿಕ ಸಾಮಿಪ್ಯ ಇರುವುದರೊಂದಿಗೆ, ಸ್ಥಳನಾಮರೂಪಗಳಲ್ಲಿಯೂ ತುಂಬ ಸಾಮ್ಯವಿದೆ. ಮತ್ತಿತರ ಚಾರಿತ್ರಿಕ ಅವಶೇಷಗಳು, ದೇಹರಚನೆ ಮುಂತಾದವುಗಳ ಪರಿಶೀಲನೆಯಿಂದ ದ್ರಾವಿಡ ಜನಾಂಗವು ಈ ಭಾಗದಲ್ಲಿ ಮೂಲತಃ ಇದ್ದು (ಸು. ಕ್ರಿ. ಪೂ. 3–5ನೇ ಸಹಸ್ರವರ್ಷ (millinium)), ಕಾಲಾಂತರದಲ್ಲಿ ಉ. ಭಾರತಕ್ಕೆ, ಆರ್ಯರು ಬರುವವೇಳೆಗೆ ಮಧ್ಯಭಾರತದಿಂದ ದ. ಭಾರತಕ್ಕೆ ವಲಸೆಬಂದು ನೆಲೆಗೊಂಡಿರಬೇಕೆಂಬ ತೀರ್ಮಾನಕ್ಕೆ ಬರಲಾಗಿದೆ. ಅಲ್ಲದೆ, ಪರ್ಷಿಯ, ಇರಾನ್, ಸ್ಪೇಯಿನ್ ಮತ್ತು ಫ್ರಾನ್ಸ್‌ಗಳ ನಡುವಣ ಪ್ರದೇಶ ಮುಂತಾದ ಕಡೆ ಎಷ್ಟೋ ದ್ರಾವಿಡ ಊರ ಹೆಸರುಗಳು (cf ಉರ್–ಮೆಸಪೊಟೇಮಿಯ) ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಇನ್ನಷ್ಟು ಸಂಶೋಧನೆ ನಡೆದಲ್ಲಿ ಮೂಲ ಮಾನವ ಜನಾಂಗದ ಕೇಂದ್ರವನ್ನು, ವಲಸೆಯ ಹಾದಿಯನ್ನು ಮತ್ತು ಕಾರಣವನ್ನು, ಪತ್ತೆ ಹಚ್ಚಿ, ಆದಿಯ ಮಾನವ ಚರಿತ್ರೆಯನ್ನು 'ಪುನರ್ರಚಿಸುವುದು' ಸಾಧ್ಯವಾದೀತು.

ಇನ್ನು ಭಾಷಾದೃಷ್ಟಿಯಿಂದ ನೋಡಿದರೂ ಸ್ಥಳನಾಮಶೋಧನೆಯಿಂದ ತುಂಬಾ ಲಾಭವಿದೆ. ಯಾವ ಲಿಖಿತ ಗ್ರಂಥಗಳಲ್ಲಿಯೂ, ಕೋಶಗಳಲ್ಲಿಯೂ, ಆಡುಮಾತಿನಲ್ಲಿಯೂ ಉಪಲಬ್ಧವಿರದ ಪ್ರಾಚೀನ ಪದಗಳು ಸ್ಥಳನಾಮ ಸಿದ್ಧ

ಪಟ್ಟಿಕೆಗಳಲ್ಲಿ ಭದ್ರವಾಗಿ ಅಳವಟ್ಟಿವೆ. ಅವುಗಳ ಅರ್ಥವನ್ನು ಆಯಾಯಾ ಸ್ಥಳಗಳ ಭೂವಿವರ ಪರಿಶೀಲನೆಯಿಂದಲೂ, ಹತ್ತಾರು ದ್ರಾವಿಡ ಭಾಷೆಗಳಲ್ಲಿ ಕಾಣಸಿಗುವ 'ಸಾಧಿತ' ಪದಗಳ ತುಲನಾತ್ಮಕ ಅಧ್ಯಯನದಿಂದಲೂ, ಶೋಧಿಸಿ 'ಸಂಪಾದಿಸಿ'ದಲ್ಲಿ ಅದೊಂದು ಭಾಷಾವಿಜ್ಞಾನಕ್ಕೆ, ಕೋಶಕ್ಕೆ ಮಹತ್ವದ ಕೊಡುಗೆಯಾಗುವುದರಲ್ಲಿ ಸಂಶಯವಿಲ್ಲ. ಇತರ ಮುಂದುವರಿದ ರಾಷ್ಟ್ರಗಳಂತೆ ನಮ್ಮಲ್ಲೂ ಸ್ಥಳನಾಮದ ಕುರಿತಾಗಿ ಚಿಂತನ–ಮಂಥನ ನಡೆಸುವ ನಿಯತ ಕಾಲಿಕೆಗಳು ಸಂಘ–ಸಂಸ್ಥೆಗಳು, ವಿಚಾರ ಗೋಷ್ಠಿ ಮುಂತಾದುವುಗಳು ಏರ್ಪಡಬೇಕು. ಸ್ಥಳನಾಮಾಧ್ಯಯನದ ಪ್ರಾಮಾಣಿಕ ಆಂದೋಲನ ಆರಂಭವಾಗಿ, ಮೂಲರೂಪದ ಶೋಧನೆಯೊಂದಿಗೆ ಅರ್ಥವಿವರಣೆ ನೀಡುವ 'ಸ್ಥಳನಾಮ ಕೋಶ'ಗಳು ಮೈತಳೆಯಬೇಕು. ಇದಕ್ಕೆಲ್ಲಾ ಭಾಷಾವಿಜ್ಞಾನಿಗಳು, ವಿಶ್ವವಿದ್ಯಾನಿಲಯಗಳು, ಸರಕಾರ, ಸಂಘಸಂಸ್ಥೆಗಳು ಅಲ್ಲದೆ ಸಾರ್ವಜನಿಕರು ಸಕ್ರಿಯವಾಗಿ ಪರಿಶ್ರಮಿಸಬೇಕು. ಆದರೆ, ಆ ಮುಹೂರ್ತ ನಮ್ಮಲ್ಲಿನ್ನೂ ಬಂದಿಲ್ಲ ಎನ್ನಲು ವಿಷಾದವಾಗುತ್ತದೆ.

ಉತ್ತಮ ಪುರುಷ

ಜಾ. ಗೋ.

ಚಿಕ್ಕಂದಿನಲ್ಲಿ ವ್ಯಾಕರಣ ಕಲಿವಾಗ
ಮೇಷ್ಟ್ರು ಹೇಳಿದ್ದ ನೆನಪು
ಉತ್ತಮ ಪುರುಷ ಎಂದರೆ
ನಾನು ಅಥವಾ ನಾವು ಎಂದು

ಮುಂದೆ ಉತ್ತಮಿಕೆಯುಹಮಿಕೆಯಲ್ಲೇ
ಉತ್ತರೋತ್ತರವಾಗಿ ಪರೀಕ್ಷೆಗಳಲ್ಲಿ
ತೇರ್ಗಡೆಯಾಗುತ್ತ ಆಗುತ್ತ ನಡೆದೆ ನಾನು ;
ಇತ್ತ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತ
ನಡೆದಂತೆಲ್ಲ, ಕ್ಲಾಸು ರ್‍ಯಾಂಕುಗಳು ಬಂದಂತೆಲ್ಲ,
ಅತ್ತ ನನ್ನುತ್ತಮತ್ವಕ್ಕೆ ಚಿಗುರಿತ್ತು ನೋಡು ಕೋಡು !
ಆಗ ನನ್ನಂಥ ಹತ್ತಾರು ಉತ್ತಮ ಪುರುಷರೇ
ಅರ್ಥಾತ್ ನನ್ನಂಥ ಚಿಗುರಿದ ಕೋಡಿನೊಡೆಯರೇ ಗೆಳೆಯರು ನನಗೆ,
ಆಗ ಸುತ್ತಮುತ್ತೆಲ್ಲ ನಮ್ಮಗಳದೇ ಕೊಂಬು, ನಮ್ಮಗಳದೇ ಕಹಳೆ !

ಆದರೆ ...... ಅಕಟಕಟ! ಅಕಟಕಟ!
ಬಂದಿತೊಂದು ದಿನ, ಒಂದು ದುರ್ದಿನ, ಮುಂದೆ :
ಅಂತಿಮ ಪರೀಕ್ಷೆಯಲಿ ಬಂದಿತ್ತು ಶನಿದಶೆ,
ಕ್ಲಾಸು ರ್‍ಯಾಂಕುಗಳಿಗೆಲ್ಲ ಫಸ್ಟ್‌ಕ್ಲಾಸು ಮೋಸ!
ಅದೇನು ಪ್ರಿಂಟರ್ಸ್ ಡೆವಿಲ್ಲೊ ?
ಇಲ್ಲಾ ರಾಂಗ್ ವ್ಯಾಲ್ಯುಯೇಶನ್ನೋ ?
ಇಲ್ಲಾ ರಾಂಗ್ ಕ್ಯಾಲ್‌ಕ್ಯುಲೇಶನ್ನೋ ?
ಅಂತೂ ಆಗಿತ್ತು ನೋಡಿ ನನಗೆ ಭಾರೀ ಮೋಸ !

ನನ್ನ ನನ್ನತನಕ್ಕೇ ಮಹಾ ಮೋಸ !
ಇನ್ನು ಜನರಂತೂ......ನಿಮಗೆ ಗೊತ್ತೇ ಇದೆಯಲ್ಲ
'ಜನ ಮರುಳೋ ಜಾತ್ರೆ ಮರುಳೋ' ಅಂತ;
ಇಳಿಸಿಯೇಬಿಟ್ಟರು ನೋಡಿ ಅವರುಗಳು ನನ್ನ ಬೆಲೆಯನೆಲ್ಲ !

ನನ್ನ ಹಿಂದಿನ ಓದಿನ ಇತಿಹಾಸ, ಸಾಧನೆ,
ಇತ್ಯಾದಿಗಳನೆಲ್ಲ ತುಸು ಕೂಡ ಲೆಕ್ಕಿಸದೇ !

ಎಲ ! ಆ ಚಾಲುಕ್ಯ ವಲ್ಲಭ ಇಮ್ಮಡಿ ಪುಲಿಕೇಶಿ
ಏನೋ ಒಂದು ವಿಷಗಳಿಗೆಯಲ್ಲಿ
ಕೊನೆಗೆ ಆ ಪಲ್ಲವೇಂದ್ರನ ಹಠಾತ್
ಮುತ್ತಿಗೆಯಲ್ಲಿ ಸತ್ತರೇನಾಯ್ತು ?
ಆ ಹಿಂದೆ ಗೆದ್ದಿದ್ದ ಘನ ಘೋರಯುದ್ಧಗಳಲ್ಲೆಲ್ಲ
ಅವನು, ಆ ಸತ್ಯಾಶ್ರಯನು ಸೋತಂತಾಯ್ತೆ ?
ಏನು? ಅವನು ಆ ಚಕ್ರವರ್ತಿ ಹರ್ಷವರ್ಧನನನ್ನು
ಆ ನರ್ಮದೆಯ ದಡದಾಚೆಯೇ ತಡೆದು
ತನ್ನ ದೋರ್ಬಲದಿಂದಲವನ ಹಿಮ್ಮೆಟ್ಟಿಸಿ
ಅವನಿಂದ ದಕ್ಷಿಣಾಪಥೇಶ್ವರನೆಂಬ ಹೆಸರ
ತಾ ಗಳಿಸಿದ್ದೇನು ಹುಸಿಯಾಯ್ತೆ ?
ಛೇ ಛೇ . . . . ಎಂಥ ಸಣ್ಣ, ಮೂರ್ಖ ಕ್ಷುಲ್ಲಕ ಜನ !

ಕಿಂಚಿತ್ತೂ ಇತಿಹಾಸ-ಪ್ರಜ್ಞೆಯೇ ಇಲ್ಲ ಇವರಲ್ಲಿ !
ನಮ್ಮ ಕರ್ನಾಟಕದ, ಅದರಂತೆಯೇ
ವೀರ ಕನ್ನಡಿಗನಾದಂಥ ನನ್ನ
ಜೀವನದ ಗತವೈಭವವನ್ನು
ಮರೆತೇ ಬಿಟ್ಟಿರುವರೀ ಮೂರ್ಖಜನ !
ಈ ಹೊರಗಿನ ಜನರು, ಸುಸ್ಥಿತೀ ಭಾಜನರು, ಹಾಳಾಗಿ ಹೋಗಲಿ ;
ಆದರೆ ನನ್ನ ಗೆಳೆಯರು, ಅರ್ಥಾತ್ ನನ್ನ ಗೆಳೆಯರು
ಏಂದು ಹಿಂದೆ ತಮ್ಮನ್ನು ತಾವು ಕರೆದು ಕೊಂಡಂಥವರು ?
ಅವರೂ, ಆ ಪ್ರಾಜ್ಞರೂ, ಈ ಅಜ್ಞ ಜನಗಳ ಈ ಅಜ್ಞದನಗಳ
ಹೆಡ್ಡ ಹಾದಿಯನ್ನೇ, ಅಡ್ಡ ಹಾದಿಯನ್ನೇ ಹಿಡಿಯುವುದೆಂದರೆ ?

ಛೇ ಛೇ ಛೇ ಛೇ, ಛೇಛೇ ಛೇಛೇ !
ಶಾಂತಂ ಪಾಪಂ, ಶಾಂತಂ ಪಾಪಂ !
ನನ್ನ, ಅಲ್ಲಲ್ಲ, ನಮ್ಮ ಉಜ್ವಲ ಇತಿಹಾಸದ
ಪುಟಗಳ ಅಪ್ಪಟ ಸುವರ್ಣಾಕ್ಷರಗಳಿಗೆಲ್ಲ
–ಅಕಟಕಟ !–
ಅಪ್ಪಟ ಕಪ್ಪು ಮಸಿ ಬಳಿಯಿತು,
ಒಟ್ಟಿನ ಮೇಲೆ ಉತ್ತಮ ಪುರುಷತ್ವಕ್ಕೆ ಧಕ್ಕೆ ಉಂಟಾಯ್ತು !

ಗಾಥಾಸಪ್ತಶತಿಯಲ್ಲಿ ಕನ್ನಡ ನುಡಿಗಳು

ಕೆ. ವೆಂಕಟರಾಯಾಚಾರ್ಯ

ಭಾರತದೇಶದಲ್ಲಿಯೂ (ಇತರ ದೇಶದಲ್ಲೂ), ಹಲವು ಜನಾಂಗಗಳಿವೆ. ಆ ಜನಾಂಗಗಳು ಕಾಲಕಾಲಕ್ಕೆ ತಕ್ಕಂತೆ ಬೇರೆಡೆಯವರೊಡನೆ ವ್ಯಾಪಾರ–ವ್ಯವಹಾರಗಳನ್ನು ಬಳಸಿದ್ದಾರೆ. ಅವೇರೆಗೆ, ಒಂದೆಡೆಯವರು ಬೇರೆಡೆಯವರೊಂದಿಗೆ ಭಾಷೆಯಲ್ಲಿ, ಆಚಾರದಲ್ಲಿ ಸಮ್ಮಿಲನ–ಸಮ್ಮಿಶ್ರಗೊಂಡಿರುವುದು ಸಾಜವಾಗಿದೆ. ಆದುದರಿಂದ, ಆವೊಂದು ಜನಾಂಗವೂ ಶುದ್ಧ ಮೂಲ ರೂಪದಲ್ಲಿಲ್ಲ, ಆವ ಭಾಷೆಯೂ, ಆಚಾರವೂ, ವ್ಯವಹಾರವೂ ಪೂರ್ಣತಃ ಪ್ರಾಚೀನರೂಪದಲ್ಲಿಲ್ಲ ಎಂಬುದು ಸಾರ್ವತ್ರಿಕವಾಗಿ ಒಪ್ಪತಕ್ಕುದಾಗಿದೆ.

ಉದಾಹರಣವಾಗಿ, ಸಂಸ್ಕೃತಭಾಷೆ ಪ್ರಾಚೀನತಮವಾದುದು. ಅದರಲ್ಲಿ ಬರೆದ ಪ್ರಾಚೀನಕೃತಿಯಿದೆ. ಆದರೂ ಆ ಭಾಷೆಯಲ್ಲಿ ಇತರ ಭಾಷೆಗಳ ಕೆಲವು ನುಡಿಗಳುಂ ಸೇರಿವೆಯೆಂದು ಬಲ್ಲವರು ಬರೆಯುತ್ತಾರೆ (ಉಪನಿಷತ್ತಿನಲ್ಲಿರುವ 'ಮಟಚಿ'ಯೆಂಬ ನುಡಿ 'ಮಿಡಿತೆ'ಯೆಂಬುದರಿಂದ ಬಂತೆನ್ನುತ್ತಾರೆ.) ಜ್ಯೋತಿಷ್ಯ ಗ್ರಂಥದಲ್ಲಿ ಕೆಲವು ನುಡಿಗಳು ಗ್ರೀಕ್‌ಭಾಷೆಯಿಂದ ಬಂದವೆನ್ನುತ್ತಾರೆ. ಪ್ರಾಚೀನ ಮಹಾಕವಿಗಳಾದ ಭಾಸ, ಕಾಳಿದಾಸ ಮೊದಲಾದವರು ಬಳಸಿದ ಸಂಸ್ಕೃತದ-ಪ್ರಾಕೃತದ-ಶಬ್ದಗಳಲ್ಲೂ ಕೆಲವು ಇತರ ಭಾಷಾ ಭಾಂಡಾರದಿಂದ ಎರವಲುಗೊಂಡವು; ಕೆಲವು ರೂಪಾಂತರಿತಗಳು ; ಕೆಲವು ಪ್ರಭಾವಿತಗಳೆಂದು ಹೇಳಬರುತ್ತದೆ. ಆ ಪ್ರಾಚೀನಕಾಲದ ಕೃತಿಗಳಲ್ಲಿ ಕೆಲವು ಮಾತ್ರ ನಮಗೆ ಇಂದು ದೊರೆಯುತ್ತವೆ; ಕೆಲವು ಇನ್ನೂ ದೊರೆಯುತ್ತಿಲ್ಲ ; ಹೆಸರು ಮಾತ್ರ ಕೇಳುತ್ತವೆ. ಕಾಳಿದಾಸನು ಹೆಸರಿಸಿದ ಸೌಮಿಲ್ಲನ ಪೂರ್ಣಕೃತಿಯಿನ್ನೂ ದೊರಕಿಲ್ಲ. ಹಾಗೆಯೇ, ಕನ್ನಡದ ಪ್ರಾಚೀನ ಕೃತಿಗಳಲ್ಲಿ ಕೆಲವು ಇನ್ನೂ ದೊರಕಿಲ್ಲ : 'ಚೂಡಾಮಣಿ' ಯೆಂಬ ಮಹಾಗ್ರಂಥ ದೊರಕಿಲ್ಲ. ಶೂದ್ರಕನ ಕತೆಯುಳ್ಳ 1 ನೆಯ ಗುಣವರ್ಮನ ಕಾವ್ಯಸಾರದ ಕೆಲವು ಪದ್ಯಗಳು ತಿಳಿದಿವೆ, ಆತನ 'ಹರಿವಂಶ'ದ ಒಂದು ಗದ್ಯ ಮಾತ್ರ ತಿಳಿದಿದೆ. (ಕೆ. ವೆಂಕಟರಾಯಾಚಾರ್ಯ : 1ನೆಯ ಗುಣವರ್ಮನ ಕೃತಿಗಳು-ಪ್ರಬುದ್ಧ ಕರ್ನಾಟಕದ ಲೇಖನ ನೋಡಿ).

'ಕವಿರಾಜಮಾರ್ಗ'ದಲ್ಲಿ ಹೆಸರಿಸಿದ ಸಂಸ್ಕೃತ-ಕನ್ನಡ ಕವಿಗಳ ಪೂರ್ಣಕೃತಿಗಳು ಇನ್ನೂ ದೊರಕಿಲ್ಲ. ಹಾಗೆಯೇ, ಪ್ರಾಕೃತ-ಕನ್ನಡ ಭಾಷೆಗಳ ಪ್ರಾಚೀನದ

ವ್ಯಾಕರಣ-ಕೋಶಾದಿಗಳೂ ಲಭಿಸಿಲ್ಲ! ಆದರೆ, ಪ್ರಾಕೃತ-ಕನ್ನಡ ಭಾಷೆಯ ವ್ಯಾಕರಣ ಕೋಶಾದಿಗಳು ಆ ಪ್ರಾಚೀನ ಕೃತಿಗಳಿಗಿಂತ ಎಷ್ಟೋ ಕಾಲದ ಮತ್ತೆ ಬರೆದವು ದೊರೆಯುತ್ತಿವೆ! ಭಾಷೆ-ಸಾಹಿತ್ಯ-ಮುಂದು, ವ್ಯಾಕರಣ ಕೋಶಾದಿಗಳು ಹಿಂದುಗಡೆ ಬರೆದವುಗಳಾಗಿವೆ!

ಕನ್ನಡದ ಪ್ರಾಚೀನ ಕೃತಿಗಳು ಇಂದು ನಮಗೆ ದೊರಕಿಲ್ಲವೆಂಬಷ್ಟಕ್ಕೆ ಅವು ಇದ್ದಿಲ್ಲವೆನ್ನಲಾಗದು. ಅವುಗಳ ಆದರ್ಶದಲ್ಲಿ ಬರೆದ ಕವಿಗಳು ಉದಾಹರಿಸಿದ ಹೆಸರು-ಪದ್ಯಾಂಶಗಳು ನಮಗೆ ಆದರಾರ್ಹಗಳು. ಉದಾ: 'ಕವಿರಾಜ ಮಾರ್ಗ'ದಲ್ಲಿ ಹೇಳಲಾದ ರಸಾಲಂಕಾರಾದಿಗಳು ಕೇವಲ ಸಂಸ್ಕೃತದ ಅನುವಾದಗಳು; ತದಾಧಾರದ ಮೇರೆಗೆ ಬರೆದ ಅನುಕರಣಗಳೆನ್ನಲಾಗದು. ಅಲ್ಲಿ ಹಲವು ಹಿಂದಿನ ಕವಿಗಳ ನಿರೂಪಣೆ ಬಂದಿವೆ; ಅವರ ನಿರೂಪಣೆಯೇ ಅಡಿಗಲ್ಲಾಗಿದೆ! (ಕವಿರಾಜ ಮಾರ್ಗ ದಲ್ಲಿ ಜೈನರಾಮಾಯಣದ ಪದ್ಯವಿದೆ, ಆ ಕೃತಿ ಇನ್ನೂ ಪೂರ್ಣದೊರಕಿಲ್ಲ! ಇ.)

ಈ ಮೇರೆಗೆ ಪ್ರಾಕೃತಭಾಷೆಯ ಕಾವ್ಯ-ಕೋಶ ವ್ಯಾಕರಣ ಗ್ರಂಥಗಳನ್ನು ಪರಿಶೀಲಿಸಿದರೆ, ಅಲ್ಲಿನ ಕೆಲವು ನುಡಿಗಳು ಇತರ ಭಾಷೆಯವುಗಳೆಂದು ಸ್ಪಷ್ಟ ವಾಗುತ್ತದೆ. 'ಗಾಥಾಸಪ್ತಶತಿ'ಯಲ್ಲಿ ನಾಲ್ಕು ನುಡಿಗಳು (ಎರಡು ನಾಮಪದಗಳು, ಎರಡು ಕ್ರಿಯಾಪದಗಳು) ಪ್ರಾಕೃತ ಕಾವ್ಯ-ಕೋಶ-ವ್ಯಾಕರಣಗಳಲ್ಲಿ ಹೇಗೆ ಹೇಳಿವೆ ಯೆಂದು ಪ್ರಕೃತ ವಿವರಣೀಯ. ಈ ವಿವರಣೆಗೆ ಹಿನ್ನೆಲೆಯಾಗಿ, ಶ್ರೀ ಗೋವಿಂದ ಪೈ 1928ರಲ್ಲಿ ಬರೆದಲೇಖನ ('ಉದಯ ಭಾರತ' ಪತ್ರಿಕೆಯಲ್ಲಿ ಬಂದ 'ಕನ್ನಡ ಸಾಹಿತ್ಯದ ಪ್ರಾಚೀನತೆ') ಮತ್ತು ಡಾ. ಸಾ. ಶಿ. ಮರುಳಯ್ಯನವರು 1978ರಲ್ಲಿ ಬರೆದ ಲೇಖನ (ಮಲ್ಲಾಡಿಹಳ್ಳಿಯ 'ನಂದನವನ'ದಲ್ಲಿ, 2-241) ಪರಿಶೀಲನಾರ್ಹ ಗಳೆಂದು ಎತ್ತಿಕೊಂಡಿವೆ).

"ಕ್ರಿ.ಶ. ಒಂದನೆ ಶತಮಾನದಲ್ಲಿ ಜನ್ಮ ತಾಳಿದ 'ಗಾಥಾಸಪ್ತಶತಿ'ಯಲ್ಲಿ ಕನ್ನಡದ ಮಾತುಗಳು ಇವೆಯೆಂದು ಮೊಟ್ಟಮೊದಲು ಘೋಷಿಸಿ ಕನ್ನಡಿಗರ ಕುತೂಹಲವನ್ನು ಕೆರಳಿಸಿದವರು ರಾಷ್ಟ್ರಕವಿ ಗೋವಿಂದಪೈ. ಶ್ರೀಯುತರ ಹೇಳಿಕೆ ಸಾಹಿತ್ಯ ರಚಕರಿಗೆ ಹೊಸ ಹುರುಪು ಹುಟ್ಟಿಸಿದರೂ ಸಂಶೋಧಕರಿಗೆ ಸಮಾಧಾನ ತರಲಿಲ್ಲ. ಕಾರಣ, ಅವರ ಹೇಳಿಕೆ ಸತ್ಯಕ್ಕೆ ದೂರವಾದದ್ದು. ಅದು ತಮ್ಮ ಆತುರದ ನಿರ್ಧಾರ ವೆಂದು ಅರಿತಿದ್ದರಿಂದಲೊ ಏನೋ, ಶ್ರೀಯುತರು 'ಉದಯಭಾರತ' ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಸವಿಸ್ತಾರವಾದ ಲೇಖನದಿಂದ 'ಗಾಥಾಸಪ್ತಶತಿ' ಎಂಬ ಭಾಗ ವನ್ನು ತೆಗೆದುಹಾಕಿ, ಉಳಿದ ಭಾಗವನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರೆಂದು ತೋರುತ್ತದೆ. ('ಉದಯ ಭಾರತ' 1928 ಅಗೋಸ್ತು. 2-5 ಮತ್ತು ಮೂರು ಉಪನ್ಯಾಸಗಳು: ಕನ್ನಡ ಸಾಹಿತ್ಯದ ಪ್ರಾಚೀನತೆ-ನೋಡಿರಿ). ತಮ್ಮ ವಾದದಲ್ಲಿ ತಿರುಳಿದ್ದಿದ್ದರೆ ಕನ್ನಡದ ದುರ್ವಾಸ ಗೋವಿಂದ ಪೈ ಸದ್ದುಗದ್ದಲವಿಲ್ಲದೆ ತಮ್ಮ

ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳುತ್ತಿರಲಿಲ್ಲ" ಎಂದು ಡಾ. ಸಾ. ಶಿ. ಮರುಳಯ್ಯನವರು ತಮ್ಮ ಬರೆಹದಲ್ಲಿ ಪೀಠಿಕೆಯಾಗಿ ಹೇಳಿರುವುದು ಸರಿಯಾಗಿಲ್ಲ !

'ಗಾಥಾ ಸಪ್ತಶತಿ'ಯಲ್ಲಿ ಕನ್ನಡದ ಮಾತುಗಳಿವೆಯೆಂದು ಶ್ರೀ ಪೈಯವರು ಹೇಳಿರುವುದು 'ಸಾಹಿತ್ಯಾರಚತರಿಗೆ ಹೊಸ ಹುರುಪು ತಂದಿರುವುದು' ಮಾತ್ರವಲ್ಲ ; ಕನ್ನಡ ಭಾಷಾಧ್ಯಯನಶೀಲರಿಗೊಂದು ದಿಗ್ದರ್ಶನವಾಗಿಯೂ ಇದೆಯೆಂದು ಹೇಳಬೇಕು. ಈ ಮೇಲೆಂದಂತೆ, ಸಂಸ್ಕೃತದಲ್ಲಿ ಕೆಲವು ಇತರ ಭಾಷಾಪದಗಳು ಸೇರಿದ್ದು, ಸಂಸ್ಕೃತದಲ್ಲಿ ಅವಕ್ಕೆ ನಿರುಕ್ತವಿಲ್ಲೆಂದು ಕೇಳುತ್ತೇವೆ. "ಕನ್ನಡ–ಅಪಭ್ರಂಶಗಳಲ್ಲಿ ಕೊಳ್ಕೊಡುಗೆಗಳು" ಇವೆಯೆಂದೂ ಕೇಳುತ್ತೇವೆ (ಶ್ರೀ ಎಂ. ವಿ. ಚಿತ್ರಲಿಂಗಯ್ಯ ; ಶ್ರೀಕಂಠ ತೀರ್ಥ, ಪುಟ 599–619) ಲಿಪಿಸೌಕರ್ಯವಿಲ್ಲದ ತುಳುಭಾಷೆಯಲ್ಲೂ (ಪರಿಸರದ ಭಾಷೆಗಳಂತೆ) ಸೇರಿಕೊಂಡ ಇತರ ಭಾಷೆಗಳ ಪದಗಳಿವೆಯೆನ್ನುತ್ತಾರೆ (ಕೆ. ಪಿ. ಚಂದ್ರಕಲಾ ; ಮಂಗಳಾವಲೋಕನ, ಪುಟ 226-231). ನಡುಗನ್ನಡದಲ್ಲಿ ಬರೆದ ಕೃತಿಗಳಲ್ಲಿ (ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಇ.), ಹೊಸಗನ್ನಡದಲ್ಲಿ (ಕನ್ನಡ-ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್) ಕೆಲವು ನುಡಿಗಳು ಇತರ ಭಾಷೆಗಳಿಂದ ಎರವಲಾಗಿ ಸೇರಿವೆ ; ಅವು ಕನ್ನಡವೇ ಸರಿ ಎಂಬ ಭ್ರಮೆಯನ್ನೆ ಶ್ರೀಸಾಮಾನ್ಯರಿಗೆ ಹುಟ್ಟಿಸುತ್ತವೆಯೆಂಬುದನ್ನು ಯಾವ ವಿದ್ವಾಂಸರೂ ಮರೆಯಲಾರರು !

ಶ್ರೀ ಪೈಯವರು 'ಉದಯ ಭಾರತ' ಪತ್ರಿಕೆಯಲ್ಲಿ ಬರೆದ ಲೇಖದಲ್ಲಿ 'ಗಾಥಾ ಸಪ್ತಶತಿ' ಎಂಬ ಭಾಗವನ್ನು ತೆಗೆದುಹಾಕಿ, ವಾಪಸ್ ತೆಗೆದುಕೊಂಡು, ಉಳಿದುದನ್ನು ಸಂಕಲನದಲ್ಲಿ ಪ್ರಕಟಿಸಿರಬೇಕೆಂಬ ಬಗೆತ ಚೆನ್ನಾಗಿಲ್ಲ ! 'ಉದಯ ಭಾರತ'ದಲ್ಲಿ ಬಂದ ಲೇಖ ಮಕ್ಕಾಮುಕ್ಕಿಯಾಗಿ ಪುಸ್ತಕದಲ್ಲಿರುವುದಿಲ್ಲ. ಆಮೇಲೆ (1928ರ ಲೇಖನದ ಮೇಲೆ) ಸಿಕ್ಕಿದ ಬೇರೆ ಆಧಾರಗಳನ್ನು ಲೇಖಕರು ಸೇರಿಸಬಹುದು, ಆ ಕೆಲವನ್ನು ಬಿಡಬಹುದಾಗಿದೆ. ಇದು ಲೇಖಕ ನೈಜಧರ್ಮವಾಗಿದೆ. ಆ ಪುಸ್ತಕದಲ್ಲಿ ಶ್ರೀ ಪೈ ಕನ್ನಡದ ಶಾಸನ-ಕೃತಿಗಳಿಂದಲೆ ಉದಾಹರಣೆಗಳನ್ನು ಆಯ್ದುಕೊಂಡಿದ್ದಾರೆಂದು ಕಾಣುತ್ತದೆ. ಈ ಮೇಲೆಂದಂತೆ, ಸಂಸ್ಕೃತದಲ್ಲಿ ಹಾಗೂ ಅಪಭ್ರಂಶ ಭಾಷೆಗಳಲ್ಲಿ ಸೇರಿರುವ ಕನ್ನಡನುಡಿಗಳು ಮತ್ತು 'ಗ್ರೀಕ್ ನಾಟಕ'ದಲ್ಲಿ ಬಂದಿರುವ ಕನ್ನಡದ ಮಾತುಗಳು,' ಉಪನಿಷತ್ತಿನಲ್ಲಿ ಬಂದ ಕನ್ನಡಪದ, ಇತ್ಯಾದಿಗಳಿಗೆ ಆ ಪುಸ್ತಕದಲ್ಲಿ ಅವಕಾಶಗೊಡಲಿಲ್ಲವೆಂಬುದನ್ನು ಪರಿಕಿಸಬಹುದು ! "ತಮ್ಮ ವಾದದಲ್ಲಿ ತಿರುಳಿದ್ದಿದ್ದರೆ, ಕನ್ನಡದ ದುರ್ವಾಸ ಗೋವಿಂದಪೈ ಸದ್ದುಗದ್ದಲವಿಲ್ಲದೆ, ತಮ್ಮ ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳುತ್ತಿರಲಿಲ್ಲ" ಎಂದು ಡಾ. ಸಾ. ಶಿ. ಮರುಳಯ್ಯನವರೆಂದುದು ಇಲ್ಲಿ ತೀರಾ ಅಸಾಧುವೆಂದು ಕಾಣದಿರದು !

ಶ್ರೀ ಗೋವಿಂದ ಪೈ 'ಕನ್ನಡದ ದುರ್ವಾಸ'ರೆಂಬುದು ತೀರಾ ಅಸಂಗತ. ಬಿ. ಎಂ. ಶ್ರೀಕಂಠಯ್ಯನವರನ್ನು 'ಕನ್ನಡದ ಕಣ್ವ'ರೆಂದು ಗೌರವದಿಂದ ಹೇಳುತ್ತಾರೆ. ಶ್ರೀ ಪೈಯವರು ಕನ್ನಡದ ಕಾವ್ಯರ್ಷಿವಸಿಷ್ಠರೆಂದು ಹೇಳುವುದು ಹೆಚ್ಚು ಗೌರವಾರ್ಹವಾಗಿದೆ! ('ಮುದ್ದಣ'ಕವಿಯ 'ಶ್ರೀರಾಮ ಪಟ್ಟಾಭಿಷೇಕ'ದ ಕೊನೆಯ 33 ಪದ್ಯಗಳನ್ನು ಕವಿಯ ಸಮಕಾಲಿಕರಾದ ಶ್ರೀ ಬವಳಾಡಿ ಹೆಬ್ಬಾರರು ಬರೆದರೆಂದು ಶ್ರೀ ಬಿ. ಎಚ್. ಶ್ರೀಧರರ ಹೇಳಿಕೆಯನ್ನು ಶ್ರೀ ಪೈಯವರು ಅದೊಮ್ಮೆ ನಂಬಿಕೊಂಡು, ತಮ್ಮ ಲೇಖನದಲ್ಲಿ ಬಳಸಿದ್ದರು (ಕನ್ನಡನುಡಿ, ಶರಣ ಸಾಹಿತ್ಯಗಳಲ್ಲಿರುವ ಶ್ರೀ ಪೈಯವರ ಲೇಖ ನೋಡಿರಿ). ಆ ಹೇಳಿಕೆ ತೀರಾ ಅಸಂಗತವೆಂದು ಆ ಭಾಗವನ್ನು ಆ ಲೇಖದಿಂದ ಬಿಟ್ಟುದೂ ಉಂಟು : (ಕುಂದಾಪುರದ ಭಾಂಡಾರ್ಕರ್ಸ್ ಕಾಲೇಜಿನಲ್ಲಿ ಪ್ರಕಟವಾದ 'ಸಂಸ್ಕರಣ ಸಂಚಿಕೆ'ಯ ಲೇಖನ ನೋಡಿರಿ.) 'ಗಾಥಾ ಸಪ್ತಶತಿಯಲ್ಲಿ ಕನ್ನಡದ ಮಾತುಗಳು' ಹಾಗೆ ಬಿಡತಕ್ಕವೂ ಅಲ್ಲವೆಂದು ಇಲ್ಲಿ ಬರೆಯಲಿದೆ.

'ಗಾಥಾ ಸಪ್ತಶತಿ'ಯಲ್ಲಿ ಕಂಡುಬಂದ-ಇದೀಗ ಚರ್ಚಾಸ್ಪದಗಳಾದ ಮಾತುಗಳು ನಾಲ್ಕು (ಎರಡು ನಾಮ ಪದಗಳು, ಎರಡು ಕ್ರಿಯಾಪದಗಳು) ಪೊಟ್ಟ (ಕನ್ನಡದಲ್ಲಿ ಪೊಟ್ಟೆ, ಹೊಟ್ಟೆ), ತುಪ್ಪ (ಕಾಂನುಪ್ಪ), ಪಿಟ್ಟೇ ಇ (ಕಃ ಪೆಟ್ಟು), ತೀರ ಇ (ಕಃ ತೀರ್), "ಇವು ಪ್ರಾಯಶಃ ಸಂಸ್ಕೃತ ಮತ್ತು ಪ್ರಾಕೃತಮೂಲಗಳಿಂದ ಬಂದವುಗಳೇ ಹೊರತು ಕನ್ನಡದ ತೋರದವುಗಳಲ್ಲ ಅನ್ನಿಸುತ್ತದೆ"ಯೆಂಬ ಡಾ. ಸಾ. ಶಿ. ಮರುಳಯ್ಯನವರ ಒಂದನೆ ಆಕ್ಷೇಪ ಸರಿಯಾಗಲಾರದು ! ಪ್ರಾಕೃತ ಶಬ್ದ–ಧಾತುಗಳ ಬಗೆಗೆ ಸಂಸ್ಕೃತ ಗ್ರಂಥಗಳನ್ನು ಮಾತ್ರ ಪರಿಕಿಸಿದರೆ ಸಾಕಾಗಲಾರದು. ಪ್ರಾಕೃತ ಕಾವ್ಯ–ಕೋಶ–ವ್ಯಾಕರಣಗಳಲ್ಲಿ ಆ ಬಗೆಗೆ ಏನಿದೆಯೆಂದು ನೋಡಲೇಬೇಕು!

'ಪೃಷ್ಠ' ವೆಂದರೆ, ಪ್ರಾಕೃತ ಭಾಷೆಯಲ್ಲಿ ನಾನಾ ತರದಲ್ಲಿ ತದ್ಭವರೂಪ ಅರ್ಥಗಳಿವೆ: 'ಪೃಷ್ಠ–ಪುಟ್ಟರಿ (ಪ್ರಾಕೃತ ಪ್ರಕಾರ), 'ಪೃಷ್ಠ ಪಿಟ್ಠ, ಪಿಟ್ಠ (ಹೇಮಚಂದ್ರನ ಕುಮಾರಪಾಲ ಚರಿತೆ ಲಕ್ಷ್ಮೀಧರನ ಷಡ್ಭಾಷಾಚಂದ್ರಿಕೆ ಹೇಮಚಂದ್ರನ ಪ್ರಾಕೃತವ್ಯಾಕರಣ) ಎಂದಿವೆ. 'ಪ್ರೊಟ್ಟಂ-ಉದರಂ (ಹೊಟ್ಟೆ) ಎಂದು ಪ್ರತ್ಯೇಕ ಹೇಳಿದೆ (ಹೇಮಚಂದ್ರನ ದೇಶೀನಾಮ ಮಾಲೆ). ಸಂಸ್ಕೃತದ 'ಪೃಷ್ಟ' ದಿಂದ

---

೧ "ಪೃಷ್ಠದಿಂದಲೆ ಪೊಟ್ಟ (ಪ್ರಾಕೃತ) ಆಗಿರಬಹುದು. ಪೃಷ್ಠವೆಂದರೆ ಮುಂಭಾಗದಂತೆ ಹಿಂಭಾಗವೆಂದೂ ಇದೆ" ಯೆಂದು ಒಂದನೆಯ ನುಡಿಯ ಮೂಲವನ್ನು ಹೇಳಿದ್ದಾರೆ, ಸಾ. ಶಿ. ಮರುಳಯ್ಯನವರು. 'ಪೃಷ್ಠ'ವೆಂದರೆ ಬದಿಯೆಂದೂ ಅರ್ಥವಾಗುತ್ತದೆ. ''ಎಲ್ಲಾ ಭಾಷೆಯೂ-ಎಲ್ಲಾ ನುಡಿಯೂ–ಸಂಸ್ಕೃತದಿಂದಲೆ ಬಂದಿದೆ" ಎಂದು ಕೆಲವರು (ಸಂಸ್ಕೃತ ಪಂಡಿತರು) ಹೇಳುತ್ತಾರೆ ಅಂತೆ.'ಪೃಷ್ಠ'ದಿಂದಲೆ 'ಪೊಟ್ಟ'ಆಯಿತೆಂದು ತಾನೇ ಹೇಳುವುದು ಸರಿಯಲ್ಲ. ಸಂಶೋಧನೆಯೆಂದರೆ-ವಿಮರ್ಶೆಯೆಂದರೆ ಈ ನುಡಿಗೆ ಪ್ರಾಕೃತ ಕೃತಿಗಳ ಆಧಾರ-ಉದಾಹರಣೆಗಳನ್ನು ಹೇಳಬೇಕಾಗಿದೆ-

'ಪೊಟ್ಟ' ಆಗಿದೆ (ಅದೇ ಗ್ರಂಥ) ಅದು 'ಪೊಟ್ಟೆ (ಹೊಟ್ಟೆ)'ಯೆಂದು ಕನ್ನಡದಲ್ಲಿದೆ. (ಪೊಟ್ಟಣವೆಂಬ ನುಡಿ ಈ ವರ್ಗಕ್ಕೆ ಸೇರಿರಬಹುದು). ಪೊಟ್ಟವು ಸಂಸ್ಕೃತವಲ್ಲ ; ಪ್ರಾಕೃತದಿಂದ ಕನ್ನಡದಲ್ಲಿ ಬಳಕೆಯಿರುವ ನುಡಿ. ಅದೇ 'ಪೊಟ್ಟೆ (ಹೊಟ್ಟೆ)'ಯು ಮೂಲರೂಪವಾಗಿದೆ!

'ತಪ್ಪೋ' ಎಂಬುದಕ್ಕೆ ಆರು ಬಗೆಯ ಅರ್ಥಗಳಿವೆ. (ಹೇಮಚಂದ್ರನ ದೇಶೀನಾಮಮಾಲೆ) ; ಅವಲ್ಲಿ 'ಸ್ನಿಗ್ಧ'ವೂ ಒಂದಾಗಿದೆ. 'ತುಪ್ಪಾ'ವೆಂಬುದು ದ್ರಾವಿಡ ನುಡಿಯೆಂದು ಆ ಗ್ರಂಥದ ಟಿಪ್ಪಣಿಯಲ್ಲಿದೆ.

'ಮಧಿ ಅ ದಹಿಣೋ ತುಪ್ಪಂಪ' (ಯೆಥಿತಧಘ್ನೋ 'ತುಪ್ಪಂ'–ಇತಿ ದೇಶಿತ್ವಾತ್ ನವನೀತಂ) ಎಂದಿರುವುದೂ ಗಮನೀಯ (ಹೇಮಚಂದ್ರನ ಕುಮಾರ ಪಾಲ ಚರಿತೆಯ ವ್ಯಾಖ್ಯಾನ).

ಅಂಕೋಲ್ಲ ತೇಲ್ಲ-ತುಪ್ಪ'ವೆಂಬ 'ತುಪ್ಪಾ'ಕ್ಕೆ ನಿರುಕ್ತ ಪ್ರತ್ಯೇಕ ಹೇಳಿಲ್ಲ (ಹೇಮಚಂದ್ರನ ವ್ಯಾಕರಣ). ಅದರ ಟಿಪ್ಪಣಿಯಲ್ಲಿ 'ತುಪ್ಪಾ'ವೆಂದರೆ 'ಘೃತ' ವೆಂದಿದೆ. 'ತುಪ್ಪ'ವು ದೇಶೀನಾಮ–ಕನ್ನಡವೆಂದು ಪರಿಭಾವಿಸಿದರೆ ತಪ್ಪಾಗದು. (ಈಯೆಡೆಯಲ್ಲಿ, ಡಾ. ಸಾ. ಶಿ. ಮರುಳಯ್ಯನವರು ಬರೆದ ವಿವರಣೆಗೆ ಇದರ ಅನು ಬಂಧದಲ್ಲಿ ವಿವೇಚಿಸಲಾಗಿದೆ).

೩. 'ಪಿಟ್ಟೇ ಇ' ಎಂಬ ಪ್ರಾಕೃತ ನುಡಿಗೆ ಕನ್ನಡದ 'ಪೆಟ್ಟು' ಎಂಬುದಕ್ಕೆ ಸಂಬಂಧವಿಲ್ಲ ; 'ಪಿಟ್' ಎಂಬ ಸಂಸ್ಕೃತ ಧಾತುವಿಂದ ಅದು ಬಂತೆಂದು ಡಾ. ಸಾ. ಶಿ. ಮರುಳಯ್ಯನವರ ವಾದವು ಭಾಷಾಪಂಡಿತರಿಗೆ ಒಪ್ಪತಕ್ಕುದಲ್ಲ. 'ಪಿಟ್ಟೇ ಇ' ಎಂಬುದರ ಮೂಲ (ಸಂಸ್ಕೃತ)ರೂಪ, 'ಭ್ರಂಶತಿ' ಎಂದಿದೆ (ಲಕ್ಷ್ಮೀಧರನ ಷಡ್ಭಾಷಾ ಚಂದ್ರಿಕೆ). ಆದರೆ 'ಪಿಟ್ಟೇಇ' ಎಂಬ ಪದವಿರುವ 'ಗಾಥಾಸಪ್ತಶತಿ'ಯ ಬಗೆಗೆ ಆ ಪ್ರಾಕೃತರೂಪ–ಅರ್ಥಗಳು ಸರಿಯಾಗಲಾರವು ; 'ಪೆಟ್ಟು' ಎಂಬ ಕನ್ನಡನುಡಿಯೇ ಅದಕ್ಕೆ ಹೊಂದಿಕೊಳ್ಳುವ ರೂಪ-ಅರ್ಥಗಳಾಗಿವೆಯೆನ್ನಬೇಕು।

೪. 'ತೀರ ಇ' ಎಂಬುದಕ್ಕೆ ಕನ್ನಡದ 'ತೀರ್—ಸಮರ್ಥನಾಗು' (ಸಾಕಾಗು) ಎಂಬುದು ಸಂಬಂಧಿಯಾಗಿದೆ ಎನ್ನಲಡ್ಡಿಯಿಲ್ಲ! ರನ್ನನ ಗದಾಯುದ್ಧ ಸಂಗ್ರಹ ದಲ್ಲಿ (3-44), 'ತ್ರಿದಶನದೀಸುತನಿಂ ತೀರದ ಕಜ್ಜಂ'ವೆಂಬಲ್ಲಿ 'ಮುಗಿಯದ' ಎಂದು ಡಾ. ಸಾ. ಶಿ. ಮರುಳಯ್ಯನವರು ಹೇಳಿದ ಅರ್ಥ ಸರಿಯಾಗದು ; ಅಲ್ಲಿ 'ಸಮರ್ಥವಾಗದ' ಎಂಬರ್ಥವೇ ಸಾಧುವಾಗಿದೆ.

ತೃ ತರಣೆ' ಎಂಬ ಸಂಸ್ಕೃತದ ಧಾತುವಿಂದ 'ತೀರ್' ಬಂತೆಂಬುದು ಯಾವ ಭಾಷಾಭ್ಯಾಸಿಗೂ ಮೆಚ್ಚಾಗದು! 'ತೀರ್' ಎಂಬುದು ಕನ್ನಡದ ಗ್ರಂಥಗಳಲ್ಲಿ

ಸುಪ್ರಸಿದ್ಧವಾಗಿ ಬಳಕೆಯಿದೆ. 'ತೀರಮೆ = ಸಾಕಾದುದು' (ಪಂಪರಾಮಾಯಣ ; ಶಬ್ದಮಣಿದರ್ಪಣದ ಸೂತ್ರ 213 ನೋಡಿರಿ).

ಉಪಸಂಹಾರ : ಇಂತಹ ವಿಚಾರಗಳನ್ನು ಕೇವಲ ವಾದ ಪ್ರಚಾರಗಳಿಗಾಗಿ ಬಳಸಬಾರದು. ನಿರ್ದಾಕ್ಷಿಣ್ಯವಾಗಿಯೂ, ಸಾಧಾರಣವಾಗಿಯೂ ಇಲ್ಲಿ ವಿಶ್ಲೇಷಿಸ ಬೇಕು. ಕನ್ನಡದ ಅಭಿಮಾನವೊಂದೇ ಇಲ್ಲಿ ಪ್ರೇರಕವಲ್ಲ. ಭಾಷೆಯ-ಸಾಹಿತ್ಯದ ಮುನ್ನಡೆಗೆ ಇಂತಹ ವಿಚಾರ-ವಾದಗಳು ಬೇಕು.

ಶ್ರೀ ಪೈಯವರ ವಾದ ಆತುರದ್ದಾಗಿಲ್ಲ, ಪ್ರಾಕೃತ ಗ್ರಂಥಗಳ ಆಧಾರದಿಂದ ನಾವು ಅದನ್ನು ಪರಿಶೀಲಿಸಿದರೆ ಸಮಂಜಸವೂ ಆಗಿರುತ್ತದೆಯೆಂದು ಇಲ್ಲಿ ವಿದಿತ! ಬಲ್ಲವರು ಈ ಬಗೆಗೆ–ಯಥಾಪತ್ತಾಗಿ ವಿವರಿಸಲು–ಮುಂದಾಗಲೆಂದು ವಿನಮ್ರ ವಿಜ್ಞಾಪನೆಗಳು !

ಅನುಬಂಧ

"ತುಪ್ಪ ಮತ್ತೊಂದು ನಾಮಪದ. ಇದು ಪ್ರಾಕೃತವೇ ಅಥವಾ ಕನ್ನಡವೇ ಹೇಳಬರುವುದಿಲ್ಲ. ಮಹಾರಾಷ್ಟ್ರದಲ್ಲಿ ತುಪ್ಪಕ್ಕೆ 'ತುಪ್' ಎನ್ನುತ್ತಾರೆ...ಆದ್ದರಿಂದ 'ತುಪ್ಪ' ಎಂಬ ಪದವು ಪ್ರಾಕೃತಶಬ್ದ ಇರಬಹುದು ; ಇಲ್ಲವೇ ಸವಿಯನ್ನು ಚಪ್ಪರಿಸುವುದರಿಂದ ಬಂದ ದ್ರಾವಿಡದ ಭಾವಸೂಚಕ ಪದವಿದ್ದರೂ ಇರಬಹುದು. ಆದರೆ ದ್ರಾವಿಡದಲ್ಲಿ ಅದರ ರೂಪ ನಿಷ್ಪತ್ತಿ ಹೇಳುವುದು ಸುಲಭವಲ್ಲ...ತುಪ್ಪ ಎಂಬುದು ದ್ರಾವಿಡವೇ ಅಲ್ಲವೇ ಅನುಮಾನ, ಅಂದಮೇಲೆ ದ್ರಾವಿಡದಲ್ಲಿ ಅಥವಾ ಕನ್ನಡದಲ್ಲಿ ತುಪ್ಪದ ಬಳಕೆ ಇರಲಿಲ್ಲವೆ ?...ಒಂದುವೇಳೆ ತುಪ್ಪ ದ್ರಾವಿಡಪದವೇ ಆಗಿದ್ದರೆ,ಪ್ರಾಕೃತಕ್ಕೆ ಕೊಟ್ಟ **ಏಕೈಕ** ಕನ್ನಡ ನಾಮಪದ ಎಂದು ಹೇಳಬಹುದು...ಆದರೆ, ಪೈ ಅವರು ಹೇಳುವಂತೆ ಕನ್ನಡ ಸಾಹಿತ್ಯ ಕಾವ್ಯರೂಪದ ಸಾಹಿತ್ಯ ಇತ್ತೆಂದು ಹೇಳುವುದು ಕಷ್ಟ. ಏಕೆಂದರೆ, ಆ ಕಾಲದ ಯಾವ ಕನ್ನಡ ಕೃತಿಯೂ ದೊರಕಿಲ್ಲ, ಒಂದು ; ಕೃತಿ ಇತ್ತೆಂದು ಹೇಳುವ ಯಾವ ಮಾಹಿತಿಯೂ ಇಲ್ಲ, ಎರಡು ; ಆ ಕಾಲದ ಎಲ್ಲ ಶಾಸನಗಳೂ ಪ್ರಾಕೃತದಲ್ಲೇ ಇವೆ, ಮೂರು ,...ಆ ಕಾರಣ ಕದಂಬರ ಹಾಗೂ ಶಾತವಾಹನರ ಕಾಲದ ಆಡಳಿತ ಭಾಷೆ ಪ್ರಾಕೃತವಾಗಿತ್ತೇ ಹೊರತು ಕನ್ನಡವಲ್ಲ" ಎಂದು ಡಾ. ಸಾ. ಶಿ. ಮರುಳಯ್ಯನವರು ತಮ್ಮ ಲೇಖನವೊಂದರಲ್ಲಿ ಹೇಳಿದ್ದಾರೆ. ಇದು ತೀರಾ ಅಸಾಂಗತ್ಯವಾಗಿದೆ.

ದ್ರಾವಿಡದಲ್ಲಿ ಅಥವಾ ಕನ್ನಡದಲ್ಲಿ ಪ್ರಾಚೀನಕಾಲದಿಂದಲೂ ಬಳಕೆಯಿರುವ ಎಲ್ಲಾ ನುಡಿಗಳಿಗೆ ನಿರುಕ್ತ (ನಿಷ್ಪತ್ತಿ) ಹೇಳಲು ಬರುವುದಿಲ್ಲ. ಆ ಪದಗಳಲ್ಲಿ ಕೆಲವು ರೂಢನಾಮಗಳಾಗಿವೆ. ಕನ್ನಡ ಸಾಹಿತ್ಯವನ್ನು ವಿಚಾರಿಸುವಲ್ಲಿ, ಕನ್ನಡ ಜನಾಂಗದ ಪ್ರಾಚೀನತೆಯನ್ನು ಕುರಿತು ಮೊದಲಾಗಿ ಗಮನಿಸಬೇಕು. ಜನಾಂಗದಲ್ಲಿ ಮೊದಲಿಗೆ

ಜಾನಪದ ಸಾಹಿತ್ಯವಿರುತ್ತದೆ. ಅದೇ ಮುಂದೆ ಸಾಹಿತ್ಯ ಕೃತಿಗಳಿಗೆ ಮೂಲವಾಗುತ್ತದೆ. ಗ್ರೀಕ್ ನಾಟಕದಲ್ಲಿ ಕನ್ನಡದ ಮಾತುಗಳಿವೆಯೆಂದು ಹಲವು ವಿದ್ವಾಂಸರು ಸಾರಿದ್ದಾರೆ. ಆ ನಾಟಕವನ್ನು ಬರೆದ, ಆಡಿದ, ನೋಡಿದ ಕನ್ನಡಿಗರು ಸಾಹಿತ್ಯ ಕೃತಿಗಳನ್ನು ಏನೂ ರಚಿಸಿಲ್ಲವೆನ್ನುವುದು ಸರಿಯಲ್ಲ. ದ್ರಾವಿಡ ವರ್ಗದಲ್ಲಿ ಇದೀಗ ದೊರೆತಂತೆ ತಮಿಳಿನಲ್ಲಿ 'ಸಂಗಂ' ಸಾಹಿತ್ಯ ಪ್ರಾಚೀನವದೆ. ಹಾಗೆ, ಆ ತಮಿಳಿನಂತೆ ಇತರ ಸೋದರೀ ಭಾಷೆಗಳಲ್ಲೂ ಸಾಹಿತ್ಯ ಕೃತಿಯಿತ್ತೆಂದು ಹೇಳಬಹುದು. 'ಕವಿರಾಜಮಾರ್ಗ'ದಲ್ಲಿ ಉದಾಹರಿಸಿದ ಜೈನ ರಾಮಾಯಣಾದಿಗಳು ಇಂದಿಗೂ ದೊರಕಿಲ್ಲ. ಆದರೆ ಅವು ಇದ್ದಿಲ್ಲವೆನ್ನುವುದು ಪಾಂಡಿತ್ಯವಲ್ಲ. ಜಯಕೀರ್ತಿಯ ಛಂದೋನುಶಾಸನದಲ್ಲಿ ಕನ್ನಡದ ಕೆಲವು ಕಾವ್ಯ-ನಾಟಕಗಳ ಉದಾಹರಣೆಗಳು ಹೇಳಿವೆ; ಅವು ಪೂರ್ಣವಾಗಿ ದೊರಕಿಲ್ಲವೆಂದರೆ, ಅವು ಇದ್ದಿಲ್ಲವೆನ್ನಲೇಬೇಕಾಗಿಲ್ಲ. ಹಲ್ಮಿಡಿಯ ಶಾಸನದಲ್ಲಿ 'ಸಂಸ್ಕೃತದೊಡನೆ ಹೊಂದಿಕೊಳ್ಳಲು ಹೆಣಗುತ್ತಿರುವ ಕನ್ನಡ'ವೆಂಬ ವಾಚಿಕ ಅಪಾಂಡಿತ್ಯವಾಗಿದೆ. ಆ ಭಾಷೆ-ಆ ಮೇಲಿನ ಕೆಲವು ಕೃತಿಗಳಂತೆ-ಸಂಸ್ಕೃತ ಭೂಯಿಷ್ಠವಾಗಿರುವುದು ತಪ್ಪಲ್ಲ. ಅದು ಆ ರಚಕನ ಶೈಲಿಯನ್ನು ಸೂಚಿಸುತ್ತದೆಯಲ್ಲದೆ, ಭಾಷೆಯ-ಸಾಹಿತ್ಯದ ಮಾಪನಕ್ಕೆಡೆಯಾಗಲಾರದು. ದ್ರಾವಿಡವರ್ಗದ ಭಾಷೆಗಳಲ್ಲಿ ತಮಿಳಿಗಿಂತಲೂ ಕನ್ನಡ ಮೊದಲಿನದೆಂದು ವಿಮರ್ಶಕರು ಹೇಳುತ್ತಾರೆ (ನಾಡೋಜಪಂಪ, ಪುಟ. 117) ಆಗಿನ ಜನಾಂಗದ-ಭಾಷೆಯ-ಸಾಹಿತ್ಯದ ಬಗೆಗೆ ಇನ್ನೂ ಸಾಕಷ್ಟು ಸಂಶೋಧನೆ ಆಗದಿರುವಾಗ, ಸಿಕ್ಕಿದುದನ್ನೇ ಹಿಡುಕಿ ಹೀಗೆಲ್ಲ ಸಿದ್ಧಾಂತಕ್ಕೆಳಸುವುದು ತೀರಾ ಮೌಢ್ಯವಾಗಿದೆ. "ಆ ಕಾಲದ ಎಲ್ಲ ಶಾಸನಗಳೂ ಪ್ರಾಕೃತದಲ್ಲಿವೆ, ಆ ಕಾಲದ ಆಡಳಿತ ಭಾಷೆ ಪ್ರಾಕೃತಭಾಷೆಯಾಗಿತ್ತೆ ಹೊರತು ಕನ್ನಡವಲ್ಲ"ವೆಂದು ಡಾ. ಸಾ. ಶಿ. ಮರುಳಯ್ಯನವರೆಂಬುದು ಸರಿಯಲ್ಲ!

ಆ ಕಾಲದ ತತ್ಪೂರ್ವದ-ಬಹು ಸಂಖ್ಯೆಯ ಕಾವ್ಯ ನಾಟಕಾದಿಗಳು ಸಂಸ್ಕೃತ ಭಾಷೆಯಲ್ಲಿವೆ; ಆಗ ಸಂಸ್ಕೃತವೇ ಭಾರತದ ಪ್ರಧಾನಭಾಷೆಯಾಗಿತ್ತೆಂದು ಇಲ್ಲಿ ವೇದ್ಯ! ಆಗಿನ ಸಂಸ್ಕೃತ ನಾಟಕಾದಿಗಳಲ್ಲಿ ಪ್ರಾಕೃತ (ಅಪಭ್ರಂಶ) ಭಾಷೆ ಉಪಭಾಷೆಯಾಗಿತ್ತೆಂದೂ ಸ್ಪಷ್ಟವಿದೆ. ಅಂತೆ,ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಆಯಾ ಪ್ರಾಂತೆಯ ಭಾಷೆಗಳಲ್ಲಿ ಕೃತಿಗಳಿರುತ್ತಿದ್ದುವೆನ್ನಬೇಕು. ಈ ಬಗೆಗೆ ಅಲ್ಲಲ್ಲಿ ದೊರೆಯುವ ವಿಚಾರಕಣಗಳನ್ನು ಸಂಗ್ರಹಿಸಿ ಪ್ರಾಚೀನತೆಯ ಕುರುಹುಗಳು ದೊರೆಯುವಂತೆಳಸಬೇಕು (ಕಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್-ಎಂಬ ಸೂಕ್ತಿ ಗಮನೀಯ !)

ಪ್ರಾಚೀನ ಸ್ಥಳಗಳ ಉತ್ಖನನದಲ್ಲಿ ದೊರೆವ ವಸ್ತುಗಳಲ್ಲಿ ಕೆತ್ತಿದ ನುಡಿಗಳನ್ನು ತುಲನಾತ್ಮಕವಾಗಿ ಪರಿಶೀಲಿಸಬೇಕು. ಸಂಶೋಧನೆ-ರಿಸರ್ಚ್ ಇಂದಿಗೆ ದೊರೆತಷ್ಟಕ್ಕೆ

ಸೀಮಿತವಾಗಿಲ್ಲ; ಇಷ್ಟಕ್ಕೇ ಇತಿ-ಮಿತಿಯಾಗಿಲ್ಲ; 'ನವೋ ನವೋ ಭವತಿ ಜಾಯಮಾನಃ' ಎಂಬುದು ಇಲ್ಲಿಗೂ ಅನ್ವಯಿಸುತ್ತದೆ!

"ಏಕಂ ಶಾಸ್ತ್ರಮಧೀಯಾನೋ
ನ ವಿದ್ಯಾತ್ ಶಾಸ್ತ್ರನಿಶ್ಚಯಂ
ತಸ್ಮಾತ್ ಬಹುಶ್ರುತಃ ಶಾಸ್ತ್ರಂ
ವಿಜಾನೀಯಾತ್ ಚಿಕಿತ್ಸಕಃ"

ಭೀಮಕವಿಯ ಬಸವಪುರಾಣ

(ಒಂದು ಸಾಮಾಜಿಕ ಅಧ್ಯಯನ)

(ಹಿಂದಿನ ಸಂಚಿಕೆಯಿಂದ)

ಬಿ. ಸಿ. ಜವಳಿ

ಶಿವಶರಣರ ಕಾಯಕತತ್ವ : ಬಸವಾದಿ ಶಿವಶರಣರು ಆಚರಣೆಗೆ ತಂದ ಮತ್ತು ಬೋಧಿಸಿದ ಕಾಯಕತತ್ವವು ಅತ್ಯಂತ ಮಹತ್ವದ್ದು. ಈ ಕಾಯಕ ತತ್ವವನ್ನು ಮುಂದುವರಿಸುವ ಮತ್ತು ನಡೆಸಿಕೊಂಡು ಬರುವ ನೀತಿ ಎಂದರೆ ವ್ಯಕ್ತಿಯು ದುಡಿದೇ ಉಣ್ಣಬೇಕು; ತಾನುಣ್ಣುವ ಮೊದಲು ಗುರುಲಿಂಗಜಂಗಮಕ್ಕೆ ಅರ್ಪಿಸಬೇಕು—ಎಂದರೆ ವ್ಯಕ್ತಿಯು ತಾನು ಸಂಪಾದಿಸಿದ ಧನವು ಕೇವಲ ವೈಯಕ್ತಿಕ ಭೋಗಕ್ಕಿರದೆ, ಸ್ವಾರ್ಥದಿಂದ ದೂರವಿದ್ದು, ಅದು ಸಾಮಾಜಿಕ ಹಿತಕ್ಕೆ ವಿನಿಯೋಗವಾಗುತ್ತಿರಬೇಕು. ಹಾಗೆ ವಿನಿಯೋಗವಾಗದುದು ಕಾಯಕವಲ್ಲ. ಕಾಯಕವು ದುರಾಸೆಯಿಂದ ವ್ಯಕ್ತಿಯನ್ನು ದೂರವಿರಿಸುತ್ತದೆ, ಪ್ರಾಮಾಣಿಕನನ್ನಾಗಿಸುತ್ತದೆ. ದಾಸ (ದಾಸೋಹ) ಭಾವವನ್ನು ವ್ಯಕ್ತಿಯಲ್ಲಿ ಅಳವಡಿಸುತ್ತದೆ. ತನ್ನ ಕಾಯಕಕ್ಕೆ ಸಲ್ಲಬೇಕಾದುದನ್ನು ಮಾತ್ರ ಪಡೆಯಬೇಕೇ ವಿನಾ ಹೆಚ್ಚಿನದನ್ನು ಅಪೇಕ್ಷಿಸುವಂತಿಲ್ಲ. ಕಲಕೇತ ಬೊಮ್ಮಯ್ಯನು, "ನಿಚ್ಚಲರ್ಜಿಸಿ ತಂದ ಬತ್ತವು ಮೆಚ್ಚಕಿಬ್ಬಳವಾಗಿ ಕುಂದವು, ಅದಱಿಂ ಜಂಗಮಾವಳಿಗೊಲಿದು ಮಾಡುತ್ತ"—ಜೀವಿಸಿದುದನ್ನು ಭೀಮಕವಿ ವರ್ಣಿಸಿದ್ದಾನೆ.[32] ಕಾಯಕಲಬ್ಧ ಹೆಚ್ಚುವುದೂ ಇಲ್ಲ, ಕುಂದುವುದೂ ಇಲ್ಲ. ಕಾಯಕದಿಂದ ತನು ಶುದ್ಧ, ಮನಶುದ್ಧವಾಗುವುದರಿಂದ, ಕಾಯಕದಿಂದ ಎಷ್ಟೇ ಕಡಿಮೆ ಸಂಪಾದನೆಯಾದರೂ ಅವರು ದುಃಖಿಪಡುವುದಿಲ್ಲ. ಮೋಳಿಗೆಯ ಮಾರಯ್ಯನ ಕಥೆಯಲ್ಲಿ, ಬಸವಣ್ಣನು, ಮಾರಯ್ಯನವರು ಕಾಯಕಕ್ಕೆ ಹೋದ ಕಾಲದಲ್ಲಿ, ಅವರ ಮನೆಗೆ ಆಗಮಿಸಿ, ಪೂಜೆಮಾಡಿಕೊಂಡು, ಪ್ರಸಾದ ಸ್ವೀಕರಿಸಿ, ಮಜ್ಜನ ಶಾಲೆಯ ಒತ್ತಿನಲ್ಲಿ ಎರಡು ಸಾವಿರ ಹೊನ್ನು ಇರಿಸಿಹೋದುದನ್ನು ಮಾರಯ್ಯಗಳು ಕಂಡು, ಇದು ತಮಗೆ ಕಾಯಕದಿಂದ ಬಂದುದಲ್ಲವೆಂದು, ಇಬ್ಬರು ಜಂಗಮಕ್ಕೆ ಒಂದೊಂದು ಜಾಳಿಗೆಯನ್ನು ಸಮರ್ಪಿಸಿದರಂತೆ[33]. 'ಪರದ್ರವ್ಯವನ್ನು ಕಿಲ್ಬಿಷವೆಂದು ಮುಟ್ಟದ' ಭಾಷೆ ಶರಣರದು. ಇಂದು ಭಾರತದೇಶವು ಈ ನೀತಿ

---

32. ಬ. ಪು. ಸಂಧಿ 29. ಪದ್ಯ 9
33. ಬ. ಪು. ಸಂಧಿ 30. ಪದ್ಯ 20

ಯನ್ನು ಅನುಸರಿಸಿದರೆ ಲಂಚವು ತಾನೇ ನಿರ್ಮೂಲವಾಗುತ್ತದೆ ; ದೇಶದ ಕಲ್ಯಾಣ ಕಾರ್ಯಕ್ಕೆ, ಬೊಕ್ಕಸಕ್ಕೆ ಹಣವೂ ಬರುತ್ತದೆ. ಕಲಕೇತ ಬೊಮ್ಮಯ್ಯನು, "ಬೆಲೆಗೆ ಕೆಲಸಂಗೈವ ಬಂಟನು ಕೋಳಬಹುದೆ ರಾಶಿಯು ದವಸಮಂ ?"--ಎಂದು ಪ್ರಶ್ನಿಸಿ, ನಿಜಸುಖಿಗೆ ಇದು ಅಳವಡದು ಎನ್ನುತ್ತಾನೆ. "ಈಶ್ವರನೊಲುಮೆ ನಿಜದಿಂದ ನಿಚ್ಚಂಕೊಡುವುದು ;" ಒಂದು ವೇಳೆ ಕಾಯಕವಮಾಡುವ ವ್ಯಕ್ತಿಗೆ 'ಎಡರಡಸಿದರೆ' ಆತನನ್ನು ಸಲಹುವ ಜವಾಬ್ದಾರಿ ಭಕ್ತರದು ; ಭಕ್ತ ಸಮಾಜದ್ದೆಂದು ಭೀಮಕವಿಯು ಕಲಕೇತನ ಕಥೆಯಲ್ಲಿ ಹೇಳುತ್ತಾನೆ. ಕಿನ್ನರ ಬೊಮ್ಮಣನು 'ಎಡರಡಸಿದವರಿಗೆ' ಕೊಡಲು ಸಮರ್ಥನೆಂಬುದನ್ನು ಕೇಳಿದ ಬಡ ಭಕ್ತನೊಬ್ಬನು ಎಡರಡಸಿ ಅವನೆಡೆಗೆ ಹೊರಟಾಗ, ಕಲಕೇತ ಬೊಮ್ಮಯ್ಯನೇ ಆ ಭಕ್ತನ ಅಭಿಲಾಷೆಯನ್ನು ಪೂರೈಸಿದ ನೆಂದು ತಿಳಿಸುತ್ತಾನೆ.[34] ಇದು ಶರಣರು ಕಂಡುಕೊಂಡ ಧಾರ್ಮಿಕ ವಿಧಾನ. ಇದು ಎಷ್ಟರಮಟ್ಟಿಗೆ ವ್ಯವಹಾರಯೋಗ್ಯ ಎಂಬುದು ವಿಚಾರಣೀಯ ಅಂಶವಾದರೂ ಇದಕ್ಕಿಂತ ಭಿನ್ನವಾದ ಮಾರ್ಗವನ್ನು ಕಂಡುಹಿಡಿಯುವುದು ಶಿವಶರಣರಿಗೆ ಅಂದು ಸಾಧ್ಯವಾಗಿರಲಿಲ್ಲ. ಇದಕ್ಕೆ ಕಾಯಿದೆಯ ಸ್ವರೂಪವೂ ಪ್ರಾಪ್ತವಾಗಿದ್ದರೆ ಮಾತ್ರ ಇನ್ನೂ ಹೆಚ್ಚು ಮನ್ನಣೆ ಪಡೆಯಬಹುದಾಗಿತ್ತು. ಇನ್ನೊಂದು ಅಂಶವೆಂದರೆ ವೀರ ಶೈವರಲ್ಲಿ ಅನೇಕ ಶರಣರು ಕೈಕೊಂಡ ಕಾಯಕಗಳನ್ನು ನೋಡಿದರೆ, ಅವು ಸ್ವತಂತ್ರ ವಾಗಿ ನಡೆಸಿಕೊಂಡು ಹೋಗಬಹುದಾದ ವೃತ್ತಿಗಳಾಗಿವೆ. ಉದಾಹರಣೆಗೆ ಮೇದಾರ, ಡಪದವ, ಕುಂಬಾರ, ಸಮಗಾರ, ಡೋಹರ, ಕೃಷಿಕ, ವಣಿಜ, ಘಟ್ಟಿವಾಳ, ಮೋಳಿ ಗೆಯುವ, ಮಡಿವಾಳ ಮೊದಲಾದವುಗಳನ್ನು ಹೇಳಬಹುದು. ಈ ವೃತ್ತಿಯವರು ತಮ್ಮ ವೃತ್ತಿಗಳನ್ನು ಶರಣರಿಗಾಗಿ--ಶರಣರ ಹಿತಕ್ಕಾಗಿ ಮಾತ್ರ ಶಿವಭಕ್ತರ ಮನೆ ಯಲ್ಲಿ ಕೈಕೊಳ್ಳುತ್ತಿದ್ದರೆ, ಬಸವಣ್ಣನಂತಹ ಕೆಲವೇ ಕೆಲವು ಶರಣರು 'ಭವಿಗಳ' 'ಸೇವಾವೃತ್ತಿ'ಯಲ್ಲಿದ್ದಿರಬಹುದಾಗಿದೆ. ಭವಿಗಳಲ್ಲಿ ಸೇವಾಕಾರ್ಯ ಕೈಕೊಂಡಿರ ಬಹುದಾಗಿದೆ. ಸಮಕಾಲೀನ ಶಿವಶರಣರಲ್ಲಿ ಭವಿಗಳಲ್ಲಿ ಸೇವೆ ಕೈಕೊಳ್ಳಬೇಕೋ ಬೇಡವೋ ಎಂಬ ವಿಚಾರವು ಅಂದು ಚರ್ಚಿತವಾಗಿದ್ದರೂ[35] ಬಸವಣ್ಣನವರು, ಸ್ವಾರ್ಥಕ್ಕಾಗಿ, ಮಡದಿಮಕ್ಕಳಿಗಾಗಿ ಕೈಕೊಳ್ಳದೆ 'ದೇವರ ನಿಲಪಿಂಗೆ' (ಸಮಾಜ ಹಿತಕ್ಕೆ) ಕೈಕೊಳ್ಳಬಹುದು ಎಂಬ ತೀರ್ಮಾನ ನೀಡುತ್ತಾರೆ. ಬಸವಣ್ಣನವರು 'ಭವಿಬಿಜ್ಜಳನ ಕೈಕೆಳಗೆ' ಸೇವಾವೃತ್ತಿಯನ್ನು ಕೈಕೊಳ್ಳದೆ, ಇನ್ನಾವುದೋ ಒಂದು ಸ್ವತಂತ್ರ ವೃತ್ತಿ ಕೈಕೊಂಡು ಧರ್ಮೋಪದೇಶಗೈದಿದ್ದರೆ, ಬಿಜ್ಜಳನ ಕೈಕೆಳಗಿನ ಅನೇಕ ಅಮಾತ್ಯರ ಮಾತ್ಸರ್ಯಕ್ಕೆಯೂ ಒಳಗಾಗುತ್ತಿರಲಿಲ್ಲವೆಂಬಂತೆ ಗೋಚರಿಸು

---

34. ಬ.ಪು. 29ನೆಯ ಸಂಧಿ, ಪದ್ಯ 10 ರಿಂದ 20

35. ಬಸವಣ್ಣನವರ ವಚನ 709. ಶಿ. ಶಿ. ಬಸವನಾಳ ಅವರು ಸಂಪಾದಿಸಿದುದು (1951)

ತ್ತದೆ. ಮತ್ತು ಕಲ್ಯಾಣದಲ್ಲಿ ತಲೆದೋರಿದ ರಕ್ತಪಾತಕ್ಕೆ ಕೆಲವರಾದರೂ ಸಹಾಯ ಮಾಡಿಂತಿರಲಿಲ್ಲ. ಆದರೆ ಬಸವಣ್ಣನಿಗೆ ರಾಜನ ಆಶ್ರಯದಲ್ಲಿ ಸೇವೆಕೈಕೊಳ್ಳುವುದು, ಧರ್ಮೋಪದೇಶ ಮತ್ತು ಜನತಾಹಿತಕಾರ್ಯಕ್ಕೆ ಅನುಕೂಲ ಎಂಬ ಭಾವನೆ ತಲೆದೋರಿದೆ; ಅವನ ಪರಿವಾರದವರ ಅಭಿಪ್ರಾಯವೂ ಅದಾಗಿರಬೇಕು; ಅಲ್ಲದೆ ಬಲದೇವನ ಮರಣದಿಂದಾಗಿ ತೆರವಾದ ಸ್ಥಳವೂ ಬಸವಣ್ಣನನ್ನು ಅಲ್ಲಿಗೆ ಬರುವಂತೆ ಮಾಡಿದೆ. ಅಂದಿನ ಕಾಲದಲ್ಲಿ ರಾಜಾಸ್ಥಾನದ ಮಂತ್ರಿಯೊಬ್ಬರು ತೀರಿಕೊಂಡಾಗ, ಆ ಸ್ಥಳ ತುಂಬುವಾಗ, ರಾಜನು, ಗತಿಸಿದ ಮಂತ್ರಿಯ ಮಕ್ಕಳು ಇಲ್ಲವೆ ಸಮೀಪದ ಸಂಬಂಧಿಕರು ಸಮರ್ಥರಾಗಿದ್ದರೆ, ಅವರಿಗೆ ಕೊಡುವ ಪರಿಪಾಠವಿದ್ದುದರಿಂದ[35A] ರಿಂದಲೂ ಬಸವಣ್ಣನು ಆ ಸ್ಥಳಕ್ಕೆ ಬರುವಂತಾಯ್ತು. ಇದೊಂದು ವಿಚಿತ್ರ ದೈವ ಲೀಲೆಯೆನ್ನಬಹುದು. ಬಸವಣ್ಣನು ರಾಜಕೀಯಕ್ಕಿಳಿಯದೆ, ಸಾಧುಪುರುಷನಾಗಿಯೇ ಧರ್ಮಪ್ರಚಾರ ಮಾಡಿದ್ದರೆ ಏನಾಗುತ್ತಿತ್ತೊ! ಅಂದಿನ ಶರಣರಲ್ಲಿ ಪಲವರು ಭವಿಗಳ ಕೂಟ, ಒಡನಾಟ, ವ್ಯವಹಾರ, ಸಂಬಂಧ ಮೊದಲಾದವುಗಳು ಸಲ್ಲವು ಎಂಬ ಭಾವನೆ ತಳೆದಿರುವಂತೆ ಕಾಣುತ್ತದೆ[36] ಅಂದಿನ ಕಾಲದಲ್ಲಿ ಆಯಾಯ ಕಾಯಕದವರು ವೀರಶೈವರ ಸೇವೆಯನ್ನೇ ಮಾಡಿ ಉಪಜೀವನ ಸಾಗಿಸುವುದು ಸಾಧ್ಯವಿತ್ತು. ಆದುದರಿಂದಲೇ ಮಡಿವಳಮಾಚಿದೇವನು ಭಕ್ತರ ಮಾಸಿದಂಬರಮಂ ಮಡಿಮಾಡಿ ಕೊಡುವುದನ್ನೂ 'ಬೀದಿಯಲಿ ಭವಿಗಳು ಲಿಂಗವಂತರ ಹೊಸಮಡಿಯ ವಸ್ತ್ರಂಗಳಂ ಸಂಧಿಸಿದಿರಾದೊಡೆ ಇಜಿಂದು ಕೆಡಹುವ' ಪ್ರತಿಜ್ಞೆಯನ್ನೂ ಮಾಡಿದುದನ್ನೂ ಭೀಮ ಕವಿಯು ವರ್ಣಿಸಿದುದನ್ನು ಕಾಣುತ್ತೇವೆ.[37] ಇಲ್ಲಿಯೂ ಭವಿಗಳ ಸಂಪರ್ಕವು ಭಕ್ತರಿಗೆ ಉಂಟಾಗಬಾರದೆಂಬುದೇ ಈ ಕಥೆಯ ಉದ್ದೇಶವಿರಬೇಕೆನಿಸುತ್ತದೆ. ಭವಿಗಳಲ್ಲಿ ವೀರಶೈವರಲ್ಲದವರನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದ್ದರೆಂಬುದಕ್ಕೆ ಮಹದೇವಿಯಕ್ಕನವರ ವಚನವೇ ಸಾಕ್ಷಿ.[38] ಲಿಂಗವಿಲ್ಲದವರು ಉತ್ತಮಜಾತಿಯವರಿರಬಹುದು ಇಲ್ಲವೆ ಕಡಿಮೆಜಾತಿಯವರಿರಬಹುದು. 'ಹಾರುವ ಮೊದಲು ಶ್ವಪಚಕಡೆಯಾಗಿ ಭವಿಯಾದವರನೊಂದೇ ಎಂಬೆ' ಎನ್ನುವ ಬಸವಣ್ಣನವರ ವಚನವೇ ಇದಕ್ಕೆ ಸಾಕ್ಷಿ.[39] ಇತರ

35A ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿಯೂ ಈ ವಿವರಗಳಿರುವುದನ್ನು ನಾವಿಲ್ಲಿ ನೆನೆಯಬಹುದು. ಬಸವಪುರಾಣದಲ್ಲಿಯೂ ಕವಿ ಈ ಸ್ಥಿತಿಯನ್ನು ವಿವರಿಸಿದ್ದಾನೆ; ನೋಡಿರಿ ಬಸವಪುರಾಣ: "ಬಳಿಕವಾ ಬಲದೇವ ಮಂತ್ರಿಯ ಬಳಗವಂ, ಬಂಧುಗಳಂ, ಆಪ್ತರುಗಳಂ ಇಳಾಧೀಶ್ವರನು ಕರೆಸಿ, ತಾನವರಿಗಿಂತೆಂದ; ಒಲಿವ ಹಿತವರು ಸೋದರರು, ಮಕ್ಕಳುಗಳು ಆರಾಯ್ತು, ಆದೊಡೀತನ ಬಲು ನಿಯೋಗವನೆಲ್ಲವಂ ಪ್ರತಿಪಾಲಿಸುವರೊಳರೇ ?" ಸಂಧಿ 5, ಪದ್ಯ 4.

36 ಚೆ. ಬ. ವ. 1282

37 ಬ. ಪು. ಸಂಧಿ 21, ಪದ್ಯ 8, 9

38 ಮಹಾದೇವಿಯಕ್ಕನ ವಚನ 231

39 ಬಸವಣ್ಣನವರ ವಚನ 710

ಕುಲದವರನ್ನು ಬ್ರಾಹ್ಮಣರು ಅಂದು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅದಕ್ಕೆ ಪ್ರತಿಯಾಗಿಯೆನ್ನುವಂತೆ ವೀರಶೈವ ಶರಣರು ಭವಿಗಳನ್ನು ಮುಟ್ಟಿಸಿಕೊಳ್ಳಬಾರದೆಂದರು ; ಮುಟ್ಟಿದರೆ ದೋಷವುಂಟಾಗುತ್ತದೆಯೆಂಬ ಭಾವನೆಯು ಹನ್ನೆರಡನೆಯ ಶತಮಾನದಲ್ಲಿದ್ದುದನ್ನು ಈ ಕಥೆಯು ನಮಗೆ ಸ್ಪಷ್ಟಪಡಿಸುತ್ತದೆ. ತೀರ ಇತ್ತೀಚಿನವರೆಗೂ ಹಳ್ಳಿಗಳಲ್ಲಿ ಲಿಂಗಾಯತರು ಊಟಮಾಡುವಾಗ, ಶುಭಕಾರ್ಯಗಳ ಪ್ರಸಂಗಗಳಲ್ಲಿ ಬ್ರಾಹ್ಮಣರನ್ನೊಳಗೊಂಡು ಇತರ ಜಾತಿಯವರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಈ ಭಾವನೆಯು ಬ್ರಾಹ್ಮಣರಷ್ಟೇ ಉತ್ತಮರಲ್ಲವೆಂಬ ಭಾವನೆಯನ್ನು ಜನರಲ್ಲಿ ಬಿತ್ತರಿಸಲು ಸಹಾಯಕವಾಗಿರಬೇಕೆಂದೆನಿಸುತ್ತದೆ. ಆದುದರಿಂದ ಶಿವಶರಣರು ಧಾರ್ಮಿಕವಾಗಿ ಈ ಅಂಶವನ್ನು ಬಿತ್ತರಿಸಿದರು.

ವೇಶ್ಯಾ ಪದ್ಧತಿ : ಶಿವಶರಣರ ಕಾಲದಲ್ಲಿಯೂ ವೇಶ್ಯಾ ಪದ್ಧತಿ ಸಾಕಷ್ಟು ಪ್ರಚಾರದಲ್ಲಿದ್ದಿತು. ಅದೊಂದು ಕಾಯ್ದೆಬದ್ಧವಾದ ಸಂಸ್ಥೆಯಾಗಿ ಭಾರತದಲ್ಲಿ ಬಹುಕಾಲದಿಂದಲೂ ಪ್ರಚಾರದಲ್ಲಿದ್ದಿತು. ಕರ್ನಾಟಕದಲ್ಲಿಯೂ ವೇಶ್ಯೆಯರ ಉದ್ಯೋಗಕ್ಕೆ ಸಾಕಷ್ಟು ಪ್ರೋತ್ಸಾಹವಿದ್ದುದರಿಂದಲೇ ಕನ್ನಡ ಕಾವ್ಯಗಳಲ್ಲಿ ಸೂಳೆಗೇರಿಯ ವರ್ಣನೆ, ವಿಟ–ವೇಶ್ಯೆಯರ ಚಟುವಟಿಕೆಗಳು ಸಾಕಷ್ಟು ವಿಸ್ತೃತವಾಗಿ ವರ್ಣಿತವಾಗಿರುವುದೇ ಸಾಕ್ಷಿ. ಜೈನ ಬೌದ್ಧರಲ್ಲಿಯೂ ವೇಶ್ಯಾ ಸಮಸ್ಯೆಯ ಬಗೆಗೆ ಸಾಕಷ್ಟು ಚರ್ಚೆಯಾಗಿದೆ. ಬುದ್ಧದೇವನು ಸಹ ವೇಶ್ಯೆಯರ ಉದ್ಧಾರಕ್ಕೆ ಮಾಡಿದ ಪ್ರಯತ್ನಗಳನ್ನು ಬುದ್ಧ ಸಾಹಿತ್ಯದಲ್ಲಿ ಕಾಣುತ್ತೇವೆ. ಹಿಂದೂ ಸಮಾಜದ ಒಂದು ಮುಖ್ಯ ಸಂಸ್ಥೆಯಾಗಿರುವ ವೇಶ್ಯಾ ಪದ್ಧತಿಯ ಬಗೆಗೆ ಶಿವಶರಣರೂ ಸಾಕಷ್ಟು ವಿಚಾರಮಾಡಿದ್ದಾರೆ. ಸೂಳೆ ವೃತ್ತಿಯನ್ನು ಶರಣರು ವೃತ್ತಿಯನ್ನಾಗಿ ಪರಿಗಣಿಸಿದ್ದರೆ? ಪರಿಗಣಿಸಿದ್ದರೆ ಆ ವೃತ್ತಿಯನ್ನು ನಡೆಸಿಕೊಂಡು ಬಂದ ನೈತಿಕ ಹಿನ್ನೆಲೆ ಯಾವುದು ಎಂಬ ಪ್ರಶ್ನೆ ಮುಖ್ಯ. ಕೆಲವು ಸ್ತ್ರೀಯರು 'ಸೂಳೆ'ಯರೆಂದೇ ಪ್ರಸಿದ್ಧರಾಗಿದ್ದಾರೆ: ಸೂಳೆ ಸಂಕವ್ವೆ, ಸೂಳೆ ಬೊಮ್ಮಲದೇವಿ, ಸೂಳೆ ಪದ್ಮಲದೇವಿ, ಸೂಳೆ ಕಾಮಲದೇವಿ-ಎಂಬ ಹೆಸರುಗಳನ್ನು ಇಲ್ಲಿ ಉದಾಹರಿಸಬಹುದು. ಸನ್ನಿವೇಶದ ನಿರ್ಬಂಧಗಳಿಂದಾಗಿ ವೇಶ್ಯಾವೃತ್ತಿಯನ್ನವಲಂಬಿಸಿದ್ದವರನ್ನು ವೀರಶೈವ ಧರ್ಮ ಒಪ್ಪಿಕೊಳ್ಳಲು ಸಿದ್ಧವಿದ್ದುದು ಒಂದು ವಿಶಿಷ್ಟ ಸಂಗತಿ; ಆದರೆ ಹಾದರವನ್ನೂ ವೇಶ್ಯೆಯರನ್ನೂ ಖಂಡಿಸುವ ಉದಾಹರಣೆಗಳೂ ಸಾಕಷ್ಟಿವೆ, ಎಂದು ಡಾ॥ ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.[40] ಒಮ್ಮೆ ಒಂದು 'ಒತ್ತೆಯ ಹಿಡಿದು ಮತ್ತೆ ಒತ್ತೆಯ ಹಿಡಿದರೆ ಬತ್ತಲೆ ನಿಲಿಸಿ ಕೊಲುವರಯ್ಯಾ ; ವ್ರತಹೀನ ನರಿದು ಬೆರೆದಡೆ ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ' ಎಂದಿದ್ದಾಳೆ

40. ವಚನ ಸಾಹಿತ್ಯ ಪುಟ 150, 151, ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟನೆ. 1975

ಸೂಳೆ ಸಂಕವ್ವೆ —ಎಂದು ಆಕೆಯ ಒಂದು ವಚನವನ್ನೂ ಅಲ್ಲಿ ಎತ್ತಿತೋರಿಸಿದ್ದಾರೆ.[41] ಸೂಳೆ ಎಂಬ ಪದವು ಕೆಲವು ಸ್ತ್ರೀಯರ ಹಿಂದೆ ಇರುವುದು ನಿಜ. 'ಡೋಹರ ಕಕ್ಕ', 'ಮಾದರ ಚೆನ್ನ' ಎಂಬ ಹೆಸರುಗಳಿರುವಂತೆ ಈ ಸ್ತ್ರೀಯರಿಗೂ ಆ ಹೆಸರಿದ್ದುದು ವಂಶದಲ್ಲಿ ನಡೆದುಬಂದ ವೃತ್ತಿಯ ಕುರುಹಾಗಿದೆ ಎಂದೆನಿಸುತ್ತಿದ್ದರೂ ಆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಶಿವಶರಣರು ಪ್ರೋತ್ಸಾಹ ಮಾಡಿರಲಿಕ್ಕಿಲ್ಲ. ಕಾಯಕಗಳ (ವೃತ್ತಿಯ) ನೀತಿಯನ್ನು ಈ ಹಿಂದೆ ವಿವರಿಸಲಾಗಿದೆ. 'ಕಳಬೇಡ, ಕೊಲಬೇಡ' ಎಂದು ಬೋಧಿಸಿದ ಶಿವಶರಣರು, ಸೂಳೆತನವನ್ನು ಮುಂದುವರಿಸಲು ಅನುಮತಿ ಇತ್ತಿರಲಾರರು ಎಂದೆನಿಸುತ್ತದೆ. ಹೀಗಿದ್ದರೂ ಈ ಸಂಸ್ಥೆ ಮಾತ್ರ ಬಸವಣ್ಣನವರ ಕಾಲದಲ್ಲಿ ಪ್ರಚಲಿತವಿದ್ದುದು ಗೋಚರಿಸುತ್ತದೆ :

> **'ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡುವುದೇ ? '**
> **ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯಕೊಂಡರೆ**
> **ಕೂಸಿಂಗಲ್ಲ ಬೊಜಗಂಗಲ್ಲ ! '** [42]

ಎನ್ನುವ ಮಾತುಗಳೇ ಇದಕ್ಕೆ ಸಾಕ್ಷಿ. ಈ ವೃತ್ತಿಯ ಬಗೆಗೆ ಬಸವ ಪುರಾಣದಲ್ಲಿ ಹಲವು ಕಡೆ ಉಲ್ಲೇಖಗಳು ಬಂದಿರುವುದಲ್ಲದೆ, ಸೂಳೆಯರ ನೀತಿಯನ್ನೇ ಕುರಿತು ಕೆಲವು ಕತೆಗಳೂ ಬಂದಿವೆ. ಬಸವಣ್ಣನವರ ಪೂರ್ವದ ಶರಣರ ಕಥೆ ಮತ್ತು ಬಸವಣ್ಣನವರ ಸಮಕಾಲೀನರ ಕಥೆಗಳಲ್ಲಿಯೂ ವೇಶ್ಯಾವೃತ್ತಿಯ ಪ್ರಸ್ತಾಪವಿದೆ. ಬಸವಪೂರ್ವದ ಶರಣರ ಕೆಲವು ಕತೆಗಳಲ್ಲಿಯೇ ವೇಶ್ಯಾವೃತ್ತಿಯ ನಿರಾಕರಣೆಯ ಸೂಚನೆಗಳು ಕಂಡುಬರುತ್ತವೆಯೆಂಬುದಕ್ಕೆ ಹರಿಹರ ಮಹಾಕವಿಯ ಮಲುಹಣಿ ಮತ್ತು ಬಸವ ಪುರಾಣದ ಮಲುಹಣಿಯ ಕತೆ ಹೇಳಬಹುದು.[43] ಅಲ್ಲದೆ ಬಸವ ಪುರಾಣದ ಶ್ವೇತನ ಕಥೆಯೂ ಇದಕ್ಕೆ ಇನ್ನೊಂದು ನಿದರ್ಶನ. ಇಲ್ಲಿ ಮಲುಹಣಿಯು, ತಾಯಿ ಪದ್ಮಾವತಿಯಂತಾಗದೆ, ತನಗಾಗಿ ಸರ್ವಸ್ವವನ್ನೇ ಅರ್ಪಿಸಿದ ಮಲುಹಣನನ್ನೇ ಶಿವನಿಂದ 'ಕೈಧಾರೆ' ಪಡೆಯುತ್ತಾಳೆ. ಶ್ವೇತನ ಕಥೆಯಲ್ಲಿ 'ರಂಭೆ'ಯೆನ್ನುವ ವೇಶ್ಯೆಯು ಹಿತವಾಗಿ ಬೋಧಿಸಿ, 'ದುರ್ವೃತ್ತಿಯಲಿ ಬಿದ್ದು ಪಾಪದ ಬಟ್ಟೆಯ ತುಳಿಯಬೇಡ' ಎಂದು, ತಾನು, 'ನಗಹರನ ಗಣಿಕಾಶಿರೋಮಣಿಯಾಗಿಯೂ' ಶ್ವೇತನಿಗೆ ಶಿವಭಕ್ತಿಯುಪದೇಶಗೈಯುತ್ತಾಳೆ.[44] ಗುರುಭಕ್ತ ಅಂಡಾರಿಯ ಕಥೆಯಲ್ಲಿ 'ಪ್ರೌಢಪತಿ'ಯೆಂಬ ವಾರಾಂಗನೆಯ ಬಳಿ ಅಂಡಾರಿಯು ಹೋಗುತ್ತಾನೆ. ಅವನೂ ಈಶ್ವರಭಕ್ತ, ಅವಳೂ ಈಶ್ವರ ಭಕ್ತೆಯಾಗಿದ್ದಾಳೆ.

---

41. ಅದೇ ಪುಟ 151.
42. ಬ. ಪು. 100, 101
43. ಬ. ಪು. 42ನೆಯ ಸಂಧಿ
44 ಬ. ಪು. 41ನೆಯ ಸಂಧಿ

ಶಿವಪುರಾಣದಲ್ಲಿ 'ಮೈಥುನೇ ರತ' ಎಂದಿದೆ ; 'ಸೂತಸಂಹಿತೆ'ಯಲ್ಲಿ 'ಈಶ್ವರಾರ್ಪಿತ' ವೆಂದಿದೆಯೆಂದು ಶಿವಭಕ್ತ ಅಂಡಾರಿಯು ವೇಶ್ಯಾಗಮನ ದುರ್ವೃತ್ತಿಯಲ್ಲವೆಂದು ಭಾವಿಸಿದ್ದಾನೆ. ಆದರೆ ಪ್ರೌಢವತಿ ಮಾತ್ರ ಹಾಗೆ ಭಾವಿಸಿಲ್ಲ ; 'ನಿನಗೆ ಎನಗೆ ಭಕ್ತಿ ನೀತಿಯೊಳನುಮತಿಸಲಳವಡದು', 'ಶೈವರೊಳು ಲಿಂಗಾಪಥಾನದನುಭಾವಿ ಯಾದೊಡೆ, ಹೊಲಬುಗೆಟ್ಟು ಮನೋವಿಕಾರದ ಮಾತುಗಳನಾಡಲಿಕುಚಿತವಹುದೆ' ? 'ಗುರುಪದಸೇವಕಂ, ನಿನಗಿನಿತು ಕಳವಳವೇಕೆ ?' ಎಂದೆನ್ನಲು ಮತ್ತೆ ಅವಳೊಡನೆ ಒತ್ತೆಯು ಕೊಳ್ಳಲು ಒತ್ತಾಯಿಸುತ್ತಾನೆ. ಆಕೆಯು 'ಚಂಡಿಗೊಂಡೋರಂತೆ ಹೋಗದೆ ಭಂಡಿಸುವುದಿದು ಭಕ್ತಿನೀತಿಯೇ' ? 'ಮಿಂಡತನಕಿದು ನೀತಿಯೇ ?' 'ಗುರುಭಜನೆ ಯಲಿ ನಿರತನು ; 'ಅಂತಾಗಿ ನೀತಿಯನುಳುಹಿಕೊಳ್ಳಾ'; 'ಆಸುದರಾರ್ಥಿಯಲ್ಲೆಲ್ಲ'; 'ಎಮ್ಮ ಲಿಂಗವು ಕೊಟ್ಟ ಕಾಯಕವ ನಡೆಸುತಿಹೆವು ; ಅಂತಾಗಿ ಭವಿಯೊಡನೆ ಮಾತಾ ಡೆವು ; ಕನಸಿನೊಳು ವೃಷಭಕ್ತರನಲ್ಲದಾರುವನಱಿಯೆ ವರ್ತಿಸೆವು; ಒಡಲೊಳವ ಗುಣವಿಲ್ಲ; ಆದಱಿಂ ಪಡೆದ ಧನವಂ ಮಡಗಲೀಯೆವು, ನುಡಿಸಿಯಱಿಯೆವು; ಕಂಡುಕೇಳ್ದುಂ ತೊಡಕಲಱಿಯೆವುನಿನ್ನನೆಂದುದ ; ನೀನೆನ್ನುವಂ ಝುಂಕಿಸಲೆಹಗೆ ಬಹುದು ? ಆಸೆ ಮೋಹವು ದುರ್ಗತಿಗಳ ನಿವಾಸ; ಕಾಮವಿಕಾರವಿದುಹೊಲ್ಲ ; ಶಿವಾರ್ಚಕಂಗೀ ಕಾಮವಿಕಾರವೇಕೆ ? ಶಿವಲಿಂಗವ ಪೂಜಿಸಿ ಲಜ್ಜೆ ನಾಚಿಕೆ ಬಿಟ್ಟು ನಡೆವುದು ವಿಹಿತವೇ?' ಎಂದುಪದೇಶಿಸುತ್ತಾಳೆ. ಆದರೂ ಅಂಡಾರಿ ತನ್ನ ಹಟವನ್ನೇ ಮುಂದುವರಿಸಿದ. ಪ್ರೌಢವತಿಯು ಕಾರಣ'ವಾವನಿತೆಯರು ಭಂಡಿತಿಯರು, ಕೊಂಡೆಗಿತ್ತಿಯರು, ಬಸರೆಯರು, ಅವಡಿತಿಯರು, ಕುಲಗೆಡಿಕೆಯರಂ, ಕಳ್ಳೆಯರು, ಚಿಳ್ಳೆಯರು, ಗೋಣುಗೊಯ್ಕರು, ಭಿತ್ತರಿಯರು, ಎದೆಗತ್ತರಿಯರು, ಹಾದರ ಗಿತ್ತಿಯರು. ಕುಟಿಲೆಯರು, ಲಟ್ಟೆಯರು, ಚೆಟ್ಟೆಯರು, ಕೆಟ್ಟ ಜಾತಿಯರು, ಬಟ್ಟೆ ಗುತ್ತೆಯರು, ಜಾರೆಯರು, ರವಣೆಗಳು'–ಎಂದು ನಾನಾವಿಧದಿ ಮೂದಲಿಸುತ್ತಾಳೆ ; ಮತ್ತು ಆ ವೃತ್ತಿಯ ಹೇಸಿಕೆಯನ್ನೂ, ಅವರೊಂದಿಗಿನ ಸುರತದ ಕೇಡನ್ನೂ ಮನಂಬುಗುವಂತೆ ಬಣ್ಣಿಸುತ್ತಾಳೆ. ಅಂಡಾರಿಯು 'ಪರಮವಿವೇಕಿ' 'ಉತ್ತಮ ಭಕ್ತ' ಎಂದೂ ಪ್ರಶಂಶಿಸುತ್ತಾಳೆ. ನಂತರ ಹಿಂದಿನ ಮಲುಹಣ, ಶ್ವೇತನ ಕಥೆಹೇಳಿ ಅಂಡಾರಿಯ ಮನಃಪರಿವರ್ತನಮಾಡಿದಳೆಂದು ಈ ಕಥೆಯಲ್ಲಿ ಉಕ್ತವಾಗಿದೆ.[45] ಮುಗ್ಧಸಂಗಯ್ಯನೆಂಬೊಬ್ಬನು ಬಸವನ ಕಾಲದ ಶಿವಶರಣನು ಸೂಳೆತನವೆಂದರೇನಂ ದರಿಯದ ಮುಗ್ಧನು, ಸೂಳೆಗೇರ್ಯಲುಹೋಗಿ, ಅಲ್ಲಿಯೇ ಬೆಳಗಾಗುವತನಕ ಶಿವಪೂಜೆ ಮಾಡಿ ಬಂದನೆಂದು ಆತನ ಕಥೆಯಲ್ಲಿ ವಿವರಿಸಲಾಗಿದೆ. ಅದನ್ನು ಶಿವಪೂಜೆಯೆಂದೇ ಭಾವಿಸಿದ ಶಿವಶರಣನೀತ. ಈ ಭಕ್ತನೇನೂ ಏನೂ ಅರಿಯದ ಹಸುಗೂಸಿನಂತಹ ಮುಗ್ಧನಿರಬಹುದು. ಆದರೆ ಅವನು ಹೋದ ವೇಶ್ಯೆಯು

---

45 ಬ.ಪು. 40ನೆಯ ಸಂಧಿ

ನಡೆದುಕೊಂಡ ರೀತಿಯನ್ನು ನೋಡಿದರೆ ಅವಳು ವೇಶ್ಯೆ ಇರಲಿಕ್ಕಿಲ್ಲವೆಂದೇ ಭಾವನೆಯುಂಟಾಗುತ್ತದೆ. ಮೊದಲು ಸೂಳೆತನವನ್ನು ಮಾಡಿ, ನಂತರ ಶಿವಭಕ್ತೆಯರಾದ ಮೇಲೆ ಆ ವೃತ್ತಿಯನ್ನು ಬಿಟ್ಟಿರಬೇಕು. ಆದುದರಿಂದಲೇ ಅವಳನ್ನು ಕವಿಯು 'ಅಚಲಭಕ್ತಿವಿಚಾರನಾರಿ'ಯೆಂದು ಕರೆದಿದ್ದಾನೆ. ಆಕೆ, ಮುಗ್ಧಸಂಗಯ್ಯನನ್ನು ಆದರದಿಂದ ಸ್ವಾಗತಿಸಿ, ಆತನ ಮುಗ್ಧಶಿವಭಕ್ತಿಯನ್ನು ಮೆಚ್ಚಿ, ಅವನ ಪವಿತ್ರ ಮನಸ್ಕೆ ಮಾಲಿನ್ಯವೊದಗದಂತೆ ನಡೆದುಕೊಂಡುದು ಮಾತ್ರವಲ್ಲದೆ, ಆತನು ಶಿವಾರ್ಚನೆ ಮಾಡುವುದಕ್ಕೂ ನೆರವಾಗಿದ್ದಾಳೆ. "ತನುಮನಧನವೆಂಬವಂ ವಂಚನೆಗಳಿಲ್ಲದೆ ಕೊಟ್ಟು. ರಸಿಕವಿ ಮನಸು ಕರಗಿಸಿ ಮೇಳರಾಗಿ ವಿಮುಗ್ಧಗೋಷ್ಠಿಯಲಿ ಅನುನಯದೊಳೊಂದಿಪ್ಪ ಜಂಗಮದನುಭವಂಗಳೊಳಿಪ್ಪವಗಲದೆ,ಅನಘಲಿಂಗಾರ್ಚನೆಯದಲ್ಲದೆ ಕೆಲಸವೊಂದುಂಟೇ ? ಗತಿಯೆಮಗೆ ಬೇಱುಂಟೇ ? ಪರಜಂಗಮವೆ ತಾಂ ಗತಿ ; ಮನೋವಾಕ್ಕಾಯ ಕರ್ಮಂಗಳೊಳಿರುಳು ಹಗಲು ಸತತವಿಂತಹವೆಮ್ಮ ಸದ್ಗುರು ಮತದ ಮಾರ್ಗವು ತಾನಿದುವೆ ಸುವ್ರತಂ ; ಇದುವೆ ಚಾರಿತ್ರ" ಎಂದಿದ್ದಾಳೆ.[46] ಇಂತಹರೆಲ್ಲ ಗುರುಜಂಗಮರ ಉಪದೇಶಕ್ಕೊಳಗಾಗಿ ಒಂದೊಂದು ಕಾಯಕವನ್ನು ಮಾಡಿಕೊಂಡಿದ್ದಂತೆ ಗೋಚರಿಸುತ್ತದೆ. ಶಿವಭಕ್ತರು ಈ ಕಾಯಕವನ್ನು ತ್ಯಜಿಸಿರಬೇಕೆಂಬುದು ಈ ಕಥೆಗಳಿಂದ ವ್ಯಕ್ತವಾಗುತ್ತದೆ. ಇಂತಹರನ್ನು ಪಾವನ ಮನುಜರನ್ನಾಗಿಸುವುದು ಬಸವಣ್ಣನವರ ಉದ್ದೇಶಗಳಲ್ಲೊಂದಾಗಿತ್ತು.[46A] ವೇಶ್ಯಾಸಂಸ್ಥೆಯು ಕಾಯದೆ ಬದ್ಧವಾದ ಸಂಸ್ಥೆಯಾಗಿದ್ದು, ಯಾವನೇ ವ್ಯಕ್ತಿಯು ವೇಶ್ಯೆಯರ ಬಳಿ ಹೋಗುವುದು 'ಪರದಾರಗಮನ'ದಂತೆ ಅನೀತಿಯೆಂದು ಪರಿಗಣಿತವಾಗಿರದಿದ್ದರೂ ಶರಣರು ವೇಶ್ಯೆಯರನ್ನು ಬೇರೆ ಉದ್ಯೋಗಗಳತ್ತ ತಿರುಗಿಸಿ ಗೃಹಿಣಿಯರನ್ನಾಗಿ ಪರಿವರ್ತಿಸಿದಂತೆ ಊಹಿಸಬಹುದು. ಹೀಗೆ ವೇಶ್ಯೆಯರ ಬಳಿಗೆಹೋಗಿ ಅವರಿಗೆ ಶಿವಭಕ್ತಿಯನ್ನು ಕಲಿಸಿ, ಕಾಯಕಕ್ಕೆ ಹಚ್ಚಲು ಹೋಗುತ್ತಿದ್ದ ಜಂಗಮರನ್ನೇ 'ಮಿಂಡಜಂಗಮ'ರೆಂದು ಬಸವಪುರಾಣದಲ್ಲಿ ಕರೆದಂತೆ ಕಾಣುತ್ತದೆ. ಇಂತಹ ಜಂಗಮರನ್ನು ಬಸವನೇ ಕಳಿಸುತ್ತಿದ್ದನೆಂಬುದನ್ನು ತಿಳಿದ ಮುಗ್ಧಸಂಗಯ್ಯನೂ, ತಾನೂ ಹೋಗಬೇಕೆಂಬಾಪೇಕ್ಷೆಯನ್ನು ಬಸವನ ಮುಂದೆ ಇರಿಸಿದುದಾಗಿಯೂ ಬಸವ ಪುರಾಣವು ತಿಳಿಸುತ್ತದೆ. 'ಪರಿಪರಿಯ ವೇಶಿಯರ ಮನೆಗಳೊಳಿರವಿನಲಿ ಭೋಗಿಸುವವರು ಹನ್ನೆರಡುಸಾವಿರ ಮಿಂಡಜಂಗಮ ; ಎಂದೊಡೆ ಇನ್ನಿರ್ದ ಶರಣ

---

46 ಬ.ಪು. ಸಂಧಿ 12, ಪದ್ಯ 30, 31

46A ಬಸವರಾಜದೇವರ ರಗಳೆಯಲ್ಲಿ ಸಂಗಮನಾಥನು ವಿಟವೇಷದಿಂದ ಬಂದು ಹೆಂಗೂಸನ್ನು ಕೇಳಿದಾಗ, ಪರಿಚಾರಕರನ್ನು ಅಟ್ಟಿದಾಗ, ಅವರು ಬಂದು 'ಪಣ್ಯಾಂಗನೆಯರೆಲ್ಲಂ ಕೂಡಿ ದಂಪತಿಗಳಾಗಿ'ದ್ದರೆಂದು ಬಸವಣ್ಣನಿಗೆ ತಿಳಿಸಿದುದರಲ್ಲಿ ಅನೇಕರು ಆ ಕಾಯಕ ಬಿಟ್ಟುದರ ಸೂಚನೆ ಇದೆ. ಬ.ರಾ.ದೇ.ರ : 12ನೆಯ ಸ್ಥಲ ಪುಟ 87, ಸಂ. ಟಿ. ಎಸ್. ವೆಂಕಣ್ಣಯ್ಯ (1938)

ಸೌಖ್ಯಮಂ ಬಣ್ಣಿಸಿನೋಡುವೊಡರಿದು' – ಎಂದು ಒಂದೆಡೆ ಬಸವಪುರಾಣದಲ್ಲಿ ಅವರ ಸೌಖ್ಯಮನೂ ತಿಳಿಸಿದ್ದಾನೆ ಕವಿ.[47] ಈಗಾಗಲೇ ನೋಡಿದಂತೆ ವೇಶ್ಯೆಯರು ಭಕ್ತೆಯರಾದುದರಿಂದ ವಿಟರೂ ಭಕ್ತರಾಗಿದ್ದಾರೆ. ಜಂಗಮರ ಉಪದೇಶದಿಂದ ವೇಶ್ಯೆಯರೂ ಭಕ್ತೆಯರಾಗಿದ್ದಾರೆ. ಮೊದಲು 'ಮಿಂಡರಾದವರೇ' ಭಕ್ತರಾಗಿ ವೇಶ್ಯೆಯರ ಉದ್ಧಾರ ಮಾಡಿದ್ದಾರೆ. ಇಂತಹವರನ್ನು ಮಿಂಡಜಂಗಮ ಎಂದು ಕರೆದಿರಬೇಕೆಂದೆನಿಸುತ್ತದೆ. ಇಲ್ಲದಿದ್ದರೆ ವೇಶ್ಯೆಯರಿಗೂ ಜಂಗಮರಿಗೂ ಆವ ಸಂಬಂಧ ? ವೇಶ್ಯೆಯರನ್ನು ಅವರ ವೃತ್ತಿಯಿಂದ ಬಿಡಿಸಬೇಕಾದರೆ ಅವರ ಉಪಜೀವನಕ್ಕೆ ಬೇಕಾಗುವ ಹಣವನ್ನು ಜಂಗಮರ ಮೂಲಕ ಬಸವಣ್ಣನು ಕಳಿಸಿದನೆಂದು ಚಾಡಿಕೋರರು ಬಿಜ್ಜಳನಿಗೆ ದೂರು ಹೇಳಿರುವುದರಲ್ಲಿಯೂ ಬಸವಣ್ಣನು ಅಂದು ಕೈಕೊಂಡಿದ್ದ ಸಾಮಾಜಿಕ ಉದ್ಧಾರಕಾರ್ಯದ ಸೂಚನೆಸಿಗುತ್ತದೆ. ಕಾಮುಕರ ಕಾಮ ಚಟುವಟಿಕೆಗಳಿಂದ ಸಾಮಾನ್ಯ ಗೃಹಿಣಿಯರು ಸುರಕ್ಷಿತರಾಗಿರಬೇಕಾದರೆ ವೇಶ್ಯಾಪದ್ಧತಿ ಆವಶ್ಯಕವೆನಿಸುವುದಾದರೆ ಅದನ್ನೊಂದು ನೀತಿಯಮೇಲೆ ಹೇಗೆ ನಡೆಸಬಹುದು ಎಂಬುದರ ಸೂಚನೆಗಳು ಕೆಲವು ಸೂಳೆಯರ ಕಥೆಗಳಲ್ಲಿ ಸಿಗುತ್ತವೆಯೆನ್ನಬಹುದು.

ಅಂದಿನ ರಾಜಸಭೆ ಮತ್ತು ರಾಜಕೀಯ : ಬಸವ ಪುರಾಣದಲ್ಲಿ ಪ್ರಥಮದಲ್ಲಿಯೇ ಶಿವ ಸಭೆಯ ವರ್ಣನೆ ಬಂದಿದೆ. ಶಿವಸಭೆ ವರ್ಣಿಸಲು ಕವಿಗೆ ತನ್ನ ಮುಂಚಿನ ದೊಡ್ಡ ರಾಜಸಭೆಗಳೇ ಆದರ್ಶವಾಗಿರಬೇಕು. ಆ ಸಭೆಯಲ್ಲಿ ಸುರನಿಕರ, ದನುಜಪ್ರಕರ, ಕಿನ್ನರವಿಸರ, ಗಂಧರ್ವಚಯ, ಕಿಂಪುರುಷಗಣ, ರಾಕ್ಷಸಸಮೂಹ, ಮಯೂರ ಸಂದೋಹ, ಉರಗಕುಲ, ಗರುಡೌಘ, ಯಕ್ಷೋತ್ಕರ, ವಿಯಚ್ಚರವೃಂದ, ಮಾನವವರವಿತತಿ-ಇತ್ಯೆಂದು ಹೇಳುತ್ತಾನೆ ; ಅಲ್ಲಿ ಪ್ರಾರಂಭದಲ್ಲಿ ತುಂಬುರ ನಾರದರ ಸಂಗೀತವು ಆರಂಭವಾಗುತ್ತದೆ ; ನಂತರ ಭೃಂಗೀಶನ ನಾಟ್ಯವು ಪ್ರಾರಂಭವಾಗುತ್ತದೆ. ಆಮೇಲೆ ಸಭೆಯ ಕಾರ್ಯಕಲಾಪಗಳು ನಡೆಯುತ್ತವೆ. ಇದು ಅಂದಿನ ಪ್ರಮುಖರ ಸಭೆಯೆನಿಸುತ್ತದೆ.

ರಾಜನು ತನ್ನ ಆಡಳಿತ ನಿರ್ವಹಣೆಗೆ ಮಂತ್ರಿಮಂಡಳವನ್ನಿರಿಸಿಕೊಳ್ಳುತ್ತಿದ್ದನು. ಬಸವಣ್ಣನನ್ನು, 'ಮನ್ನಣೆವೆತ್ತ ಪನ್ನಿಬ್ಬರು (ಹನ್ನೆರಡು) ಮಹಾಮಾತ್ಯರೊಳಗೆ ಅಗ್ರೇಶ್ವರ' ನನ್ನಾಗಿ ನೇಮಿಸಿಕೊಳ್ಳುತ್ತಾನೆ[48]. ಅಲ್ಲದೆ ಬಿಜ್ಜಳನ ಇತರ ಮಂತ್ರಿಗಳ ಹೆಸರುಗಳನ್ನೂ ಕವಿಯು ಕೊಡುತ್ತಾನೆ ; ಅವು ಇಂತಿವೆ : ಕಾಳಿಮಯನ, ಕರಿಯ ಕೇಶವ, ಜೋಳಿಯಣ್ಣ, ಕುಂದತಮ ಭೂಪಾಳ, ಹಮ್ಮಿರಿಯಾಗ್ರಚಂದಿ, ಕಸವಮಂತ್ರಿ, ಮೋಳಿಗರಸು. ಈ ಮಂತ್ರಿಗಳಲ್ಲಿ ಕೆಲವರು ಬಸವಣ್ಣನ

47 ಬ. ಪು. 6ನೆಯ ಸಂಧಿ, ಪದ್ಯ 33

48 ಬ. ಪು. 5ನೆ ಸಂಧಿ, ಪದ್ಯ 65

ವಿರುದ್ಧ ಅರಸನಿಗೆ ಚಾಡಿಹೇಳುವುದರಲ್ಲಿ ತೊಡಗಿದ್ದರೆಂದು ಕಾವ್ಯವು ತಿಳಿಸುತ್ತದೆ.[49] ಅರಸನು ಕ್ಷತ್ರಿಯನಾಗಿದ್ದರೂ ರಾಜ್ಯಸೂತ್ರಗಳೆಲ್ಲ ಹೆಚ್ಚಾಗಿ ಬ್ರಾಹ್ಮಣಮಂತ್ರಿಗಳ ಕೈಯಲ್ಲಿರುತ್ತಿದ್ದವೆಂದು ಕಂಡುಬರುತ್ತದೆ. ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಬಿಜ್ಜಳನ ಗುರುಗಳೂ ವೈಷ್ಣವರಾದ ನಾರಣಕ್ರಮಿತ, ಸೌರಿಭಟ್ಟ, ವಿಷ್ಣು ಪದ್ದಿ ಇದ್ದರೆಂದು ಹೇಳಲಾಗಿದೆ.[50] ಹೀಗಾಗಿ ಬಿಜ್ಜಳನ ಕೈಕೆಳಗಿನ ಅನೇಕ ಅಧಿಕಾರಿಗಳು ಮತ್ತು ಧಾರ್ಮಿಕ ಸಲಹೆ ನೀಡುವ ಗುರುಗಳು, ವೈಷ್ಣವರಿದ್ದು ಅವರು ಬಸವಣ್ಣ ಹಾಗೂ ಬಸವಣ್ಣನ ಧಾರ್ಮಿಕ ವೃಷ್ಟಿಗೆ ವಿರೋಧವೊಡ್ಡಿದವರಾಗಿದ್ದುದರಿಂದ ಬಸವಣ್ಣನು ಕೈಕೊಂಡ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿ ವಿಫಲವಾಯಿತು. ಇಲ್ಲದೆ ಹೋಗಿದ್ದರೆ ಬಿಜ್ಜಳನನ್ನು ಪರಿವರ್ತಿಸುವುದು ಬಸವಣ್ಣನಿಗೆ ಅಸಾಧ್ಯವಾಗಿರಲಿಲ್ಲ.

ಹೊಸದಾಗಿ ಮಂತ್ರಿಯಾದವರು 'ಪ್ರತಿಜ್ಞೆ ಸ್ವೀಕರಿಸುತ್ತಿದ್ದರೆಂ' ಕಂಡು ಬರುತ್ತದೆ. ಈ ಪದ್ಧತಿ ನಿಯಮಬದ್ಧವಾಗಿ ನಡೆಯುತ್ತಿತ್ತೋ ಇಲ್ಲವೋ ಹೇಳುವುದು ಕಷ್ಟವಾದರೂ ಬಸವಣ್ಣನು ಮಾತ್ರ ತನಗೆ ಮಂತ್ರಿ ಪದವಿ ಬಂದಮೇಲೆ ಮೂವತ್ತೆರಡು ಭಾಷೆಗಳನ್ನು (ಪ್ರತಿಜ್ಞೆ) ಉದ್ಘೋಷಿಸಿದನೆಂದು ಬಸವಪುರಾಣವು ತಿಳಿಸುತ್ತದೆ. ಇವುಗಳಲ್ಲಿ ಬಸವಣ್ಣನ ಧಾರ್ಮಿಕನೀತಿ, ವ್ಯಕ್ತಿಗತಶೀಲಗಳ ವಿಷಯವನ್ನು ಹೇಳಲಾಗಿದೆ[51]. ಹೀಗೆ ಪ್ರಮಾಣ ಮಾಡಿ ನುಡಿದಂತೆ ನಡೆದುದು ಬಸವನ ವೈಶಿಷ್ಟ್ಯ ಮತ್ತು ಅವನ ರಾಜನೀತಿ ಶೀಲವಾಗಿದೆ.

ಅಂದಿನಕಾಲದ ಭಾರತದ ದೇಶಗಳು ಮತ್ತು ಲಿಪಿಗಳು : ಬಸವಣ್ಣನನ್ನು ಕಾಣಲು ಅಖಿಲ ಭಾರತದ ವಿವಿಧ ಪ್ರದೇಶಗಳಿಂದ ಎಂದರೆ, ಲಾಳ, ಮಾಳವ, ಸಿಂಧು, ಸಿಂಹಳ, ಗೌಳ, ಗುರ್ಜರ, ಮಗಧ, ಪಾಂಚಾಲ, ಮತ್ಸ್ಯ, ಕುರಂಗ, ವಂಗ, ಕಳಿಂಗ, ಬಂಗಾಳ, ಆಂಧ್ರ, ತುರುಷ್ಕ, ಕುರು, ನೇಪಾಳ, ಕುಂತಳ, ಕಕುರ, ಬರ್ಬರ, ಚೋಳ ಪಾಂಡ್ಯ, ತುಳುವ, ಮಲಯ–ಮಲಯಾಳ, ಕರ್ಣಾಟ, ಚೇರ, ಕೊಂಕಣ, ಪಲ್ಲವಕ, ಹಮ್ಮೀರ, ಜಾಳಾಂಧ್ರ, ದ್ರವಿಳ, ಕಾಶ್ಮೀರ, ಬಾಹ್ಲಿಕ, ಭೋಟಭೂ, ಕಾಂಬೋಜ, ಕನ್ನೋಜ, ಸೂರಸೇನ, ವರಾಳ, ಖರ್ಪರ, ಪಾರಿಯಾತ್ರಕ, ಕೇರಳ—ಇವೇ ಸುಮಾರು ನಲವತ್ತೊಂದು ಪ್ರಾಂತಗಳ ಹೆಸರುಗಳು ದೊರೆಯುತ್ತವೆ.[51A] ಅಂದಿನ ಭಾರತವು ಹೇಗೆ ಸಣ್ಣಸಣ್ಣ ರಾಜ್ಯಗಳಾಗಿ ಹರಿದು ಹಂಚಿ ಹೋಗಿತ್ತೆಂಬುದನ್ನು ನಾವಿಲ್ಲಿ ಕಾಣುತ್ತೇವೆ. ಈ ಎಲ್ಲ ದೇಶಗಳಿಂದ

---

49 ಬ. ಪು. 11ನೆಯ ಸಂಧಿ ಪದ್ಯ 4

50 ಬ. ರಾ. ದೇ. ರ ಎಂಟನೆಯ ಸ್ಥಲ ಪುಟ 52

51 ಬ. ಪು. 6ನೆಯ ಸಂಧಿ, ಪದ್ಯ 1-7

51A ಇವು ಸಾಂಪ್ರದಾಯಿಕ 'ಛಪ್ಪನ್ನ (56) ದೇಶಗಳಾಗಿಲ್ಲವೆಂಬುದು ಗಮನಾರ್ಹ

ಬಂದವರೆಂದರೆ ಮಾನಿಗಳು, ಮೌನಿಗಳು, ಶಿವಾನುಭಾವೇಚ್ಛಾತ್ಮಸುಖಿಗಳು, ದಾನಿಗಳು, ಗಾಯಕರು, ನಟಕರು, ನವರಸಾಯುತರು, ದೀನರು, ಆರ್ಯರು, ವೇದವೇತ್ತರು, ಅನೂನತತ್ವಜ್ಞರು, ಸಕಳವಿದ್ಯಾನಿಪುಣರು, ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು. ಇವರೆಲ್ಲ ಬಸವಣ್ಣನನ್ನು ಸಂದರ್ಶಿಸಿದರೆಂದು ಹೇಳುವಲ್ಲಿ ಬಸವಣ್ಣನ ಪ್ರಭಾವವು ಸಮಕಾಲೀನ ಜನಾಂಗದಮೇಲೆ ಬಿಷ್ಟಿತ್ತೆಂಬುದನ್ನು ತೋರುತ್ತದೆ[52]. ಹರ ಲಿಖಿತವು ಬಿದ್ದುದನ್ನು ಓದಲು ಬಿಜ್ಜಳನು ಹಲವರನ್ನು ಆಮಂತ್ರಿಸುತ್ತಾನೆ. ತೆಲುಗುಲಿಪಿ, ನಾಗರದ ಲಿಪಿ, ಗ್ರಂಥಲಿಪಿ, ಹಳೆಗನ್ನಡದ ಲಿಪಿ, ದ್ರಾವಿಳ ಲಿಪಿ, ಪಾರಿಸಲಿಪಿ, ಲಾಳಲಿಪಿ, ಮೊದಲಾದ ಹಲವು ಲಿಪಿಗಳು ಅಂದು ಇದ್ದುದರ ಬಗೆಗೆ ಈ ಕಾವ್ಯವು ದಾಖಲೆಯನ್ನೊದಗಿಸುತ್ತದೆ.[53] ಇದರಿಂದ ತೆಲುಗು, ಕನ್ನಡ, ತಮಿಳು—ಈ ಮೂರೂ ಭಾಷೆಗಳಿಗೆ ಪ್ರತ್ಯೇಕ ಲಿಪಿಗಳಿದ್ದುವೆಂಬುದು ಸುವಿದಿತವಾಗುತ್ತದೆ.

ರಾಜಕೀಯದಲ್ಲಿ ಮಾತ್ಸರ್ಯ : ರಾಜಕೀಯವು ಯಾವಾಗಲೂ (ಅಧಿಕಾರ ದಾಹಕ್ಕೆ) ಮಾತ್ಸರ್ಯದಿಂದಲೇ ಕೂಡಿರುತ್ತದೆ. ಅಂತಃಕಲಹ, ಚಾಡಿಕೋರತನ, ಕುಹಕ ಇವು ಎಲ್ಲ ಕಾಲಕ್ಕೂ ಇರುತ್ತವೆ. ಬಸವನ ಕಾಲದಲ್ಲಿಯೂ ಇದ್ದುವು. ಬಸವಪುರಾಣದಲ್ಲಿ ಅನೇಕ ಪ್ರಸಂಗಗಳಲ್ಲಿ ರಾಜಕೀಯ ವ್ಯಕ್ತಿಗಳು ಬಸವಣ್ಣನ ವಿರುದ್ಧ ಅರಸನಿಗೆ ಒಂದಿಲ್ಲೊಂದು ರೀತಿಯಲ್ಲಿ ಚಾಡಿ ಹೇಳುತ್ತಲೇ ಇರುತ್ತಿದ್ದರು. ಒಮ್ಮೆ ಇವರು ಬಸವಣ್ಣನು, ಮಿಂಡರ್ಗೆ ಭಂಡಾರದ ಧನವ ಕೊಟ್ಟಿದ್ದಾನೆಂದು ಕೊಂಡೆಯವ ಹೇಳಿದರು. ಪೆಟ್ಟಿಗೆಗಳನ್ನು ತರಿಸಿನೋಡಲು ಹಣವೆಲ್ಲ ಇದ್ದಂತಿರುತ್ತದೆ. ಬಿಜ್ಜಳನು ಆಶ್ಚರ್ಯಪಡುತ್ತಾನೆ. ಅದರಂತೆಯೇ ಬಸವನನ್ನು ಕಂಡರೆ ಆಗದ ಅನೇಕರು ಬಿಜ್ಜಳನಿಗೆ ಹಲವಾರು ವಿಧದಿಂದ ದೂರು ಕೊಟ್ಟುದಕ್ಕೆ ಕಾವ್ಯದಲ್ಲಿ ಉದಾಹರಣೆಗಳಿವೆ. ಮಡಿವಾಳಯ್ಯನ ಕಥೆ, ಕಿನ್ನರಯ್ಯನ ಕಥೆ ಇದಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ವಿರೋಧಿಗಳ ಅಭಿಪ್ರಾಯವನ್ನು ಕಾಣಬಹುದು.

ಅಪರಾಧಗಳನ್ನು ವಿಚಾರಿಸುವ ರೀತಿ :

ಮಡಿವಳ ಮಾಚಿದೇವನು "ಶಸ್ತ್ರಸಮೇತ"ನಾಗಿ ಬೀದಿಯಲಿ ಸಂಚರಿಸುತ್ತಿದ್ದನೆಂದು ಕಾವ್ಯದಲ್ಲಿ ವರ್ಣಿಸಲಾಗಿದೆ. ಹಾಗೆ ವ್ಯಕ್ತಿಗಳು ಸಂಚರಿಸುತ್ತಿದ್ದುದು ಅಪರಾಧವೆಂದು ಇಂದಿನಂತೆ ಅಂದು ಪರಿಗಣಿತವಾಗುತ್ತಿರಲಿಲ್ಲ. ದುಷ್ಟರಿಂದ ರಕ್ಷಿಸಿಕೊಳ್ಳಲು ಹೀಗೆ ಆಯುಧ ಧರಿಸುತ್ತಿದ್ದರು. ಭವಿಗಳು ಅವನು ತಂದ ಬಟ್ಟೆಗಳನ್ನು ಮುಟ್ಟಿದರೆ ಕೊಲ್ಲುವುದಾಗಿ ಜಯಘಂಟೆಯನು ಹೊಯಿದು 'ಜನರು

---

52 ಬ. ಪು. 6ನೆಯ ಸಂಧಿ. ಪದ್ಯ 17-19

53 ಬ. ಪು. 5ನೆಯ ಸಂಧಿ. ಪದ್ಯ 53

ಗಳಿರಾ ತೊಲಗಿ' ಎಂದು ಘೋಷಿಸುತ್ತಿದ್ದನು. ಇದನ್ನು ಲೆಕ್ಕಿಸದೆ ಒಬ್ಬನು ಮುಟ್ಟಿದುದರಿಂದ ಮಾಚಿದೇವನು ಅವನ ತಲೆಯನ್ನು ಕತ್ತರಿಸಿ ಗಗನಕ್ಕೆ ಎಸೆದನಂತೆ! ಅಲ್ಲಿ ನೆರೆದವರು ಬಿಜ್ಜಳನಲ್ಲಿಗೈದಿ, "ಹೊಲ್ಲಹನಸಗನೊಬ್ಬನು ಭಕ್ತನೆನುತ್ತ ಗರ್ವಿಸಿ, ಟೊಂಕದಲಿ ಕಠಾರಿಯೊಂದಿರೆ, ಮಾರ್ಪುಲಿತು, ಸೀರೆಯನು ಸೋಂಕಿದವರನ್ನಿರಿವೆನುತ ಪುರವೀಥಿಯಲಿ ಬಲ್ಲಿದರನಱಿಯಟ್ಟಿ ಕುಟ್ಟುವನು ; ಅಂಗಡಿಗಳುಡುಗಿದುವು ; ಬೆವಹಾರಂಗಳಾಟವು ಮಾದುವು ;ಆರುಂ ಸಂಗಡ ಅತ್ತಲಿತ್ತಲು ಸುಳಿಯಲ್ಕೆ ಅಂಜುವರು ; ಮುಂಗಡೆಯೊಳು ಎತ್ತು ಎಮ್ಮೆ ಭಂಡಿ ತುರಂಗ ಆನೆಗಳು ದೂರಕೆ ಕೆದರಿ ದೆಸೆಗೆಟ್ಟೋಡುವವು ; ಇಂದು ಹೊಸಬನೊಬ್ಬನು ಅರಿಯದೆ ಅಂಗಡಿಗೆ ಹೋಗುತ ಸಂಧಿಸಿದೊಡೆ ಎತ್ತಿ ಚಿಮ್ಮಿದನು"54 ಎಂದು ತಿಳಿಸುತ್ತಾರೆ. ಬಿಜ್ಜಳರಾಯನು ಬಸವರಾಜನ ಮುಖವ ನೋಡಿ, ಕೋಪದಿಂದ, "ಮಿಸುಕಬಾರದು ನಿಮ್ಮ ಭಕ್ತರ ದೆಸೆಯೊಳಾರಿಗೆ ಬದುಕಬಹುದು ; ಈ ಅಸಗನೇ ಕಸಿತು ಸಘಾಟಿಕೆ ಜನರನೊಗೆದಹನು ? ಮಾಸಿದರಿವೆಗಳ ಬಡಿವುದಕೆ ಹೇಸದಸಗಂ ಕೊಬ್ಬಿ ಮನುಜರನಾಸುರದೆ ಹಾಣಾಹಣಿ ಮಾಡುತಿರ್ದಪನು ; ಕಟ್ಟರಸು ನಾನೆಂದು ನೋಡದೆ ಪಟ್ಟಣದ ಜನರಂ ಚರಿಸಲೀಯನು ; ಮುಟ್ಟಿದೊಡೆ ಮುರುಟುವುದೆ ಸೀರೆಯು ಮೊಟ್ಟೆ ? ಒಬ್ಬನು ಮುಟ್ಟಿಹೋಗುತ್ತಿರಲು ಕೊಂದನು. ಈ ಪರಿಯೊಳು ಜನರಂ ನುಂಗುತಿರ್ದಪನು. ಸೀರೆಗಳನಂಟಿದೊಡೆ ಅಂತು ಕೊಲುವುದೇ ?" ಎಂದು ತಿಳಿಸಿ, ತನ್ನವರನಲ್ಲಿಯೆ ಕಂಡು ಬಿಜ್ಜಳನು, "ಖುಲ್ಲ ಅಸಗನ ಹೋಗಿ ಅಲ್ಲಿಯೆ ಕೊಲ್ಲಿ" ಎಂದು ಆಜ್ಞಾಪಿಸುತ್ತಾನೆ.55 ಅದಕ್ಕೆ ಬಸವಣ್ಣನು ಬಿಜ್ಜಳನಿಗೆ "ಮೇಲನಱಿಯದೆ ಕಾಳುಮೂಳರ ಖಳರ ಕಾಕರ ಖೂಳರಧಮರ ಮಾತಿಂಗೆ ಮರುಳಾಗಿ ಮಿಕ್ಕು ನುಡಿದಪೆ; ಅಸಗನುಮೆನುತ ಹೀಯಾಳಿಸುತ್ತಿಹೆ ; ಆತನಸಗನೇ ? ಕುಲಜಾತನು ; ಸಾಕ್ಷಾತ್ ಸದಾಶಿವ" ಎಂದು ಅವನ ಪಕ್ಷ ವಹಿಸಿ ಮಾತನಾಡುತ್ತಾನೆ.56 ಕಿನ್ನರಿಯ ಬೊಮ್ಮಯ್ಯಗಳ ಕಥೆಯಲ್ಲಿಯೂ ಇಂತಹ ಪ್ರಸಂಗವೊಂದಿದೆ. ಕಿನ್ನರಿಯ ಬ್ರಹ್ಮಯ್ಯನು ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕಿನ್ನರಿವೀಣೆಯನ್ನು ವಿನೋದಕ್ಕೆ ನುಡಿಸುವ ಕಾಯಕ ಕೈಕೊಂಡಿದ್ದ. ಬ್ರಹ್ಮಯ್ಯನು ಕುಳಿತ ಸಮಯದಲ್ಲಿ ಒಬ್ಬ ವಿಟನು ವೇಶ್ಯೆಯ ತೃಪ್ತಿಗಾಗಿ ಒಂದು ಕುರಿಯನ್ನು ಕೊಂಡೊಯ್ಯುತ್ತಿದ್ದಾಗ ಕುರಿಯು ಕೊರಳ ಹಗ್ಗವನ್ನು ಹರಿದುಕೊಂಡು ‘ಓಡಿ ಆ ದೇವಾಲಯದೊಳಗೆ ಬರುತ್ತದೆ. ವಿಟನು ಕುರಿಯ ಬೆನ್ನಹಿಂದೆಯೇ ಹೋಗುತ್ತಾನೆ. ಆಗ ಕಿನ್ನರಯ್ಯನು ಪ್ರಾಣಿದಯಾಭಾವನೆಯಿಂದ

---

54. ಬ. ಪು. ಸಂಧಿ 21, ಪದ್ಯ 14–17
55. ಬ. ಪು. ಸಂಧೆ 21, ಪದ್ಯ 21–22
56. ಬ. ಪು. ಸಂಧಿ 21, ಪದ್ಯ 23–24

ಆದಾಗ, "ತಮ್ಮಾ ಸಾವಭಯಕಾಜಿ ಕುರಿ ಇಲ್ಲಿ ಬಂದಿದೆ ; ಕೊಲುವುದು ದೋಷ; ಇದರ ಬೆಲೆಯ ಕೊಡುವೆ"—ಎಂದು ಹೇಳಿ ಹಣ ಕೊಟ್ಟು ಕಳಿಸುತ್ತಾನೆ. ಹಣ ಸ್ವೀಕರಿಸಿದ ಈ ವ್ಯಕ್ತಿಯು ಮತ್ತೆ ಆಗಮಿಸಿ ಕುರಿಯನ್ನು ಹೇಳುತ್ತಾನೆ ; ಕುರಿಯನ್ನು ತಾನು ತೆಗೆದುಕೊಂಡು ಹೋಗಲು ಆಗ್ರಹಿಸುತ್ತಾನೆ. ಕಿನ್ನರಯ್ಯ ಪರಿಪರಿಯಿಂದ ತಿಳಿಹೇಳಿ. ಬಿಡದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದರೂ ವಿಟನು ಕೇಳದಿದ್ದುದರಿಂದ ವಿಟನ ತಲೆಯನ್ನೇ ಹಾರಿಸುತ್ತಾನೆ; ಅವನ ಬಳಗವು ಬಂದು ಬಿಜ್ಜಳನಿಗೆ 'ತಪ್ಪಿಲ್ಲದೆ ಕಿನ್ನರಯ್ಯನು ಕೊಂದನೆಂದು' ದೂರಿಡುತ್ತಾರೆ. ಆಗ ಅರಸನು 'ನಿರಪರಾಧಿಗಳ ಕೊಲುವುದು ಭಕ್ತರನೀತಿಯೇ?' ಯೆನ್ನುತ್ತಾನೆ. ಅಮಾತ್ಯರನ್ನು ಕಳಿಸಿ ವಿಷಯವನ್ನು ತಿಳಿದುಕೊಂಡರೂ ಕೇಳಲಿಲ್ಲ ಎಂದು ವಿವರವಾಗಿದೆ. ಇಂತಹ ಪ್ರಸಂಗಗಳಲ್ಲಿ ರಾಜನು ವಿಷಯವನ್ನು ಸಮರ್ಪಕವಾಗಿ ಪರಿಶೀಲಿಸದೆ ಪೂರ್ವಗ್ರಹಪೀಡಿತನಾಗಿ ನಿರ್ಣಯಿಸುತ್ತಿದ್ದುದು ಗೋಚರಿಸುತ್ತದೆ. ಅಪರಾಧಿಗಳು ನಿಜವಾಗಿಯೂ ಅಪರಾಧ ಎಸಗಿದ್ದಾರೆಯೋ ಎಂಬುದನ್ನು ತಿಳಿಯದೆ ಕ್ರೂರಶಿಕ್ಷೆ ಕೊಡುತ್ತಿದ್ದುದು ನ್ಯಾಯವಲ್ಲ. ಹೀಗೆಯೇ ಅವನ ಆಳಿಕೆ ಮುಂದುವರಿದುದರಿಂದಲೇ ಬಸವಣ್ಣನ ಅನುಯಾಯಿಗಳು ಕ್ರೂರ ಶಿಕ್ಷೆಗೆ ಗುರಿಯಾದರು. ಬಸವಣ್ಣನು, ಗೊಲ್ಲತಿಯು ಹಾಲಹರವಿಯು ಬೀಳುವುದನ್ನು ತಾನಿದ್ದಲ್ಲಿಂದಲೇ ತಡೆದನೆಂದು ಹೇಳುವಲ್ಲಿ ಸಾಮಾನ್ಯರ ಮೇಲಿದ್ದ ಅವನ ಕಳಕಳಿಯನ್ನು ವ್ಯಕ್ತಪಡಿಸುತ್ತದೆ. ಕಪಿಲೇಶ್ವರ ದೇವರಿಗೆ "ಒಬ್ಬ ತಾಪಸಿ ಸಾವಿರ ನೂರ ಖಂಡುಗ ಕ್ಷೀರಾಭಿಷೇಕವನು ಮಾಡಲು, ಬೀದಿ ಬೀದಿಗೆ ಕಾಲುವೆಗಟ್ಟಿ ಹರಿಯೆ, ಗಜಾವಳಿಯು ಪದಘಟ್ಟಣದಿ ತಾ ಜೌಗೆದ್ದ ಕೆಸಱೊಳಗೆ ಆಳೆಯಂ ಹೊತ್ತು ಬೀದಿಯಲಿ ಮಾರುತ್ತ, ಕೊಗ್ಗೆಸಱಲ್ಲಿ ಕೊಗ್ಗೆಸು ಜಾರಿ" 'ಕಾಟಕ' ನೆಂಬವಳು ಬೀಳುತ್ತಾಳೆ. ಇದು ತಪಸ್ವಿಗೈದ ಕ್ಷೀರಾಭಿಷೇಕದ ಫಲ ಮತ್ತು ಪರಿಣಾಮ; ಅಂದಿನ ಜನ ನಡೆದುಕೊಳ್ಳುತ್ತಿದ್ದ ರೀತಿ, ತೋರಿದ ಭಕ್ತಿ. ಸಾಮಾನ್ಯರು ಬಸವಣ್ಣನನ್ನು ಮರೆಹೊಕ್ಕುದರ ದೃಷ್ಟಾಂತವಿದು.[58] ಇಂತಹ ಅಭಿಷೇಕಾದಿಗಳನ್ನು ಬಸವಣ್ಣನೂ ಮೆಚ್ಚಿರಲಿಲ್ಲ.[59]

ವೀರಭದ್ರನ ಹಲಗೆ ಎಂದರೆ-ಪುರಂತಿಕೆ :

ವೀರಶೈವರಲ್ಲಿ ಇಂದಿಗೂ ಅನೇಕರು ಮದುವೆಯ ಸಂಭ್ರಮದಲ್ಲಿ 'ಗುಗ್ಗಳ' ಅಥವಾ ರುದ್ರಾವತಾರದ ಕಾರ್ಯಕ್ರಮವನ್ನು ಕಡ್ಡಾಯವಾಗಿ ಆಚರಿಸುತ್ತಾರೆ :

---

57. ಬ. ಪು. ಸಂಧಿ 28, ಪದ್ಯ
58. ಬ. ಪು. ಸಂಧಿ 10
59 'ಹತ್ತು ಮತ್ತರದ ಭೂಮಿ, ಬತ್ತುವ ಹಯನು, ನಂದಾದೀವಿಗೆಯ ನಡೆಸಿಹ ವೆಂಬವಳ ಮುಖವ ನೋಡಲಾಗದು'; ಬ. ವ. 225 'ಹರಸಿಮಾಡುವುದು ಹರಕೆಯ ದಂಡ'; ಬ. ವ. 228.

ಅಲ್ಲದೆ ವೀರಭದ್ರದೇವರ ಜಾತ್ರೆಯ ಕಾಲಕ್ಕೂ ಈ ಪುರಂತರು ವೀರವೇಷವ ತೊಟ್ಟು ಅಸ್ತ್ರಶಸ್ತ್ರ ತಳೆದು, ದಕ್ಷಯಾಗ ಧ್ವಂಸದ ಕಥೆ ಹೇಳುತ್ತ, ರುದ್ರಮಹಿಮೆಯನ್ನು ಸಾರ್ವಜನಿಕರಿಗೆ ಸಾರುವುದನ್ನು ಹಲವರು ನೋಡಿರಬಹುದು. ಈ ಪದ್ಧತಿಯು ವೀರಶೈವರಿಗೆ ಶೈವರಿಂದಲೇ ಬಳುವಳಿಯಾಗಿ ಬಂದಂತೆ ಗೋಚರಿಸುತ್ತದೆ. ಇವರೇ ಪ್ರಾಯಶಃ 'ವೀರಗಣಾವತಾರ'ದ ಜನರಿರಬಹುದು. ಈ ಪದ್ಧತಿಯು ಶೈವರಲ್ಲಿ ಬಸವಪೂರ್ವದಲ್ಲಿಯೇ ಇದ್ದಿರಬಹುದೇನೋ ಎಂಬ ಸೂಚನೆ ಕೋಳೂರು ಕೊಡಗೂಸಿನ ಕಥೆಯಲ್ಲಿ ವ್ಯಕ್ತವಾಗಿದೆ. ಶಿವನು ಹಾಲು ಕುಡಿಯುದರಿಂದ ಕೊಡಗೂಸು ಶಿವನನ್ನು ರಮಿಸಿ ನುಡಿಯುತ್ತಾಳೆ. ಆಗ ಆಕೆಯು ಶಿವನಿಗೆ ನಾನಾ ವಿಧದಲ್ಲಿ ಹೇಳುವ ಮಾತುಗಳಲ್ಲಿ ನಮ್ಮ ಅಂದಿನ ಕಾಲದ ಕೆಲವು ಪದ್ಧತಿಗಳನ್ನೇ ಕಾವ್ಯವು ನಮ್ಮ ಮುಂದಿರಿಸುತ್ತವೆ.

1. "ಗುರುಮಠದೊಳೆಮ್ಮಯ್ಯಗಳ ಪರ್ಬಕೆ
ತೇರಸ, ವೀರಷೋಡಶ ವರಗಣಾರ್ಚನೆ"–ಇದೆ ; ಕರೆಯ ಬಹೆನು ;

2. "ವೀರಭದ್ರನ ಹಲಗೆ ಮೆಱೆವದು ;
ವೀರಭಕ್ತರ ತಿಂಥಿಣಿಯೊಳತಿ ವೀರವಂ ತೋಱದಪ ;
ಆರೋಗಿಸೈ ಪಾಲ."[60]

3. "ತಾವುಲಿದು ತೂಗಾಡಲಗ್ಗದ
ಬಾವುಲಿಯ ತೊಡರುಗಳ ವೀರ ಗ-
ಣಾವತಾರದ, ವೀರಭಕ್ತರು ವೀರಪಲಗೆಗಳಂ
ಆ ವಿಗಡರಡಿಗಡಿಗೆ ತಾಟಿಪ
ರಾವ ರಭಸದ ಬೊಬ್ಬೆಗಳಿಗೆ ದಿ-
ಶಾವರರು ನಡುನುಡುಗೆ ಘೋರನೆ ನಡೆವ ಮುಂದೆಸೆಯ".[61]

ಈ ಮೇಲಿನ ಪದ್ಯದಲ್ಲಿ (3ನೆಯದು) ಬಸವಣ್ಣನವರು ಕಲ್ಯಾಣದಲ್ಲಿ ಹೊಸಹುದ್ದೆ ವಹಿಸಿಕೊಂಡಾಗ ಅಲ್ಲಿ ನಡೆದ ಒಂದು ಮೆರವಣಿಗೆಯು ಮುಂದೆಯೂ ಆ ವೀರಗಣಾವತಾರದ ಪುರಂತರೂ ಭಾಗವಹಿಸಿದ್ದರೆಂದು ವರ್ಣಿತವಾಗಿದೆ. ಈ ಪದ್ಧತಿಯನ್ನು ವೀರಶೈವರಲ್ಲಿ, ಉಪಯುಕ್ತವೆಂದು ಇರಿಸಿಕೊಳ್ಳಲಾಗಿದೆ. ಅಂದು ರಭಸದಿಂದ ವೀರಶೈವ ಧರ್ಮಪ್ರಸಾರ ಮಾಡುವುದಕ್ಕೆ ದೈವಭಕ್ತಿ (ಶಿವಭಕ್ತಿ)ಯು ಮಹಿಮೆಯನ್ನು ಸಾರುತ್ತ, ಅಸ್ತ್ರ, ಶಸ್ತ್ರಗಳನ್ನು ಉಪಯೋಗಿಸುತ್ತ, ಇತರ ಧರ್ಮದವರ ಮೇಲೆ ಪ್ರಭಾವ ಬೀರಲು, ದೈವದ ಹಿರಿಮೆಯ ಪ್ರತ್ಯಕ್ಷಫಲಗಳನ್ನು ಜನತೆಗೆ ಬೀರಲು ಮತ್ತು ಹಿಂದೆ ಬ್ರಾಹ್ಮಣರು ಯಜ್ಞಯಾಗಗಳನ್ನು ಮಾಡಿ ಅವರ ಫಲಗಳನ್ನು ಹೇಳುತ್ತಿದ್ದಂತೆ ಈ ಕಾರ್ಯಕ್ರಮಗಳು ಉಪಯುಕ್ತವೆನಿಸಿರಬೇಕು. 'ಗುರುಮಠ'ಗಳ ಅಸ್ತಿತ್ವ ಮತ್ತು ಅಲ್ಲಿ ವರುಷಕ್ಕೊಮ್ಮೆ ಆ ಅಸ್ತಂಗತರಾದ ಗುರುಗಳ ಹಬ್ಬದ ಆಚರಣೆ, ಆ ಆಚರಣೆಯ ಕಾಲಕ್ಕೆ 'ತೇರಸರು', 'ಷೋಡಶರು'–ಇವರುಗಳ ಆರಾಧನೆ ನಡೆಯುತ್ತಿದ್ದುದನ್ನೂ ನಾವಿಲ್ಲಿ ಕಾಣುತ್ತೇವೆ. (ಸಶೇಷ)

60. ಬ. ಪು. ಸಂಧಿ, 14, ಪದ್ಯ 12, 14   61. ಬ. ಪು. ಸಂಧಿ 5, ಪದ್ಯ 40

ಸಂಪಾದನೆ ಸಿದ್ಧವೀರಣ್ಣಾಚಾರ್ಯನ "ಆಚರಣೆಯ ಸಂಬಂಧದ ವಚನ"ಗಳ ಒಂದು ಹಸ್ತಪ್ರತಿ

ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಪ್ರಕಟಣೆಗೊಂಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ[1] ಕ್ರಮಾಂಕ 7 (ಪುಟ. 7-8)ರಲ್ಲಿ ಸಂಪಾದನೆಯ ಮುದೆಯ [ಮುದ್ದಯ್ಯ] ನ ಸಂಕಲಿತ 'ಆಚರಣ ಸಂಬಂಧದ ವಚನ'ಗಳ ಪ್ರತಿಯೊಂದರ ಉಲ್ಲೇಖವಿದೆ. ಸೂಚಿಯಂತೆ ಇದರಲ್ಲಿ 210 ವಚನಗಳಿವೆ.

ಇದೇ ಸೂಚಿಯ ಕ್ರಮಾಂಕ 147 (ಪುಟ. 176-77) ರಲ್ಲಿ ಸಂಪಾದನೆಯ ಮುದೆಯ [ಮುದ್ದಯ್ಯ]ನ ಸಂಕಲಿತ 'ಸಂಬಂಧದ ವಚನ'ಗಳು ಎಂಬ ಹೆಸರಿನ ಕೃತಿಯೊಂದರ ಉಲ್ಲೇಖವಿದೆ. ಇದರಲ್ಲಿನ ವಚನ ಸಂಖ್ಯೆ 65.

ಮೇಲಿನ ಸೂಚಿಯಲ್ಲಿ ಉಲ್ಲೇಖಗೊಂಡಿರುವ ಕೃತಿಗಳು ಸೂಚಿಕಾರರು ಭಾವಿಸಿರುವಂತೆ ಒಬ್ಬನೇ ಸಂಕಲನಕಾರನ ಎರಡು ಪರಸ್ಪರ ಭಿನ್ನ ಭಿನ್ನ ಕೃತಿಗಳಾಗಿರದೆ ಅವು ವಾಸ್ತವವಾಗಿ ಒಂದೇ ಕೃತಿಗೆ ಸಂಬಂಧಿಸಿದುದಾಗಿವೆ.

ಸೂಚಿಯಲ್ಲಿ ಸಂಕಲನಕಾರನ ಹೆಸರು ಸಂಪಾದನೆಯ ಮುದೆಯ (ಮುದ್ದಯ್ಯ) ಎಂದಿದೆ. ಆದರೆ ಈ 210 + 65 = 275 ವಚನಗಳು ಸಂಪಾದನೆಯ ಸಿದ್ಧವೀರಣ್ಣಾಚಾರ್ಯನ 'ಆಚರಣೆಯ ಸಂಬಂಧದ ವಚನ'ಗಳ ಸಂಕಲಿತ ಪ್ರತಿಯನ್ನು ಚಾಚೂ ತಪ್ಪದೆ ಮಕ್ಕಿಕಾಮಕ್ಕಿಯಾಗಿ ವಚನಾನುಕ್ರಮ ಹಾಗೂ ಅಂಕಿತಗಳಲ್ಲಿ ಹೋಲುತ್ತದೆ; ಆ ಪ್ರತಿಯ ಪ್ರತಿಬಿಂಬ ಈ ಪ್ರತಿಯಾಗಿದೆ.

ಹೀಗಾಗಿ ಒಂದೇ ಸಂಕಲನ ಕೃತಿ ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಬೇರೆ ಬೇರೆ ಸಂಕಲನಕಾರರ ಹೆಸರಿನಲ್ಲಿ[2] ದೊರೆಯುತ್ತಿದ್ದು ಇದಕ್ಕೆ ಕಾರಣವೇನೆಂಬುದರ ಬಗೆಗೆ ಮುಂದಿನ ಸಂಶೋಧನೆ ಉತ್ತರಿಸಬೇಕಾಗಿದೆ.

---

1. A descriptive catalogue of the Kannada manuscripts in the Osmania University Library, Ed. B. Ramachandra Rao, T. V. Venkatachala Sastry. Hyderabad, 1966.
2. ಸಂಪಾದನೆಯ ಮುದೆಯನಂತೆ, ಮುಪ್ಪಿನಯ್ಯನ ಹೆಸರಿನಲ್ಲೂ ಸಂಪಾದನೆ ಸಿದ್ಧವೀರಣ್ಣಾಚಾರ್ಯನ 'ಆಚರಣೆಯ ಸಂಬಂಧದ ವಚನ'ಗಳ ಸಂಕಲಿತ ಕೃತಿಯೊಂದು ಉಪಲಬ್ಧವಿದೆ. ವಿವರಗಳಿಗೆ ನೋಡಿ: ಎಸ್. ಶಿವಣ್ಣ, 'ವಚನ ಸಾಹಿತ್ಯದ, ಸಂಕಲನಕಾರರು......', ಬಸವ ಜರ್ನಲ್, 2-3, Nov. 1978, ಪುಟ 46.

ಈ ಮೇಲಿನ ಅಂಶಗಳ ಪರಿಶೀಲನೆಯಿಂದ ಉಸ್ಮಾನಿಯ ವಿಶ್ವವಿದ್ಯಾನಿಲಯದ ಸೂಚಿಯಲ್ಲಿನ ಎರಡು ಉಲ್ಲೇಖಗಳಲ್ಲಿ ಎರಡನೆಯದನ್ನು ಕೈಬಿಟ್ಟು ಮೊದಲದರ ಅಂತ್ಯದಲ್ಲಿ ಎರಡನೆಯದರ ಅಂತ್ಯವನ್ನು ಸೂಚಿಸಬೇಕಾಗಿದೆ.

ಎಸ್. ಶಿವಣ್ಣ

ದೀವಟಿಗೆ ಸಲಾವ್

ಮಂಗಳಾರತಿ ಸಮಯದಲ್ಲಿ ದೇವರಿಗೆ 'ದೀವಟಿಗೆ ಸೇವೆ' ನಡೆಸುವುದು ಒಂದು ಪದ್ಧತಿ. ಇಂದಿಗೂ ಅನೇಕ ದೇವಾಲಯಗಳಲ್ಲಿ ದೀವಟಿಗೆ ಸೇವೆ ನಡೆಯುವುದನ್ನು ಕಾಣಬಹುದು. ಪುರಂದರದಾಸರು ಕೊಡುವ ಕೃಷ್ಣನ ಪೂಜೆಯ ಚಿತ್ರಗಳಲ್ಲಿ ಇದನ್ನು ಮರೆತಿಲ್ಲ: "ನೋಡ ಬನ್ನಿರೋ ಜನರು ಶ್ರೀಕೃಷ್ಣನ ಜೋಡು ದೀವಟಿಗೆ ಸೇವೆ" ಎಂದು ದಾಸರು ದೀವಟಿಗೆ ಸೇವೆಯ ಸಂದರ್ಶನಕ್ಕೆ ಆಹ್ವಾನಿಸುತ್ತ "ಕಂಜಾಕ್ಷ ಶ್ರೀಕೃಷ್ಣನಿದಿರೊಳು ನಿಂದು ಸಂಜೆಯ ವೇಳ್ಯದಿ ರಾಜಿಪ ರಜತದ ಪಂಜಿ ಸೇವೆಯ ಕರಾಂಜಲಿಯನೆ ಮುಗಿದು" ಎಂದು ಬೆಳ್ಳಿ ಹಿಡಿಯಿಂದ ಕೂಡಿರುವ ದೀವಟಿಗೆಯನ್ನು ಕರಾಂಜಲಿಯನ್ನು ಮುಗಿದು ಸೇವೆ ಸಲ್ಲಿಸುತ್ತಿದ್ದ ವಿಧಾನವನ್ನು ಹೇಳುತ್ತಾರೆ.[1]

ದೀವಟಿಗೆ ಸೇವೆಯನ್ನು 'ಪಂಜಿಸೇವೆ' (ಪಂಜಿನ ಸೇವೆ) ಎಂದು ಕರೆಯುವ ವಾಡಿಕೆ ಇತ್ತೆಂಬುದಕ್ಕೆ ಪುರಂದರದಾಸರ ಮೇಲಿನ ಕೀರ್ತನೆಯಲ್ಲಿನ ಪ್ರಯೋಗಗಳೇ ಸಾಕ್ಷಿ. ಕೈ ದೀವಿಗೆಗಳನ್ನು[2] ಪಂಜು ಎಂದು ಹೇಳುವರು. 'ಪಂಜು ಇರುಳಲಿ ಲೇಸು' (ಸವ 1134) ಎಂದು ಸರ್ವಜ್ಞ ಹೇಳಿದರೂ ಹಗಲು ಹೊತ್ತಿನಲ್ಲೂ ದೇವಮನೆ ಅರಮನೆಗಳಲ್ಲಿ ಹಗಲು ಕೈದೀವಿಗೆಗಳನ್ನು ಉಪಯೋಗಿಸುವರು. ಅದನ್ನು ಹಿಡಿಯುವವರೇ ಬೇರೆ ಇರುತ್ತಾರೆ. ಉದಾಹರಣೆಗೆ ಗದುಗಿನ ಭಾರತದಲ್ಲಿ ಬರುವ 'ಹಗಲು ಕೈದೀವಿಗೆಯ ಬಿರುದಿನ ವಿಗಡನಿವನಾರೆನಲು' ಎಂಬ ಮಾತನ್ನು ಗಮನಿಸಬಹುದು.[3] ಕೈದೀವಿಗೆಗಳು ರಾಜಗೌರವಗಳಲ್ಲಿ ಒಂದು. ಬಿಜ್ಜಳನ ರಾಜ ಸಭೆಯನ್ನು ವರ್ಣಿಸುತ್ತ ಕವಿ "ಸಾಲಕೈದೀವಿಗೆಗಳಿಕ್ಕೆಲದಾಲವಟ್ಟಂ ಚವರ ಕುಂಚಂ ದಾಳಯಿಸೆ ಗದ್ದುಗೆಯಮೇಲಿಹ ಬಿಜ್ಜಳನ ಕಂಡು..."[4] ಎಂದು ಹೇಳಿರುವ ಮಾತುಗಳು ಗಮನಾರ್ಹ.

ಚಾಮರ ಸೇವೆಯಂತೆಯೇ[5] ದೀವಟಿಗೆ ಸೇವೆಯೂ ಪ್ರಸಿದ್ಧವಾಗಿದೆ. ಇದನ್ನು ದೀವಟಿಗೆ 'ಸಲಾಮ್' ಎಂದೂ ಹೇಳುವರು. ರಾಜ ಗೌರವಗಳಲ್ಲಿ ಇದೂ ಒಂದು ಎಂಬುದಕ್ಕೆ 'ಧರ್ಮಗುರುಗಳಾದ ವ್ಯಾಸರಾಯರಿಗೆ ವಿಜಯನಗರದ ಅರಸರು ದೀವಟಿಗೆ ಸಲಾಮಿನ ಮಾನವನ್ನು ದೊರಕಿಸಿ ಗೌರವಿಸಿದರು' ಎಂಬ ಹೇಳಿಕೆ ಮತ್ತೊಂದು ನಿದರ್ಶನ[6] ವಿಜಯನಗರದ ಪ್ರಾಂತೀಯ ಆಡಳಿತಗಾರರ ವೈಭವ

ಮತ್ತು ಅವರು ಅನುಸರಿಸುತ್ತಿದ್ದ ಸಂಪ್ರದಾಯಗಳನ್ನು ಕುರಿತು ಹೇಳುವಾಗ. ಟೇಲರ್ ಎಂಬುವನು ದೀವಟಿಗೆ ಸಲಾಮ್ ವಿಚಾರವನ್ನು ಪ್ರಸ್ತಾಪಿಸುತ್ತಾನೆ : ಸಂಜೆಯ ಹೊತ್ತಿನಲ್ಲಿ ರಾಜನು ಮಂತ್ರಿಗಳು ಅಥವಾ ಆತ್ಮೀಯರ ಜೊತೆ ಕುಳಿತಿರುವಾಗ ರಾಜನಿಗೆ ಗೌರವ ಸಲ್ಲಿಸಲೆಂದು ದೀವಟಿಗೆಗಳು ಬೆಳಗುತ್ತಿದ್ದವು.[7] "Two or more persons performs various evolutions of double torches in approaching towards they King ; the then make their obsiance in which all others present join"[8]

ಟೇಲರ್ ಕೊಡುವ 'ದೀವಟಿಗೆ ಸಲಾಮ್' ಆಚರಣೆಯ ವರ್ಣನೆ ಅರಮನೆಗಳಲ್ಲಿ ದೇವಾಲಯಗಳಲ್ಲಿ ಗೌರವ ಸಂಕೇತವಾಗಿ ನಡೆಯುವ 'ದೀವಟಿಗೆ ವಂದನೆ'ಯನ್ನು ನೆನಪಿಗೆ ತರುತ್ತದೆ.

ಟಿಪ್ಪಣಿಗಳು—

1. ಪುರಂದರದಾಸರ ಕೀರ್ತನೆಗಳು 2-42
2. ಕನ್ನಡ—ಕನ್ನಡ ನಿಘಂಟು (2-2075) 'ಕೈದೀವಿಗೆ' ಕೈ ಎಂಬುದಕ್ಕೆ ಕೈಯಲ್ಲಿ ಹಿಡಿಯುವ ದೀಪ ಎಂದು ವಿವರಣೆ ಕೊಡುತ್ತದೆ. ನಿಶಾಸಮಯದೊಳ್ ಪತ್ತೆಂಟು ಕೆಯ್ದೀವಿಗೆಗಳ ಬೆಳಗಿನೊಳು (ಪಂಪಭಾರತ 10-5ಮ) ಎಂಬ ಇಲ್ಲಿನ ಪ್ರಯೋಗ ಕತ್ತಲನ್ನು ನಿವಾರಿಸಲು ಹಿಡಿದಿರುವ ಕೈದೀವಿಗೆ ಎಂಬ ಅರ್ಥವನ್ನು ಕೊಡುತ್ತದೆ. ಆದರೆ ಇದರ ಅರ್ಥವಲಯ ಬರಬರುತ್ತ ಇನ್ನೂ ಹೆಚ್ಚಾಗಿದೆ.
3. ಗದುಗಿನ ಭಾರತ ಆದಿ 7-26 ; ನೋಡಿ. T. V. Mahalingam : Administration and Social Life under Vijayanagar, Part I, II Edn., P. 65 (Mahanavami & Torches).
4. ಬಸವ ಪುರಾಣ 60-30
5. ರಾಜ ಚಿಹ್ನೆಗಳು ಐದು : ಛತ್ರ, ಚಾಮರ, ಸಿಂಹಾಸನ, ಮುಕುಟ, ರಾಜದಂಡ (ಶ್ರೀವತ್ಸ ನಿಘಂಟು ಪು. 373)
6. ನೋಡಿ 'ವ್ಯಾಸರಾಯರೂ ವಿಜಯನಗರದ ಅರಸರು' 'ಕವಿ ಕನಕದಾಸರು' ಪುಟ 41
7. ಪ್ರವಾಸಿ ನ್ಯೂನಿಜ್‌ನು ವಿಜಯನಗರದ ಅರಸರ ಹಾಗೂ ಸಾಮಂತ ಸರದಾರ ವಿಷಯವಾಗಿ ಬರೆಯುತ್ತಾ 66 ಶ್ರೀಮಂತ ಸರದಾರರು ರಾತ್ರಿ ವೇಳೆಯಲ್ಲಿ ಅವರವರ ಅಂತಸ್ತಿಗೆ ತಕ್ಕಂತೆ ನಾಲ್ಕರಿಂದ ಹನ್ನೆರಡು ಪಂಜುಗಳನ್ನು ಉಪಯೋಗಿಸುತ್ತಾರೆ. ರಾಜನು 150 ಪಂಜುಗಳನ್ನು ಉಪಯೋಗಿಸುತ್ತಾನೆ." ಎಂದು ಹೇಳುತ್ತಾನೆ. (ಪ್ರವಾಸಿಕಂಡ ಇಂಡಿಯ ಭಾಗ 2, ಪು. 381) 'ದೀವಟಿಗೆ ಸಲಾಮ'ನ್ನು ಕುರಿತು.

   ಕಿಟ್ಟೆಲ್‌ರವರು ಕೊಡುವ ವಿವರಣೆಯೂ ಈ ಸಂದರ್ಭದಲ್ಲಿ ಸಮಂಜಸವಾಗಿದೆ: "ದೀವಟಿಗೆ ಸಲಾಮು : An honouring ceremony performed every evening by waving lighted torches before an idol, a raja, a guru and other noble personages (KED p. 792).

8. Quoted by B.A. Saletore in "Social and Political Life in the Vijayanagar Empire, Part II, p. 217 fN.

ಆಧಾರ ಗ್ರಂಥಗಳು

(1) ಪುರಂದರದಾಸರ ಕೀರ್ತನೆಗಳು
(2) ಗದುಗಿನ ಭಾರತ
(3) ಬಸವ ಪುರಾಣ
(4) ಸರ್ವಜ್ಞನ ವಚನಗಳು
(5) ಕವಿಕನಕದಾಸರು (ಕಟ್ಟೆ ಶೇಷಾಚಾರ್ಯ)
(6) ಪ್ರವಾಸಿ ಕಂಡ ಇಂಡಿಯಾ, ಭಾಗ 2. ಅನು : ಎಚ್. ಎಲ್. ನಾಗೇಗೌಡ
(7) ಶ್ರೀವತ್ಸ ನಿಘಂಟು. ಸಂ : ವೆಂಕಟಾಚಲಶಾಸ್ತ್ರಿ
(8) ಕನ್ನಡ-ಕನ್ನಡ ನಿಘಂಟು—ಕ.ಸಾ.ಪ. ಭಾಗ, 2
(9) ಕಿಟ್ಟೆಲ್ ನಿಘಂಟು.
(10) Social and Political Life in the Vijayanagar Empire Part II. By B.A. Saletone.

ಮುನ್ನೀರ್

ಮುನ್ನೀರ್ ಎಂದ ತಕ್ಷಣ ನಮಗೆ ತಟಕ್ಕನೆ ಅರ್ಥ ಹೊಳೆಯುವುದು ಸಮುದ್ರ ಎಂದು. ಮುನ್ನೀರ್ ಪದ ಹೇಗೆ ಚಲಾವಣೆಗೆ ಬಂತು ? ಅದಕ್ಕೆ ಸಮುದ್ರ ಎಂಬ ಅರ್ಥವಾದರೂ ಬಂದದ್ದು ಹೇಗೆ ? ವಾಸ್ತವವಾಗಿ ಮುನ್ನೀರು ಎಂದರೆ ಏನು ? ಎಂಬುದು ತುಂಬ ಕುತೂಹಲಕಾರಿಯಾದುದು.

ನಮ್ಮ ಕನ್ನಡ ಕವಿಗಳೆಲ್ಲ ಸಾಮಾನ್ಯವಾಗಿ ನಾಗಚಂದ್ರ, ಬಾಹುಬಲಿ ಪಂಡಿತ, ಜನ್ನ, ಲಕ್ಷ್ಮೀಶ ಇವರುಗಳೆಲ್ಲ ಮುನ್ನೀರು ಪದವನ್ನು ಸಮುದ್ರ ಎಂಬ ಅರ್ಥದಲ್ಲಿ ಬಳಸಿದ್ದಾರೆ. ಪಂಪ, ರನ್ನ, ಹರಿಹರ, ಭೀಮಕವಿ, ಕುಮಾರವ್ಯಾಸ ಈ ಕೆಲವು ಕವಿಗಳಲ್ಲಿ ಈ ಪದದ ಬಳಕೆ ಕಂಡುಬರದು.

'ಮುನ್ನೀರು' ಪದ ಇವತ್ತಿಗೂ ಹಾಸನ, ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹಳ್ಳಿಯಲ್ಲಿ ಬಳಕೆಯಲ್ಲಿದೆ. ಈ ಪದ ಮುಖ್ಯವಾಗಿ ಬಳಕೆಯಾಗುವುದು ಮದುವೆ, ಜಾತ್ರೆ ಇತ್ಯಾದಿ ಹಬ್ಬಗಳ ಸಂದರ್ಭದಲ್ಲಿ ಮಾತ್ರ. ಮದುವೆ ಸಮಾರಂಭದಲ್ಲಿ ಗಂಗೆ ತರುವ ಸಂಪ್ರದಾಯವೊಂದಿದೆ. ಸಾಮಾನ್ಯವಾಗಿ ಇದನ್ನು ಆ ಊರಿನ ಅನುಕೂಲಕ್ಕೆ ತಕ್ಕಂತೆ ಕೆರೆ, ಬಾವಿ ಅಥವಾ ತೊರೆಯಲ್ಲಿ ತರುವ ಸಂಪ್ರದಾಯವುಂಟು. ಗಂಗೆ ತರಲು ಹೋದ ಮುತ್ತೈದೆಯರು ಕೆರೆ, ಬಾವಿ

ಅಥವಾ ತೊರೆಯ ಬಳಿ ಗಂಗೆ ಪೂಜೆ ಮಾಡಿ ನಂತರ ತಾವು ಹೊರುವ ಕಳಸದಲ್ಲಿ ಗಂಗೆಯನ್ನು ತುಂಬಿಕೊಂಡು ಬರುತ್ತಾರೆ. ಹೀಗೆ ಬರುವಲ್ಲಿ ಗಂಗೆಯ ಕಳಶ ಹೊತ್ತ ಮುತ್ತೈದೆ ಮುಂಚೂಣಿಯಲ್ಲಿ ನಡೆಯುತ್ತಾಳೆ. ಆ ಶಾಸ್ತ್ರ ಪದ್ಧತಿ ತಿಳಿಯದೆ ಗಂಗೆ ತರುವವಳು ಹಿಂದೆ ಮುಂದೆ ಬರುತ್ತಿದ್ದರೆ ಆ ಸಮೂಹದಲ್ಲಿದ್ದ ಹಿರಿಯ ಪುರುಷನೋ ಸ್ತ್ರೀಯೋ 'ಮುನ್ನೀರ್ ಮುಂದು ಮಾಡಿಕೊಂಡು ನಡೀರ್ಲ ಮಗ' ಎಂದು ಹೇಳುತ್ತಾನೆ (ಳೆ.) ಅದರಂತೆ ಮುನ್ನೀರು ಹೊತ್ತ ಮುತ್ತೈದೆ ಮುಂದೆ ನಡೆದರೆ ಉಳಿದವರು ಆಕೆಯನ್ನು ಅನುಸರಿಸುತ್ತಾರೆ.

ಇಲ್ಲಿ ಮುನ್ನೀರು ಪದ(ನೀರು)ಗಂಗೆಗೆ ಮಾತ್ರ ಬಳಕೆಯಾಗಿದೆ. ಅದು ಕೆರೆಯ ದಾಗಿರಬಹುದು, ತೊರೆಯದಾಗಿರಬಹುದು, ಇಲ್ಲ ಕೊಳ, ಬಾವಿಯದಾಗಿರಬಹುದು. 'ಮುನ್ನೀರು ಮುಂದು ಮಾಡಿಕೊಂಡು ನಡೆಯಿರಿ' ಎಂಬಲ್ಲಿ ಮುನ್ನೀರು ಪದದಲ್ಲಿ ಮುನ್ನ ಮತ್ತು ನೀರು ಪದಗಳಿವೆ. 'ಮುನ್ನೀರು ಮುಂದೆ ಮಾಡಿಕೊಂಡು' ಎಂಬಲ್ಲಿ ಮುಂದೆ ಪದ ಮುಂಚೆ ಎಂಬರ್ಥದಲ್ಲಿ ಮುನ್ನೀರಿನಲ್ಲಿದ್ದರೂ ತಲೆ ಶಿರೋ ಭಾರದಂತೆ ಮತ್ತೆ ಬಳಕೆಯಾಗಿದೆ. ಮುನ್ನೀರು, ನಂತರದ ತಲೆಮಾರಿನವರಿಗೆ ಅದರ ಅರ್ಥ ಸರಿಯಾಗಿ ಹೊಳೆಯದೆಯೋ ಏನೋ ಮುಂಚೆ ಎಂಬ ಪದ ಮತ್ತೆ ಬಳಕೆಯಾಗಿದೆ. ಹಿಂದೆ ನೀರನ್ನು ಮದುವೆ ಸಮಾರಂಭದಲ್ಲಿ ತರುವಾಗ ನೀರು ಎಂದು ಕರೆಯುತ್ತಿದ್ದುದಕ್ಕೆ ಇಲ್ಲಿ ಸಾಕ್ಷಿ ಸಿಗುತ್ತದೆ. ಆದರೆ ನೀರಿಗೆ 'ಗಂಗೆ' ಎಂದು ಕರೆಯುವುದರ ಮೂಲಕ ಪೂಜ್ಯತೆ ಕಲ್ಪಿಸಿಕೊಡುವ ಭಾವನಾತ್ಮಕ ಸಂಬಂಧ ಬೆಳೆದು ಮುನ್ನೀರು ಸ್ಥಾನದಲ್ಲಿ ಗಂಗೆ ಪದ ಬಳಕೆಯಾಗುತ್ತಿದೆ.

ಇವತ್ತು ನಾನು ಸಮುದ್ರಕ್ಕೆ ನೀರು ಎಂದು ಅರ್ಥ ಕೊಟ್ಟಲ್ಲಿ ನಿಮಗೆ ನಗು ಬರಬಹುದು. ಆದರೆ ನಮ್ಮ ಹಿಂದಿನ ಕವಿಗಳೇ ಮುನ್ನೀರು ಪದವನ್ನು ಸಮುದ್ರ ಎಂದು ಅರ್ಥಯಿಸಿ ಕರೆದುದು ಅಷ್ಟೆ ನಗು ತರಿಸುವಂತದಾಗಿದೆ. ಮುನ್ನೀರು ಪದಕ್ಕೆ 'ಧ್ರುವ ಜಲ, ನದೀ ಜಲ, ಮೇಘ ಜಲ ಎಂಬ ಮೂರು ಜಲಗಳನ್ನುಳ್ಳ ಸಮುದ್ರ' ಎಂದು ತೀನಂ. ಶ್ರೀ.[1] ಕಿಟ್ಟೆಲ್[2] ಮತ್ತು 'ಕಾವ್ಯಪದ ಮಂಜರಿಯ[3]ವರು ಅರ್ಥ ಕೊಡುತ್ತಾರೆ. ಅಲ್ಲದೆ ಇನ್ನೂ ಕೆಲವರು[4] ಕಡಲು, ಸಮುದ್ರ ಎಂದು ಅರ್ಥಕೊಟ್ಟಿದ್ದಾರೆ. ಆದರೆ ಹಳ್ಳಿಯ ಜನಸಾಮಾನ್ಯರಲ್ಲಿ ಇವತ್ತಿಗೂ ಅಲ್ಲೊಂದು ಇಲ್ಲೊಂದು ಕಡೆ ಉಳಿದಿರುವ ಮುನ್ನೀರು ಶಬ್ದ ಗಂಗೆ (ನೀರು) ಎಂದೇ ಅರ್ಥ ಕೊಡುತ್ತದೆ. ಸಮುದ್ರ ಎಂದು ಅರ್ಥ ಕೊಡುವುದಿಲ್ಲ. ಬಹುಶಃ ಕೆರೆ, ಬಾವಿ, ಹೊಳೆಯ ನೀರನ್ನು ಗಂಗೆಯೆಂದು ಪೂಜಿಸಿದಂತೆ ಸಮುದ್ರವನ್ನೂ ಸಹ ಗಂಗೆ ಯೆಂದು ಭಾವಿಸಿ ಪೂಜಿಸುವ ಬಳಕೆ ಆ ಭಾಗದಲ್ಲಿದ್ದು ಅಲ್ಲಿ ಬಳಕೆಯಾಗುತ್ತಿದ್ದ ಮುನ್ನೀರು ಪದ ಸಮುದ್ರದ ನೀರಿಗೆ ಸಂಬಂಧಿಸಿದ್ದಾಗಿ ಅದೇ ನಂತರ ವ್ಯಾಪಕ

ವಾಗಿ ಪ್ರಚಾರವಾಯಿತೋ ಏನೋ ? ಅಲ್ಲದೆ ಮುನ್ನೀರು ಪದದಲ್ಲಿ ಮುನ್ನ ಮತ್ತು ನೀರು ಪದಗಳಿದ್ದರೂ ಮುನ್ನೀರು ಎಂದು ಹೇಗೆ ಯಾವಾಗ ಆಯಿತೋ ನನಗೆ ತಿಳಿಯದು.

ಮುನ್ನೀರು ಪದಕ್ಕೆ ಸಂಬಂಧಿಸಿದಂತೆ ಇನ್ನೂ ಒಂದು ರೀತಿಯ ಪಳೆಯುಳಿಕೆ ಸಂಪದಾಯವೂ ಇದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ವಿಭಾಗ ಇದ್ದದ್ದು ಆರ್ಯರಲ್ಲಿಯೇ ಹೊರತು ದ್ರಾವಿಡರಲ್ಲಲ್ಲ. ಆಚಮನ ಮಾಡುವ ಪದ್ಧತಿ ಈ ನಾಲ್ಕು ವರ್ಣಗಳಲ್ಲಿಯೂ ಇತ್ತು. ಹೊರಗಿನಿಂದ ಬಂದವರಿಗೆ ಮೂರು ನೀರು ಕೊಡು ಎನ್ನುವುದುಂಟು. ಹೊರಗಿನಿಂದ ಬಂದವರಿಗೆ ಕೈಕಾಲು ತೊಳೆಯುವಲ್ಲಿ ಇದು ಬಳಕೆಯಾಗುತ್ತದೆ. ಇದಲ್ಲದೆ ಸ್ನಾನ ಮಾಡಿದವನು ಅದು ಮುಗಿಸಿದಾಗ (ಹೊಳೆ, ಬಾವಿ, ಕೆರೆ ಇತ್ಯಾದಿ ಅಲ್ಲದೆ ಬಚ್ಚಲು ಮನೆಯಲ್ಲಿ ಸ್ನಾನ ಮಾಡಿದರೂ ಸಹ) ಕೊನೆಯಲ್ಲಿ ಧ್ರುವ ಜಲ, ನದೀ ಜಲ, ಆಕಾಶ ಜಲ ಎಂದು ಅರ್ಥ ಕೊಡುವ ಮಂತ್ರ ಹೇಳಿ ಒಮ್ಮೆ ಪಾದಗಳ ಮೇಲೆ ಎರಡನೇ ಸಾರಿ ಭುಜ ಮತ್ತು ತಲೆಯ ಮೇಲೂ ಮೂರನೆಯ ಸಾರಿ ತಲೆಯ ಮೇಲೆ ಪ್ರೋಕ್ಷಿಸಿಕೊಂಡು ಮತ್ತು ಅಂಗೈಯಲ್ಲಿ ಸ್ವಲ್ಪ ಕುಡಿದು ಬರುವುದೂ ಉಂಟು. ಇಂತಲ್ಲಿ ಅದನ್ನು ಮೂರು ನೀರು ಎಂದು ಈವತ್ತಿಗೂ ಈ ಸಂಪ್ರದಾಯ ಆಚರಿಸುವವರು ಹೇಳು ತ್ತಾರೆ. ಅಲ್ಲದೆ ವಿಶೇಷವಾಗಿ ಪಿಂಡ ಹಾಕುವವರು ಪಿಂಡ ಹಾಕಿದ ಮೇಲೆ ಮೂರು ನೀರು ಬಿಡುವ ಪದ್ಧತಿಯುಂಟು. ಆಗ ಕೂಡ ಧ್ರುವ ಜಲ, ನದೀ ಜಲ, ಆಕಾಶ ಜಲ ಎಂದು ಮೂರು ಸಾರಿ ತರ್ಪಣ ಬಿಡುತ್ತಾರೆ. ಈ ಎರಡು ಕಡೆ ಸಹಿತ ಮೂರು ನೀರು ಪದ ಬಳಕೆಯಾಗಿದೆ. ಈ ಮೂರು ನೀರು ಮುಂದೆ ಮುನ್ನೀರು ಆಗಿ ನಂತರ ಕಡಲು, ಮುನ್ನೀರು ಎಂಬರ್ಥ ಇದಕ್ಕೆ ಪ್ರಾಪ್ತವಾಯಿತೆ ? ಯಾಕೆಂದರೆ ಅರ್ಥಕೋಶಕಾರರು ಮುನ್ನೀರು ಪದಕ್ಕೆ ಧ್ರುವ ಜಲ, ನದೀ ಜಲ, ಮೇಘ ಜಲ ಎಂಬ ಅರ್ಥ ಕೊಡುವುದು ಇದಕ್ಕೆ ಹತ್ತಿರವಾಗಿದೆ.

ಮುನ್ನೀರು ಪದದಂತೆ ಹಿನ್ನೀರು ಪದದ ಬಳಕೆ ಇದೆಯೆ ? ಎಂದು ಪ್ರಶ್ನೆ ಹಾಕಿಕೊಂಡರೆ ಆ ಪದದ ಬಳಕೆಯೂ ಇದೆ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ 'ಹಿನ್ನೀರು ಬಾಳ ಒತ್ತಿ ಬಂದದೆ' ಎಂಬ ಪ್ರಯೋಗ ಉಂಟು. ಹೊಳೆಯಲ್ಲಿ ಪ್ರವಾಹ ಬಹಳ ಬಂದಾಗ ಸೇತುವೆಯ ಮೇಲೂ ಹರಿಯುವಂತಾದಾಗ ಅಥವಾ ಆ ಪ್ರವಾಹ ಸಮೀಪದ ಜಮೀನು ಹಳ್ಳಿಗಳಿಗೆ ಒತ್ತರಿಸಿದಾಗ ಆ ಹಿಂದಕ್ಕೆ ನಿಂತಿರುವ ನೀರನ್ನು ಹಿನ್ನೀರು ಎಂದು ಕರೆಯುವುದುಂಟು. ಇಲ್ಲಿ ಹಿಂದಿನ ನೀರು ಹಿನ್ನೀರು ಎಂದು ಕರೆಸಿಕೊಂಡಂತೆ ಮುಂದಿನ ನೀರು ಮುನ್ನೀರು ಎಂದು ಕರೆಸಿ ಕೊಂಡಲ್ಲಿ ತಪ್ಪೇನೂ ಆಗಿಲ್ಲ. ಹಾಗೆಯೇ ಮುನ್ನೀರಿಗೆ ಸಮುದ್ರ, ಕಡಲು ಎಂದು

ಅರ್ಥಕೊಟ್ಟಂತೆ ಪಿನ್ನೀರಿಗೂ ಸಮುದ್ರ, ಕಡಲು ಎಂದು ಕರೆದರೆ ತಪ್ಪೇನೂ ಇಲ್ಲ ವೆಂದು ನನಗೆ ತೋರುತ್ತದೆ.

ಅಲ್ಲದೆ ತೀ. ನಂ. ಶ್ರೀಯವರು ಲಕ್ಷ್ಮೀಶನ ಪದ್ಯವೊಂದನ್ನು ಅರ್ಥಯಿಸಿ ಕೊಳ್ಳುವಾಗ ಸರಿಯಾಗಿದ್ದುದನ್ನು ಗೊಂದಲಮಾಡಿಕೊಂಡು ಮುಂತಾಗಿ ಎಂಬು ದಕ್ಕೆ ಮುಂದಾಗಿ ಎಂದು ಅರ್ಥಯಿಸಿಕೊಂಡು ಬರೆದಿದ್ದಾರೆ. ಪದ್ಯವನ್ನು ಇದ್ದ ಹಾಗೆಯೇ ಓದಿದರೆ ಅರ್ಥ ಆಗುತ್ತದೆ.

ಆ ಪದ್ಯ ಹೀಗಿದೆ.

ಅನ್ನೆಗಂ ಜಾನಕಿಯ ಕಣ್ಗೆ ತೋರಿತು ಮುಂದೆ
ಸನ್ನುತ ರಘೂದ್ವಹನ ಕೀರ್ತಿಯೆನೆ ಮೂವಟ್ಟೆ
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ ಪಾಪಮಂ ಮುರಿದು ಮುಕ್ಕಿ ।
ಮುನ್ನೀರು ಮುಂತಾಗಿ ಮೂದೇವರೊಳಗಾದ
ಮುನ್ನುಳ್ಳ ಮುವ್ವತ್ತು ಮುಕ್ಕೋಟಿ ವಿಬುಧರಂ
ತನ್ನೊಳ ಮುಳುಗಿದರನ ಕಿಪ ಪೆಂಪೊದವಿ ಪರಿವ ಬೆಳ್ವೊನಲ್ ದಿವಿಜ
ನದಿಯ ॥ 19.4 ॥

ಇಲ್ಲಿ ಗಂಗಾನದಿ ಸೀತೆಯ ಕಣ್ಣಿ ಗೋಚರಿಸಿದ ರೀತಿಯನ್ನು ಮತ್ತು ಆ ಗಂಗಾನದಿ ಅದುವರೆಗೆ ಏನೇನು ಲಕ್ಷಣಗಳನ್ನು, ಹಿರಿಮೆಯನ್ನು ಹೊಂದಿತ್ತು ಎಂಬುದನ್ನು ವಿವರಿಸಿದ್ದಾನೆ. ಗಂಗಾನದಿ ರಾಘವನ ಕೀರ್ತಿ ಹರಿಯುತಿದೆಯೆನ್ನು ವಂತೆ ಸೀತೆಯ ಕಣ್ಣಿ ಗೋಚರಿಸಿತು. ಈ ನದಿ ಮೂರು ದಾರಿಯಲ್ಲಿ ಹರಿದು ಶಿವನನ್ನು (ಮುಡಿಯನ್ನು ?) ಸೇರಿ ಮೂರು ಲೋಕದ ಪಾಪವನ್ನು ವಿನಾಶಗೊಳಿಸಿ, ಧ್ರುವಜಲ, ನದೀ ಜಲ, ಮೇಘಜಲ ಮುಂತಾದುವನ್ನೆಲ್ಲ ಒಳಗೊಂಡು ಬ್ರಹ್ಮ, ವಿಷ್ಣು, ಈಶ್ವರ ಸೇರಿ ಮೂವತ್ತು ಮೂರು ಕೋಟಿ ದೇವತೆಗಳು ತನ್ನಲ್ಲಿ ಮುಳುಗಿ ಪಾಪ ನಿರ್ಲೇಪವಾದರೆಂಬ ಹಿರಿಮೆ ತನ್ನದು ಎಂಬಂತೆ ಗಂಗಾನದಿ ಹರಿಯಿತು. ಹೀಗೆ ಅರ್ಥಮಾಡಿಕೊಂಡಲ್ಲಿ ನಮಗೆ ಏನು ಕ್ಲೇಶವೂ ತೋರದು. ಗಂಗಾನದಿ ಸಮುದ್ರಕ್ಕೆ ಅಭಿಮುಖಿ ಹರಿಯಿತೆಂದಾಗಲಿ ಅಥವಾ ಗಂಗಾನದಿಗೆ ಅಭಿಮುಖಿವಾಗಿ ರಥ ಹೊರಟಿತೆಂದಾಗಲಿ ಅರ್ಥಯಿಸಲು ಬರುವುದಿಲ್ಲ. ಮುಂತಾಗಿ ಪದಕ್ಕೆ ಅಭಿ ಮುಖವಾಗಿ ಎಂದು ಅರ್ಥಯಿಸಿಕೊಳ್ಳುವುದಕ್ಕಿಂತ ಮುಂತಾದ ಎಂದು ಅರ್ಥಮಾಡಿ ಕೊಂಡರೆ ಸರಿಹೋಗುತ್ತದೆ. **ಹ. ನಂ. ವಿಜಯ ಕುಮಾರ್**

1. ತೀ. ನಂ. ಶ್ರೀ. ಕಾವ್ಯಾನುಭವ. ಪುಟ 76 (ಮೊದಲ ಮುದ್ರಣ)
2. ಕಿಟ್ಟೆಲ್ : ಕನ್ನಡ—ಇಂಗ್ಲಿಷ್ ನಿಘಂಟು (ಭಾಗ 3)
3. ಕಾವ್ಯಪದ ಮಂಜರಿ : ಪ್ರಧಾನ ಸಂಪಾದಕ ಸ. ಸ. ಮಾಳವಾಡ
4. ಧರ್ಮನಾಥ ಪುರಾಣ ; ಸಂ. ಎನ್. ಬಸವಾರಾಧ್ಯ
   ಯಶೋಧರ ಚರಿತೆ : ಸಂ. ಕ. ವೆಂ. ರಾಘವಾಚಾರ್ ಈ ಇಬ್ಬರು ಸಂಪಾದಕರು ಪಂಪರಾಮಾಯಣ ಸಂಪಾದಕರು, ಜೈಮಿನಿ ಭಾರತದ ಸಂಪಾದಕರು ಮತ್ತಿತರರು.
5. ತೀ. ನಂ. ಶ್ರೀ. : ಕಾವ್ಯಾನುಭವ, ಪುಟ 76 ನೋಡಿ

ಈ ಸಂಚಿಕೆಯ ಲೇಖಕರು

ಜಿ. ಎಸ್. ಸಿದ್ಧಲಿಂಗಯ್ಯ	ಪ್ರಿನ್ಸಿಪಾಲರು ಮಹಾರಾಣೀಸ್ ಸೈನ್ಸ್ ಕಾಲೇಜು ಬೆಂಗಳೂರು – 560 001
ಡಿ. ಎಸ್. ನಾಗಭೂಷಣ	ಇಎ–194, ಟ್ಯಾಗೂರ್ ಗಾರ್ಡನ್ಸ್ ನವದೆಹಲಿ – 110 027
ಎಸ್. ಎನ್. ಶಿವರುದ್ರಸ್ವಾಮಿ	ಅಧ್ಯಾಪಕರು, ಇತಿಹಾಸ ವಿಭಾಗ ಕಲ್ಪತರು ಕಾಲೇಜು ತಿಪಟೂರು – 572 202
ವಿ. ಚಂದ್ರಶೇಖರ ನಂಗಲಿ	ಎಂ. ಫಿಲ್. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು – 560056
ಎಚ್. ಎಚ್. ಗಂಗಾಧರಾಚಾರ್	ಸಹ-ಅಧ್ಯಾಪಕರು ಎಸ್. ಜೆ. ಪಾಲಿಟೆಕ್ನಿಕ್ ಭದ್ರಾವತಿ – 577 301
ಶಾಲಿನಿ ರಘುನಾಥ	ಅಧ್ಯಾಪಿಕೆ ಎಂ. ಎಂ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಸಿರ್ಸಿ (ಉತ್ತರ ಕನ್ನಡ)
ಪಿ. ಜಿ. ಮಳೇಮಠ	ಅಧ್ಯಾಪಕರು ಮಹದೇಶ್ವರ ಪ್ರೌಢಶಾಲೆ ಬೆಂಗಳೂರು
ಜಿ. ಎಸ್. ಸತ್ಯನಾರಾಯಣ	ಅಧ್ಯಾಪಕರು ಶಿಕ್ಷಣ ವಿಭಾಗ ಜ್ಞಾನಭಾರತಿ, ಬೆಂಗಳೂರು – 560056
ಭಾರತೀರಮಣಾಚಾರ್ಯ	ಅಧ್ಯಾಪಕರು ಹಿಂದೀ ವಿಭಾಗ ಜ್ಞಾನಭಾರತಿ, ಬೆಂಗಳೂರು – 560056

ಎಸ್. ವಿದ್ಯಾಶಂಕರ	ಅಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು – 560056
ಬಿದರಹಳ್ಳಿ ನರಸಿಂಹಮೂರ್ತಿ	ಇಂಗ್ಲಿಷ್ ಉಪನ್ಯಾಸಕರು ಮೇಗರವಳ್ಳಿ – 577 424 ಶಿವಮೊಗ್ಗಾ ಜಿಲ್ಲೆ
ಕೆ. ಮರುಳಸಿದ್ಧಪ್ಪ	ರೀಡರ್ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು – 560056
ಟಿ. ಬಿ. ಚಂದ್ರಶೇಖರಯ್ಯ	ಅರ್ಥಶಾಸ್ತ್ರ ವಿಭಾಗ ಜ್ಞಾನಭಾರತಿ, ಬೆಂಗಳೂರು – 560056
ಆರ್. ಎನ್. ಗುರವ್	ಕೊಪ್ಪದ ಕೇರಿ ಧಾರವಾಡ – 580 008
ಎನ್. ಚಂದ್ರಶೇಖರ್	ಸಂಶೋಧಕರು ಇತಿಹಾಸ ವಿಭಾಗ ಜ್ಞಾನಭಾರತಿ, ಬೆಂಗಳೂರು – 560056
ಕೆಮ್ತೂರು ರಘುಪತಿ ಭಟ್ಟ	ಮಣಿಪಾಲ
ಗೋವಿಂದ ಜಾಲಿಹಾಳ [ಜಾಗೋ]	ತತ್ವಶಾಸ್ತ್ರ ವಿಭಾಗ ಜ್ಞಾನಭಾರತಿ, ಬೆಂಗಳೂರು – 560056
ಬಿ. ಸಿ. ಜವಳಿ	ಕನ್ನಡ ಅಧ್ಯಯನ ಪೀಠ ಧಾರವಾಡ – 580 008
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು – 560056
ಕೆ. ಶ್ರೀಕಂಠಯ್ಯ	393, ಜಯನಗರ 1ನೇ ಬ್ಲಾಕ್ ಬೆಂಗಳೂರು – 560 011
ಹ. ನಂ. ವಿಜಯಕುಮಾರ್	32, ಸೆಂಟ್ರಲ್ ಸ್ಟ್ರೀಟ್ ಕುಮಾರಪಾರ್ಕ ಬೆಂಗಳೂರು–560020

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00
(ವಿದ್ಯಾರ್ಥಿಗಳಿಗೆ) 5–00
ಆಜೀವ ಚಂದಾ ಹಣ 100–00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ